www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ಚಿನ್ನದ ಹೊಳಪು

ಕೊಳವೆಬಾವಿ: ಬರಲಿದೆ ಕಠಿಣ ಕಾನೂನು 5

'ದಲಿತರ ಬಿಡದ ದೇಗುಲ, ಶಾಲೆಗೆ ಬೀಗ ಹಾಕಿ' 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,004	24,194	₹79,700 (ಬೆಂಗಳೂರು)	₹93,700 (ಬೆಂಗಳೂರು)	84.29

ತಂತ್ರಜ್ಞಾನ
'ಗೋಲ್ಡನ್ ರೂಲ್ಸ್'ಗಳನ್ನು ಪಾಲಿಸಿದರೆ ಆನ್‌ಲೈನ್ ವಂಚನೆಗಳಿಂದ ತಪ್ಪಿಸಿಕೊಳ್ಳಬಹುದು



ಪಶ್ಚಿಮಘಟ್ಟ ಪರಿಸರ ಸೂಕ್ಷ್ಮ ಪ್ರದೇಶ • ಸಮಿತಿ ರಚಿಸಿದ ಪರಿಸರ ಸಚಿವಾಲಯ

ರಾಜ್ಯಗಳ ಒಲಿಸಲು ಕೇಂದ್ರ ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮಘಟ್ಟ ಪರಿಸರ ಸೂಕ್ಷ್ಮ ಪ್ರದೇಶದ ಆರನೇ ಕರಡು ಅಧಿಸೂಚನೆಗೆ ತೀವ್ರ ವಿರೋಧ ವ್ಯಕ್ತವಾದ ಕಾರಣ ರಾಜ್ಯಗಳ ಅಹವಾಲು ಆಲಿಸಿ ಮನವೊಲಿಕೆಗೆ ಕೇಂದ್ರ ಸರ್ಕಾರ ಕಸರತ್ತು ನಡೆಸಿದೆ. ಕರಡುವಿಗೆ ವಿರೋಧ ವ್ಯಕ್ತಪಡಿಸಿರುವ ರಾಜ್ಯಗಳ ಸಲಹೆಗಳನ್ನು ಸಮಗ್ರವಾಗಿ ಪರಿಶೀಲಿಸಿ ಮನವೊಲಿಸಲು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು ಸಮಿತಿಯನ್ನು ರಚಿಸಿದೆ.

ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶದ 56,826 ಚದರ ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕೇಂದ್ರ ಪರಿಸರ ಸಚಿವಾಲಯವು ಜುಲೈ 31ರಂದು ಕರಡು ಅಧಿಸೂಚನೆ ಹೊರಡಿಸಿತ್ತು. ಈ ಅಧಿಸೂಚನೆಗೆ ಕರ್ನಾಟಕ ರಾಜ್ಯ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು ಹಾಗೂ ಕರಡು ಅಧಿಸೂಚನೆಯನ್ನು ತಿರಸ್ಕರಿಸಿತ್ತು.

'ಕಸ್ತೂರಿರಂಗನ್ ವರದಿಯು ರಾಜ್ಯದ 20,668 ಚ.ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಿತ್ತು. ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿದರೆ 10 ಜಿಲ್ಲೆಗಳ 33 ತಾಲ್ಲೂಕುಗಳ 1,499 ಗ್ರಾಮಗಳಲ್ಲಿರುವ ಲಕ್ಷಾಂತರ ಜನರಿಗೆ ಭಾರಿ ತೊಂದರೆ ಆಗಲಿದೆ. ಈ ವರದಿ ಬಗ್ಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಜನಪ್ರತಿನಿಧಿಗಳು ಧ್ವನಿ ಎತ್ತಿದ್ದಾರೆ.

ಪಶ್ಚಿಮ ಘಟ್ಟ ಪ್ರದೇಶದಲ್ಲಿನ ರಾಜ್ಯವಾರು ಪರಿಸರ ಸೂಕ್ಷ್ಮ ಪ್ರದೇಶದ ವಿಸ್ತೀರ್ಣ (ಚದರ ಕಿ.ಮೀಗಳಲ್ಲಿ)

ರಾಜ್ಯಗಳು	ವಿಸ್ತೀರ್ಣ
ಗುಜರಾತ್	449
ಮಹಾರಾಷ್ಟ್ರ	17,340
ಗೋವಾ	1,461
ಕರ್ನಾಟಕ	20,668
ತಮಿಳುನಾಡು	6,914
ಕೇರಳ	9,993.7

*ಆರನೇ ಕರಡು ಅಧಿಸೂಚನೆ ಪ್ರಕಾರ

ಇದಲ್ಲದೆ, ವರದಿಯಲ್ಲಿ ಗುರುತಿಸಿರುವ ಬಹುತೇಕ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಈಗಾಗಲೇ ಸಂರಕ್ಷಣೆ ಮಾಡಲಾಗುತ್ತಿದೆ' ಎಂದು ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ಪತ್ರ ಬರೆದು ತನ್ನ ನಿಲುವನ್ನು ತಿಳಿಸಿತ್ತು. 12 ಜಿಲ್ಲೆಗಳ 98 ಗ್ರಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ತರಲು ಕೇರಳ ಸರ್ಕಾರವು ನವೆಂಬರ್ 2ರಂದು ಸಮ್ಮತಿ ಸೂಚಿಸಿತ್ತು. ಉಳಿದ ನಾಲ್ಕು ರಾಜ್ಯಗಳು ಕರಡು ಅಧಿಸೂಚನೆಯನ್ನು ವಿರೋಧಿಸಿದ್ದವು.

ಕರಡು ಅಧಿಸೂಚನೆಯನ್ನು ಅಂತಿಮಗೊಳಿಸುವಾಗ ಆಯಾ ರಾಜ್ಯ ಸರ್ಕಾರಗಳು ಸೇರಿದಂತೆ ವಿವಿಧ ಸಂಘಟನೆಗಳು ಎತ್ತಿರುವ ಆತಂಕಗಳನ್ನು ಬಗೆಹರಿಸಲು ಸಮಿತಿ ರಚಿಸಲಾಗಿದೆ.

5ನೇ ಪುಟ ನೋಡಿ

ಗಾಡ್ಗೀಳ್, ಕಸ್ತೂರಿ ರಂಗನ್ ಸಮಿತಿ

ಪಶ್ಚಿಮ ಘಟ್ಟದ ಅಪೂರ್ವ ಜೀವ ವೈವಿಧ್ಯದ ಸಂರಕ್ಷಣೆಗೆ ಒತ್ತು ನೀಡುವ ಉದ್ದೇಶದಿಂದ ಹಿರಿಯ ವಿಜ್ಞಾನಿ ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಈ ಹಿಂದೆ ಸಮಿತಿ ರಚಿಸಿತ್ತು. ಈ ಸಮಿತಿಯು 2011ರಲ್ಲಿ ಘಟ್ಟದ 1,29,037 ಚದರ ಕಿ.ಮೀ ವ್ಯಾಪ್ತಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಬಹುದೆಂದು ಶಿಫಾರಸು ಮಾಡಿತ್ತು. ಘಟ್ಟದ ಶೇ 64ರಷ್ಟು ಪ್ರದೇಶದಲ್ಲಿ ಅಭಿವೃದ್ಧಿಗೆ ಕೆಲ ನಿರ್ಬಂಧ ಹಾಕಬೇಕು ಎಂದು ಶಿಫಾರಸು ಮಾಡಿತ್ತು.

ಇದಕ್ಕೆ ರಾಜಕೀಯ ವಲಯದಲ್ಲಿ ಭಾರಿ ವಿರೋಧ ಎದುರಾದಾಗ ಕೇಂದ್ರ ಸರ್ಕಾರ ಗಾಡ್ಗೀಳ್ ವರದಿ ಪರಿಶೀಲನೆಗೆ 2013ರ ಏಪ್ರಿಲ್ 15ರಂದು ಡಾ.ಕೆ.ಕಸ್ತೂರಿ ರಂಗನ್ ಸಮಿತಿ ರಚಿಸಿತ್ತು. ಈ ಸಮಿತಿ ಅದೇ ವರ್ಷದ ನವೆಂಬರ್ 13ರಂದು ವರದಿ ನೀಡಿ, ಘಟ್ಟದ ಶೇ 37ರಷ್ಟು ಅರಣ್ಯ ಪ್ರದೇಶವನ್ನು ಅಂದರೆ 59,940 ಚದರ ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಿತ್ತು.

'ಬುಡಕಟ್ಟು ಜನರಿಗೆ ಅಗತ್ಯ ಮೂಲಸೌಕರ್ಯ'

ಬೆಂಗಳೂರು: ಅರಣ್ಯ ಮತ್ತು ಅರಣ್ಯದಂಚಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳ ಜನರಿಗೆ ಮನೆ, ಕುಡಿಯುವ ನೀರು, ರಸ್ತೆ, ವಿದ್ಯುತ್ ಸಂಪರ್ಕ ಸೇರಿ ಎಲ್ಲ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬುಡಕಟ್ಟು ಸಮುದಾಯವರಿಗೆ ಮೂಲಸೌಕರ್ಯ ಕಲ್ಪಿಸುವ ಕುರಿತು ಮಂಗಳವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು. 2 ತಿಂಗಳ ಬಳಿಕ ಮತ್ತೆ ಸಭೆ ಕರೆಯುತ್ತೇನೆ. ನಿರ್ಣಯಗಳು ಜಾರಿ ಆಗದಿದ್ದರೆ ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಅವರು ಎಚ್ಚರಿಕೆ ನೀಡಿದರು.

ಪ್ರಮುಖ ನಿರ್ಣಯಗಳು

- ರಸ್ತೆಗಳ ಅಭಿವೃದ್ಧಿ ಮತ್ತು ಕುಡಿಯುವ ನೀರು ಸೌಲಭ್ಯ ಕಲ್ಪಿಸಲು ಅಡ್ಡಿ ಮಾಡಬಾರದು. ಪ್ರತಿ ಹಾಡಿಯಲ್ಲೂ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕು
- ಪಡಿತರ ಚೀಟಿ ಹೊಂದಿಲ್ಲದ ಬುಡಕಟ್ಟು ಕುಟುಂಬಗಳಿಗೆ 15 ದಿನಗಳ ಒಳಗಾಗಿ ಬಿಪಿಎಲ್ ಪಡಿತರ ಚೀಟಿ ಒದಗಿಸಿ ವರದಿ ಸಲ್ಲಿಸಬೇಕು
- ಅರಣ್ಯ ಹಕ್ಕು ಸಮಿತಿಗಳ ಮುಂದೆ ಬಾಕಿ ಇರುವ ಅರ್ಜಿಗಳನ್ನು ನಿಗದಿತ ಅವಧಿಯ ಒಳಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು
- ಆರೋಗ್ಯ ಇಲಾಖೆಯಲ್ಲಿ ಬುಡಕಟ್ಟು ಜನರನ್ನು ಸ್ಥಳೀಯವಾಗಿ ನೇಮಕ ಮಾಡುವ ಬಗ್ಗೆ ಪರಿಶೀಲನೆ ನಡೆಸಬೇಕು. ಹಾಡಿಗಳಲ್ಲಿ ಸ್ಮಶಾನ ಭೂಮಿ ಒದಗಿಸಬೇಕು
- ಬುಡಕಟ್ಟು ಸಮುದಾಯಕ್ಕೆ ಅಗತ್ಯ ಸೌಲಭ್ಯಗಳನ್ನು ನೀಡುವ ವಿಷಯದಲ್ಲಿ ಕಂದಾಯ, ಅರಣ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು

5ನೇ ಪುಟ ನೋಡಿ

ಸಂವಿಧಾನ ದಿನ ಸಂಸತ್‌ನ 'ಸಂವಿಧಾನ ಸದನ'ದಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಮಂಗಳವಾರ ಹಮ್ಮಿಕೊಳ್ಳಲಾಗಿತ್ತು. ಸಚಿವರಾದ ಕಿರಣ್ ರಿಜಿಜು, ಜೆ.ಪಿ.ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಉಪರಾಷ್ಟ್ರಪತಿ ಜಗದೀಪ್ ಧನಕರ್, ರಾಷ್ಟ್ರಪತಿ ದ್ರೌಪದಿ ಮುರ್ಮು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಸುದ್ದಿ 7

ಬಾಂಗ್ಲಾ ರಾಷ್ಟ್ರಧ್ವಜಕ್ಕೆ ಅಗೌರವ ಹಿಂದೂ ಮುಖಂಡ ಜೈಲಿಗೆ

ಢಾಕಾ/ನವದೆಹಲಿ (ಪಿಟಿಐ): ಬಾಂಗ್ಲಾದೇಶದ ರಾಷ್ಟ್ರಧ್ವಜಕ್ಕೆ ಅಗೌರವ ತೋರಿದ್ದಕ್ಕಾಗಿ ದೇಶದ್ರೋಹದ ಆರೋಪ ಎದುರಿಸುತ್ತಿರುವ 'ಸಮ್ಮಿಲಿತ್ ಸನಾತನಿ ಜಾಗರಣ ಜೋತೆ' ಎಂಬ ಹಿಂದೂ ಸಂಘಟನೆಯ ಮುಖಂಡ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರ ಜಾಮೀನು ಅರ್ಜಿಯನ್ನು ಬಾಂಗ್ಲಾದೇಶದ ನ್ಯಾಯಾಲಯ ವಜಾಗೊಳಿಸಿದೆ. ಇದರ ಬೆನ್ನಲ್ಲೇ ಅವರನ್ನು ಜೈಲಿಗೆ ಕಳುಹಿಸಲಾಗಿದೆ.

'ಛಠಗಾವ್‌ನ ಆರನೇ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಖಾಜಿ ಷರೀಫುಲ್ ಇಸ್ಲಾಂ ಅವರು ಜಾಮೀನು ಅರ್ಜಿ ವಜಾ ಮಾಡಿದ್ದಾರೆ' ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ದಾಸ್ ಅವರನ್ನು ಸೋಮವಾರ ಢಾಕಾದ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಬಳಿಕ, ಛಠಗಾವ್‌ಗೆ ಕರೆತರಲಾಯಿತು.

ದಾಸ್ ಅವರನ್ನು ಬಂಧಿಸಿದ ಸುದ್ದಿ ತಿಳಿಯುತ್ತಿದ್ದಂತೆಯೇ ದೇಶದ ಹಲವೆಡೆ ಹಿಂದೂ ಸಮುದಾಯದ ಜನರು ಪ್ರತಿಭಟನೆ ನಡೆಸಿದರು. ದಾಸ್ ಅವರನ್ನು ಮಂಗಳವಾರ ನ್ಯಾಯಾಲಯಕ್ಕೆ ಭಾರಿ ಬಂದೋಬಸ್ತ್‌ನಲ್ಲಿ ಕರೆತರಲಾಯಿತು.

ಈ ವೇಳೆಗಾಗಲೇ ನ್ಯಾಯಾಲಯದ ಮುಂದೆ ಹಿಂದೂ ಸಮುದಾಯದ ಪುರುಷರು, ಮಹಿಳೆಯರು, ಮಕ್ಕಳು, ವಕೀಲರು ಜಮಾವಣೆಗೊಂಡಿದ್ದರು. ಇವರತ್ತ ನಮಸ್ಕರಿಸಿದ ದಾಸ್, ಧಾರ್ಮಿಕ ಘೋಷಣೆಗಳನ್ನು ಕೂಗದಂತೆ ಜನರಲ್ಲಿ ಮನವಿ ಮಾಡಿದರು.

5ನೇ ಪುಟ ನೋಡಿ

ಭಾರತ ಕಳವಳ: ರಕ್ಷಣೆಗೆ ಒತ್ತಾಯ

ಚಿನ್ಮಯಿ ಕೃಷ್ಣ ದಾಸ್ ಅವರ ಬಂಧನ ಮತ್ತು ಜಾಮೀನು ನಿರಾಕರಣೆಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಭಾರತ, ಹಿಂದೂ ಮತ್ತು ಇತರ ಎಲ್ಲ ಅಲ್ಪಸಂಖ್ಯಾತ ಸಮುದಾಯಗಳ ಸುರಕ್ಷತೆ ಮತ್ತು ಭದ್ರತೆಯನ್ನು ಖಾತರಿಪಡಿಸುವಂತೆ ಬಾಂಗ್ಲಾದೇಶವನ್ನು ಆಗ್ರಹಿಸಿದೆ.

ಬಾಂಗ್ಲಾದಲ್ಲಿ ತೀವ್ರಗಾಮಿ ಶಕ್ತಿಗಳಿಂದ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಮೇಲೆ ನಡೆದ ಹಲವು ದಾಳಿಗಳ ಬೆನ್ನಲ್ಲೇ ಈ ಘಟನೆಯೂ ನಡೆದಿದೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ಎಂಇಎ) ಪ್ರಕಟಣೆ ತಿಳಿಸಿದೆ.

5ನೇ ಪುಟ ನೋಡಿ

ಮಿಕ್ಸ್ ಗರಮ್ ಮಸಾಲ
GHARIKUL
Mix Garam Masala
ಡೀಲರ್ ವಿಚಾರಣೆಗಾಗಿ ಸಂಪರ್ಕಿಸಿ : 9965961961

ಅದಾನಿ ಕಂಪನಿ ರೇಟಿಂಗ್ಸ್‌ಗೆ ಪೆಟ್ಟು

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ವಿರುದ್ಧ ಲಂಚದ ಆರೋಪ ಕೇಳಿ ಬಂದ ಬೆನ್ನಲ್ಲೇ ಜಾಗತಿಕ ಕ್ರೆಡಿಟ್ ರೇಟಿಂಗ್ಸ್ ಏಜೆನ್ಸಿಗಳಾದ ಮೂಡಿಸ್ ಹಾಗೂ ಫಿಚ್, ಅದಾನಿ ಸಮೂಹದ ಕಂಪನಿಗಳಿಗೆ ನೀಡಿದ್ದ ಮುನ್ನೋಟದ ರೇಟಿಂಗ್ಸ್ ಅನ್ನು ಪರಿಷ್ಕರಿಸಿವೆ. ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್, ಅದಾನಿ ಪೋರ್ಟ್ಸ್ ಕಂಪನಿಯನ್ನು 'ಸ್ಥಿರ' ರೇಟಿಂಗ್ಸ್ ಪಟ್ಟಿಯಿಂದ 'ಋಣಾತ್ಮಕ' ಪಟ್ಟಿಗೆ ಸೇರಿಸಿವೆ. 10

ಬಿಜೆಪಿ ಭಿನ್ನಮತ ಇನ್ನೂ ಬಿರುಸು

ಬಿಜೆಪಿ ರಾಜ್ಯ ಘಟಕದಲ್ಲಿ 'ಒಡಕಿ'ನ ಧ್ವನಿ ಮತ್ತೆ ಭುಗಿಲೆದ್ದಿದೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ಬಣ, ಮುನ್ನಡೆಸುತ್ತಿರುವ ವಕ್ಫ್ ವಿರುದ್ಧದ ಹೋರಾಟ ಎರಡನೇ ದಿನಕ್ಕೆ ಕಾಲಿಡುತ್ತಿದ್ದಂತೆಯೇ ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಅವರು ಪಕ್ಷದಲ್ಲಿ ಬಿರುಕಿರುವುದನ್ನು ಒಪ್ಪಿಕೊಂಡಿದ್ದಾರೆ. ತಮ್ಮ ಬಣದವರೇ ಮುಂದಿನ ಮುಖ್ಯಮಂತ್ರಿ ಎಂದು ಯತ್ನಾಳ ಹೇಳಿದ್ದಾರೆ.

ಒಡಕು ಇರುವುದು ನಿಜ: ಬಿಎಸ್‌ವೈ

ದಾವಣಗೆರೆ: 'ಬಿಜೆಪಿಯಲ್ಲಿ ಒಡಕು ಇರುವುದು ನಿಜ. ಕೆಲವರು ಒಡಕು ಸೃಷ್ಟಿಸುತ್ತಿರುವ ವಿಚಾರ ಕೇಂದ್ರದ ನಾಯಕರ ಗಮನಕ್ಕೆ ಬಂದಿದೆ. ಕೆಲವೇ ದಿನಗಳಲ್ಲಿ ಎಲ್ಲರೂ ಒಟ್ಟಾಗಿ ಪಕ್ಷ ಸಂಘಟನೆಗೆ ಶ್ರಮಿಸುತ್ತೇವೆ' ಎಂದು ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಪಕ್ಷದ ಹಿತದೃಷ್ಟಿಯಿಂದ ಚರ್ಚೆ ಮಾಡೋಣ. ಸಮಸ್ಯೆಯಿದ್ದರೆ ಸರಿಪಡಿಸಿಕೊಂಡು ಮುಂದೆ ಸಾಗೋಣ. ಪಕ್ಷ ಬಲಪಡಿಸುವ ಕೆಲಸ ಮಾಡೋಣ ಬನ್ನಿ ಎಂದು ಭಿನ್ನಾಭಿಪ್ರಾಯ ಇರುವವರಲ್ಲಿ ಮನವಿ ಮಾಡುತ್ತೇನೆ' ಎಂದರು.

ಯತ್ನಾಳ ಸ್ವ ಪ್ರತಿಷ್ಠೆ: ಬೆಂಗಳೂರಿನಲ್ಲಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಯಡಿಯೂರಪ್ಪ, 'ಯತ್ನಾಳ ಅವರು ಸ್ವಪ್ರತಿಷ್ಠೆಯಿಂದ ಹೋರಾಟ ಮಾಡುತ್ತಿರುವುದು ಅವರಿಗೆ ಶೋಭೆ ತರುವುದಿಲ್ಲ. ಪ್ರತ್ಯೇಕ ಹೋರಾಟ ನಡೆಸುವುದನ್ನು ಕೈಬಿಟ್ಟು ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಿದರೆ ಪಕ್ಷವು ಬಲಗೊಳ್ಳುತ್ತದೆ' ಎಂದರು.

'ಉಪಚುನಾವಣೆಗಳಲ್ಲಿ ಈ ರೀತಿ ಹಿನ್ನಡೆ ಆಗಬಹುದು ಎಂಬುದನ್ನು ಊಹಿಸಿರಲಿಲ್ಲ. ಎಲ್ಲಿ ಕೊರತೆ ಆಗಿದೆ ಎಂಬುದನ್ನು ಎಲ್ಲರೂ ಕುಳಿತು ಚರ್ಚೆ ಮಾಡುತ್ತೇವೆ. ಈ ಸೋಲಿಗೆ ವಿಜಯೇಂದ್ರ ಕಾರಣ ಅನ್ನೋ ಪ್ರಶ್ನೆ ಬರುವುದಿಲ್ಲ' ಎಂದರು

ನಮ್ಮ ತಂಡದವರೇ ಮುಖ್ಯಮಂತ್ರಿ: ಯತ್ನಾಳ

ಕಲಬುರಗಿ: 'ರಾಜ್ಯದ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಬೇಸತ್ತಿರುವ ಜನರು ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಲಿದ್ದು, ನಮ್ಮ ತಂಡದವರೇ ಮುಖ್ಯಮಂತ್ರಿಯಾಗಲಿದ್ದಾರೆ. ಚುನಾವಣೆಯಲ್ಲಿ ಟಿಕೆಟ್ ಹಂಚಿಕೆ ಅಧಿಕಾರ ನಮಗೇ ಸಿಗಲಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ವಕ್ಫ್ ಮಂಡಳಿ ವಿರುದ್ಧ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಮಾತನಾಡಿದ ಅವರು, 'ನಮ್ಮ ಹೋರಾಟವು ವಕ್ಫ್ ನ್ಯಾಯಮಂಡಳಿ ರದ್ದುಗೊಳ್ಳುವವರೆಗೂ ಮುಂದುವರಿಯಲಿದೆ. ಬಿಜೆಪಿಯ ಕೆಲ ಶಾಸಕರು, ಅಧ್ಯಕ್ಷರು ಈ ಹೋರಾಟದಿಂದ ದೂರವಿರಬಹುದು. ಅದಕ್ಕೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ' ಎಂದರು.

'ಬೆಂಗಳೂರಿನಲ್ಲಿ ಕುಳಿತಿರುವವರಿಗೆ (ಯಡಿಯೂರಪ್ಪ, ವಿಜಯೇಂದ್ರ) ಹೆದರಿ ಬಿಜೆಪಿಯ ಕೆಲ ಮುಖಂಡರು ನಮ್ಮ ಹೋರಾಟಕ್ಕೆ ಬಂದಿಲ್ಲ. ದೊಡ್ಡ ಮಠಗಳ ಸ್ವಾಮಿಗಳೂ ಬಂದಿಲ್ಲ. ಅವರು ತಮ್ಮ ಶಿಕ್ಷಣ ಸಂಸ್ಥೆಗಳ ಫೈಲ್‌ಗೆ ಅನುಮೋದನೆ ಮಾಡಿಸಿಕೊಳ್ಳಲು ಮುಖ್ಯಮಂತ್ರಿ ಚೇಂಬರ್‌ನಲ್ಲಿ ಕುಳಿತಿರುತ್ತಾರೆ' ಎಂದು ವ್ಯಂಗ್ಯವಾಡಿದರು.

ಜಿ.ಎಂ. ಸಿದ್ದೇಶ್ವರ, ರಮೇಶ ಜಾರಕಿಹೊಳಿ, ಕುಮಾರ್ ಬಂಗಾರಪ್ಪ, ಅರವಿಂದ ಲಿಂಬಾವಳಿ, ರಾಜಕುಮಾರ ಪಾಟೀಲ ತೇಲ್ಕೂರ ಭಾಗವಹಿಸಿದ್ದರು.

ಡಿ.9ರ ಒಳಗೆ ಭಿನ್ನರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಬೆಳಗಾವಿಯ ವಿಧಾನಮಂಡಲ ಅಧಿವೇಶನಕ್ಕೂ ಮೊದಲೇ (ಡಿ.9) ಭಿನ್ನಮತೀಯರ ವಿರುದ್ಧ ಕ್ರಮ ತೆಗೆದುಕೊಳ್ಳಲು ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಬೇಕು ಎಂದು ಬಿಜೆಪಿಯ ಸಂಘಟನಾ ಪರ್ವ ಸಭೆಯಲ್ಲಿ ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು ಒತ್ತಾಯಿಸಿದರು.

ಪಕ್ಷದ ಸಂಘಟನೆಯ ಉದ್ದೇಶದಿಂದ ಕರೆಯಲಾಗಿದ್ದ ಈ ಸಭೆಯಲ್ಲಿ, ಯತ್ನಾಳ ಅವರ ನೇತೃತ್ವದಲ್ಲಿ ನಡೆಯುತ್ತಿರುವ ವಕ್ಫ್ ವಿರುದ್ಧದ ಹೋರಾಟದ ಬಗ್ಗೆ ಆಕ್ಷೇಪ ವ್ಯಕ್ತವಾಯಿತು.

'ಹೋರಾಟಗಳನ್ನು ಪಕ್ಷದ ವತಿಯಿಂದಲೇ ನಡೆಸಬೇಕು. ಪರ್ಯಾಯವಾಗಿ ನಡೆಸುವುದರಿಂದ ಪಕ್ಷಕ್ಕೆ ಹಿನ್ನಡೆ ಆಗುತ್ತದೆ' ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಬೀದರ್ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹೇಳಿದರು. ಇದಕ್ಕೆ ಇತರ ಜಿಲ್ಲೆಗಳ ಜಿಲ್ಲಾಧ್ಯಕ್ಷರೂ ಧ್ವನಿಗೂಡಿಸಿದರು ಎಂದು ಸಭೆಯಲ್ಲಿದ್ದ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

4ನೇ ಪುಟ ನೋಡಿ

'ಮಹಾ' ಸಿ.ಎಂ: ಮೋದಿ, ಶಾ ಅಖಾಡಕ್ಕೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಭಾರಿ ಬಹುಮತ ಪಡೆದಿರುವ 'ಮಹಾಯುತಿ' ಮೈತ್ರಿಕೂಟ ಮರಳಿ ಅಧಿಕಾರಕ್ಕೆ ಏರಲಿದೆಯಾದರೂ, ಮುಖ್ಯಮಂತ್ರಿ ಯಾರಾಗಬೇಕು ಎಂಬ ವಿಚಾರವು ಹಗ್ಗಜಗ್ಗಾಟಕ್ಕೆ ಕಾರಣವಾಗಿದೆ. ಹೀಗಾಗಿ, ಈ ವಿಚಾರದಲ್ಲಿ ಉದ್ಭವವಾಗಿರುವ ಸಮಸ್ಯೆ ನಿವಾರಣೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಧ್ಯಪ್ರವೇಶಿಸಿದ್ದಾರೆ.

ರಾಜ್ಯ ಸರ್ಕಾರವನ್ನು ಯಾರು ಮುನ್ನಡೆಸಬೇಕು ಎಂಬ ಸಮಸ್ಯೆಯನ್ನು ಮುಂದಿನ ಒಂದೆರಡು ದಿನಗಳಲ್ಲಿ ಈ ಇಬ್ಬರು ನಾಯಕರು ಬಗೆಹರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಮಹಾರಾಷ್ಟ್ರದ 14ನೇ ವಿಧಾನಸಭೆ ಅವಧಿಯು ಮಂಗಳವಾರ ಅಂತ್ಯಗೊಂಡಿದೆ. ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಹಾಗೂ ಅಜಿತ್ ಪವಾರ್ ಅವರು ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರಿಗೆ ತಮ್ಮ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದ್ದಾರೆ.

ಹೊಸ ಸರ್ಕಾರ ರಚನೆಯಾಗುವವರೆಗೆ ಉಸ್ತುವಾರಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುವಂತೆ ಶಿಂದೆ ಅವರಿಗೆ ರಾಜ್ಯಪಾಲರು ಸೂಚಿಸಿದ್ದಾರೆ.

> ಮುಖ್ಯಮಂತ್ರಿ ಅಭ್ಯರ್ಥಿ ಕುರಿತು ಮಹಾಯುತಿ ನಾಯಕರು ಚರ್ಚಿಸಿದ ನಂತರ ದೆಹಲಿಗೆ ತೆರಳುವರು. ಅಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಕೈಗೊಳ್ಳುವ ನಿರ್ಧಾರ ಒಪ್ಪಿಕೊಳ್ಳುವುದಾಗಿ ಏಕನಾಥ ಶಿಂದೆ ಈಗಾಗಲೇ ಸ್ಪಷ್ಟಪಡಿಸಿದ್ದಾರೆ
>
> **ದೀಪಕ್ ಕೇಸರಕರ್,** ಶಿವಸೇನಾ ವಕ್ತಾರ

7ನೇ ಪುಟ ನೋಡಿ

ಒಳಪುಟಗಳಲ್ಲಿ

ಪಾಕಿಸ್ತಾನದಲ್ಲಿ ಹಿಂಸಾಚಾರ: ಆರು ಮಂದಿ ಸಾವು 11

ಮತಪತ್ರ ವ್ಯವಸ್ಥೆ ಪುನಃ ಜಾರಿಗೊಳಿಸಿ: ಖರ್ಗೆ 11

ವಿಶ್ವ ಚಾಂಪಿಯನ್‌ಷಿಪ್ ಆಟ ಡ್ರಾ: ಗುಕೇಶ್ ಚೇತರಿಕೆ 12

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಿಎಸ್‌ವೈ, ಬೊಮ್ಮಾಯಿ ನೇತೃತ್ವದ ಸರ್ಕಾರಗಳ ಕ್ರಮ

ವಕ್ಫ್: 4,720 ಎಕರೆ ಪಹಣಿ ಲಾಕ್

• ಜಯಸಿಂಹ ಆರ್.

ಬೆಂಗಳೂರು: ರಾಜ್ಯದಲ್ಲಿ ಸುಮಾರು 4,720 ಎಕರೆ ವಕ್ಫ್ ಆಸ್ತಿಗಳು ಒತ್ತುವರಿಯಾಗಿದೆ ಎಂದು ಗುರುತಿಸಿದ್ದ ಬಿಜೆಪಿ ನೇತೃತ್ವದ ಸರ್ಕಾರವು, ಪಹಣಿಯಲ್ಲಿ 'ವಕ್ಫ್ ಆಸ್ತಿ' ಎಂದು ನಮೂದಿಸಿತ್ತು.

ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಗಳಲ್ಲಿ (2019–2023) ಈ ಜಮೀನುಗಳನ್ನು ಮಾರಾಟ ಮಾಡಲಾಗದ ಹಾಗೆ ಅವುಗಳ ಪಹಣಿಯನ್ನು ಲಾಕ್ ಮಾಡಲಾಗಿತ್ತು. ಈ ಜಮೀನುಗಳ ಪಹಣಿಗಳನ್ನು ವೆಬ್‌ಸೈಟ್‌ನಲ್ಲಿ ತೆರೆದರೆ 'ಫ್ಲಾಗ್ ಆಫ್' ಎಂದು ತೋರಿಸುವಂತೆ ಮಾಡಲಾಗಿತ್ತು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಿಜೆಪಿ ಶಾಸಕ ಕುಮಾರ್ ಬಂಗಾರಪ್ಪ ಅಧ್ಯಕ್ಷತೆಯ, 'ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ' ವಕ್ಫ್ ಆಸ್ತಿಗಳ ರಕ್ಷಣೆಗಾಗಿ ಸರಣಿ ಸಭೆಗಳನ್ನು ನಡೆಸಿತ್ತು. ವಿಧಾನಮಂಡಲದ ಸಮಿತಿಯಲ್ಲಿ ಎಲ್ಲ ಪಕ್ಷಗಳ ಶಾಸಕರೂ ಇದ್ದರು. ಪ್ರಭಾವಿಗಳು, ಉದ್ಯಮಿಗಳು, ರಾಜಕಾರಣಿಗಳೂ ಸೇರಿದಂತೆ ಹಲವರು ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿದ್ದನ್ನು ಪತ್ತೆ ಹಚ್ಚಿತ್ತು. ವಕ್ಫ್ ಆಸ್ತಿಗಳ ಒತ್ತುವರಿಯನ್ನು ತೆರವು ಮಾಡಬೇಕು ಎಂದು ವಕ್ಫ್ ಮಂಡಳಿಗೆ ಸೂಚಿಸಿದ್ದ ಸಮಿತಿ, 'ಆಸ್ತಿಗಳ ಸಂರಕ್ಷಣೆಗೆ ಇಂತಹ ಕಠಿಣ ಕ್ರಮಗಳ ಅಗತ್ಯವಿದೆ' ಎಂದು ಪ್ರತಿಪಾದಿಸಿತ್ತು.

4ನೇ ಪುಟ ನೋಡಿ

2,965	664	1,105
ಭೂಮಿ ತಂತ್ರಾಂಶದಲ್ಲಿ ಲಾಕ್ ಮಾಡಲಾದ ಸ್ವತ್ತುಗಳ ಸಂಖ್ಯೆ	ಇ-ಸ್ವತ್ತು ತಂತ್ರಾಂಶದಲ್ಲಿ ಲಾಕ್ ಮಾಡಲಾದ ಸ್ವತ್ತುಗಳ ಸಂಖ್ಯೆ	ಇ-ಆಸ್ತಿ ತಂತ್ರಾಂಶದಲ್ಲಿ ಲಾಕ್ ಮಾಡಲಾದ ಸ್ವತ್ತುಗಳ ಸಂಖ್ಯೆ

4,734 ಒಟ್ಟು ಲಾಕ್ ಮಾಡಲಾದ ವಕ್ಫ್ ಸ್ವತ್ತುಗಳ ಸಂಖ್ಯೆ

ವಕ್ಫ್ ಆಸ್ತಿ ಸಂರಕ್ಷಣೆಗೆ ₹40.83 ಕೋಟಿ

ವಕ್ಫ್ ಆಸ್ತಿಗಳ ಸಂರಕ್ಷಣೆಗೆ 2018-19ರಲ್ಲಿದ್ದ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ಸರ್ಕಾರವು ವಕ್ಫ್ ಆಸ್ತಿಗಳ ಸಂರಕ್ಷಣೆಗೆ ಎಂದು ₹3.17 ಕೋಟಿ ಅನುದಾನ ನೀಡಿತ್ತು. ನಂತರ ಬಂದ ಯಡಿಯೂರಪ್ಪ ಅವರ ಸರ್ಕಾರವು ಈ ಮೊತ್ತವನ್ನು ₹30.40 ಕೋಟಿಗೆ ಏರಿಕೆ ಮಾಡಿತ್ತು.

2020-21ನೇ ಆರ್ಥಿಕ ವರ್ಷದಲ್ಲಿ ಬಿಜೆಪಿ ಸರ್ಕಾರವು ಈ ಉದ್ದೇಶಕ್ಕೆ ಎಂದು ₹10.43 ಕೋಟಿ ಅನುದಾನ ಒದಗಿಸಿತ್ತು. ಒಟ್ಟು ಎರಡು ಆರ್ಥಿಕ ವರ್ಷದಲ್ಲೇ ಬಿಜೆಪಿ ಸರ್ಕಾರವು ವಕ್ಫ್ ಆಸ್ತಿಗಳ ಸಂರಕ್ಷಣೆಗೆ ಎಂದು ₹40.83 ಕೋಟಿ ಅನುದಾನ ನೀಡಿತ್ತು ಎಂಬುದನ್ನು ಕುಮಾರ್ ಬಂಗಾರಪ್ಪ ಅಧ್ಯಕ್ಷತೆಯ ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ.

ವಕ್ಫ್ ಆಸ್ತಿಗಳ ದಾಖಲೆ ಬದಲಾವಣೆ, ಸರ್ವೆ ಕಾರ್ಯ, ಹದ್ದುಬಸ್ತು, ತೆರವು ಕಾರ್ಯಾಚರಣೆ ಮತ್ತು ಪ್ರಕರಣಗಳ ನಿರ್ವಹಣೆಗೆ ಈ ಅನುದಾನವನ್ನು ಬಳಕೆ ಮಾಡಲಾಗಿತ್ತು.

Advertorial

ಮಂಡಿ ನೋವು, ಬೆನ್ನು ನೋವು, ಕುತ್ತಿಗೆ ನೋವು, ಭುಜದ ನೋವಿನಿಂದ ಬಳಲುತಿದ್ದೀರಾ? ಶಸ್ತ್ರಚಿಕಿತ್ಸೆ ಇಲ್ಲದೆ ನಿಮ್ಮ ಎಲ್ಲಾ ನೋವಿನ ಪರಿಹಾರ ಇಪಿಯೋನ್ ಪೇನ್ ಕೇರ್ ಸೆಂಟರ್‌ನಲ್ಲಿ.

45 ರಿಂದ 50 ವರ್ಷದ ಮಹಿಳೆಯರಿಗೆ ಮಂಡಿನೋವು ಶುರುವಾದರೆ ಅದನ್ನು ನಿಯಂತ್ರಿಸಲು ದಾರಿ ಇದೆಯೇ? ಎಂದು ಯೋಚಿಸುವ ಮಹಿಳೆಯರು ಬಹಳ ವಿರಳ, ಅದು ಸರ್ವೇ ಸಾಮಾನ್ಯ ಎಂದು ನೋವು ಅನುಭವಿಸುವವರೇ ಹೆಚ್ಚು ಮೊಣಕಾಲು ನೋವು ಜಾಸ್ತಿಯಾದ ನಂತರ ಆಸ್ಪತ್ರೆಗಳಿಗೆ ಓಡುವ ಬದಲು, ನೋವುಗಳನ್ನು ನಿಯಂತ್ರಿಸಲು ಇರುವ ಮುನ್ನೆಚ್ಚರಿಕೆಗಳ ತಿಳಿದುಕೊಳ್ಳುವುದು.

ಪ್ಲಾಸ್ಮಾ ಥೆರಪಿ (PRP) ಯಾವಾಗ?

ಈ ಎಲ್ಲಾ ಮುನ್ನೆಚ್ಚರಿಕೆಗಳ ಹೊರತಾಗಿಯೂ ಮೊಣಕಾಲು ನೋವು ಮುಂದುವರಿದರೆ, ಶಸ್ತ್ರಚಿಕಿತ್ಸೆಯ ಬದಲಿಗೆ ಪ್ಲಾಸ್ಮಾ ಚಿಕಿತ್ಸೆಯನ್ನು ಆಯ್ಕೆ ಮಾಡಬೇಕು. ಈ ಚಿಕಿತ್ಸೆಯು ಒಂದು ಸಣ್ಣ ಚುಚ್ಚುಮದ್ದಿನೊಂದಿಗೆ ರಕ್ತವನ್ನು ಸಂಗ್ರಹಿಸುವುದು, ಪ್ಲೇಟ್‌ಲೆಟ್‌ಗಳನ್ನು ಬೇರ್ಪಡಿಸುವುದು ಮತ್ತು ಯಾವುದೇ ನೋವಿಲ್ಲದೆ ಅವುಗಳನ್ನು ಸವೆದಿರುವ ಭಾಗದಲ್ಲಿ ಚುಚ್ಚುಮದ್ದಿನೊಂದಿಗೆ ಚಿಕಿತ್ಸೆ ನೀಡಲಾಗುವುದು. ಈ ಚಿಕಿತ್ಸೆಯು ತುಂಬಾ ಸುರಕ್ಷಿತವಾಗಿದೆ ಮತ್ತು ಅರ್ಧ ಗಂಟೆಯೊಳಗೆ ಪೂರ್ಣಗೊಳಿಸಬಹುದು. ಕೆಟ್ಟ ನೋವಿನಿಂದ ಮುಕ್ತಿ ಹೊಂದಿ. ಚಿಕಿತ್ಸೆಯ ದಿನದಂದೇ ನೀವು ನಿಮ್ಮ ನಿತ್ಯ ಕೆಲಸಗಳಿಗೆ ಮರಳಬಹುದು.

ಪ್ಲಾಸ್ಮಾ ಥೆರಪಿ ವಿಧಾನದ ಮೂಲಕ ಸಣ್ಣ ಸೂಜಿಯೊಂದಿಗೆ ಉತ್ತಮ ಚಿಕಿತ್ಸೆ.

ಮಹಿಳೆಯರೇ... ಮೊಣಕಾಲು ನೋವು ಕಡಿಮೆ ಮಾಡಿಕೊಳ್ಳುವುದು ನಿಮ್ಮ ಕೈಯಲ್ಲಿದೆ.

ಪುರುಷರು... ಆಪರೇಷನ್ ಅಗತ್ಯವಿಲ್ಲದೇ ಮಂಡಿಚಿಪ್ಪುಗಳಿಗೆ ಚಿಕಿತ್ಸೆ.

ಕ್ರೀಡಾ ಗಾಯಗಳಿಂದ ಹಾನಿಗೊಳಗಾದ ಮೊಣಕಾಲುಗಳಿಗೆ ಅತ್ಯುತ್ತಮ ಚಿಕಿತ್ಸೆ.

ಅಪಘಾತಗಳಲ್ಲಿ... ಅಪಾಯದ ಗಾಯಗಳಿಂದ ಹಾನಿಗೊಳಗಾದ ಮೊಣಕಾಲುಗಳಿಗೆ ಅತ್ಯುತ್ತಮ ಪರಿಣಾಮಕಾರಿ ಚಿಕಿತ್ಸೆ.

PRP ಥೆರಪಿ ಚಿಕಿತ್ಸೆಯನ್ನು ಯಾವ ನೋವಿಗೆ ನೀಡಬಹುದು?

- ಮೊಣಕಾಲಿನ ಅಸ್ಥಿಸಂಧಿವಾತ
- ಅಸ್ಥಿರಜ್ಜು/ಚಂದ್ರಾಕೃತಿ/ಸ್ನಾಯುವಿನ ಗಾಯಗಳು
- ಕ್ರೀಡೆ ಗಾಯಗಳು
- ಸೊಂಟ ಮತ್ತು ಸರ್ವೆಕಲ್ ಸ್ಪಾಂಡಿಲೋಸಿಸ್
- ಅಸ್ಥಿರಜ್ಜುಗಳು, ಭುಜ ಮತ್ತು ಪಾದದ ಕೀಲುಗಳು
- ಸ್ನಾಯುವಿನ ಗಾಯ
- ಟೆನಿಸ್ ಮೊಣಕೈ
- ಪ್ಲಾಂಟರ್ ಫ್ಯಾಸಿಟಿಸ್
- ಭುಜ ಮತ್ತು ಪಾದದ ಜಂಟಿ ಸಂಧಿವಾತ

ಡಾ. ಸುಧೀರ್ ದಾರಾ
MBBS, MD, FIAPM
ಇಪಿಯೋನ್ ಸಂಸ್ಥಾಪಕರು ಮತ್ತು ನಿರ್ದೇಶಕರು ಹಾಗೂ ಪೇನ್ ಮೆಡಿಸಿನ್‌ನ ಮುಖ್ಯಸ್ಥರು

ಡಾ. ಮಿನಲ್ ಚಂದ್ರ
MBBS, DNA FIAPM, EDPM(EUROPE)
ಸಹ-ಸಂಸ್ಥಾಪಕರು
ಸೀನಿಯರ್ ಇಂಟರ್ವೆನ್ಷನಲ್ ಪೇನ್ ಸ್ಪೆಷಲಿಸ್ಟ್

ಡಾ. ವಿದ್ಯಾ ಬಂಡಾರು
MBBS, MD, FIPM,
MSK Radiology Fellowship
ಕ್ಲಿನಿಕಲ್ ಮುಖ್ಯಸ್ಥರು ಮತ್ತು
ಸೀನಿಯರ್ ಇಂಟರ್ವೆನ್ಷನಲ್ ಪೇನ್ ಫಿಸಿಷಿಯನ್

EPIONE
Center for Pain Relief & Beyond
Pain Ortho Neurology & Regenerative Clinics

ಇಪಿಯೋನ್ ಪೇನ್ ಕೇರ್ ಸೆಂಟರ್
ನಂ. 946, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬನಶಂಕರಿ ಬಿಡಿಎ ಕಾಂಪ್ಲೆಕ್ಸ್ ಹತ್ತಿರ, ಬೆಂಗಳೂರು–560070.
www.epionepainandspine.com/bengaluru/
ಹೈದರಬಾದ್ – 84660 44441, ಚೆನ್ನೈ – 76313 76313

ಬೆಂಗಳೂರು– 90 6311 6311 / 6361 22 99 11

ಅದಾನಿ ವಿವಾದ: ಅಂತರ ಕಾಯ್ದುಕೊಂಡ ಬಿಜೆಪಿ

ನವದೆಹಲಿ (ರಾಯಿಟರ್ಸ್): 'ಗೌತಮ್ ಅದಾನಿ ಅವರನ್ನು ಸಮರ್ಥಿಸಿಕೊಳ್ಳಲು ಯಾವುದೇ ಕಾರಣವಿಲ್ಲ' ಎಂದು ಬಿಜೆಪಿ ಹೇಳಿದೆ. ಆ ಮೂಲಕ ಅದಾನಿ ವಿರುದ್ಧದ ಲಂಚ ಆರೋಪದ ವಿವಾದದಿಂದ ಅಂತರ ಕಾಯ್ದುಕೊಳ್ಳಲು ನಿರ್ಧರಿಸಿರುವಂತಿದೆ. 'ಅದಾನಿ ಅವರನ್ನು ರಕ್ಷಿಸುವ ಅಗತ್ಯ ನಮಗಿಲ್ಲ' ಎಂದು ಹೇಳಿದೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 26/2024, ದಿನಾಂಕ: 22.11.2024

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.

ಕ್ರ.ಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರು ದಿನಾಂಕ
01	33245009	ಸ್ವಯಂಚಾಲಿತ ಅಗ್ನಿ ಪತ್ತೆಹಚ್ಚುವ ಅಂ ಅಗ್ನಿ ನಂದಿಸುವ ವ್ಯವಸ್ಥೆ	25 ನಂ.	04.12.2024
02	33241338ಎ	16 ಐಟಂಗಳಿಗೆ ಬೇಕಾದ ಮಸ್ಟ್ ಚೇಂಜ್ ಕಿಟ್	272 ಸೆಟ್	09.12.2024
03	45241274ಎ	4.5 ಕಿವ್ಯಾ. ಅಂಡರ್ ಸ್ಲಂಗ್ ಕಾನ್ಸ್‌ಟೆಂಟ್ ವೋಲ್ಟೇಜ್ ರೆಗ್ಯುಲೇಟೆಡ್ ಬ್ಯಾಟರಿ ಚಾರ್ಜರ್	85 ನಂ.	10.12.2024
04	33241018ಎ	ಎಲ್‌ಹೆಚ್‌ಬಿ ಕೋಚ್‌ಗಳಿಗಾಗಿ ಡಬಲ್ ಸೀಲ್ಡ್ ವಿಂಡೋ ಗ್ಲಾಸ್ ಯೂನಿಟ್	3084 ನಂ.	16.12.2024
05	50241051	ಕಡಿಮೆ ನಿರ್ವಹಣೆಯುಳ್ಳ ಲೆಡ್ ಆಸಿಡ್ ಸೆಲ್ 2ವಿ 200 ಎಹೆಚ್	1783 ನಂ.	16.12.2024
06	30241087	ಕಂಟ್ರೋಲ್ ಡಿಸ್ಚಾರ್ಜ್ ಫ್ಲಶ್ ವಾಲ್ವ್	8769 ನಂ.	23.12.2024
07	65245003	ವಿವಿಧ ಬಗೆಯ ಮೆಟಲ್ ಪ್ಯಾಲೆಟ್‌ಗಳ ವ್ಯವಸ್ಥೆ	ಟೆಂಡರ್‌ನ ಷೆಡ್ಯೂಲ್‌ನಂತೆ	31.12.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/601/AAMO/PRB/SWR/2024-25 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

South Western Railway - SWR | SWRRLY | SWRRLY

SOBHA

SOBHA LIMITED

CIN : L45201KA1995PLC018475
Regd. Office: 'SOBHA' Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000, Email: investors@sobha.com
www.sobha.com

POSTAL BALLOT NOTICE AND REMOTE E-VOTING INFORMATION

Shareholders of the Company are hereby informed that pursuant to the Sections 108, 110 and other applicable provisions, if any, of the Companies Act, 2013 read with Rule 20 and 22 of the Companies (Management and Administration) Rules, 2014 (including any statutory modification(s) and / or re-enactment(s) thereof for the time being in force), guidelines prescribed by the Ministry of Corporate Affairs ("**MCA**")vide various Circulars and notifications issued by the MCA ("**the MCA Circulars**"), the secretarial standards issued by the Institute of Company Secretaries of India on General Meetings and Regulation 44 of the Securities and Exchange Board of India (Listing Obligations and Disclosure Requirements) Regulations, 2015 and any other applicable laws, the Company has dispatched the Postal Ballot Notice on Tuesday, November 26, 2024 through electronic mode only, to those shareholders whose names are recorded in the Register of Members and /or Register of Beneficial Owners maintained by the Depositories as on Friday, November 22, 2024, for seeking approval of the shareholders of the Company through Postal Ballot by way of remote e-Voting, for the following matters:

S.No.	ITEMS	TYPE OF RESOLUTION(S)
1.	Appointment of **Mr. Nisanth M N,** (DIN 10834675), as the Director of the Company.	Ordinary Resolution
2.	Appointment of **Mr. Nisanth M N,** (DIN 10834675), as Deputy Managing Director of the Company.	Special Resolution
3.	Re-appointment of **Ms. Srivathsala Kanchi Nandagopal** (DIN 06465469),as a Non-Executive Independent Director of the Company.	Special Resolution

The postal ballot notice is available on the website of the Company, www.sobha.com and the stock exchanges where the equity shares of the Company are listed i.e. BSE Limited ("BSE"), www.bseindia.com and National Stock Exchange of India Limited ("NSE") www.nseindia.com

The Company has engaged the services of Link Intime India Private Limited ("**Link Intime**"), to provide remote e-Voting facility for Postal Ballot in order to enable the members to cast their vote electronically. The detailed procedure for e-Voting is enumerated along with the Postal Ballot Notice. The remote e-Voting period will commence **from 9.00 a.m. (IST) on Wednesday, November 27, 2024, and ends at 5.00 p.m. (IST) on Thursday, December 26, 2024.** The e-Voting module shall be disabled by Link Intime, thereafter.

The communication of assent and dissent of the members would take place only through the remote e-Voting system. The shareholders would have the option to vote only through remote e-Voting and voting through physical ballot papers will not be provided. Only those members whose names are recorded in the Registers of Members of the Company or in the Registers of Beneficial Owners maintained by the Depositories as on the cut-off date i.e., Friday, November 22, 2024 will be entitled to cast their votes as assent or dissent by remote e-Voting. Once the vote on the resolution is cast by the Member, he/she shall not be allowed to change it subsequently.

In case of any queries, you may refer the Frequently Asked Questions ('FAQs') and InstaVote e-Voting manual available at https://instavote.linkintime.co.in, under Help section or send an email to enotices@linkintime.co.in or contact on: - Tel: 022 –4918 6000 or write an email to Mr. Bijan Kumar Dash, Company Secretary and Compliance officer at investors@sobha.com

The Board of Directors of the Company appointed Mr. Nagendra D Rao (Membership No. F 5553, COP No. 7731) Practising Company Secretary as Scrutinizer (the "Scrutinizer") for conducting the Postal Ballot through remote e-Voting process in a fair and transparent manner.

The result of the postal ballot will be announced on or before 5.00 p.m. IST on Saturday, December 28, 2024. The said results along with the Scrutinizer's Report would be intimated to BSE and NSE and will be uploaded on the Company's website, www.sobha.com

For Sobha Limited

Sd/-
Bijan Kumar Dash
Company Secretary
& Compliance Officer
Membership No: ACS 17222

Date: November 27, 2024
Place: Bangalore

ತಾಪಮಾನ ಕುಸಿತ: ಚಳಿ ಹೆಚ್ಚಳ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ನಗರದ ವಾತಾವರಣದಲ್ಲಿ ಉಷ್ಣಾಂಶ ಕುಸಿದಿದೆ. ಇದರಿಂದಾಗಿ ಮಂಗಳವಾರ ದಿನದ ಬಹುತೇಕ ಅವಧಿ ಚಳಿ ಕಾಣಿಸಿಕೊಂಡಿತ್ತು.

ಮೋಡ ಕವಿದ ವಾತಾವರಣದಿಂದ ಗರಿಷ್ಠ ಉಷ್ಣಾಂಶ ನಾಲ್ಕು ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತವಾಗಿತ್ತು. ಗರಿಷ್ಠ ಉಷ್ಣಾಂಶ ಮಧ್ಯಾಹ್ನದ ಅವಧಿಗೆ 24 ಡಿಗ್ರಿ ಸೆಲ್ಸಿಯಸ್‌ಗೆ ಇಳಿದರೆ, ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು. ನಿರಂತರ ಗಾಳಿಯಿಂದಾಗಿ ವಾತಾವರಣ ತಂಪಾಗಿ, ಚಳಿ ಹೆಚ್ಚಳವಾಗಿತ್ತು.

ಹವಾಮಾನ ಇಲಾಖೆಯ ಪ್ರಕಾರ, ಎರಡು ವಾರಗಳಿಂದ ಸರಾಸರಿ ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಬುಧವಾರ ಹಾಗೂ ಗುರುವಾರವೂ ಮೋಡ ಕವಿದ ವಾತಾವರಣ ಇರಲಿದೆ. ತುಂತುರು ಮಳೆಯಾಗುವ ಸಾಧ್ಯತೆಯಿದೆ.

ಮಾಲಿನ್ಯ ತಡೆಗೆ 'ಆ್ಯಂಟಿ ಸ್ಮಾಗ್ ಗನ್'

ಅತಿಹೆಚ್ಚು ವಾಯು ಮಾಲಿನ್ಯವಿರುವ ರಸ್ತೆಗಳಲ್ಲಿ ಯಂತ್ರದ ಬಳಕೆ • ನಿತ್ಯ 60 ಕಿ.ಮೀ ಸಂಚಾರ

ಪ್ರಜಾವಾಣಿ ವಾರ್ತೆ

8 ಒಟ್ಟು 'ಆ್ಯಂಟಿ ಸ್ಮಾಗ್ ಗನ್' ಯಂತ್ರ | **45** ಕಿ.ಮೀ.ಯಿಂದ **60** ಕಿ.ಮೀ ನಿತ್ಯ ಈ ಯಂತ್ರವುಳ್ಳ ವಾಹನದ ಸಂಚಾರ | **6000** ಲೀಟರ್ ಪ್ರತಿ ಯಂತ್ರದ ನೀರಿನ ಸಂಗ್ರಹ ಸಾಮರ್ಥ್ಯ

ಬೆಂಗಳೂರು: ನಗರದಲ್ಲಿ ಅತಿಹೆಚ್ಚು ವಾಯು ಮಾಲಿನ್ಯವಿರುವ ರಸ್ತೆಗಳಲ್ಲಿ ಮಾಲಿನ್ಯವನ್ನು ನಿಯಂತ್ರಿಸಲು 'ಆ್ಯಂಟಿ ಸ್ಮಾಗ್ ಗನ್' ಯಂತ್ರಗಳನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಬಳಸುತ್ತಿದೆ.

ನಗರದಲ್ಲಿ ದಿನದಿಂದ ದಿನಕ್ಕೆ ವಾಯುಮಾಲಿನ್ಯ ಹೆಚ್ಚಾಗುತ್ತಿದೆ. ಅದನ್ನು ನಿಯಂತ್ರಿಸುವುದಕ್ಕಾಗಿ ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದಿಂದ ಕೆಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅದರಲ್ಲಿ 'ಆ್ಯಂಟಿ ಸ್ಮಾಗ್ ಗನ್' ಒಂದಾಗಿದೆ.

'ಅತಿಹೆಚ್ಚು ನಿರ್ಮಾಣ ಚಟುವಟಿಕೆಗಳು ನಡೆಯುತ್ತಿರುವ ಪ್ರದೇಶಗಳಲ್ಲಿ ಈ ಯಂತ್ರಗಳನ್ನು ಬಳಸಲಾಗುತ್ತಿದೆ. ಈ ಯಂತ್ರವುಳ್ಳ ವಾಹನ ನಿತ್ಯ ಸುಮಾರು 60 ಕಿ.ಮೀ ಸಂಚರಿಸುತ್ತಿದೆ. ದೆಹಲಿ ಪರಿಸ್ಥಿತಿ ಹಿನ್ನೆಲೆಯಲ್ಲಿ ನಗರದಲ್ಲಿ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ' ಎಂದು ರಸ್ತೆ ಮೂಲಸೌಕರ್ಯದ ಮುಖ್ಯ ಎಂಜಿನಿಯರ್ ಆಗಿರುವ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

'ಕೋರಮಂಗಲ–100 ವ್ಯಾಲಿಯಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಿಸಲಾಗಿರುವ 5 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣ ಘಟಕದಿಂದ 'ಆ್ಯಂಟಿ ಸ್ಮಾಗ್ ಗನ್' ಯಂತ್ರಗಳಿಗೆ ನೀರು ಬಳಸಲಾಗುತ್ತಿದೆ' ಎಂದು ಹೇಳಿದರು.

ವಾಯು ಮಾಲಿನ್ಯ ನಿಯಂತ್ರಣಕ್ಕೆ ಬಳಸುವ 'ಆ್ಯಂಟಿ ಸ್ಮಾಗ್ ಗನ್' ಯಂತ್ರದಿಂದ ನೀರಿನ ಹನಿಗಳನ್ನು ಮಂಗಳವಾರ ವಿಧಾನಸೌಧದ ಮುಂಭಾಗ ಸಿಂಪಡಿಸಲಾಯಿತು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: B/SG/Proj/SBC/LC-20
ದಿನಾಂಕ: 13.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಯಲಹಂಕ (ವೈಎನ್‌ಕೆ) – ರಾಜಾನುಕುಂಟೆ (ಆರ್‌ಎನ್‌ಎನ್) ನಡುವೆ ಕಿಮೀ. 23/000–100 ರಲ್ಲಿ (ಎಲ್‌ಸಿ) ಗೇಟ್ ಸಂ. 20ರ ಇಂಟರ್‌ಲಾಕಿಂಗ್ ಕೆಲಸ.	ರೂ. 72,76,972.85/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.12.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ಯೋಜನೆ / ಬೆಂಗಳೂರು

PUB/594/AAMO/PRB/SWR/2024-25

South Western Railway - SWR | @SWRRLY | SWRRLY

ಟೆಂಡರ್ ಹಾಗೂ ಬಹಿರಂಗ ಹರಾಜು ವಲಯ

ಕೃಷಿ ಸಂಶೋಧನಾ ಕೇಂದ್ರ, ಕೃ.ವಿ.ವಿ., ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65 ಇಲ್ಲಿ **ದಿನಾಂಕ: 03–12–2024 ರಂದು ಮಂಗಳವಾರ ಬೆಳಿಗ್ಗೆ 10–30 ಗಂಟೆಗೆ 2024–25ನೇ** ಸಾಲಿನ **ಹುಣಸೆ ಫಸಲನ್ನು** ನಿರ್ದಿಷ್ಟ ಅವಧಿಗೆ **ಟೆಂಡರ್ ಹಾಗೂ ಬಹಿರಂಗ ಹರಾಜು** ಮೂಲಕ ಮಾರಾಟ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರು, ವ.ಕೃ.ಸಂ.ಕೇ., ಜಿ.ಕೆ.ವಿ.ಕೆ **ದೂರವಾಣಿ ಸಂಖ್ಯೆ: 9449864251/ 080–23330153/ ವಿಸ್ತರಣೆ: 315** ಇಲ್ಲಿ ಸಂಪರ್ಕಿಸಿ.

'ಡಿಎಚ್‌ಇಇ ಎಕ್ಸ್‌ಪ್ರೆಷನ್'ನ ಬೆಂಗಳೂರು ಆವೃತ್ತಿ 2024–25ಕ್ಕೆ ಸಂಭ್ರಮದ ಚಾಲನೆ

ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರತಿಭೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಕ್ಕನ್ ಹೆರಾಲ್ಡ್' ಇನ್ ಎಜುಕೇಷನ್ ಆಯೋಜಿಸಿರುವ ನಾಲ್ಕು ದಿನಗಳ ಸಾಂಸ್ಕೃತಿಕ ಸ್ಪರ್ಧೆ 'ಡಿಎಚ್‌ಇಇ ಎಕ್ಸ್‌ಪ್ರೆಷನ್'ನ ಬೆಂಗಳೂರು ಆವೃತ್ತಿ 2024–25ಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ನೌಕರರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡುವ ಮೂಲಕ ಪ್ರತಿಭೆಯನ್ನು ಪ್ರದರ್ಶಿಸಿದರು.

ಜಕ್ಕೂರು ನ್ಯಾಷನಲ್ ಪಬ್ಲಿಕ್ ಶಾಲೆ ಎಲೆಕ್ಟ್ರಾನಿಕ್ ಸಿಟಿಯ ದೆಹಲಿ ಪಬ್ಲಿಕ್ ಸ್ಕೂಲ್, ಮಾರತ್ತಹಳ್ಳಿಯ ಟ್ರಿನಿಟಿ ಇಂಗ್ಲಿಷ್ ಹೈಸ್ಕೂಲ್, ಸಿ.ವಿ. ರಾಮನ್ ನಗರದ ಮದರ್ ಡಾಲ್ಫಿನ್ ಇಂಗ್ಲಿಷ್ ಹೈಸ್ಕೂಲ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಗಮನಸೆಳೆದ ನೃತ್ಯ ಪ್ರದರ್ಶನ (ಎಡಚಿತ್ರ) ಗಂಗಾ ಇಂಟರ್‌ನ್ಯಾಷನಲ್ ಶಾಲೆ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರಗಳು

ಅಂತರ ಶಾಲಾ ನೃತ್ಯ ಸ್ಪರ್ಧೆ ತೀರ್ಪುಗಾರರಾಗಿ ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ, ನಂದಿ ಭರತನಾಟ್ಯ ಕಲಾಶಾಲೆಯ ಸಂಸ್ಥಾಪಕಿ ಗೀತಾಲಕ್ಷ್ಮಿ ಜಿ, ಒಡಿಸ್ಸಿ ನೃತ್ಯಗಾರ್ತಿ ಮಧುಲಿತಾ ಮಹೋಪಾತ್ರ ಮತ್ತು ನೃತ್ಯ ಸಂಯೋಜಕ ಡ್ಯಾನಿ ಪಾಲ್ಗೊಂಡಿದ್ದರು.

ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಿರಿಯರು, ಹಿರಿಯರ ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು. ಪೈಲಟ್ ಪೆನ್ ಇಂಡಿಯಾ, ವಂಡರ್ ಲಾ ಪಾರ್ಕ್ಸ್ ಮತ್ತು ರೆಸಾರ್ಟ್ಸ್ ಮತ್ತು ಪೂರ್ವಿಕಾ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ವಿಜೇತರು:

ಜೂನಿಯರ್ ವಿಭಾಗ

1. ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಶನ್, ಕೋಣನಕುಂಟೆ
2. ಗಂಗಾ ಇಂಟರ್‌ನ್ಯಾಷನಲ್ ಸ್ಕೂಲ್, ನಾಗಸಂದ್ರ
3. ಜುಬಿಲಿ ಇಂಗ್ಲಿಷ್ ಹೈಸ್ಕೂಲ್ (ಸಿಬಿಎಸ್‌ಇ), ಎನ್‌ಆರ್‌ಐ ಲೇಔಟ್
4. ಶ್ರೀ ಅಯ್ಯಪ್ಪ ಶಿಕ್ಷಣ ಕೇಂದ್ರ (ಸಿಬಿಎಸ್‌ಇ), ಚಿಕ್ಕಬಾಣಾವರ

ಸೀನಿಯರ್ ವಿಭಾಗ:

1. ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಶನ್, ಕೋಣನಕುಂಟೆ
2. ಗಂಗಾ ಇಂಟರ್ ನ್ಯಾಷನಲ್ ಸ್ಕೂಲ್, ನಾಗಸಂದ್ರ
3. ಜುಬಿಲಿ ಶಾಲೆ, ವಿಜಿನಾಪುರ
4. ವಿದ್ಯಾ ಪೂರ್ಣಪ್ರಜ್ಞ ಶಾಲೆ, ನಾಗಸಂದ್ರ

ಸುಧಾ, ಮಯೂರ ಓದಿ

ದಕ್ಷಿಣ ಪಿನಾಕಿನಿ ಜಲವಿವಾದ– ವರದಿ ಸಲ್ಲಿಕೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಪಿನಾಕಿನಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ರಚಿಸಲಾದ ಸಂಧಾನ ಸಮಿತಿಯ ವರದಿಯನ್ನು ಎರಡು ವಾರಗಳಲ್ಲಿ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಮಂಗಳವಾರ ಸೂಚಿಸಿದೆ.

ತಮಿಳುನಾಡು ಮತ್ತು ಕರ್ನಾಟಕ ನಡುವಿನ ಮಾತುಕತೆ ವಿಫಲವಾಗಿದೆ ಎಂದು ಕೇಂದ್ರ ಜಲಶಕ್ತಿ ಸಚಿವಾಲಯದ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು. ಆಗ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್.ವಿ. ಎನ್. ಭಟ್ಟಿ ಅವರ ಪೀಠವು ಈ ನಿರ್ದೇಶನ ನೀಡಿತು.

ಈ ಹಿಂದೆ ಜಲಶಕ್ತಿ ಸಚಿವಾಲಯವು ನದಿ ಜಲಾನಯನ ಪ್ರದೇಶದಲ್ಲಿ ನೀರಿನ ಲಭ್ಯತೆ ನಿರ್ಣಯಿಸಲು ಮತ್ತು ರಾಜ್ಯಗಳ ನಡುವಿನ ಹಂಚಿಕೆ ಒಪ್ಪಂದಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿತ್ತು. ನೀರನ್ನು ಹಂಚಿಕೊಳ್ಳಲು ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳೊಂದಿಗೆ ಮಾತುಕತೆ ನಡೆಸಿತ್ತು.

ದಕ್ಷಿಣ ಪಿನಾಕಿನಿ ನದಿ ಕಣಿವೆಯಲ್ಲಿ ಕರ್ನಾಟಕ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಈ ವಿವಾದವನ್ನು ಮಾತುಕತೆ ಮೂಲಕ ಇತ್ಯರ್ಥಪಡಿಸಲು ಸಂಧಾನ ಸಮಿತಿಯನ್ನು ರಚಿಸಲಾಗಿದೆ' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಈ ಹಿಂದೆ ತಿಳಿಸಿತ್ತು. ಹೊಸದಾಗಿ ಸಂಧಾನ ಸಮಿತಿ ರಚಿಸಲು ಸುಪ್ರೀಂ ಕೋರ್ಟ್ ಸೂಚಿಸಿತ್ತು. ನ್ಯಾಯಮಂಡಳಿ ರಚನೆಗೆ ತಮಿಳುನಾಡು ಸರ್ಕಾರ ಪಟ್ಟು ಹಿಡಿದಿದೆ.

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್
ಶ್ರೀ ಅರಬಿಂದೊ ಮಾರ್ಗ, ನವದೆಹಲಿ–110016

ಎನ್‌ಸಿಇಆರ್‌ಟಿ ಡಾಕ್ಟೋರಲ್ ಫೆಲೋಶಿಪ್ – 2024

ಶಿಕ್ಷಣ ಮತ್ತು ನೇರವಾಗಿ ಶಿಕ್ಷಣಕ್ಕೆ ಸಂಬಂಧಿತ ಇನ್ನಿತರೆ ವಿಭಾಗೀಯ ಕ್ಷೇತ್ರಗಳಲ್ಲಿ ಎನ್‌ಸಿಇಆರ್‌ಟಿ ಡಾಕ್ಟೋರಲ್ ಫೆಲೋಶಿಪ್ ನೀಡುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಜಾಹೀರಾತು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳು ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ಅರ್ಹತೆ, ಪ್ರಕ್ರಿಯೆ ಇತ್ಯಾದಿ ಕುರಿತಾದ ವಿವರವಾದ ಮಾಹಿತಿಗಾಗಿ ದಯವಿಟ್ಟು ಎನ್‌ಸಿಇಆರ್‌ಟಿ ಸಂಸ್ಥೆಯ **www.ncert.nic.in** ವೆಬ್‌ಸೈಟ್‌ಗೆ ಭೇಟಿ ಕೊಡಿ. ಸೂಚನೆ: ಒಟ್ಟಾರೆ ಹತ್ತು ಫೆಲೋಶಿಪ್‌ಗಳು ಲಭ್ಯವಿದ್ದು, ಇವುಗಳಲ್ಲಿ 4 ಫೆಲೋಶಿಪ್‌ಗಳು ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್‌ಐಇ) ಅಜ್ಮೀರ್, ಭೋಪಾಲ್, ಭುವನೇಶ್ವರ ಮತ್ತು ಮೈಸೂರು ಕೇಂದ್ರಗಳಿಗೆ ತಲಾ ಒಂದರಂತೆ ಮೀಸಲಾಗಿರುತ್ತವೆ (ಸೂಕ್ತ ಎಂದೆನಿಸಿದಲ್ಲಿ).

CBC 21104/12/0008/2425

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ವಿಭಾಗ
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560 008. ದೂ.: 080–25037131/203

22.11.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	**ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ)ಯ ಓಲ್ಡ್ ಇಬಿಡಬ್ಲ್ಯೂ ಫೆಸಿಲಿಟಿ ಪಕ್ಕದ ಕಾರಿಡಾರ್‌ನಲ್ಲಿರುವ (ಜಿಎಫ್‌ಎಫ್ & ಮೈನ್ ಬಿಲ್ಡಿಂಗ್ ನಡುವೆ) ಸಾಮಾನ್ಯ ಶೌಚಾಲಯದ ನವೀಕರಣ ಕಾಮಗಾರಿ**
ಟೆಂಡರ್ ಪ್ರಕಟಣೆ ಸಂಖ್ಯೆ	**ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/02/2013/ಸಿ/ ಎಂಐ/019/2024–25 ದಿನಾಂಕ: 22.11.2024**
ಅಂದಾಜು ಮೊತ್ತ	**ರೂ. 5.69 ಲಕ್ಷಗಳು**
ಪೂರ್ಣಗೊಳಿಸುವ ಅವಧಿ	**45 ದಿನಗಳು**
ಮಾರಾಟದ ಅವಧಿ	**22.11.2024 ರಿಂದ 02.12.2024 ರ ವರೆಗೆ**
ಇಎಂಡಿ	**ರೂ. 11,380/-**

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: **www.tenderwizard.com/ISRO** ಭೇಟಿ ನೀಡಿ ಮತ್ತು ಟೆಂಡರ್ ದಸ್ತಾವೇಜುಗಳನ್ನು **www.isro.gov.in, www.lpsc.gov.in** ರಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/- ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

District Health and Family Welfare Office, Chickballapur
(Name of organization),
Zilla Adalitha Bhavana, Pujanahalli, Chickballapur (Address), Telephones: 08156-277099, 277034. Fax:

Gem For Proposed 2.5 to 3.0 KV(2 Battery & inverters with Traly to be Procured to Ayushman Arogya Mandira's

(1) ಟೆಂಡರ್ ಉಲ್ಲೇಖ : ಡಿ.ಎಸ್.ಒ/ಚಿಪುರ/ಎಎಮ್/ಕಮಿಟೆಡ್/20/2024–25. (2) ಬಿಡ್ ಮೊತ್ತ : Rs. 62,62,000/– (3) EMD ಮೊತ್ತ : Rs. 1,25,240/–. (4) ಟೆಂಡರ್ ದಾಖಲೆಯ ಮಾರಾಟದ ಪ್ರಾರಂಭದ **ದಿನಾಂಕ : 21.11.2024**. (5) ಪೂರ್ವ ಬಿಡ್ ದಿನಾಂಕ ಮತ್ತು ಸಮಯ: **28.11.2024, 04:00 PM**. (6) ಟೆಂಡರ್ ಡಾಕ್ಯುಮೆಂಟ್ ಎತ್ತಿ ಹಿಡಿಯಲು ಕೊನೆಯ ದಿನಾಂಕ: **09.12.2024, 04:00 PM.** (7) ಟೆಂಡರ್‌ಗಳನ್ನು ತೆರೆಯುವ ಸಮಯ ಮತ್ತು ದಿನಾಂಕ ತಾಂತ್ರಿಕ ದಾಖಲೆಗಳು : **10.12.2024, 04:00 PM.** (8) ಹಣಕಾಸಿನ ಬಿಡ್ ಸಾಧ್ಯವಾದರೆ ದಿನಾಂಕ ಮತ್ತು ಸಮಯ: **11.12.2024, 4:00 P.M.** (9) ಟೆಂಡರ್‌ಗಳನ್ನು ತೆರೆಯುವ ಸ್ಥಳ:ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಜಿಲ್ಲಾ ಆಡಳಿತ ಭವನ, ಪೂಜನಹಳ್ಳಿ ,ಚಿಕ್ಕಬಳ್ಳಾಪುರ (10) ಸಂವಹನಕ್ಕಾಗಿ ವಿಳಾಸ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಜಿಲ್ಲಾ ಅಡಳಿತ ಭವನ, ಪೂಜನಹಳ್ಳಿ, ಚಿಕ್ಕಬಳ್ಳಾಪುರ. **ಮೊ–9449843046**. (11) ಡೆಮೊ: ಡೆಮೊ ದಿನಾಂಕವನ್ನು ಮೂಲ ತಾಂತ್ರಿಕ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ತಿಳಿಸಲಾಗುತ್ತದೆ

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:291/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ (ಗುಭ/ಗುನಿ) ವಿಭಾಗ, ಮಹದೇವಪುರ ವಲಯ, ರೂಂ. ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಎನ್.ಆರ್. ಚೌಕ, ಬೆಂಗಳೂರು–02

ನಂ.: ಕಾಪಾಅ(ಗುಭ/ಗುನಿ)/ಮದೇಪು/ಟೆಂಡರ್/55/24–25 ದಿನಾಂಕ: 26.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ) (ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ, ಕಾರ್ಯಪಾಲಕ ಅಭಿಯಂತರರು ಗುಭ/ಗುನಿ, ಮಹದೇವಪುರ ವಲಯ, ಬಿಬಿಎಂಪಿ ಇವರು ಈ ಕೆಳಗಿನ ಕಾಮಗಾರಿಗಳಿಗೆ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆ ನಿರ್ವಹಣೆ ಸಲಹಾ ಸೇವೆಗಳಿಗೆ ಇದೇ ರೀತಿಯ ಕೆಲಸವನ್ನು ಮಾಡಿದ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ** ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ ಪ್ರಸ್ತಾವನೆಯನ್ನು ಆಹ್ವಾನಿಸುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು
	ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು.
1	ಚಳ್ಳಕೆರೆ ವಾರ್ಡ್ ನಂ. 86ರಲ್ಲಿ ಬಾಬ್ಸಾಪಾಳ್ಯ ವಿಲೇಜ್ ಮುಖ್ಯ ರಸ್ತೆ ಮತ್ತು ವಿಸ್ತರಿಸಿದ ಅಡ್ಡರಸ್ತೆಗಳು ಇತರೆ ಸುತ್ತಮುತ್ತಲಿನ ಬಡಾವಣೆಯ ವಾರ್ಡ್ ಪ್ರದೇಶ. **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 110.00, **ಇಎಂಡಿ ಮೊತ್ತ ರೂ. ಗಳಲ್ಲಿ:** 1,160/–
2	ಹೊರಮಾವು ವಾರ್ಡ್ ನಂ. 87ರಲ್ಲಿ ಕೊತ್ತನೂರು ಬಾಲಾಜಿ ಬಡಾವಣೆ ಕ್ಯಾಲಸನಹಳ್ಳಿ ಅಡ್ಡರಸ್ತೆಗಳು & ಕೆ. ನಾರಾಯಣಪುರ ಬಿಡಿಎಸ್ ನಗರದ ಎದುರಿನ ಅಡ್ಡರಸ್ತೆ ಮತ್ತು ಅಗಾಪೆ ಚರ್ಚ್ ರಸ್ತೆ ಮತ್ತು ಇತರೆ ಸುತ್ತಮುತ್ತಲಿನ ಬಡಾವಣೆಯ ವಾರ್ಡ್ ಪ್ರದೇಶ. **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 140.00, **ಇಎಂಡಿ ಮೊತ್ತ ರೂ.ಗಳಲ್ಲಿ:** 1,500/–
3	ಕಲ್ಕೆರೆ ವಾರ್ಡ್ ನಂ. 88ರಲ್ಲಿ ಕಲ್ಕೆರೆ ಮತ್ತು ಕೆ. ಚನ್ನಸಂದ್ರ ವಿಲೇಜ್ ವಿಸ್ತರಿಸಿದ ಪ್ರದೇಶದ ಅಡ್ಡರಸ್ತೆಗಳು. **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 110.00, **ಇಎಂಡಿ ಮೊತ್ತ ರೂ.ಗಳಲ್ಲಿ:** 1,160/–
4	ವಾರ್ಡ್ ನಂ. 90 ಆರ್‌ಎಂ ನಗರದ ಪಿ ಮತ್ತು ಟಿ ಬಡಾವಣೆ ಅಡ್ಡರಸ್ತೆಗಳು ಮತ್ತು ಶಾಂತಿ ಲೇಔಟ್ ಸುತ್ತಮುತ್ತಲಿನ ಅಡ್ಡರಸ್ತೆಗಳು. **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 140.00, **ಇಎಂಡಿ ಮೊತ್ತ ರೂ.ಗಳಲ್ಲಿ:** 1,500/–
5	ಕೆ ಆರ್ ಪುರ ವಾರ್ಡ್ ನಂ. 91ರಲ್ಲಿ ನಿಸರ್ಗ ಬಡಾವಣೆ ಮತ್ತು ಎಸ್ ಆರ್ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 110.00, **ಇಎಂಡಿ ಮೊತ್ತ ರೂ.ಗಳಲ್ಲಿ:** 2,320/–
6	ಬಸವನಪುರ ವಾರ್ಡ್ ನಂ. 92ರಲ್ಲಿ ಶ್ರೀ ಸೆರೆನಿಟಿ ಬಡಾವಣೆ ಸುತ್ತಮುತ್ತಲ ಪ್ರದೇಶ ಮತ್ತು ಸೀಗೇಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 140.00, **ಇಎಂಡಿ ಮೊತ್ತ ರೂ.ಗಳಲ್ಲಿ:** 2,940/–
	ರಸ್ತೆಗಳ ಅಭಿವೃದ್ಧಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು.
7	ವಿಜ್ಞಾನನಗರ ವಾರ್ಡ್ ನಂ. 95ರಲ್ಲಿ ಅಬ್ಬಯ್ಯ ರೆಡ್ಡಿ ಬಡಾವಣೆ ಮತ್ತು ತಲಕಾವೇರಿ ಬಡಾವಣೆ ಸುತ್ತಮುತ್ತಲಿನ ಪ್ರದೇಶಗಳು **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 120.00, **ಇಎಂಡಿ ಮೊತ್ತ ರೂ.ಗಳಲ್ಲಿ:** 2,530/–
8	ವಿಜ್ಞಾನನಗರ ವಾರ್ಡ್ ನಂ. 95ರಲ್ಲಿ ವಿಜ್ಞಾನನಗರ ಮತ್ತು ಎಲ್‌ಬಿಎಸ್ ನಗರ ಸುತ್ತಮುತ್ತಲಿನ ಪ್ರದೇಶಗಳು **ಯೋಜನೆ ವೆಚ್ಚ ರೂ. ಲಕ್ಷಗಳಲ್ಲಿ:** 130.00, **ಇಎಂಡಿ ಮೊತ್ತ ರೂ.ಗಳಲ್ಲಿ:** 2,750/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ **28.11.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ: **08.12.2024**ರ **ಬೆಳಿಗ್ಗೆ 11:30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ (ಗುಭ/ಗುನಿ), ರೂ.ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಎನ್.ಆರ್. ಚೌಕ, ಬೆಂಗಳೂರು–560 002ರಲ್ಲಿ ನಡೆಯಲಿದೆ. (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **09.12.2024**ರ **ಸಂಜೆ 4:00 ಗಂಟೆ**ವರೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.12.2024**ರ **ಸಂಜೆ 4:30 ಗಂಟೆಗೆ**. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗುಭ/ಗುನಿ–ಮಹದೇವಪುರ ವಲಯ, ಬಿಬಿಎಂಪಿ

ನಗರದಲ್ಲಿ ಇಂದು

ಹಂಸ ಸಾಂಸ್ಕೃತಿಕ–ಸಾಮಾಜಿಕ ಸಿಂಚನ: ಕಿದ್ವಾಯಿ ಆಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಣೆ, ಉದ್ಘಾಟನೆ: ಶ್ರೀಧರ್, ಅಧ್ಯಕ್ಷತೆ: ಬಿ.ಆರ್ ಹಿರೇಮಠ, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ವೆಂಕಟೇಶ್ವರ ಧರ್ಮಶಾಲ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಳಿಗ್ಗೆ 9

ದಿಕ್ಸೂಚಿ: 'ಪಿ.ಯು.ಸಿ. ನೂತನ ಮಾದರಿ ಕನ್ನಡ ಪ್ರಶ್ನೆಪತ್ರಿಕೆ' ಬಗ್ಗೆ ಉಪನ್ಯಾಸ: ನೀಲಕಂಠೇಗೌಡ ಎಚ್.ಎನ್., ಆಯೋಜನೆ ಹಾಗೂ ಸ್ಥಳ: ಸೌಂದರ್ಯ ಕಾಲೇಜು, ಬೆಳಿಗ್ಗೆ 10

ಕರ್ನಾಟಕ ರಾಜ್ಯೋತ್ಸವ: ಮುಖ್ಯ ಅತಿಥಿ: ಎಸ್. ರಾಮಲಿಂಗೇಶ್ವರ, ಅಧ್ಯಕ್ಷತೆ: ಸೋಫಿ ಪಿ.ಓ., ಉಪಸ್ಥಿತಿ: ಮೆನ್ಸಿ ಸೆಬಾಸ್ಟಿಯನ್, ಆಯೋಜನೆ ಹಾಗೂ ಸ್ಥಳ:ಶಾರ್ಲೋನೆ ಕನ್ನಡ ಸಂಘ, ಸೇಂಟ್ ಆನ್ಸ್ ಬಾಲಕಿಯರ ಪದವಿ ಪೂರ್ವ ಕಾಲೇಜು, ರಾಮಮೂರ್ತಿನಗರ, ಬೆಳಿಗ್ಗೆ 10

ಸ್ವಾತಂತ್ರ್ಯ ಚಳವಳಿ ರಸಪ್ರಶ್ನೆ ಸ್ಪರ್ಧೆ ರಾಜ್ಯಮಟ್ಟದ ಬಹುಮಾನ ವಿತರಣೆ ಸಮಾರಂಭ: ಉದ್ಘಾಟನೆ: ಪಿ.ಜಿ. ಆರ್.ಸಿಂಧ್ಯ, ಅಧ್ಯಕ್ಷತೆ: ಶುಭಾ ರಮೇಶ್, ಬಹುಮಾನ ವಿತರಣೆ: ಅಶ್ವತ್ಥ ನಾರಾಯಣ, ಪ್ರಾಸ್ತಾವಿಕ ನುಡಿ: ಈ.ಬಸವರಾಜು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಕುವೆಂಪು ಸಭಾಂಗಣ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 11

'ಅಂಗಳದಲ್ಲಿ ತಿಂಗಳ ಪುಸ್ತಕ' ಕಾರ್ಯಕ್ರಮದ ಉದ್ಘಾಟನೆ ಹಾಗೂ ಕರ್ನಾಟಕ ಸುವರ್ಣ ಸಂಭ್ರಮ ಸಂಪುಟಗಳ ಪರಿಚಯ: ಕೆ.ವಿ. ಸುಬ್ರಹ್ಮಣ್ಯಂ, ಲಕ್ಷ್ಮಣ ಕೊಡಸೆ, ಶಿವಾನಂದ ಕಳವೆ, ಇಂಡಸ್ ಕೆ.ಜಯರಾಂ, ಎಂ.ಜಿ.ಹೆಗಡೆ, ಬಿ.ಎನ್. ವಿದ್ಯಾರಣ್ಯ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ ಆಚರಣೆ: ಮುಖ್ಯ ಅತಿಥಿಗಳು: ಶ್ರೀಮುರಳಿ, ಧರ್ಮೇಂದ್ರ ಕುಮಾರ್, ಕವಿರಾಜ್, ಗಾಳಿಸ್ವಾಮಿ, ಬಿ.ಜಿ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ದಯಾನಂದ ಸಾಗರ್ ತಾಂತ್ರಿಕ ಮಹಾವಿದ್ಯಾಲಯ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 11

ಶ್ರೀಮುರಳಿ

6ನೇ ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ಲಿಂಗರಾಜ ಗಾಂಧಿ, ಮುಖ್ಯ ಅತಿಥಿಗಳು: ಜವರೇಗೌಡ ಟಿ., ಆನಂದ್ ಕುಮಾರ್ ಸಿ.ಎಸ್., ವಿಜಯಲಕ್ಷ್ಮಿ ಎಂ.ವಿ., ಅಧ್ಯಕ್ಷತೆ: ಶಿವ ಶಂಕರ್ ಕೆ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 11.30

ಕರ್ನಾಟಕ ರಾಜ್ಯೋತ್ಸವ ಮತ್ತು ಇಂದಿರಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ವೀಣಾ ಕೆ.ಎನ್., ಪ್ರಶಸ್ತಿ ಪ್ರದಾನ: ಪುರುಷೋತ್ತಮ ಬಿಳಿಮಲೆ, ಪ್ರಶಸ್ತಿ ಪುರಸ್ಕೃತರು: ಮಲರ್ ವಿಳಿ ಕೆ., ಮುಖ್ಯ ಅತಿಥಿ: ಸವಿತಕ್ಕ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಸುರಾನ ಕಾಲೇಜು, ಸೌತ್ ಎಂಡ್ ವೃತ್ತ, ಮಧ್ಯಾಹ್ನ 3

ಮಲರ್ ವಿಳಿ ಕೆ.

'ತೀ.ನಂ.ಶ್ರೀ. ಅವರ ಪ್ರಬಂಧಗಳು' ವಿಷಯದ ಬಗ್ಗೆ ತೀ.ನಂ.ಶ್ರೀ. ವಿಶೇಷ ದತ್ತಿ ಉಪನ್ಯಾಸ: ಎನ್.ರವಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 5

ಕರ್ನಾಟಕ ಯುವ ಸಂಭ್ರಮ: ಅತಿಥಿಗಳು: ಚಿ.ಸು. ಕೃಷ್ಣಸೆಟ್ಟಿ, ಕೆ.ವಿ. ಸುಬ್ರಹ್ಮಣ್ಯಂ, ಆಯೋಜನೆ ಹಾಗೂ ಸ್ಥಳ: ಆರ್ಟ್ ಹೌಸ್, ವಸಂತನಗರ, ಅರಮನೆ ರಸ್ತೆ, ಸಂಜೆ 5

ಕರ್ನಾಟಕ ರಾಜ್ಯೋತ್ಸವ ಸಂಭ್ರಮ: ಗಾಯನ: ಸುಧೀಂದ್ರ, ಪ್ರಭಾ ಇನಾಂದಾರ್, ಲಕ್ಷ್ಮೀ ಗೋಪಾಲಕೃಷ್ಣ, ಕವನ ವಾಚನ: ಮಂಜುಳಾ ಗೋನಾಳ, ಶೈಲೇಶ್ ಕುಮಾರ್, ಶರಣಬಸವ ಎಂ.ಎ.ಗುಡದನಾಳ, ಎಸ್. ಮಂಜುನಾಥ್, ಶೈಲೇಶ್ ಪಟವರ್ಧನ್, ವಿದ್ಯಾಶಂಕರ್, ಚೇತನ್ ಅಂಕನಾಥಪುರ, ಪಾರ್ವತಿ ಲೊಡಗಜ್ಜನವರ್, ಆಯೋಜನೆ: ಆರೋಹಣ, ಸ್ಥಳ: ಪ್ರಯೋಗ್ ಸ್ಟುಡಿಯೊ ಥಿಯೇಟರ್, ಬನಶಂಕರಿ ಮೂರನೇ ಹಂತ, ಸಂಜೆ 5.30

24ನೇ ಕಾರ್ತಿಕ ಸಂಗೀತೋತ್ಸವ: 'ಡಿವಿಜಿಯವರ ಮಂಕುತಿಮ್ಮನ ಕಗ್ಗದಲ್ಲಿ ಕರ್ನಾಟಕ ಸಂಗೀತ' ವಿಷಯದ ಬಗ್ಗೆ ಉಪನ್ಯಾಸ: ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, 'ಕನ್ನಡ ಸಾಹಿತ್ಯದಲ್ಲಿ ಕರ್ನಾಟಕ ಸಂಗೀತ ಮತ್ತು ಇತರ ಕಲೆಗಳು' ವಿಷಯದ ಬಗ್ಗೆ ಉಪನ್ಯಾಸ: ಎ.ವಿ. ಪ್ರಸನ್ನ, ಆಯೋಜನೆ: ನಾದರಂಜಿನಿ ಸಂಗೀತ ಸಭಾ, ಸ್ಥಳ: ಧಾರಿಣಿ ಮಹಿಳಾ ಸಂಘ, ಬಸವೇಶ್ವರನಗರ, ಸಂಜೆ 6

ಸಿದ್ದರಾಮಯ್ಯ: ಹಿಂದುಳಿದ ಸಮುದಾಯಗಳ ಅಗ್ರ ನಾಯಕ!

ಜಾಹೀರಾತು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಜಾಗತಿಕ ಬರಹಗಾರ ದುರ್ಗದ ರಾಜೇಗೌಡ

ರಾಷ್ಟ್ರಮಟ್ಟದಲ್ಲಿ ಸಮಾಜವಾದಿಯಾಗಿ ಗುರುತಿಸಿಕೊಂಡಿರುವ ಸಿದ್ದರಾಮಯ್ಯ, ದಕ್ಷಿಣ ರಾಜ್ಯಗಳ ಹಿಂದುಳಿದ ಸಮುದಾಯಗಳ ಬಲಿಷ್ಠ ರಾಜಕಾರಣಿ, ಬಿಜೆಪಿ ನಾಯಕರುಗಳು ದುರುದ್ದೇಶದಿಂದ ಮುಡಾ ವಿಷಯವನ್ನೇ ಐರಾವತದಂತೆ ಬಿಂಬಿಸುತ್ತಿದ್ದಾರೆ. ನಿವೇಶನಗಳನ್ನು ಮುಡಾಕ್ಕೆ ಈಗಾಗಲೇ ಹಿಂದಿರುಗಿಸಲಾಗಿದೆ. ಮುಡಾದ ನಿವೇಶನಗಳ ಪ್ರಕರಣ ಈಗ ಮುಗಿದ ಅಧ್ಯಾಯ. ಬಿಜೆಪಿ ಸರ್ಕಾರದ ಆಳ್ವಿಕೆ ಹೊತ್ತಿನಲ್ಲೂ ಬ್ರಹ್ಮಾಂಡ ಅಕ್ರಮಗಳು ನಡೆದಿವೆ. ಗಾಜಿನ ಮನೆಯಲ್ಲಿದ್ದುಕೊಂಡು ಈ ನಾಯಕರುಗಳು ಬೇರೆಯವರತ್ತ ಕಲ್ಲು ಹೊಡೆಯುತ್ತಿದ್ದಾರೆ. ನಿರಂತರವಾಗಿ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡುತ್ತಿರುವುದು ಜನತಂತ್ರದ ಮೌಲ್ಯಾಧಾರದ ರಾಜನೀತಿಯಲ್ಲ. ಪ್ರಜಾಪ್ರಭುತ್ವದ ಸರ್ಕಾರಗಳಲ್ಲಿ ಸಣ್ಣಪುಟ್ಟ ದೋಷಗಳಿರುತ್ತವೆ. ED ಮತ್ತು CBI ಸಂಸ್ಥೆಗಳಿಂದ ತನಿಖೆ ಮಾಡುವ ಪ್ರಕರಣ ಇದಲ್ಲ. ಜನತಂತ್ರದಲ್ಲಿ ಸ್ನೇಹ, ಸಹಿಷ್ಣತೆ ಮತ್ತು ಉದಾರತ್ವವೂ ಕೂಡ ನಮ್ಮ ಪ್ರಜಾಪ್ರಭುತ್ವವನ್ನು ಭದ್ರಗೊಳಿಸುತ್ತದೆ. ಅಪಪ್ರಚಾರ, ಷಡ್ಯಂತ್ರ, ತೇಜೋವಧೆ, ದ್ವೇಷ ಪ್ರತೀಕಾರಗಳ ಕುತಂತ್ರದಿಂದ ಸಿದ್ದರಾಮಯ್ಯರವರನ್ನು ದುರ್ಬಲಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಒತ್ತಡದಿಂದ ರಾಜೀನಾಮೆ ಕೊಡಿಸುವುದು ಬಿಜೆಪಿ ಮಿತ್ರ ಪಕ್ಷಗಳ ಭ್ರಮೆ, ಮಟಮಟ ಮಧ್ಯಾಹ್ನದ ಕನಸು, ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಸಿದ್ದರಾಮಯ್ಯರವರಿಗೆ ಜನರ ಅಭೂತ ಬೆಂಬಲವಿದೆ. ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯ ಮತ್ತು ವಸಾಹತುಶಾಹಿ ನೀತಿಯ ವಿರುದ್ಧ ಅಂದು ಸ್ವಾತಂತ್ರ್ಯವೀರ ಸಂಗೊಳ್ಳಿ ರಾಯಣ್ಣ ಸಿಡಿದು ಹೋರಾಡಿ ಸಿಂಹ ಸ್ವಪ್ನವಾಗಿದ್ದ. ಸರ್ವಾಂಗೀಕರಣದ ಅಭಿವೃದ್ಧಿಗೆ ಕಂಕಣಬದ್ಧರಾಗಿ ಕೆಲಸ ಮಾಡುತ್ತಿರುವ ಸಿದ್ದರಾಮಯ್ಯರನ್ನು ಬಗ್ಗು ಬಡಿಯಲು ಷಡ್ಯಂತ್ರ ರೂಪಿಸಿದರೆ ರಾಜ್ಯದ ಜನರು ಸಿಡಿದೆದ್ದಾರು. ರಾಜಕಾರಣದ ಅಲ್ಲೋಲ ಕಲ್ಲೋಲದ ಪ್ರಕ್ಷುಬ್ಧತೆ ಅಪ್ಪಳಿಸಬಹುದು. ಪ್ರಜಾಪ್ರಭುತ್ವ ಎಲ್ಲರ ಆಸ್ತಿ, ತನಿಖಾ ಸಂಸ್ಥೆಗಳನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಪ್ರಜಾತಂತ್ರದ ಆಳ್ವಿಕೆಗೆ ಬಡಿದ ಬರಸಿಡಿಲು. ಸಿದ್ದರಾಮಯ್ಯನವರಿಗೆ ಗವಿಗಂಗಾಧರೇಶ್ವರ ಶ್ರೀರಕ್ಷೆ ಮತ್ತು ಅನುಗ್ರಹ ಶತಸಿದ್ಧವಾಗಿದೆ. ರಾಜ್ಯದ ಅಖಂಡ ಜನಸ್ತೋಮ ಸಿದ್ದರಾಮಯ್ಯನವರ ಬೆಂಬಲಕ್ಕಿದ್ದಾರೆ. ಸಮರ್ಥ ನಾಯಕ, ದಕ್ಷಿಣ ರಾಜ್ಯಗಳ ಹಿಂದುಳಿದ ಸಮುದಾಯಗಳ ಅಗ್ರ ನಾಯಕ, ಸಮಾಜವಾದಿ ಚಿಂತಕ ಸಿದ್ದರಾಮಯ್ಯ 12ನೇ ಶತಮಾನದ ಸಂಸ್ಕೃತ 'ಕವಿ ಬಾಸರ ವಿಧಿಕೂಡ ಮೀರದಿಹುದು ಸಿದ್ದರ ನುಡಿಯ' ಕವನದ ವಾಕ್ಯವನ್ನು ಸ್ಮರಿಸುತ್ತೇನೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ, ಹಿಂದುಳಿದ ಮತ್ತು ಶೋಷಿತ ಸಮುದಾಯಗಳ ಅಭಿವೃದ್ಧಿ ಚಿಂತನೆಯ ಹರಿಕಾರ. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಚ್ಚುಮೆಚ್ಚಿನ ಜನನಾಯಕ; ದಕ್ಷ, ಧೀಮಂತ, ಜನಪರ ಕಾಳಜಿಯ ಆಳ್ವಿಕೆಯಿಂದ ಸಿದ್ದರಾಮಯ್ಯ ಭಾರತದಲ್ಲಿ ಹೆಚ್ಚು ಹೆಸರುಗಳಿಸಿದ್ದಾರೆ. ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್‌ರಂತೆ ಸಿದ್ದರಾಮಯ್ಯ ಜನತಂತ್ರವಾದಿ, ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ರಾಜ್ಯಗಳ ಎಲ್ಲಾ ಪಕ್ಷಗಳ ನಾಯಕರು ತಮ್ಮ ಭಾಷಣದಲ್ಲಿ ಸಿದ್ದರಾಮಯ್ಯನವರ ಪ್ರಗತಿಶೀಲ ಆಳ್ವಿಕೆಯನ್ನು ಪ್ರಸ್ತಾಪಿಸಿ ಮಾತನಾಡುತ್ತಿರುವುದು; ರಾಜಕಾರಣದ ಹೆಗ್ಗಳಿಕೆಯ ಸುದ್ದಿ, ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವಲ್ಲಿ ಸಿದ್ದರಾಮಯ್ಯನವರ ಪಾತ್ರ ಇಂದು ಬಹಳ ಅವಶ್ಯಕವಿದೆ. ಕಾಂಗ್ರೆಸ್ಸಿನ ನೇತಾರ, ಸಂಸತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ರಾಹುಲ್ ಗಾಂಧಿ ಅವರಿಗೆ ಅತ್ಯಂತ ನಂಬಿಕಸ್ತ ಮುಖ್ಯಮಂತ್ರಿ ಎಂದರೆ ಸಿದ್ದರಾಮಯ್ಯ, ಮುಂದಿನ ದಿನಮಾನಗಳಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರದಲ್ಲಿ ಅಧಿಕಾರಕ್ಕೆ ಬರುವುದು ಖಚಿತ, ಮುಖ್ಯಮಂತ್ರಿ ಸಿದ್ದರಾಮಯ್ಯ ಈ ರಾಷ್ಟ್ರದ ಉಪ ಪ್ರಧಾನಿಯಾಗುವುದು ಶತಸಿದ್ಧ.

500 ವರ್ಷಗಳ ಹಿಂದೆ ಚಿನ್ನದ ನಾಣ್ಯವನ್ನು ಮುದ್ರಿಸಿದ್ದ ಕೆಂಪೇಗೌಡರು ಹನುಮಂತನಗರದಲ್ಲಿ ಗವಿಗಂಗಾಧರ ಗುಹಾಂತರ ಗುಡಿಯಲ್ಲಿ ಶಿವ ಪೀಠ ನಿರ್ಮಿಸಿದ್ದಾರೆ. ಪ್ರತಿವರ್ಷ ಜನವರಿಯ ಸಂಕ್ರಾಂತಿ ದಿನದಂದು ಸೂರ್ಯನ ಕಿರಣಗಳು ಶಿವಲಿಂಗವನ್ನು ಮುತ್ತಿಕ್ಕಿ ಪ್ರಜ್ವಲಿಸುವುದು, ವಿಸ್ಮಯದ ಅದ್ಭುತದ ವಿರಾಟರೂಪ, ಭಾರತದ ಪ್ರಧಾನಮಂತ್ರಿಗಳು, ರಾಜ್ಯಪಾಲರುಗಳು, ಕೇಂದ್ರ ಮಂತ್ರಿಗಳು ಈ ಗುಹಾಂತರ ಗುಡಿಯ ಶಿವಲಿಂಗವನ್ನು ಪೂಜಿಸಿ, ಅನುಗ್ರಹ ಪಡೆದಿದ್ದಾರೆ. ದಕ್ಷಿಣ ಭಾರತದಲ್ಲೇ ಇದೊಂದು ಶಿವನ ಶಕ್ತಿ ಪೀಠ, ನಾನು ಗವಿಗಂಗಾಧರ ದೇವರ ಪರಮ ಭಕ್ತ. 20 ವರ್ಷಗಳ ಹಿಂದೆ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಹೆಬ್ಬಾಗಿಲು ನಿರ್ಮಿಸಿದ್ದೇನೆ. ಸೂರ್ಯ–ಚಂದ್ರರ ಚಲನೆಯ ತನಕ ಶಿವಪೂಜೆಗೆ 5 ಲಕ್ಷ ರೂಪಾಯಿಗಳನ್ನು ದೇವರ ಹೆಸರಿನಲ್ಲಿ ಮುಜರಾಯಿ ಇಲಾಖೆಯಲ್ಲಿ ಇರಿಸಿದ್ದೇನೆ. ವರ್ಷಕ್ಕೆ 40 ಸಾವಿರ ರೂಪಾಯಿ ಉತ್ಪತ್ತಿ ಬರುತ್ತಿದ್ದು, ದೇವರ ಪೂಜೆ ಮತ್ತು ಪ್ರಸಾದ ವಿನಿಯೋಗಕ್ಕೆ ವೆಚ್ಚ ಮಾಡಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಧರ್ಮಪತ್ನಿ ಷಡ್ಯಂತ್ರಗಳ ಸಂಕಷ್ಟದಿಂದ ಹೊರಬಂದು ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದು ಜನಸೇವಕರಾಗಿ ಮೆರೆಯಲಿ ಎಂದು ಗಂಗಾಧರನಲ್ಲಿ ಪ್ರಾರ್ಥಿಸಿದ್ದೇನೆ.

ದುರ್ಗದ ರಾಜೇಗೌಡ
ಜಾಗತಿಕ ಬರಹಗಾರ, ಮಾನವ ಹಕ್ಕುಗಳ ವೇದಿಕೆ ಅಧ್ಯಕ್ಷರು,
ಮೊ: 9740929960

ಮೃತದೇಹದ ಜತೆಗೆ ಎರಡು ದಿನವಿದ್ದ ಯುವಕ: ಆರೋಪಿ ಪತ್ತೆಗೆ ಶೋಧ ಚುರುಕು

ಪ್ರೇಯಸಿ ಕೊಂದು ಪ್ರಿಯಕರ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ ಎರಡನೇ ಹಂತದ ರಾಯಲ್ ಲಿವಿಂಗ್ ಲಾಡ್ಜ್‌ನಲ್ಲಿ ವಾಸ್ತವ್ಯ ಮಾಡಿದ್ದ ಪ್ರೇಯಸಿಯನ್ನು, ಪ್ರಿಯಕರನೇ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿ ಆಗಿದ್ದಾನೆ.

ಅಸ್ಸಾಂನ ಮಾಯಾ ಗೊಗೋಯಿ (19) ಮೃತ ಯುವತಿ. ಕೊಲೆ ನಡೆದಿರುವುದು ಮಂಗಳವಾರ ಮಧ್ಯಾಹ್ನದ ವೇಳೆ ಗೊತ್ತಾಗಿದೆ.

'ಆಕೆಯ ಪ್ರಿಯತಮ, ಕೇರಳದ ಕಣ್ಣೂರಿನ ನಿವಾಸಿ ಆರವ್ ಹಾರ್ನಿ (21) ಕೊಲೆ ಮಾಡಿದ್ದಾನೆ' ಎಂಬ ಶಂಕೆಯ ಮೇಲೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಕಂಪನಿಯಲ್ಲಿ ಕೆಲಸ: 'ಮಾಯಾ ಗೊಗೋಯಿ ಖಾಸಗಿ ಕಂಪನಿಯ ಉದ್ಯೋಗಿ. ಕೆಲ ತಿಂಗಳ ಹಿಂದೆ ನಗರಕ್ಕೆ ಬಂದಿದ್ದರು. ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಬಾಡಿಗೆ ಮನೆ ಪಡೆದು ವಾಸಿಸುತ್ತಿದ್ದರು. ವಿದ್ಯಾರ್ಥಿ ಕೌನ್ಸಿಲರ್ ಆಗಿದ್ದ ಆರವ್ ಹಾರ್ನಿ ಆನ್‌ಲೈನ್ ಮೂಲಕ ಪರಿಚಯ ಆಗಿದ್ದ. ಇಬ್ಬರೂ ಚಾಟಿಂಗ್ ನಡೆಸುತ್ತಿದ್ದು, ಪ್ರೀತಿಸಲು ಆರಂಭಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಶನಿವಾರ ಮಧ್ಯಾಹ್ನ ಇಂದಿರಾ ನಗರದ ಲಾಡ್ಜ್‌ನಲ್ಲಿ ಕೊಠಡಿ ಪಡೆದಿದ್ದರು. ಪ್ರಿಯಕರ ಮಂಗಳವಾರ ಬೆಳಿಗ್ಗೆ 8.19ರ ಸುಮಾರಿಗೆ ಹೊರಕ್ಕೆ ತೆರಳಿದ್ದು, ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದರ ದೃಶ್ಯಾವಳಿಗಳನ್ನು ಪೊಲೀಸರು ಸಂಗ್ರಹಿಸಿದ್ದಾರೆ.



ಮಾಯಾ ಗೊಗೋಯಿ



ಆರವ್ ಹಾರ್ನಿ

24ರಂದೇ ಕೊಲೆ?: ನ.23ರಂದು ಮಾಯಾ ಹಾಗೂ ಆರವ್ ಹಾರ್ನಿ ಒಟ್ಟಿಗೆ ಲಾಡ್ಜ್‌ಗೆ ಬಂದಿದ್ದರು. ನ.24ರಂದೇ ಮಾಯಾ ಕೊಲೆಯಾಗಿರುವ ಶಂಕೆ ವ್ಯಕ್ತವಾಗಿದೆ. ಅದೇ ಕೊಠಡಿಯಲ್ಲಿ ಆರೋಪಿ ಭಾನುವಾರ ಹಾಗೂ ಸೋಮವಾರ ರಾತ್ರಿ ವಾಸ್ತವ್ಯ ಮಾಡಿದ್ದಾನೆ ಎನ್ನಲಾಗಿದೆ. ಸೇದಿದ ಸಿಗರೇಟ್‌ನ ತುಂಡುಗಳು ಮೃತದೇಹದ ಬಳಿ ಬಿದ್ದಿದ್ದವು ಎಂದು ಮೂಲಗಳು ತಿಳಿಸಿವೆ.

ಕ್ಯಾಬ್ ಬುಕ್ ಮಾಡಿ ಪರಾರಿ: ಮಂಗಳವಾರ ಬೆಳಿಗ್ಗೆ ಕ್ಯಾಬ್ ಬುಕ್ ಮಾಡಿಕೊಂಡು ಆರೋಪಿ ಪರಾರಿ ಆಗಿದ್ದಾನೆ. ಕ್ಯಾಬ್‌ನಲ್ಲಿ ತೆರಳುತ್ತಿರುವ ದೃಶ್ಯವೂ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಲಾಡ್ಜ್ ಸಿಬ್ಬಂದಿಯ ಮಾಹಿತಿ ಆಧರಿಸಿ ಪೊಲೀಸರಿಗೆ ಬಂದು ಪರಿಶೀಲಿಸಿದಾಗ ರಕ್ತದ ಮಡುವಿನಲ್ಲಿ ಯುವತಿಯ ಶವ ಕಂಡುಬಂದಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಯುವತಿ ಬೇರೆಯವರ ಜತೆಗೆ ಮೊಬೈಲ್‌ನಲ್ಲಿ ಹೆಚ್ಚು ಮಾತನಾಡು-ತ್ತಿದ್ದಳು ಎನ್ನಲಾಗಿದೆ. ಇದು, ಕೃತ್ಯಕ್ಕೆ ಕಾರಣ ಇರಬಹುದು ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಆರೋಪಿ ಕೇರಳಕ್ಕೆ ಪರಾರಿ ಆಗಿರುವ ಶಂಕೆಯಿದೆ' ಎಂದೂ ತಿಳಿಸಿವೆ.

ಮೃತದೇಹದ ವಿಲೇವಾರಿಗೆ ಯತ್ನ?

ಶವದ ಜತೆಗೆ ಆರೋಪಿ ಎರಡು ದಿನ ಕಳೆದಿದ್ದು, ಅದರ ವಿಲೇವಾರಿಗೆ ಯತ್ನಿಸಿರುವ ಸಾಧ್ಯತೆಯಿದೆ. ಅದು ಸಾಧ್ಯವಾಗದೇ ಇದ್ದಾಗ ಕ್ಯಾಬ್ ಬುಕ್ ಮಾಡಿಕೊಂಡು ಪರಾರಿ-ಯಾಗಿದ್ದಾನೆ ಎಂದು ಮೂಲಗಳು ಹೇಳಿವೆ.

ಸ್ಥಳದಲ್ಲಿ ಚಾಕು, ನೈಲಾನ್ ದಾರ ಪತ್ತೆಯಾಗಿದೆ. ಅದು ಆನ್‌ಲೈನ್ ಮೂಲಕ ತರಿಸಿರುವುದು ಗೊತ್ತಾಗಿದೆ. ಪ್ರೇಯಸಿಯನ್ನು ಕೊಲೆ ಮಾಡಲೆಂದೇ ಆರೋಪಿ ಸಿದ್ಧವಾಗಿದ್ದ ಎಂಬುದು ಗೊತ್ತಾಗಿದೆ ಎಂದು ಹೇಳಿವೆ.

ಸರಗಳವು, ಮನೆಗಳಲ್ಲಿ ಕಳ್ಳತನ: ಇಬ್ಬರ ಬಂಧನ

ಬೆಂಗಳೂರು: ಸರಗಳ್ಳತನ ಹಾಗೂ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ನಂದಿನಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಭದ್ರಾವತಿಯ ಅತೀಕುಲ್ಲಾ ಹಾಗೂ ವಸಂತರಾಜು ಬಂಧಿತರು.

ವಸಂತರಾಜು

ಅತಿಕ್ಕುಲ್ಲಾ

ಬಂಧಿತರಿಂದ 113 ಗ್ರಾಂ. ಚಿನ್ನಾಭರಣ, ₹5 ಸಾವಿರ ನಗದು, ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹8.55 ಲಕ್ಷ ಎಂದು ಅಂದಾಜಿಸಲಾಗಿದೆ.

ಆರೋಪಿಗಳ ಬಂಧನದಿಂದ ನಂದಿನಿ ಲೇಔಟ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಸರಗಳ್ಳತನ, ದಾವಣಗೆರೆ ಜಿಲ್ಲೆ ಸಂತೇಬೆನ್ನೂರು ಠಾಣೆಯಲ್ಲಿ ದಾಖಲಾಗಿದ್ದ ಒಂದು ಮನೆ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದರು.

'ಶಂಕರ ನಗರದ ನಿವಾಸಿಯೊಬ್ಬರು ನೀಡಿದ ದೂರು ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಶಂಕರ ನಗರದ ಗಣೇಶ ದೇವಸ್ಥಾನದಲ್ಲಿ ದೂರುದಾರರು ಭಜನೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕೊಠಡಿಯ ಕಿಟಕಿಯ ಬಳಿ ಮಹಿಳೆ ನಿಂತಿದ್ದರು. ಆಗ ಸರವನ್ನು ಆರೋಪಿಗಳು ಕಸಿದುಕೊಂಡು ಪರಾರಿ ಆಗಿದ್ದರು. ನಂದಿನಿ ಲೇಔಟ್‌ನ ಕಂಠೀರವ ಸ್ಟುಡಿಯೊ ಬಳಿ ಇಬ್ಬರನ್ನೂ ವಶಕ್ಕೆ ಪಡೆದು ಬಂಧಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

'ಆರೋಪಿಗಳು ಭದ್ರಾವತಿ ಮನೆಯಲ್ಲಿ ಚಿನ್ನಾಭರಣ, ನಗದು ಬಚ್ಚಿಟ್ಟಿದ್ದರು. ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ಎಲ್‌ಪಿಜಿ ಗ್ಯಾಸ್ ಬಂಕ್ ಪಕ್ಕದ ಖಾಲಿ ಜಾಗದಲ್ಲಿ ಕದ್ದ ದ್ವಿಚಕ್ರ ವಾಹನವನ್ನು ನಿಲ್ಲಿಸಿದ್ದರು' ಎಂದು ಪೊಲೀಸರು ಹೇಳಿದರು.

ಕಾರ್ಮಿಕರಿಗೆ ವಿವಿಧ ಸೇವೆಗಳ ಮಾಹಿತಿ ಒದಗಿಸುವ ಗುರಿ

ಸಂಚಾರಿ ವಾಹನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ಇಲಾಖೆ ಮತ್ತು ರಾಜ್ಯ ಕಟ್ಟಡ ಮತ್ತ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯಕ್ರಮಗಳು, ಯೋಜನೆಗಳು ಮತ್ತು ನಿರ್ಮಾಣ ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ಕುರಿತು ಮಾಹಿತಿ ಒದಗಿಸುವ ಸಂಚಾರಿ ವಾಹನಕ್ಕೆ ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ ಚಾಲನೆ ನೀಡಿದರು.

ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಕೆಗಳಡಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ವಾಹನ ನಗರದಾದ್ಯಂತ ಒಂದು ತಿಂಗಳು ಸಂಚರಿಸಲಿದೆ. ಇಲಾಖೆಯಿಂದ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳು ಹಾಗೂ ಇತರೆ ವಿಷಯಗಳ ಕುರಿತು ಮಾಹಿತಿ ದೊರೆಯಲಿದೆ.

ಕಾರ್ಮಿಕ ಇಲಾಖೆಯ ಹೆಚ್ಚುವರಿ ಆಯುಕ್ತ ಜಿ.ಮಂಜುನಾಥ, ಜಂಟಿ ಆಯುಕ್ತ ಎಸ್.ಬಿ.ರವಿಕುಮಾರ್, ಉಪ ಆಯುಕ್ತರಾದ ಸೋಮಣ್ಣ, ಎಚ್. ಎಲ್.ಗುರುಪ್ರಸಾದ್, ಸಹಾಯಕ ಆಯುಕ್ತರಾದ ಸಂತೋಷ ಹಿಪ್ಪರಗಿ, ಕಾರ್ಮಿಕ ಅಧಿಕಾರಿ ಶಾಮರಾವ್ ಹಾಗೂ ಸಿಬ್ಬಂದಿ ಹಾಜರಿದ್ದರು.

ಕಾರ್ಮಿಕರಿಗೆ ಮಾಹಿತಿ ಒದಗಿಸುವ ಸಂಚಾರಿ ವಾಹನಕ್ಕೆ ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್.ಗೋಪಾಲಕೃಷ್ಣ ಚಾಲನೆ ನೀಡಿದರು

ಬಸ್- ಕಾರು ಡಿಕ್ಕಿ: ಮೂರು ಸಾವು

ರಾಮನಗರ: ತಾಲ್ಲೂಕಿನ ಸಂಗಬಸವನದೊಡ್ಡಿ ಬಳಿ ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಮಹಿಳೆ ಸೇರಿ ಮೂವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಶಿವಾಜಿನಗರದ ಲಿಯಾಖತ್ ಉಲ್ಲಾ ಖಾನ್ (50), ಇವರ ಪತ್ನಿ ಅಸ್ಮಾ (38), ಸ್ನೇಹಿತ ನೂರ್ ಅಹಮದ್ ಮೃತರು. ಮೈಸೂರಿನಲ್ಲಿರುವ ಪುತ್ರಿ ಮನೆಗೆ ಲಿಯಾಖತ್ ಅವರು ಪತ್ನಿಯೊಂದಿಗೆ ಸ್ನೇಹಿತನ ಕಾರಿನಲ್ಲಿ ಹೊರಟಿದ್ದರು. ನೂರ್ ಕಾರು ಚಾಲನೆ ಮಾಡುತ್ತಿದ್ದರು. ರಾತ್ರಿ 9.30ರ ಸುಮಾರಿಗೆ ನಿಯಂತ್ರಣ ಕಳೆದುಕೊಂಡಿದ್ದು, ರಸ್ತೆ ವಿಭಜಕದ ಮೇಲೆ ಹತ್ತಿ ಪಲ್ಟಿಯಾಗಿ ಬೆಂಗಳೂರು ಕಡೆಗೆ ಬರುತ್ತಿದ್ದ ಕೆ.ಎಸ್.ಆರ್. ಟಿ.ಸಿ ಅಶ್ವಮೇಧ ಬಸ್ಸಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರಿನಲ್ಲಿದ್ದ ಮೂವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ನಜ್ಜುಗುಜ್ಜಾಗಿದೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಕಳ್ಳತನ: ಕೇರ್ ಟೇಕರ್ ಬಂಧನ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಕೆಲಸದಾಕೆಯನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ. ಹುಳಿಮಾವು ನಿವಾಸಿ, ಮೂಲತಃ ಸೋಮವಾರಪೇಟೆಯ ರುಕ್ಮಿಣಿ (30) ಬಂಧಿತೆ.

ಆರೋಪಿಯಿಂದ ₹7 ಲಕ್ಷ ಮೌಲ್ಯದ 123 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು. 'ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ನ ನಿವಾಸಿ ವೈದ್ಯೆಯ ಮನೆಯಲ್ಲಿ ರುಕ್ಮಿಣಿ ಕೇರ್ ಟೇಕರ್ ಆಗಿದ್ದು, ಅಲ್ಲಿಯೇ ವಾಸ್ತವ್ಯಕ್ಕೆ ಕೊಠಡಿ ನೀಡಲಾಗಿತ್ತು. ಮಾಲೀಕರು ಇಲ್ಲದಿದ್ದಾಗ ಚಿನ್ನಾಭರಣ ಕಳವು ಮಾಡಿದ್ದಳು' ಎಂದರು.

'ಮಾಲೀಕರು ದೂರು ನೀಡಿದ್ದರು. ವಿಚಾರಣೆ ವೇಳೆ ಕೃತ್ಯ ಎಸಗಿದ್ದಾಗಿ ಆಕೆ ಒಪ್ಪಿ-ಕೊಂಡಿದ್ದಾಳೆ. ಅಡವಿಟ್ಟಿದ್ದ ಆಭರಣ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಬೋನಿಗೆ ಬಿದ್ದ ಮತ್ತೊಂದು ಚಿರತೆ

ಶಿವಗಂಗೆ ಬೆಟ್ಟದ ತಪ್ಪಲಲ್ಲಿ ಮುಂದುವರಿದ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿ ಮುದಿರೇಶ್ವರ ಸ್ವಾಮಿ ದೇವಾಲಯದ ಹತ್ತಿರ ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ಮತ್ತೊಂದು ಚಿರತೆ ಸಿಕ್ಕಿಬಿದ್ದಿದೆ.

ಸೋಮವಾರ ಇದೇ ಪ್ರದೇಶದಲ್ಲಿ ಒಂದು ಚಿರತೆ ಬೋನಿಗೆ ಬಿದ್ದಿತ್ತು. ಈಗ ಮತ್ತೊಂದು ಚಿರತೆ ಸೆರೆಯಾಗಿದ್ದು, ಈ ಭಾಗದಲ್ಲಿ ಇನ್ನಷ್ಟು ಚಿರತೆಗಳು ಇರಬಹುದು ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಅರಣ್ಯಾಧಿಕಾರಿಗಳು, ವೈದ್ಯರು ಭೇಟಿ ನೀಡಿದ್ದರು. ಚಿರತೆಯ ರಕ್ತದ ಮಾದರಿ, ಕೂದಲು ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಸೆರೆಸಿಕ್ಕ ಚಿರತೆಯನ್ನು ಬನ್ನೇರುಘಟ್ಟ ಜೈವಿಕ ರಾಷ್ಟ್ರೀಯ ಉದ್ಯಾನಕ್ಕೆ ಒಯ್ಯಲಾಯಿತು.

ಐದು ವರ್ಷದ ಈ ಹೆಣ್ಣು ಚಿರತೆ ಮುಂಜಾನೆ 3 ಗಂಟೆ ಆಸುಪಾಸಿನಲ್ಲಿ ಸಿಕ್ಕಿರುವ ಅಂದಾಜಿದೆ. ಶಿವಗಂಗೆ, ಕಂಬಾಳು ಗೊಲ್ಲರಹಟ್ಟಿ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಮುಂದುವರಿದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನ.18ರಂದು ಹುಲ್ಲುಕೊಯ್ಯಲು ಹೋಗಿದ್ದ ಕಂಬಾಳು ಗೊಲ್ಲರ ಹಟ್ಟಿಯ ಕರಿಯಮ್ಮ ಎಂಬುವರನ್ನು ಚಿರತೆ ಕೊಂದು ಹಾಕಿತ್ತು.

ಎರಡು ದಿನಗಳಲ್ಲಿ ಎರಡು ಚಿರತೆ ಸಿಕ್ಕಿಬಿದ್ದಿವೆ. ಇವುಗಳಲ್ಲಿ ಕರಿಯಮ್ಮ ಅವರ ಕೊಂದ ಚಿರತೆ ಇದೆಯೇ ಎಂಬುದು ಗೊತ್ತಾಬೇಕಿದೆ.

ಕಾಲೇಜು ವಿದ್ಯಾರ್ಥಿಗಳು, ಐ.ಟಿ ಉದ್ಯೋಗಿಗಳಿಗೆ ಪೂರೈಕೆ

ಡ್ರಗ್ಸ್ ಮಾರಾಟ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜು ವಿದ್ಯಾರ್ಥಿಗಳು ಹಾಗೂ ಐ.ಟಿ–ಬಿ.ಟಿ ಉದ್ಯೋಗಿಗಳಿಗೆ ಗಾಂಜಾ ಪೂರೈಸುತ್ತಿದ್ದ ವಿದೇಶಿ ಪೆಡ್ಲರ್ ಸೇರಿ ಮೂವರನ್ನು ನಗರದ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹86.50 ಲಕ್ಷ ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕೌಸಾಸಿ

ಅಬ್ದುಲ್ ಬಷಹರ್

ವಿದೇಶಿ ಪೆಡ್ಲರ್ ಬಂಧನ: ಐ.ಟಿ–ಬಿ.ಟಿ ಉದ್ಯೋಗಿಗಳಿಗೆ ಎಂಡಿಎಂಎ ಪೂರೈಸುತ್ತಿದ್ದ ನೈಜೀರಿಯಾ ದೇಶದ ಪ್ರಜೆ ಕೌಸಾಸಿ ಜೂಲ್ಸ್ (36) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹77 ಲಕ್ಷ ಮೌಲ್ಯದ 515 ಗ್ರಾಂ. ಎಂಡಿಎಂಎ ಕ್ರಿಸ್ಟಲ್, ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ.

2017ರಲ್ಲಿ ವ್ಯಾವಹಾರಿಕ ವೀಸಾ ಪಡೆದು ಆರೋಪಿ ಭಾರತಕ್ಕೆ ಬಂದಿದ್ದ. ಮುಂಬೈ, ದೆಹಲಿಯಲ್ಲಿ ವಾಸವಿದ್ದು, ಎರಡು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ಸೋಲದೇವನಹಳ್ಳಿಯಲ್ಲಿ ನೆಲಸಿದ್ದ. ವಿದ್ಯಾರ್ಥಿಗಳು, ಐ.ಟಿ-ಬಿ.ಟಿ ಉದ್ಯೋಗಿಗಳಿಗೆ ಪ್ರತಿ ಗ್ರಾಂ.ಗೆ ₹ 12ರಿಂದ ₹15 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಇನ್ನೊಂದು ಪ್ರಕರಣದಲ್ಲಿ ಗಾಂಜಾ ಮಾರುತ್ತಿದ್ದ ಪಶ್ಚಿಮ ಬಂಗಾಳದ ಅಬ್ದುಲ್ ಬಷಹರ್‌ನನ್ನು (34) ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ₹7.5 ಲಕ್ಷ ಮೌಲ್ಯದ 10 ಕೆ.ಜಿ 370 ಗ್ರಾಂ ಗಾಂಜಾ ವಶಕ್ಕೆ ಪಡೆದಿದ್ದಾರೆ.

'ಆರೋಪಿ ನಾಲ್ಕೈದು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಈಚೆಗೆ ಕರಿಯಮ್ಮನ ಅಗ್ರಹಾರ ಮಂತ್ರಿ ಎಸ್ಪಾನಾ ಅಪಾರ್ಟ್‌ಮೆಂಟ್ ಹಿಂಭಾಗದ ಕಾರ್ಮಿಕರ ಶೆಡ್ ಬಳಿ ನಜೀರ್ ಎಂಬಾತನ ಕಚೇರಿಯಲ್ಲಿ ಗಾಂಜಾ ಸಂಗ್ರಹಿಸಿ-ಟ್ಟುಕೊಂಡು ಮಾರಾಟ ಮಾಡುತ್ತಿದ್ದ. ಆಗ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಖಾಸಗಿ ಕಂಪನಿ ಉದ್ಯೋಗಿ ಬಂಧನ: ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದ ಅಡಿ ಖಾಸಗಿ ಕಂಪನಿ ಉದ್ಯೋಗಿ, ಮೂಲತಃ ಪಶ್ಚಿಮ ಬಂಗಾಳದ ಮಲ್ಲೈಕುಜರ್ (34) ಎಂಬಾತನನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹ 2 ಲಕ್ಷ ಮೌಲ್ಯದ 4 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ರೈಲಿನ ಮೂಲಕ ಗಾಂಜಾ ತಂದು ನಗರದಲ್ಲಿ ಗ್ರಾಹಕರಿಗೆ ಪೂರೈಸುತ್ತಿದ್ದ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

2 ಪಿಸ್ತೂಲ್, 4 ಗುಂಡು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದ ಶಸ್ತ್ರಾಸ್ತ್ರಗಳನ್ನು ಬೆಂಗಳೂರಿಗೆ ಕಳ್ಳಸಾಗಣೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಿಹಾರದ ವಿದ್ಯಾನಂದ ಸಹನಿ, ಪ್ರೇಮ್‌ಕುಮಾರ್ ಸಹನಿ ಬಂಧಿತರು.

ಬಂಧಿತರಿಂದ ಅಂದಾಜು ₹5 ಲಕ್ಷ ಮೌಲ್ಯದ ಎರಡು ಪಿಸ್ತೂಲ್, ನಾಲ್ಕು ಜೀವಂತ ಗುಂಡು, ಒಂದು ಬೈಕ್ ಜಪ್ತಿ ಮಾಡಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗು-ತ್ತಿದೆ ಎಂದು ಪೊಲೀಸರು ಹೇಳಿದರು.

'ಎಲೇನಹಳ್ಳಿ, ಕೊಪ್ಪ–ಬೇಗೂರಿನ ನೈಸ್ ರಸ್ತೆಯ ಬಳಿ ಆರೋಪಿಗಳು ಬೈಕ್‌ನಲ್ಲಿ ಬರುತ್ತಿದ್ದರು. ಅವರಲ್ಲಿ ಬೈಕ್‌ಗೆ ಸಂಬಂಧಿಸಿದ ದಾಖಲಾತಿಗಳು ಇರಲಿಲ್ಲ. ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಜೀವಂತ ಗುಂಡುಗಳು ಇದ್ದವು. ನಂತರ, ಓಡಿಹೋಗಲು ಪ್ರಯತ್ನಿಸಿದ ಆರೋಪಿಗಳನ್ನು ವಶಕ್ಕೆ ಪಡೆದು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.



ಕಾಣೆಯಾಗಿದ್ದಾರೆ

ಸಿ.ವಿ.ರಾಮ ರಾವ್, ವಯಸ್ಸು 81
06/10/2024ರಿಂದ ಸಂತೆ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕಿನಿಂದ ಕಾಣೆಯಾಗಿರುತ್ತಾರೆ.
97434 40077, 94808 02862
ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುವುದು





ರೋಬೊಟಿಕ್ ಸೇರಿ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದಾಗಿ ಯಶಸ್ವಿಯಾಗುತ್ತಿರುವ ಚಿಕಿತ್ಸೆ

ಅಂಗಾಂಗ ಕಸಿ ಚಿಕಿತ್ಸೆ ಮಿಡಿದ ನಗರ

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಂಗಾಂಗ ದಾನ ಹಾಗೂ ಕಸಿ ಶಸ್ತ್ರಚಿಕಿತ್ಸೆ ನಡೆಯುತ್ತಿರುವುದು ಆಶಾದಾಯಕ ಬೆಳವಣಿಗೆ. ಜೀವ ಸಾರ್ಥಕತೆ ಹೊಂದಲು ಅಂಗಾಂಗ ದಾನಕ್ಕೆ ಮುಂದಾಗಬೇಕು
ಡಾ. ರವಿಕಿರಣ್ ಎಸ್.ಕೆ.,
ಯಶವಂತಪುರದ ಸ್ಪರ್ಶ್ ಆಸ್ಪತ್ರೆಯ ಹೆಪಟಾಲಜಿ ವಿಭಾಗದ ಮುಖ್ಯಸ್ಥ

ತೀವ್ರ ಮತ್ತು ದೀರ್ಘ ಕಾಲದ ಅಂಗಾಂಗ ವೈಫಲ್ಯ ಚಿಕಿತ್ಸೆಗೆ ಅಂಗಾಂಗ ಕಸಿ ಸಹಕಾರಿ. ಅಂಗಾಂಗ ಕಸಿಗೆ ಬೇಡಿಕೆ ಹೆಚ್ಚುತ್ತಿದ್ದು, ಹೊಂದಾಣಿಕೆಯಾಗುವ ರೋಗಿಗಳಿಗೆ ಕುಟುಂಬಸ್ಥರು ದಾನ ಮಾಡುತ್ತಿದ್ದಾರೆ
ಡಾ. ಸುನಿಲ್ ಕಾರಂತ್,
ಮಣಿಪಾಲ್ ಆಸ್ಪತ್ರೆಯ ಕ್ರಿಟಿಕಲ್ ಕೇರ್ ಮೆಡಿಸಿನ್ ವಿಭಾಗದ ಮುಖ್ಯಸ್ಥ

ಅಂಗಾಂಗ ಕಸಿ ರೋಗಿಗಳಿಗೆ ಹೊಸ ಭರವಸೆ ನೀಡುತ್ತಿದೆ. ಅಂಗಾಂಗ ದಾನ ಹೆಚ್ಚುತ್ತಿರುವುದರಿಂದ ರೋಗಿಗಳಿಗೆ ನಾಲ್ಕೈದು ತಿಂಗಳಲ್ಲಿ ಅಂಗಾಂಗಗಳು ಲಭ್ಯವಾಗುತ್ತಿವೆ
ಡಾ.ಭಗೀರಥ್ ರಘುರಾಮನ್,
ನಾರಾಯಣ ಹೆಲ್ತ್‌ನ ಹೃದಯ ಕಸಿ ವಿಭಾಗದ ನಿರ್ದೇಶಕ

ಅಂಗಾಂಗ ದಾನದ ಬಗ್ಗೆ ಬೃಹತ್ ಜಾಗೃತಿ ಅಭಿಯಾನ ನಡೆದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಅಂಗಾಂಗಗಳನ್ನು ದಾನ ಮಾಡಲು ಮುಂದಾಗುತ್ತಾನೆ. ಇದರಿಂದ ಅಗತ್ಯ ಇರುವವರಿಗೆ ಅಂಗಾಂಗ ಕಸಿ ನಡೆಸಬಹುದು
ಡಾ. ಮೋಹನ್ ಕೇಶವಮೂರ್ತಿ,
ಫೋರ್ಟಿಸ್ ಆಸ್ಪತ್ರೆಯ ಯುರೋ-ಆಂಕೊಲಾಜಿ ವಿಭಾಗದ ನಿರ್ದೇಶಕ

• ವರುಣ ಹೆಗಡೆ

ಬೆಂಗಳೂರು: ರಸ್ತೆ ಅಪಘಾತ, ಗಂಭೀರ ಸ್ವರೂಪದ ಕಾಯಿಲೆಗಳು ಸೇರಿ ವಿವಿಧ ಸಂದರ್ಭದಲ್ಲಿ ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗ ದಾನದ ಬಗ್ಗೆ ಅವರ ಕುಟುಂಬಸ್ಥರ ಮನವೊಲಿಸುವಲ್ಲಿ ಯಶಸ್ವಿಯಾಗುತ್ತಿರುವ ನಗರದ ಆಸ್ಪತ್ರೆಗಳು, ಅಂಗಾಂಗ ವೈಫಲ್ಯಕ್ಕೊಳಗಾದವರಿಗೆ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ಕಸಿ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಜೀವನದಲ್ಲಿ ಹೊಸ ಭರವಸೆ ಮೂಡಿಸುತ್ತಿವೆ. ಅತ್ಯಂತ ಕ್ಲಿಷ್ಟ ಮತ್ತು ಸವಾಲಿನ ಪ್ರಕರಣಗಳಲ್ಲೂ ಯಶಸ್ವಿಯಾಗಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ನಡೆಸುವಲ್ಲಿ ನಗರದ ಆಸ್ಪತ್ರೆಗಳು ಯಶಸ್ವಿಯಾಗುತ್ತಿವೆ.

ರೋಬೊಟಿಕ್, 3ಡಿ ಪ್ರಿಂಟಿಂಗ್, ಕೃತಕ ಬುದ್ಧಿಮತ್ತೆ ಸೇರಿ ವಿವಿಧ ಮುಂದುವರಿದ ತಂತ್ರಜ್ಞಾನಗಳನ್ನು ಇಲ್ಲಿನ ಆಸ್ಪತ್ರೆಗಳು ಅಳವಡಿಸಿ ಕೊಂಡಿರುವುದರಿಂದ, ದೇಶ–ವಿದೇಶಗಳ ಜನರೂ ಚಿಕಿತ್ಸೆ ಹಾಗೂ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ಇಲ್ಲಿಗೆ ಬರಲಾರಂಭಿಸಿದ್ದಾರೆ. ತಜ್ಞವೈದ್ಯರು, ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳಿಂದಾಗಿ ಕಸಿ ಶಸ್ತ್ರಚಿಕಿತ್ಸೆಗಳು ಇಲ್ಲಿನ ಆಸ್ಪತ್ರೆಗಳಲ್ಲಿ ಸುಲಭ ಸಾಧ್ಯವಾಗುತ್ತಿವೆ. ಇದರಿಂದಾಗಿಯೇ ಇಲ್ಲಿನ ವೈದ್ಯಕೀಯ ವ್ಯವಸ್ಥೆಗೂ ಜಾಗತಿಕ ಮಟ್ಟದಲ್ಲಿ ಮನ್ನಣೆ ದೊರೆತಿದೆ.

ರಾಜ್ಯ ಸರ್ಕಾರದ ಜತೆಗೆ ಸರ್ಕಾರಿ ಆಸ್ಪತ್ರೆಗಳು ಹಾಗೂ ಖಾಸಗಿ ಆಸ್ಪತ್ರೆಗಳೂ ಅಂಗಾಂಗ ದಾನ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುತ್ತಿವೆ. ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯು (ಸೊಟ್ಟೊ) ಅಂಗಾಂಗ ಹಾಗೂ ಅಂಗಾಂಶವನ್ನು ಸಂಗ್ರಹಿಸಿ, ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಕಸಿ ಮಾಡಿಸಲು ನೆರವಾಗುತ್ತಿದೆ. ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಸಮಯಕ್ಕೆ ಸರಿಯಾಗಿ ಕಸಿ ಮಾಡದಿದ್ದಲ್ಲಿ ಜೀವಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲಿನ ಆಸ್ಪತ್ರೆಗಳ ವೈದ್ಯರೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿ, ಸಂಗ್ರಹಿಸಲಾದ ಅಂಗಾಂಗವನ್ನು ಸೊಟ್ಟೊ ಅಡಿ ಹೆಸರು ನೋಂದಾಯಿಸಿಕೊಂಡವರಿಗೆ ಕಸಿ ಶಸ್ತ್ರಚಿಕಿತ್ಸೆ ಮಾಡಿಸುತ್ತಿದ್ದಾರೆ.

390 ಅಂಗಾಂಗ ದಾನ: ಅಂಗಾಂಗ ದಾನ ಹಾಗೂ ಅಂಗಾಂಗ ಕಸಿಗೆ ನಗರವೇ ಕೇಂದ್ರ ಸ್ಥಾನವಾಗಿದೆ. ರಾಜ್ಯದಲ್ಲಿ ನಡೆಯುತ್ತಿರುವ ಶೇ 90ಕ್ಕೂ ಅಧಿಕ ಅಂಗಾಂಗ ದಾನ ಹಾಗೂ ಕಸಿ ಪ್ರಕ್ರಿಯೆ ಬೆಂಗಳೂರಿನ ಆಸ್ಪತ್ರೆಗಳಲ್ಲಿಯೇ ನಡೆಯುತ್ತಿದೆ. ಈ ವರ್ಷ ರಾಜ್ಯದಲ್ಲಿ 138 ಮಂದಿಯಿಂದ 390 ಅಂಗಾಂಗ ಹಾಗೂ 693 ಅಂಗಾಂಶಗಳನ್ನು ದಾನವಾಗಿ ಪಡೆದು, ವಿವಿಧ ಆಸ್ಪತ್ರೆಗಳಲ್ಲಿ ಕಸಿ ನಡೆಸಲಾಗಿದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಗ್ಯಾಸ್ಟ್ರೋ ಎಂಟರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ (ಐಗಾಟ್) ಸೇರಿ ವಿವಿಧ ಸರ್ಕಾರಿ ವೈದ್ಯಕೀಯ ಸಂಸ್ಥೆಗಳೂ ಸರ್ಕಾರಿ ಯೋಜನೆಗಳಡಿ ಕಸಿ ಶಸ್ತ್ರಚಿಕಿತ್ಸೆ ನಡೆಸುತ್ತಿವೆ.

ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಡಿಯಲ್ಲಿ 400ಕ್ಕೂ ಅಧಿಕ ಆಸ್ಪತ್ರೆಗಳು ನಗರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಆಸ್ಟರ್ ಆರ್.ವಿ., ಆಸ್ಟರ್ ಸಿಎಂಐ, ಸ್ಪರ್ಶ್, ನಾರಾಯಣ ಹೃದಯಾಲಯ, ಮಣಿಪಾಲ್, ಅಪೋಲೊ, ಫೋರ್ಟಿಸ್, ಕೊಲಂಬಿಯಾ ಏಷ್ಯಾ, ನಾರಾಯಣ ಹೆಲ್ತ್ ಸಿಟಿ ಹಾಗೂ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಗಳು ಅಂಗಾಂಗ ದಾನ ಹಾಗೂ ಕಸಿ ಪ್ರಕ್ರಿಯೆಯಲ್ಲಿ ಮುಂಚೂಣಿಯಲ್ಲಿವೆ.

ಅಂಗಾಂಗ ಸಾಗಣೆಗೆ ಸಂಚಾರ ವಿಭಾಗದ ಪೊಲೀಸರು ಸೇರಿ ವಿವಿಧ ಇಲಾಖೆಗಳು ನೆರವು ನೀಡುತ್ತಿರುವುದರಿಂದ ‘ಗ್ರೀನ್ ಕಾರಿಡಾರ್’ (ಶೂನ್ಯ ಸಂಚಾರ ದಟ್ಟಣೆ) ಮೂಲಕ ರಾಜ್ಯದ ವಿವಿಧೆಡೆಯಿಂದ ಅಂಗಾಂಗಗಳನ್ನು ತಂದು, ಕಸಿ ಮಾಡುವುದು ಸುಲಭವಾಗುತ್ತಿದೆ.

ಅಧಿಕ ಅಂಗಾಂಗ ದಾನಿಗಳನ್ನು ಪಡೆದ ಆಸ್ಪತ್ರೆಗಳು (2024)

ಆಸ್ಪತ್ರೆ	ದಾನಿಗಳು
ಆಸ್ಟರ್ ಆರ್‌ವಿ	27
ಆಸ್ಟರ್ ಸಿಎಂಐ	14
ಸ್ಪರ್ಶ್	13
ಗ್ಲೆನೆಗಲ್ಸ್ ಬಿಜಿಎಸ್	06
ನಾರಾಯಣ ಹೃದಯಾಲಯ	06
ಕಾವೇರಿ ಆಸ್ಪತ್ರೆ	06

‘ಗ್ರೀನ್ ಕಾರಿಡಾರ್’ ಮೂಲಕ ವ್ಯಕ್ತಿಯೊಬ್ಬರ ಅಂಗಾಂಗವನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸಾಗಿಸಲಾಯಿತು



ಅಂಗಾಂಗ ದಾನ, ಕಸಿಯ ಪ್ರಮುಖ ಪ್ರಕರಣಗಳು

- ತೀವ್ರ ಜ್ವರದ ಕಾರಣ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ಇದೇ ತಿಂಗಳು ದಾಖಲಾಗಿದ್ದ 43 ವರ್ಷದ ಇಲ್ಲಿನ ಬಡಗಿಯಿಂದ ಅಂಗಾಂಗ ದಾನ. ಐವರಿಗೆ ನೆರವಾದ ವ್ಯಕ್ತಿ
- ಅಂಗಾಂಗ ದಾನಿಗಳ ಕೊರತೆ ಕಾರಣ ಸೆಪ್ಟೆಂಬರ್‌ನಲ್ಲಿ ವ್ಯಕ್ತಿಯೊಬ್ಬರ ಯಕೃತ್ತನ್ನು (ಲಿವರ್) ವಿಭಾಗಿಸಿ, ಇಬ್ಬರಿಗೆ ಯಶಸ್ವಿಯಾಗಿ ಕಸಿ ನಡೆಸಿದ ಸ್ಪರ್ಶ್ ಆಸ್ಪತ್ರೆ ವೈದ್ಯರು
- ರಸ್ತೆ ಅಪಘಾತದಿಂದ ಗಂಭೀರ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲುವಿನ 22 ವರ್ಷದ ಕ್ಯಾಬ್ ಚಾಲಕನಿಂದ ಕಳೆದ ವರ್ಷ ಅಂಗಾಂಗ ದಾನ. ಐವರಿಗೆ ನೆರವಾದ ವ್ಯಕ್ತಿ
- ಕಳೆದ ಮೇ ತಿಂಗಳಲ್ಲಿ ಮನೆಯ ಮಹಡಿಯಿಂದ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ನಗರದ ಕಾಟನ್ ಪೇಟೆಯ 14 ವರ್ಷದ ಬಾಲಕಿಯಿಂದ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ. ಎಂಟು ಮಂದಿಗೆ ಅಂಗಾಂಗ ಕಸಿ
- ಕಳೆದ ಮೇ ತಿಂಗಳಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡು ಮಿದುಳು ನಿಷ್ಕ್ರಿಯವಾಗಿದ್ದ 40 ವರ್ಷದ ವಿದೇಶಿ ಮಹಿಳೆಯಿಂದ ಸ್ಪರ್ಶ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ. ಆರು ಮಂದಿಗೆ ನೆರವು
- ನಗರದ ಬಿಎಚ್‌ಇಎಲ್ ಬಡಾವಣೆಯಲ್ಲಿ ಕಳೆದ ಏಪ್ರಿಲ್‌ನಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡಿದ್ದ 15 ವರ್ಷದ ಬಾಲಕನಿಂದ ಸ್ಪರ್ಶ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ. ಇದರಿಂದ ಏಳು ರೋಗಿಗಳಿಗೆ ನೆರವು
- 2022ರ ಡಿಸೆಂಬರ್‌ನಲ್ಲಿ ಕೊನೆಯ ಹಂತದ ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದ ಸುಡಾನ್‌ನ 63 ವರ್ಷದ ಮಹಿಳೆಗೆ ಪುತ್ರನಿಂದಲೇ ಮೂತ್ರಪಿಂಡ ದಾನ. ಇಲ್ಲಿನ ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಅಂಗಾಂಗ ಕಸಿ
- ಪಾರ್ಶ್ವವಾಯುವಿನಿಂದ ಮಿದುಳು ನಿಷ್ಕ್ರಿಯಗೊಂಡಿದ್ದ ಕೋಲಾರದ 29 ವರ್ಷದ ಮಹಿಳೆಯೊಬ್ಬರಿಂದ 2022ರ ಸೆಪ್ಟೆಂಬರ್‌ನಲ್ಲಿ ಬಿಜಿಎಸ್ ಗ್ಲೆನೆಗಲ್ಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ. ಎಂಟು ಮಂದಿಗೆ ನೆರವಾದ ಮಹಿಳೆ

ನಗರದ 47 ಆಸ್ಪತ್ರೆಗಳಿಗೆ ಮಾನ್ಯತೆ

ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಇದು ಕಾನೂನುಬದ್ಧವಾಗಿದೆ. ಆರೋಗ್ಯ ಇಲಾಖೆಯಿಂದ ಮಾನ್ಯತೆ ಪಡೆದ ರಾಜ್ಯದ 70 ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ಲಭ್ಯವಿದೆ. ಇವುಗಳಲ್ಲಿ ಬೆಂಗಳೂರಿನ 47 ಆಸ್ಪತ್ರೆಗಳು ಮಾನ್ಯತೆ ಪಡೆದಿವೆ.

ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ದಾನಿಗಳ ಸಂಖ್ಯೆ ಹೆಚ್ಚಿಸಲು ಸೊಟ್ಟೊ ಕ್ಯೂಆರ್ ಕೋಡ್ ಕೂಡ ಅಭಿವೃದ್ಧಿಪಡಿಸಿದೆ. ಅಂಗಾಂಗ ವಿಫಲರಾದವರು ಹಾಗೂ ಅಂಗಾಂಗ ದಾನ ಮಾಡಲು ಬಯಸುವವರು ದೂರವಾಣಿ ಸಂಖ್ಯೆ 080-23295636 ಅಥವಾ 9845006768ಕ್ಕೆ ಸಂಪರ್ಕಿಸಬಹುದು.

8 ಜೀವಗಳಿಗೆ ನೆರವಾಗುವ ಅವಕಾಶ

ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ. ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು ಹಾಗೂ ಮೇದೋಜೀರಕ ಗ್ರಂಥಿಗಳ ದಾನದ ಮೂಲಕ 8 ಜೀವಗಳಿಗೆ, ಹೃದಯದ ಕವಾಟ, ಚರ್ಮ, ಕಣ್ಣುಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ 50 ಮಂದಿಗೆ ನೆರವಾಗಬಹುದು. ಅಂಗಾಂಗ ದಾನಕ್ಕೆ ಯಾವುದೇ ವಯಸ್ಸಿನ ಮಿತಿಯಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

IN THE COURT OF THE XI ADDL. CITY CIVIL AND SESSIONS JUDGE, AT BENGALURU (CCH-8)
EX. NO. 2488/2023
Between:
Smt. Manjula.G w/o Jayaramachandramurthy, aged about 56years R/at No.109 1st Floor, Shree arcade apartment 12th main, shivnagar, Rajajinagar Bangalore-560010. ...Decree Holder
AND
Smt.Devi. ..Judgement Debtor
ISSUE OF CAUSE NOTICE TO JUDGEMENT DEBTOR BY WAY OF PAPER PUBLICATION
To; Judgement Debtor
Smt.Devi. W/o.Not Known to the Decree Holder, Aged Major, R/a. No.217/2, 2nd Main Road, 5th Cross R.C.Puram, Bangalore-560 021
Whereas the Decree Holder has filed the above Petition against you for Execution of Judgement & decree passed against you in O.S. 1133/2019 Judgement dated 05-06-2023. The Judgement Debtor is hereby given notice that the above case is posted to 04-02-2025 at 11 A.M. on which date you are hereby directed to appear before the Hon'ble Court personally or through a pleader to answer the claim of the Decree Holder and in case of default in appearance before the Hon'ble court, the matter will be disposed off in your absence as ex-parte
SCHEDULE PROPERTY
All piece and parcel of the property of the site bearing No.E 210, 1st Cross Road, Maruti Cross, Ramachandrapura, in Sy.No. 67, feet and North to South 30 feet totally measuring about 750 Ward No.96, Bengaluru measuring about East to West about 25 square feet with all the rights and appurtenances whatsoever whether underneath or above surface.
East by: House of Matha and Temple,
West by : Property of Timmayya,
North by: Corporation Gully,
South by: Road and Workshop of Nagaraja.
Given under my hand under the seal of the Court on this 21st day of November 2024.
By order of the court
Sd/- **Sentor Sheristedar,**
CITY CIVIL COURT, BENGALURU.,
Deekshith.D.T
Advocate
No.10/39, 5th Cross, 8th Main, R.M.V 2nd Stage, Sadashivanagar, Bangalore-560080. Mob: 8861848317.

BUNTS' SANGHA R.N.S VIDYANIKETAN
324, Bunts' Sangha Complex, West of Chord Road, Vijayanagar, Bengaluru - 560 040
For BSRNSV-I, Vijayanagar & BSRNSV-II. Yelachaguppe Campus for the year 2025-26
TENDER NOTIFICATION
Invites EOI From Technically Competent and Financially Stable suppliers for the following
- Text Books and Note Books for School
- Uniform for Schools & College
- Shoes for School & College
- Housekeeping Vendors
- Reputed Security Service Provider

APPLY NOW - info@bsrnsv.com
Interested parties may submit the quotations within 10 days. For further details please contact Bunts' Sangha RNS Vidyaniketan School Office.
Contact: 080-23398922

PUBLIC NOTICE
This is to inform the general public that the project namely 360° BUSINESS PARK (Formerly Known as BENGALURU LIFESCIENCES PARK), a MIXED DEVELOPMENT CONSISTING OF COMMERCIAL OFFICE, BIOTECH, RETAIL, HOSPITAL, HOTEL, MLCP & RESIDENCE with a total built-up area of 7,72,369.86 Sq mtr at Survey Nos. 53/5P, 54, 55/2, 59/3A, 73, 74/1, 74/2, 74/3, 74/4P, 74/5P, 74/7, 75/1P, 76/1,76/2, 76/3, 76/4, 77/1, 77/2, 77/3, 77/4, 78/1P, 78/2, 78/3, 82/1, 82/2, 82/3, 83/1, 83/2, 83/3 of Doddathoguru Village, Electronics City Phase 1, Begur Hobli, Bangalore South Taluk has been accorded Modification and Expansion of Environmental Clearance by the State Level Environment Impact Assessment Authority – Karnataka, vide Order No. SEIAA 60 CON 2024 Dated 13/11/2024. Copies of the clearance certificates are available on the website of the Environment & Ecology Department at https://parivesh.nic.in
Labzone – Electronics City Private Limited
Opp. Wipro Gate No. 14, Electronics City Phase 1, Bangalore – 560 100

JOB OPPORTUNITIES

Accounts & Finance

REQUIRED SENIOR ACCOUNTS EXECUTIVE with Tally knowledge and OFFICE BOY. Contact for Walk-in. 9731120003.

Engg/ Production Technical

WE REQUIRE below candidates For our special pumps & Motor Manufacturing Unit at Devarachikkanahalli, Bannergatta Road, Bangalore. 1.PURCHASE EXECUTIVE with experience, 2.QUALITY CONTROL EXECUTIVE, 3.MARKETING EXECUTIVE, 4.ITI/DIPLOMA ENGINEERS. Email-flowoilpumps@hotmail.com

REQUIRED ASSISTANT AC Technician &Experienced AC Technician for Swastik Airconditioner Location Jayanagar Contact: 7892831686

EDUCATION
To Place your Classified Ads Contact:
9845114560

General

WANTED HELPER & PACKER (Male) Bommanahalli (B'lore). Ph: 9980140661/ 08025631755 Mail: starsilks@gmail.com

Factory

FACTORY WORKERS Needed Male Age Below 30 Eligibility: 10th Pass or PUC Pass Location: Rajajinagar Perks: Good Salary, Training Provided Contact: 9108458798/ 9845579620

Manager

PLACEMENT MANAGER with 10+ years of Experience in Business development & marketing having Excellent Communication and networking skills. Candidate with prior placements background with an educational Institute or working with HR recruitment consultancy preferred. ISME, Sarjapur Road. 080-28019805. jobs@isme.in

Marketing & Sales

REQUIRED MARKETING EXECUTIVE for sale of Packaging material and packaging machinery for Bangalore. Should have a 2`wheeler and spoken knowledge`of Kannada.CONTACT 9940025822. OR Apply`with resume Mail-ID: mktgsmpl@gmail.com

HIRING ENGLISH speaking Accounts/marketing male to work full time at NR road Contact 9845040952

Multiple Vacancy

SIDDAGANGA SREE SHIVAKUMARA SWAMIJI VIDYA PEETHA TRUST #1,1st Stage, 2nd Phase, Chandra Layout Bengaluru-560 072. Ph:080-23397600 Mail:sskvptrust.2001@gmail.com invites quotation for Housekeeping and Security Agency. Interested may visit the Trust Office to obtain prescribed format and submit the sealed quotation along with profile on or before 11/12/2024

Teachers/ Professors

WANTED ENGLISH/ Computer Teacher salary Rs.20k to 25k Matha's English high school 11 KM Hosur Road Garuve Bhavi Palya , Bommanahalli post Bengaluru 560068 M:9449814917 / 8277258609

PREMIER HIGH SCHOOL LOOKING FOR Head Mistress, Primary Teachers (Kannada, Science, Maths, Craft) & High School English. Contact: Premier High School, Ph:9060555588'

TEACHER REQUIRED for Science and Social for Primary and High school Contact kenmoreschool@gmail.com whatsapp 9901501185

REQUIRED HEAD Master and Social Teacher for Kenmore School Basavanagudi contact 9901501185 email kenmoreschool@gmail.com

Wanted

WANTED TALLY and EXCEL expert Accountant & also Driver (Family accomodation provided) for reputed Wholesale Saree Company. Contact: MAN MANDIR TRADE CENTRE, No.53 Jumma Masjid Road, Avenue road cross, opp Vishal Complex, Bangalore -560002. Interview 5 pm- 6 pm. 080-41324246/ 41464147. Mahaveer Jain- 9844019459.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

MSME LOANS:WE arrange msme business loans against your existing or new businesses also.Contact: 7204995189

Machinery & Tools

EXPORTER OF a Global Mining and Construction Machinery spares for all leading brands is looking for start-up technocrats for import and distribution all over India. Contact: WhatsApp: 9590707677

REAL ESTATE SELLING

House

M G Road And Around

SALE RESIDENTIAL Property Berlie Street, Langford Town, Bangalore. Site Area 3450 sft . Built up Two Floors, Genuine Direct Buyers contact, email: johncurtis@rediffmail.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

I, YOGEESHA B.R, residing at Bengaluru-79,have changed my name as YOGESH B.R, vide affidavit dated 26/11/2024 before Notary K.S. Bammappanavar, Bengaluru

I, ALTAF PASHA S/o KHASIM SAHEB aged about 54 years, r/at Ward No.12, Maddhurappa Layout, Chikkaballapur Town, Chikkaballapur District. Have changed my name ALTAF PASHA to MOHAMMED ALTAF PASHA Vide affidavit Dated 21-11-2024 before Notary K.H. VENKATAPPA, Notary, Chickballapur. Henceforth I shall be called as MOHAMMED ALTAF PASHA Only.

I, A. Chendil Velan R/a #18 Chendil Nilayam, 2nd main, 4th cross, behind Ayyappa Temple, Subbanna Garden, Vijayanagar, Bangalore-40. Have changed my name as A. Sendil Velan vide affidavit 25/11/2024 before H.S. Sakalesh Aradhya notary Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
10 Days only
SPOT CASH
ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ,
ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ 27.11.2024 - 07.12.2024
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್, ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

CHANGE OF NAME
I, **RASHEEDA BEE FAROOKH** W/o Late Farookhulla Khan, residing at Ward No. 12, New Masjid Mohalla, Magadi Town, Ramanagar Dist.-562120, have changed my name to **RASHEEDA BI** vide affidavit dt: 26-11-2024, before notary Hareesh R, Jullanahalli, Magadi Tq. Henceforth I shall be called as **RASHEEDA BI** only

CHANGE OF NAME
I, **SUMA H. P.** W/o Dr.Vishwanth Y, residing at #66, Nandi Shree, B.C. Mallaiah Colony, T.B. Hospital, Cantonment, Ballari, have changed my name to **DR. SUMA VISHWANATH** vide affidavit dt: 26-11-2024, before notary H.Hanumantha, Ballari, Henceforth I shall be called as **DR. SUMA VISHWANATH** only

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com
BOOK NOW
*Conditions apply
For more details contact:
+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

ಉದ್ಯಾನಗಳಲ್ಲಿ ಸಾಕುನಾಯಿಗಳಿಂದ ಮಲವಿಸರ್ಜನೆ: ಹೈಕೋರ್ಟ್ ಮಾರ್ಗಸೂಚಿ

ತ್ಯಾಜ್ಯ ವಿಲೇವಾರಿಗೆ ಕೈಚೀಲ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಉದ್ಯಾನಗಳಿಗೆ ಸಾಕುನಾಯಿ ಕರೆತರುವ ಸಾರ್ವಜನಿಕರು ಅವುಗಳ ಮಲದ ತ್ಯಾಜ್ಯ ವಿಲೇವಾರಿಗೆ ಕೈ ಚೀಲಗಳನ್ನು ತೆಗೆದುಕೊಂಡು ಬರಬೇಕು ಎಂದು ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ' ಎಂದು ಹೈಕೋರ್ಟ್ ಪ್ರತಿಪಾದಿಸಿದೆ.

'ನಾಯಿಗಳ ಉಪಟಳದಿಂದ ಉದ್ಯಾನಕ್ಕೆ ಭೇಟಿ ನೀಡುವವರಿಗೆ ರಕ್ಷಣೆ ನೀಡಬೇಕಾಗಿದ್ದು, ಸಾರ್ವಜನಿಕ ಉದ್ಯಾನಗಳಲ್ಲಿ ಎಲ್ಲ ರೀತಿಯ ಸ್ವಚ್ಛತೆ ಕಾಯ್ದುಕೊಳ್ಳುವುದು ಕಡ್ಡಾಯವಾಗಬೇಕು' ಎಂದು ಆದೇಶಿಸಿದೆ.

'ಉದ್ಯಾನಗಳಿಗೆ ಸಾಕು ನಾಯಿಗಳನ್ನು ಕರೆತರುವವರು ಅವುಗಳ ಮಲ ವಿಲೇವಾರಿಗೆ ಕೈ ಚೀಲ ತರುವುದನ್ನು ಕಡ್ಡಾಯಗೊಳಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು

ಮತ್ತು ಘನತ್ಯಾಜ್ಯ ನಿರ್ವಹಣಾ ಬೈ-ಲಾ ಜಾರಿಗೆ ನಿರ್ದೇಶಿಸಬೇಕು' ಎಂದು ಕೋರಿ; ಸರ್ಕಾರೇತರ ಸ್ವಯಂಸೇವಾ ಸಂಸ್ಥೆ 'ಕ್ಯೂಪಾ' (ಮೆಸರ್ಸ್ ಕಂಪ್ಯಾಷನ್ ಅನ್‌ಲಿಮಿಟೆಡ್ ಪ್ಲಸ್ ಆ್ಯಕ್ಷನ್) ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿಯನ್ನು ವಿಲೇವಾರಿ ಮಾಡಿರುವ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ, ಈ ಸಂಬಂಧ ಹಲವು ಮಾರ್ಗಸೂಚಿಗಳನ್ನೂ ಹೊರಡಿಸಿದೆ.

'ಸಾಕುಪ್ರಾಣಿಗಳು ಬಿಬಿಎಂಪಿ ವ್ಯಾಪ್ತಿಯ ಉದ್ಯಾನವನಗಳಲ್ಲಿ ವಿಸರ್ಜಿಸುವ ತ್ಯಾಜ್ಯ ಸ್ವಚ್ಛಗೊಳಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ 1288 ದೂರುಗಳು ದಾಖಲಾಗಿವೆ' ಎಂದು ಅರ್ಜಿದಾರರು ದೂರಿದ್ದರು.

ಮಾರ್ಗಸೂಚಿ

- ಸ್ವಚ್ಛತೆ ಕಾಯ್ದುಕೊಳ್ಳುವುದು ಮತ್ತು ಇತರೆ ನಿಯಮಗಳನ್ನು ಉಲ್ಲಂಘಿಸುವವರಿಗೆ ವಿಧಿಸಲಾಗುವ ದಂಡಕ್ಕಿಂತಲೂ, ಮಲವಿಸರ್ಜನೆಗೆ ಕಾರಣವಾಗುವ ನಾಯಿಗಳನ್ನು ಸಾಕಿರುವ ಮಾಲೀಕರಿಗೆ ವಿಧಿಸುವ ದಂಡ ಹೆಚ್ಚಿನ ಪ್ರಮಾಣದ್ದಾಗಿರಬೇಕು.
- ಕರ್ನಾಟಕ ಉದ್ಯಾನಗಳು, ಆಟದ ಮೈದಾನಗಳು ಮತ್ತು ಮುಕ್ತ ಸ್ಥಳಗಳ ಸಂರಕ್ಷಣೆ ಮತ್ತು ನಿಯಂತ್ರಣ ಕಾಯ್ದೆ-1985 ಅನ್ನು ಬಿಬಿಎಂಪಿ ಅಧಿಕಾರಿಗಳು ಅಕ್ಷರಶಃ ಜಾರಿಗೆ ತರಬೇಕು.
- ಉದ್ಯಾನಗಳೂ ಸೇರಿ ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮಗಳು-2016 ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ನಿಯಮಗಳ ತಿದ್ದುಪಡಿಗೆ ಪಾಲಿಕೆ ಕ್ರಮ ವಹಿಸಬೇಕು.
- ಉದ್ಯಾನಗಳಲ್ಲಿ ಸ್ವಚ್ಛತೆ ಕಾಪಾಡುವುದು ಮತ್ತು ನಿರ್ವಹಣೆಗೆ ಸರ್ಕಾರ ಸೇರಿದಂತೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳು ಅಗತ್ಯ ಬಜೆಟ್ ಮೀಸಲಿರಿಸಬೇಕು.
- ಉದ್ಯಾನಗಳ ಬಗೆಗಿನ ಜಾಗ್ರತೆ ಕಾಯ್ದುಕೊಳ್ಳಲು ತೋಟಗಾರಿಕೆ ಇಲಾಖೆ ಮತ್ತು ಬಿಬಿಎಂಪಿ ಶಾಶ್ವತವಾದ ಕಾರ್ಯವಿಧಾನವನ್ನು ರೂಪಿಸಿ ಅಭಿವೃದ್ಧಿಪಡಿಸಬೇಕು.
- ಉದ್ಯಾನಗಳಲ್ಲಿ ಉಗುಳುವುದು, ಕಸ ಎಸೆಯುವುದು, ಸಾಕುಪ್ರಾಣಿಗಳ ಮಲ ವಿಸರ್ಜನೆಗೆ ಅವಕಾಶ ನೀಡುವವರನ್ನು ನಿಯಂತ್ರಿಸಿ ಸ್ವಚ್ಛತೆ ಕಾಯ್ದುಕೊಳ್ಳುವುದು ಮತ್ತು ಉಲ್ಲಂಘಿಸುವವರಿಗೆ ದಂಡ ವಿಧಿಸುವುದು ತೋಟಗಾರಿಕಾ ಇಲಾಖೆ ಮತ್ತು ಬಿಬಿಎಂಪಿ ಅಧಿಕಾರಿಗಳ ಹೊಣೆಯಾಗಿದೆ.
- ಉದ್ಯಾನಗಳ ಸಂರಕ್ಷಣೆ ಮತ್ತು ಮೇಲ್ವಿಚಾರಣೆಗಾಗಿ ತಂಡಗಳನ್ನು ನಿಯೋಜಿಸುವ ಸಂಬಂಧ ಸೂಕ್ತ ನಿಯಮಗಳನ್ನು ಅಳವಡಿಸುವುದು ಮತ್ತು ತಪ್ಪಿತಸ್ಥರಿಗೆ ದಂಡ ವಿಧಿಸಲು ಬಿಬಿಎಂಪಿ ನಿಯಮಗಳಿಗೆ ಅಗತ್ಯ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ.
- ತೋಟಗಾರಿಕೆ ಇಲಾಖೆಯ ಒಬ್ಬ ಮತ್ತು ಬಿಬಿಎಂಪಿಯ ಇಬ್ಬರು ಅಧಿಕಾರಿಗಳಿರುವ ಮೂವರು ಸದಸ್ಯರ ತಂಡ ರಚಿಸಬೇಕು. ಇದು, ಪ್ರಮುಖ ಉದ್ಯಾನಗಳಿಗೆ ಭೇಟಿ ನೀಡಿ ಸ್ವಚ್ಛತೆಗೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಎನ್‌ಐಎ, ಐ.ಬಿ ತನಿಖೆ ಚುರುಕು

ಜಿಗಣಿ ಠಾಣಾ ವ್ಯಾಪ್ತಿಯಲ್ಲಿ ಪಾಕ್ ಪ್ರಜೆಗಳ ಅಕ್ರಮ ವಾಸ

• ಚೇತನ್ ಬಿ.ಸಿ.

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಗಣಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಬಂಧಿಸಿದ್ದ ಪಾಕಿಸ್ತಾನದ ಅಕ್ರಮ ವಲಸಿಗರ ಪೂರ್ವಾಪರ ಹಾಗೂ ಪ್ರಕರಣದ ಮಾಹಿತಿಗಳನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹಾಗೂ ಕೇಂದ್ರ ಗುಪ್ತಚರ ವಿಭಾಗದ (ಐಬಿ) ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ.

'ಹೆಸರು ಬದಲಾವಣೆ ಮಾಡಿಕೊಂಡು, ಹಿಂದೂ ಹೆಸರಿಟ್ಟುಕೊಂಡು ಪಾಕಿಸ್ತಾನದ 17 ಅಕ್ರಮ ವಲಸಿಗರೂ ಸೇರಿ 18 ಮಂದಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಾಸ್ತವ್ಯ ಮಾಡಿದ್ದರು. ಅವರ ಮಾಹಿತಿಯನ್ನು ಸದ್ದಿಲ್ಲದೇ ಕಲೆಹಾಕಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಹೆಚ್ಚಿನ ವಿಚಾರಣೆಗೆ ಅಕ್ರಮ ವಲಸಿಗರನ್ನು ಅಕ್ಟೋಬರ್ ಮೊದಲ ವಾರ ಜಿಗಣಿ ಪೊಲೀಸರು ಕಸ್ಟಡಿಗೆ ಪಡೆದುಕೊಂಡಿದ್ದರು. ಪ್ರಕರಣದ ಸಂಬಂಧ ಹೆಚ್ಚಿನ ಮಾಹಿತಿ ಕಲೆ ಹಾಕಲು ಅದೇ ವೇಳೆ ಎನ್.ಐ.ಎ ಹಾಗೂ ಐ.ಬಿ ಅಧಿಕಾರಿಗಳು ನಗರದಲ್ಲಿ ಆರು ದಿನ ಠಿಕಾಣಿ ಹೂಡಿದ್ದರು' ಎಂದು ಮೂಲಗಳು ಹೇಳಿವೆ.

ಅಕ್ರಮ ವಲಸಿಗರನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಿ ಮಾಹಿತಿ ಸಂಗ್ರಹಿಸಿದರು ಎಂದು ಗೊತ್ತಾಗಿದೆ. 'ಅಕ್ರಮ ವಲಸಿಗರು ಇದಕ್ಕೂ ಮೊದಲು ಯಾವುದಾದರೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರೆ ಎಂಬುದನ್ನು ಪರಿಶೀಲಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಹೆಸರು ಬದಲಿಸಿಕೊಂಡು ಆರು ವರ್ಷಗಳಿಂದ ರಾಜಪುರದಲ್ಲಿ ನೆಲಸಿದ್ದ ಪಾಕಿಸ್ತಾನದ ನಾಲ್ವರನ್ನು (ಒಂದೇ ಕುಟುಂಬ) ಸೆ.29ರಂದು ಜಿಗಣಿ ಪೊಲೀಸರು ಬಂಧಿಸಿದ್ದರು. ವಿಚಾರಣೆಗೆ ಒಳಪಡಿಸಿದಾಗ ಮತ್ತಷ್ಟು ಮಂದಿ ಅಕ್ರಮ ವಲಸಿಗರು ನೆಲಸಿರುವುದು ತನಿಖೆಯಿಂದ ಗೊತ್ತಾಗಿತ್ತು. ನಂತರ, 14 ಮಂದಿಯನ್ನು ಬಂಧಿಸಲಾಗಿತ್ತು.

ತನಿಖೆ ವೇಳೆ 17 ಅಕ್ರಮ ವಲಸಿಗರು ಹಾಗೂ ಉತ್ತರಪ್ರದೇಶದ ಪರ್ವೇಜ್ ಎಂಬುವರು ನೆರವು ನೀಡಿದ್ದು ಗೊತ್ತಾಗಿತ್ತು. ಪಾಕಿಸ್ತಾನದ 17 ವಲಸಿಗರಿಗೆ ಬಾಂಗ್ಲಾದೇಶದ ಮೂಲಕ ಭಾರತಕ್ಕೆ ಬರಲು ಪರ್ವೇಜ್ ನೆರವು ನೀಡಿದ್ದ.

'ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದು, ಹಲವು ಬಾರಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ. ಕೋರ್ಟ್ ಜಾಮೀನು ನೀಡಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶೀಘ್ರದಲ್ಲೇ ದೋಷಾರೋಪ ಪಟ್ಟಿ: 'ಇನ್ನೊಂದು ತಿಂಗಳಲ್ಲಿ ಜಿಗಣಿ ಪೊಲೀಸರು ತನಿಖೆ ಮುಗಿಸಿ, ಕೋರ್ಟ್‌ಗೆ 1,200ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಿದ್ದಾರೆ' ಎಂದು ಮೂಲಗಳು ಹೇಳಿವೆ.

'ಮೆಹದಿ ಫೌಂಡೇಶನ್' ಮೂಲಕ ಆರೋಪಿಗಳು ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿಯೂ ಫೌಂಡೇಶನ್ ಕುರಿತು ಪ್ರಚಾರ ನಡೆಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಎಲ್ಲ ವಾರ್ಡ್‌ಗೆ ನೋಡಲ್ ಅಧಿಕಾರಿ ನಿಯೋಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ವಾರ್ಡ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗುತ್ತದೆ. ನಾಗರಿಕರು ದೂರು ನೀಡಿ ಪರಿಹಾರ ಕಂಡುಕೊಳ್ಳಬಹುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ದಾಸರಹಳ್ಳಿಯಲ್ಲಿ ನಾಗರಿಕರೊಬ್ಬರು 'ಈ ಹಿಂದೆ ವಾರ್ಡ್ ಸಮಿತಿ ಸಭೆಗಳಲ್ಲಿ ಸಮಸ್ಯೆ ಹೇಳಿಕೊಳ್ಳುತ್ತಿದ್ದೆವು. ಈಗ ಸಭೆಗಳು ನಡೆಯುತ್ತಿಲ್ಲ. ಸಮಸ್ಯೆಗಳಿಗೆ ಪರಿಹಾರ ಆಗುತ್ತಿಲ್ಲ' ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ನೋಡಲ್ ಅಧಿಕಾರಿಗಳಿಂದ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದರು.

ಮನೆ ಖರೀದಿಸಲು ಅಂತಿಮ ಇ-ಖಾತಾ ಪಡೆಯಲು ಸಾಕಷ್ಟು ಸಮಸ್ಯೆ ಆಗುತ್ತಿರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಿದ ನಾಗರಿಕರು, ಸಮಸ್ಯೆ ಪರಿಹಾರಕ್ಕೆ ಮನವಿ ಮಾಡಿದರು. ವಾರದೊಳಗಾಗಿ ಈ ಸಮಸ್ಯೆ ಬಗೆಹರಿಸಲು ಜಂಟಿ ಆಯುಕ್ತರಿಗೆ ಸೂಚಿಸಿದರು.

ಸರ್ವೀಸ್ ರಸ್ತೆಯಲ್ಲಿ ಮರದ ಕೊಂಬೆ ಬಿದ್ದು, ಭುಜಕ್ಕೆ ಪೆಟ್ಟಾಗಿದೆ. ₹6 ಲಕ್ಷ ವೆಚ್ಚವಾಗಿದೆ ಎಂದು ವ್ಯಕ್ತಿಯೊಬ್ಬರು ಅಳಲು ತೋಡಿಕೊಂಡರು. ಕಾಯ್ದೆ ಪ್ರಕಾರ ₹3.5 ಲಕ್ಷವನ್ನು ಅವರ ಖಾತೆಗೆ ಜಮೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತುಷಾರ್ ಗಿರಿನಾಥ್

ಕಾವೇರಿ ನೀರು ಸಂಪರ್ಕ, ಒಂಟಿ ಮನೆ ನಿರ್ಮಾಣಕ್ಕೆ ಅನುದಾನ ಮಂಜೂರಾತಿ, ಅಭಿವೃದ್ಧಿ ಕಾಮಗಾರಿಗೆ ಅನುದಾನ ಬಿಡುಗಡೆ, ರಸ್ತೆ ಬದಿ ಕಸ ಬಿಸಾಡುವ ಸಮಸ್ಯೆ, ಸಹಕಾರ ನಗರದಲ್ಲಿ ಚರಂಡಿ ನಿರ್ಮಾಣ, ರಸ್ತೆ ಮೇಲೆ ಕೊಳಚೆ ನೀರು ತುಂಬಿ ಹರಿಯುತ್ತಿರುವುದು, ಅನಧಿಕೃತ ಕಟ್ಟಡಗಳನ್ನು ತೆರವು, ಮರದ ಕೊಂಬೆಗಳು ರಸ್ತೆಯಲ್ಲಿ ಬಿದ್ದಿರುವುದು, ದಾಸರಹಳ್ಳಿ ಮುಖ್ಯರಸ್ತೆಯಲ್ಲಿ ಪಾದಚಾರಿ ಒತ್ತುವರಿ ಹಾಗೂ ರಸ್ತೆ ಬದಿ ಪಾರ್ಕಿಂಗ್ ನಿಷೇಧ, ಟಾಟಾ ನಗರ ವ್ಯಾಪ್ತಿಯಲ್ಲಿ ರಾಜಕಾಲುವೆಯಲ್ಲಿ ಹೂಳೆತ್ತುವುದು, ಕೊಡಿಗೆಹಳ್ಳಿ ವ್ಯಾಪ್ತಿಯಲ್ಲಿ ರಾಜಕಾಲುವೆ ಮೇಲೆ ಮನೆ ನಿರ್ಮಾಣ ಮಾಡಿದವರ ವಿರುದ್ಧ ಕ್ರಮ, ಹಸಿ, ಒಣ ತ್ಯಾಜ್ಯ ವಿಂಗಡಣೆಯನ್ನು ಕಡ್ಡಾಯಗೊಳಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ನಾಗರಿಕರು ಮಂಡಿಸಿದರು. ಕಾಲಮಿತಿಯಲ್ಲಿ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ತುಷಾರ್ ಅಧಿಕಾರಿಗಳಿಗೆ ಹೇಳಿದರು.

ವಲಯ ಆಯುಕ್ತ ಕರೀಗೌಡ, ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್, ಉಪ ಆಯುಕ್ತೆ ಮಮತಾ, ಮುಖ್ಯ ಎಂಜಿನಿಯರ್ ರಂಗನಾಥ್ ಉಪಸ್ಥಿತರಿದ್ದರು.

ಗುತ್ತಿಗೆ, ಹೊರಗುತ್ತಿಗೆ ರದ್ದುಗೊಳಿಸಲು ಆಗ್ರಹ

ಸ್ವಾತಂತ್ರ್ಯ ಉದ್ಯಾನದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯಿಂದ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ಹಾಗೂ ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿವೆ' ಎಂದು ಆಪಾದಿಸಿರುವ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ, ಉಭಯ ಸರ್ಕಾರಗಳ ವಿರುದ್ಧ ಜಾಗೃತಿ ಅಭಿಯಾನ ನಡೆಸಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಜನ ಜಾಗೃತಿ ಅಭಿಯಾನದಲ್ಲಿ, 'ಕಾರ್ಪೊರೇಟ್ ಕಂಪನಿಗಳ ಪರವಾದ ನೀತಿಗಳನ್ನು ವಾಪಸ್ ತೆಗೆದುಕೊಳ್ಳಬೇಕು' ಎಂದು ಸಮಿತಿಯ ಪದಾಧಿಕಾರಿಗಳು ಆಗ್ರಹಿಸಿದರು.

'ಎಲ್ಲ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾದ ಬೆಂಬಲ ಬೆಲೆ ಘೋಷಿಸಬೇಕು ಹಾಗೂ ಖರೀದಿಸಬೇಕು. ರಸಗೊಬ್ಬರಕ್ಕೆ ಸಹಾಯಧನ ನೀಡಬೇಕು' ಎಂದೂ ಆಗ್ರಹಿಸಿದರು.

ಕೇಂದ್ರ, ರಾಜ್ಯ ಸರ್ಕಾರಗಳ ರೈತ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಕರ್ನಾಟಕ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟಿಸಿದರು —ಪ್ರಜಾವಾಣಿ ಚಿತ್ರ

'ಗುತ್ತಿಗೆ, ಹೊರ ಗುತ್ತಿಗೆ ಪದ್ಧತಿ ರದ್ದುಪಡಿಸಬೇಕು. ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ವೇತನ ₹35 ಸಾವಿರ ಹಾಗೂ ತಿಂಗಳ ಪಿಂಚಣಿ ₹10 ಸಾವಿರ ನಿಗದಿ ಪಡಿಸಬೇಕು. ರೈತರ ಎಲ್ಲ ರೀತಿಯ ಸಾಲಮನ್ನಾ ಮಾಡಬೇಕು' ಎಂದು ಆಗ್ರಹಿಸಿದರು.

'ರೈಲ್ವೆ, ಆರೋಗ್ಯ, ಶಿಕ್ಷಣ, ವಿದ್ಯುತ್ ವಲಯಗಳ ಖಾಸಗೀಕರಣ ನಿಲ್ಲಿಸಬೇಕು. ಅಭಿವೃದ್ಧಿ ಹೆಸರಲ್ಲಿ ಕೃಷಿ ಯೋಗ್ಯ ಜಮೀನುಗಳ ಕಬಳಿಕೆ ನಿಲ್ಲಬೇಕು. ಗ್ರಾಮೀಣ ಹಾಗೂ ನಗರ ಉದ್ಯೋಗ ಖಾತ್ರಿ ಯೋಜನೆ ಅಡಿ ವರ್ಷಕ್ಕೆ 200 ದಿನ ಕೆಲಸ ನೀಡಬೇಕು. ಕೂಲಿಯನ್ನು ದಿನಕ್ಕೆ ₹600 ನಿಗದಿ ಪಡಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಬೆಲೆ ಏರಿಕೆಗೆ ಕಡಿವಾಣ ಹಾಕಿ ಶ್ರಮ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಕೋಮುವಾದಿ, ವಿಭಜನಕಾರಿ ನೀತಿ ನಿಲ್ಲಿಸಿ ಸಂವಿಧಾನದ ಆಶಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು' ಎಂದು ಒತ್ತಾಯಿಸಿದರು.

ಪೇಜಾವರ ಶ್ರೀ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಬದಲಾವಣೆ ಕುರಿತು ರಾಷ್ಟ್ರದ್ರೋಹದ ಹೇಳಿಕೆ ನೀಡಿರುವ ಉಡುಪಿಯ ಪೇಜಾವರ ಮಠದ ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್.ಶಿವಣ್ಣ ಆಗ್ರಹಿಸಿದರು.

ಪತ್ರಿಕಾ ಹೇಳಿಕೆಯಲ್ಲಿ ಅವರು, 'ಸಮಾಜದ ಪ್ರತಿ ಸಮುದಾಯಕ್ಕೂ ಒಳಿತನ್ನೇ ಬಯಸುವ ಸಂವಿಧಾನದ ಅವಶ್ಯಕತೆ ಈ ಸ್ವಾಮೀಜಿಗಳಿಗೆ ಬೇಕಿಲ್ಲ. ವರ್ಣಾಶ್ರಮ, ತಾರತಮ್ಯ ಪೋಷಿಸುವ ಮನುಸ್ಮೃತಿಯೇ ಬೇಕಾಗಿದೆ. ಹಾಗಾಗಿ ಸಂವಿಧಾನ ವಿರುದ್ಧ ಮಾತನಾಡದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

'ಸಂವಿಧಾನ ರಕ್ಷಣೆ ನಿಟ್ಟಿನಲ್ಲಿ ಕಠಿಣ ಕ್ರಮಕೈಗೊಳ್ಳಬೇಕು. ಮನುವಾದಿಗಳ ಸಂಖ್ಯೆ ಹೆಚ್ಚದಂತೆ ನೋಡಿಕೊಳ್ಳಬೇಕು. ಮಠಗಳಲ್ಲಿ ಪಂಕ್ತಿಭೇದ ಮಾಡುವವರು ಪ್ರಜೆಗಳನ್ನು ಸಮಾನವಾಗಿ ಕಾಣುವುದಿಲ್ಲ. ಅಸ್ಪೃಶ್ಯತೆ ಪಾಲನೆ, ಮೌಢ್ಯ ಬಿತ್ತುವ ಸ್ವಾಮೀಜಿಗಳು ಸಂವಿಧಾನದ ವಿರುದ್ಧ ಮಾತನಾಡದಂತೆ ತಾಕೀತು ಮಾಡಬೇಕು' ಎಂದು ಕೋರಿದ್ದಾರೆ.

ತಮಿಳರು ಬ್ರಿಟಿಷರ ಗುಲಾಮರಾಗಿದ್ದರು: ನ್ಯಾ. ಅರುಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರೆಂದೂ ಬ್ರಿಟಿಷರ ಸೇವೆ ಮಾಡಲಿಲ್ಲ. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಸೇವೆ ಮಾಡಿದವರು ತಮಿಳರು. ಬೆಂಗಳೂರಿನ ಕಂಟೋನ್ಮೆಂಟ್‌ನಂತಹ ಪ್ರದೇಶದಲ್ಲಿ ದಟ್ಟವಾಗಿದ್ದ ತಮಿಳು ಭಾಷಿಕರು ಬ್ರಿಟಿಷರ ಗುಲಾಮರಾಗಿದ್ದರು' ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಂ.ಐ.ಅರುಣ್ ಹೇಳಿದರು.

'ಬೆಂಗಳೂರು ವಕೀಲರ ಸಂಘ'ವು ಮಂಗಳವಾರ ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಕನ್ನಡ ನುಡಿ ಹಬ್ಬ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, 'ಹೊರಗಿನಿಂದ ಬಂದವರು ಇಲ್ಲಿಯ ಭಾಷೆ ಕಲಿಯದೇ ಹೋದರೆ ಅದು ದ್ರೋಹದ ಕೆಲಸ' ಎಂದು ಅವರು ತಿಳಿಸಿದರು.

'ಇಂದು ಬೆಂಗಳೂರಿನ ಕೋರಮಂಗಲ ಸೇರಿದಂತೆ ಅನೇಕ ಕಡೆ ಕನ್ನಡದ ಸೊಗಡೇ ಇಲ್ಲದಂತಾಗಿದೆ. ಇಲ್ಲೆಲ್ಲಾ ಅನ್ಯರೇ ತುಂಬಿಕೊಂಡಿದ್ದಾರೆ. ಇಂತಹ ವಾತಾವರಣದಿಂದಲೇ ಬೆಂಗಳೂರಿನ ಕೆರೆ ಕಟ್ಟೆಗಳೆಲ್ಲಾ ನಾಶವಾಗಿವೆ' ಎಂದು ನ್ಯಾಯಮೂರ್ತಿ ಅರುಣ್ ಹೇಳಿದರು.

'ತಮಿಳು, ಒಡಿಯಾ ಮತ್ತು ಕನ್ನಡ ಭಾಷೆ ಹೊರತುಪಡಿಸಿದರೆ ಬಿಟ್ಟರೆ ಸುದೀರ್ಘ ಇತಿಹಾಸದ ಬೇರೆ ಭಾಷೆ ಇಲ್ಲ. ಭಾಷೆ ಭದ್ರ ಕೋಟೆ ಇದ್ದ ಹಾಗೆ. ಸಂವಿಧಾನದ ಎಲ್ಲ ಆಶಯಗಳನ್ನು ಕನ್ನಡ ಸಾಹಿತ್ಯ ಒಳಗೊಂಡಿದೆ' ಎಂದರು.

ನ್ಯಾಯಮೂರ್ತಿ ಸಂಜೀವಕುಮಾರ ಹಂಚಾಟೆ, ಸಾಹಿತಿ ಗೊ.ರು.ಚನ್ನಬಸಪ್ಪ, ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಖಜಾಂಚಿ ಎಂ.ಟಿ ಹರೀಶ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ಸಂವಿಧಾನ ಗೌರವಿಸುವುದು ಎಲ್ಲರ ಕರ್ತವ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನವನ್ನು ಗೌರವಿಸುವುದು ಪ್ರತಿ ಭಾರತೀಯನ ಕರ್ತವ್ಯ. ಸಂವಿಧಾನ ಪೀಠಿಕೆಗೆ 'ಜಾತ್ಯತೀತ', 'ಸಮಾಜವಾದ' ಪದಗಳ ಸೇರ್ಪಡೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯು ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಮಂಗಳವಾರ ಸಂವಿಧಾನ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಸಂವಿಧಾನ ಸೈನಿಕರ ಸಮಾವೇಶ'ದಲ್ಲಿ ಮಾತನಾಡಿದರು.

ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಮಂಗಳವಾರ ಸಂವಿಧಾನ ಸೈನಿಕರ ಸಮಾವೇಶದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

'ಸಮಾಜವಾದ ಎನ್ನುವ ಪದ ಚುನಾವಣಾ ಸಂದರ್ಭಕ್ಕೆ ಬಳಕೆಯಾಗಬಾರದು. ಆಂತರ್ಯದ ಪದವಾಗಬೇಕು. ನಾಡಿನಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿವೆ. ಅವುಗಳ ಬಗ್ಗೆ ಚರ್ಚೆಯಾಗಬೇಕು. ವಕೀಲಿಕೆಯ ಅಧಿಕಾರವನ್ನು ಬಳಸಿ ಸಂವಿಧಾನದ ಮೂಲಕ ಸಮಸ್ಯೆ ವಿರುದ್ಧ ಹೋರಾಡಿ ಶೋಷಣೆಗೆ ಲಗಾಮು ಹಾಕಬೇಕು' ಎಂದು ಹೇಳಿದರು.

'ಸಂವಿಧಾನದಲ್ಲಿ ಶಕ್ತಿಯುತವಾದ ಅನುಚ್ಛೇದಗಳಿವೆ. ಈ ಒಂದು ಸಂವಿಧಾನ, ಸೈನಿಕರ ಸಮಾವೇಶದಿಂದ ನಾಡಿನಲ್ಲಿ ಹೊಸ ಭರವಸೆ ಮೂಡಬೇಕು. ಇದನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕು. ಸಂವಿಧಾನವನ್ನು ಅಧ್ಯಯನ ಮಾಡಿ, ಅದರ ಮೂಲಕ ಹೆಚ್ಚಿನ ಶಕ್ತಿ ಗಳಿಸಬೇಕು' ಎಂದು ಸಲಹೆ ನೀಡಿದರು.

ಸಹಾಯಕ ಪ್ರಾಧ್ಯಾಪಕಿ ರಾಧಿಕಾ ಕೇರಿಹೊಳ್ಳ ಸಂವಿಧಾನ ಪೀಠಿಕೆ ವಾಚಿಸಿದರು. ಸಂಸ್ಥೆ ನಿರ್ದೇಶಕ ಪ್ರೊ. ಸಿ.ಎಸ್.ಪಾಟೀಲ, ಪ್ರಾಂಶುಪಾಲರಾದ ಜ್ಯೋತಿ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ರೇವಯ್ಯ ಒಡೆಯರ್, ಕಾನೂನು ಕಾಲೇಜುಗಳ ಪ್ರಾಂಶುಪಾಲರು ಭಾಗವಹಿಸಿದ್ದರು.

ವಿವಿಧೆಡೆ ಸಂವಿಧಾನ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಪೀಠಿಕೆಯನ್ನು ನಿತ್ಯವೂ ಓದಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇಲ್ಲಿ ಸಲಹೆ ಮಾಡಿದರು.

ಸಂವಿಧಾನ ಸಮರ್ಪಣಾ ದಿನ ನಿಮಿತ್ತ ಡಾ. ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಂಗಳವಾರ ಪುಷ್ಪನಮನ ಸಲ್ಲಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಮೂರು ತತ್ವಗಳಡಿ ಸಂವಿಧಾನ ರಚನೆಯಾಗಿದೆ. ಪೀಠಿಕೆಯಲ್ಲೇ ಎಲ್ಲ ಸಾರವಿದೆ. ನಿತ್ಯವೂ ಓದಿದರೆ ಅದಕ್ಕೆ ಬದ್ಧರಾಗಿರುತ್ತೇವೆ. ಒಂದೊಂದು ಬಾರಿ ನಾವು ಆ ಕಡೆ ಈ ಕಡೆ ವಾಲುವುದರಿಂದ ನಿತ್ಯ ಸಂವಿಧಾನ ಪೀಠಿಕೆಯ ಓದು ಅಗತ್ಯ' ಎಂದರು.

ವಿಶೇಷ ಆಯುಕ್ತ ಡಾ.ಕೆ.ಹರೀಶ್ ಕುಮಾರ್, ವಲಯ ಆಯುಕ್ತ ಸತೀಶ್, ಉಪ ಆಯುಕ್ತ ಮಂಜುನಾಥ ಸ್ವಾಮಿ, ಜಂಟಿ ಆಯುಕ್ತ ಲಕ್ಷ್ಮೀದೇವಿ ಉಪಸ್ಥಿತರಿದ್ದರು.

ಬೆಂಗಳೂರು ನಗರ ವಿ.ವಿ: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮಲ್ಲಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಅವರು ಸಂವಿಧಾನ ಪೀಠಿಕೆ ಹಾಗೂ ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಸಮರ್ಥ ಮುನಿರಾಜು ಅವರು ಸಂವಿಧಾನದ ಪ್ರಾಮುಖ್ಯವನ್ನು ತಿಳಿಸಿಕೊಟ್ಟರು. ಕುಲ ಸಚಿವರಾದ ಜವರೇಗೌಡ ಟಿ, ಆನಂದ್ ಕುಮಾರ್, ಡೀನ್, ಅಧ್ಯಾಪಕರು, ಅಧಿಕಾರಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೆಪಿಟಿಸಿಎಲ್: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಹಾಗೂ ಕರ್ನಾಟಕ ವಿದ್ಯುತ್ ಮಂಡಳಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಂಸ್ಥೆ ವತಿಯಿಂದ ಸಂವಿಧಾನ ದಿನವನ್ನು ಆಚರಿಸಲಾಯಿತು.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ನಿರ್ದೇಶಕ ವಿಜಯ್ ಬಿ.ಪಿ ಹಾಗೂ ಕೆಪಿಟಿಸಿಎಲ್ ಸಿಬ್ಬಂದಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕೆಪಿಟಿಸಿಎಲ್ ನಿರ್ದೇಶಕರಾದ ಗಿರಿಧರ ಕುಲಕರ್ಣಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಂಸ್ಥೆ ಅಧ್ಯಕ್ಷ ಮಂಜುನಾಥ್, ಮೋಹನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಗವಿಕುಮಾರ್, ಕೆಪಿಟಿಸಿಎಲ್ ಕನ್ನಡ ಘಟಕದ ಸಮನ್ವಯಕಾರ ಎ.ಆರ್. ಗೋವಿಂದಸ್ವಾಮಿ, ಉಪಸ್ಥಿತರಿದ್ದರು.

ಕೆ.ಆರ್.ಪುರ ವರದಿ: 'ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಸಂವಿಧಾನ ಈ ದೇಶದ ಎರಡು ಕಣ್ಣುಗಳಿದ್ದ ಹಾಗೆ' ಎಂದು ಸಹಾಯಕ ಪ್ರಾಧ್ಯಾಪಕ ಪ್ರಕಾಶ್ ಮಂಟೇದ ಅವರು ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರಾಚಾರ್ಯರಾದ ಪ್ರತಿಭಾ ಪಾರ್ಶ್ವನಾಥ್, ಡಾ.ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಚಾಲಕ ಸತೀಶ್.ಎಂ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಲಕ್ಷ್ಮೀದೇವಮ್ಮ ಅವರು ಹಾಜರಿದ್ದರು.

ಕೆಪಿಟಿಸಿಎಲ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ ಮತ್ತು ಇತರರು ಭಾಗವಹಿಸಿದ್ದರು

ಕೆ.ಆರ್.ಪುರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕ ಪ್ರಕಾಶ್ ಮಂಟೇದ ಅವರನ್ನು ಸನ್ಮಾನಿಸಲಾಯಿತು

ನಿಮ್ಮ ಪ್ರತಿಭೆಯನ್ನಿಲ್ಲಿ ಬೆಳಕಿಗೆ ತನ್ನಿ

DECCAN HERALD DHiE

Expressions

ಅಂತರ್‌ಶಾಲಾ ಮಟ್ಟದ ಪ್ರತಿಭಾ ಸ್ಪರ್ಧೆ

ಸಹಯೋಗ: PILOT Writing Is Emotion

ಸಹಭಾಗಿತ್ವ: WONDERLA PARKS AND RESORTS, POORVIKA

ನೀವು ಅತ್ಯುತ್ತಮ ಪಟುಗಳ ಜೊತೆಗೆ ಸ್ಪರ್ಧಿಸಲು, ಕಲಿಯಲು ಮತ್ತು ಮಿಂಚಲು ಇದೊಂದು ಉತ್ತಮ ಅವಕಾಶ! ಬನ್ನಿರಿ ನಿಮ್ಮ ಮಾತುಗಳು, ಸೃಜನಶೀಲತೆ ಹಾಗೂ ನಿಮ್ಮ ಇನಿದನಿ ಎಲ್ಲೆಡೆ ಮಾರ್ದನಿಸುವಂತಾಗಲಿ. ನಿಮ್ಮ ಶಾಲೆಗೆ ಹಿರಿಮೆ, ಗರಿಮೆ ತರುವ ಈ ಅವಕಾಶವನ್ನು ಕಳೆದುಕೊಳ್ಳದಿರಿ! ನಮ್ಮನ್ನು ಇಮೇಲ್ ಮೂಲಕ ಸಂಪರ್ಕಿಸಿ, ನಿಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಿ

education.dhie@printersmysore.co.in

ಬನ್ನಿರಿ ವೇದಿಕೆಗೆ | ಪ್ರದರ್ಶಿಸಿ ಕೌಶಲ | ಆನಂದಿಸಿ ಆಟ-ಕೂಟ

ಸ್ಥಳ	ವಿಭಾಗ	ದಿನಾಂಕ	ಸಮಯ
ಬೆಂಗಳೂರು	ಸಮೂಹ ಗಾಯನ, ಸೃಜನಾತ್ಮಕ ಬರವಣಿಗೆ, ಸ್ಪೆಲ್-ಬೀ, ರಸಪ್ರಶ್ನೆ ಚಿತ್ರಕಲೆ/ವರ್ಣಚಿತ್ರ	ನವೆಂಬರ್ 27-29	ಬೆಳಿಗ್ಗೆ 9:30 ರಿಂದ

ಶಾಲೆಗಳ ಮೂಲಕ ಮಾತ್ರ ನೋಂದಣಿ ಮಾಡಿಕೊಳ್ಳತಕ್ಕದ್ದು.

75ನೇ ಸಂವಿಧಾನ ಸಮರ್ಪಣಾ ದಿನಾಚರಣೆಯಲ್ಲಿ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅಭಿಮತ

‘ದಲಿತರ ಬಿಡದ ದೇಗುಲ, ಶಾಲೆಗೆ ಬೀಗ ಹಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವ ಪ್ರದೇಶಗಳಲ್ಲಿ ದೇವಸ್ಥಾನ, ಕೆರೆ, ಶಾಲೆಗಳಿಗೆ ದಲಿತರನ್ನು ಬಿಡುವುದಿಲ್ಲವೋ ಅವುಗಳಿಗೆ ಬೀಗ ಹಾಕಿ. ನಮಗೆ ಇಲ್ಲದ್ದು ನಿಮಗೂ ಇಲ್ಲ ಎಂದು ಹೇಳಿ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹೇಳಿದರು.

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡ ವಕೀಲರ ಸಂಘದ ಉದ್ಘಾಟನೆ ಹಾಗೂ 75ನೇ ಸಂವಿಧಾನ ಸಮರ್ಪಣಾ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಂವಿಧಾನಕ್ಕೆ 75 ವರ್ಷವಾದರೂ ಜಾತಿ ಬಗ್ಗೆ ಇನ್ನೂ ಮಾತನಾಡಲಾಗುತ್ತಿದೆ. ವ್ಯಕ್ತಿಯ ಪ್ರತಿಭೆಯಿಂದ ಕೃತಜ್ಞತೆ ಸಲ್ಲಿಸುವ ಮನೋಭಾವ ಬರಬೇಕು. ಜಾತಿ, ಧರ್ಮ ನೋಡಬಾರದು. ಶೋಷಿತ ಸಮುದಾಯದವರು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ, ಭಾರತದ ರಾಷ್ಟ್ರಪತಿ ಯಾಗಿದ್ದಾರೆ. ಪ್ರಧಾನಿಯಾಗುವ ಕಾಲ ಬರಬೇಕು’ ಎಂದರು.

‘ಭಗವದ್ಗೀತೆ, ರಾಮಾಯಣ, ಮಹಾಭಾರತ, ವೇದಗಳನ್ನು ಮನೆಯಲ್ಲಿ ಪೂಜೆ ಮಾಡುತ್ತೇವೆ. ಆದರೆ, ಅವುಗಳನ್ನು ರಚಿಸಿದವರ ಸಮುದಾಯದವರನ್ನು ಮನೆ ಯೊಳಗೆ ಬಿಟ್ಟುಕೊಳ್ಳದಿರುವ ಮನಸ್ಥಿತಿ ಇನ್ನೂ ಇರುವುದು ವಿಪರ್ಯಾಸ’ ಎಂದರು.

ಮೈಸೂರಿನ ಉರಿಲಿಂಗಪೆದ್ದಿ ಮಹಾಸಂಸ್ಥಾನ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ‘ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತೀಯರಿಗೆ ನೀಡಿದ ಸಂವಿಧಾನ ದಾಖಲೆ ಪುಸ್ತಕವಲ್ಲ. ಅದು ಭಾರತೀಯರ ಮನಸ್ಸಿನ ಸಂವೇದನೆ. ಯಾವುದೇ ದೇಶ ಧರ್ಮ ಆಧಾರಿತ, ಜಾತಿ ಆಧಾರಿತವಾದರೆ ಸ್ವಾತಂತ್ರ್ಯ ಕಳೆದುಕೊಳ್ಳುತ್ತದೆ. ವ್ಯಕ್ತಿಪೂಜೆ ಅಪಾಯಕಾರಿ. ಸರ್ವಾಧಿಕಾರಿ ಧೋರಣೆಯಿಂದ ದೇಶದ ಅಖಂಡತೆಗೆ ಧಕ್ಕೆಯಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

ಹೈಕೋರ್ಟ್ ನ್ಯಾಯಮೂರ್ತಿ ಕೆ. ಸೋಮಶೇಖರ್ ಮಾತನಾಡಿ, ‘ಸಂವಿಧಾನದ ಬಗ್ಗೆ ನಮಗೆ ಎಷ್ಟು ಪ್ರಬುದ್ಧತೆ ಇದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಲು ನವೆಂಬರ್ 26ರಂದು ಸಮರ್ಪಣಾ ದಿನ ಆಚರಿಸಲಾಗುತ್ತದೆ. ಸಂವಿಧಾನವನ್ನು ಅರಿತಿದ್ದರೆ ಎಷ್ಟು ತಿಳಿದಿದ್ದೇವೆ ಎಂಬುದು ಮುಖ್ಯ. ಅರಿವಿಲ್ಲದಿದ್ದರೆ ಕಲಿಯುವ ಪ್ರಯತ್ನವಾಗಬೇಕು. ಇದಕ್ಕೆಲ್ಲ ವಿದ್ಯೆ ಅಗತ್ಯ. ಜ್ಞಾನ ಎಂಬುದು ಯಾರೂ ಕದಿಯಲಾಗದ ಸಂಪತ್ತು. ಅದನ್ನು ಎಲ್ಲರೂ ಗಳಿಸಬೇಕು’ ಎಂದರು.

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡ ವಕೀಲರ ಸಂಘದ ಅಧ್ಯಕ್ಷ ಎಂ. ಮುನಿಯಪ್ಪ, ಅಖಿಲ ಭಾರತ ವಕೀಲರ ಸಂಘದ ಅಧ್ಯಕ್ಷ ಭಕ್ತವಚ್ಛಲ, ಹೈಕೋರ್ಟ್ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ. ಅಹಮದ್ ಉಪಸ್ಥಿತರಿದ್ದರು.

ಜ್ಞಾನಪ್ರಕಾಶ ಸ್ವಾಮೀಜಿ, ನ್ಯಾಯಮೂರ್ತಿ ಕೆ. ಸೋಮಶೇಖರ್, ಎಂ. ಮುನಿಯಪ್ಪ, ನ್ಯಾಯಮೂರ್ತಿ ಕೃಷ್ಣ ಎನ್. ದೀಕ್ಷಿತ್ ಮತ್ತು ಎಸ್. ಎ. ಅಹಮದ್ ಅವರು ಡಾ. ಬಿ. ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡ ವಕೀಲರ ಸಂಘವನ್ನು ಉದ್ಘಾಟಿಸಿದರು ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಫಲಿತಾಂಶ ಸಂಘಟನೆ ಮೇಲೆ ಪ್ರಭಾವ ಬೀರದು: ವಿಜಯೇಂದ್ರ

ಬೆಂಗಳೂರು: ರಾಜ್ಯದ ಉಪಚುನಾವಣೆ ಫಲಿತಾಂಶವು ಪಕ್ಷದ ಸಂಘಟನೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಪತ್ರ ಬರೆದಿರುವ ಅವರು, ‘ಉಪಚುನಾವಣೆಯ ಸೋಲನ್ನು ನಾವು ಸಕಾರಾತ್ಮಕವಾಗಿಯೇ ಸ್ವೀಕರಿಸೋಣ. ಈ ಫಲಿತಾಂಶ ಭವಿಷ್ಯದಲ್ಲಿ ಎದುರಾಗಲಿರುವ ಸವಾಲುಗಳನ್ನು ಎಚ್ಚರಿಸುವ ಸಂಕೇತವೂ ಆಗಿದೆ ಎಂದು ಭಾವಿಸೋಣ’ ಎಂದಿದ್ದಾರೆ.

‘ಪಕ್ಷದಲ್ಲಿ ಹಿರಿಯರ ಆಶೀರ್ವಾದ ಮತ್ತು ಪ್ರಮುಖರ ಮಾರ್ಗದರ್ಶನ ಪಡೆದು ಮುಂದಿನ ದಿನಗಳಲ್ಲಿ ಇನ್ನಷ್ಟು ಕ್ರಿಯಾಶೀಲರಾಗಿ ಸಂಘಟನೆ ಬಲಗೊಳಿಸಬೇಕಾಗಿದೆ. ಒಂದು ದಿನವೂ ವ್ಯರ್ಥ ಮಾಡದೇ ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರ ತರುವ ನಿಟ್ಟಿನಲ್ಲಿ ಸಂಕಲ್ಪ ಮಾಡಬೇಕಾಗಿದೆ. ಉಪಚುನಾವಣೆ ಫಲಿತಾಂಶಗಳು ಪಕ್ಷದ ಸಂಘಟನೆಯ ಸಾಮರ್ಥ್ಯ ಮತ್ತು ಪ್ರಭಾವವನ್ನು ಬಿಂಬಿಸುವ ಅಳತೆಗೋಲಾಗಿರುವುದಿಲ್ಲ. ಸ್ಥಳೀಯ ಸಮಸ್ಯೆಗಳು ಹಾಗೂ ಸರ್ಕಾರದ ಪ್ರಭಾವವನ್ನು ಆಧರಿಸಿ ಚುನಾವಣೆ ಫಲಿತಾಂಶಗಳು ಹೊರಹೊಮ್ಮುತ್ತವೆ’ ಎಂದು ಅವರು ವಿವರಿಸಿದ್ದಾರೆ.

‘ಬಿಜೆಪಿ ಸುಭದ್ರ ಕೋಟೆಯ ನಡುವೆ ಬಿರುಕು ಮೂಡಿಸಲು ಯತ್ನಿಸುವ ಶಕ್ತಿಗಳನ್ನು ಮೆಟ್ಟಿನಿಂತು ನಮ್ಮೆಲ್ಲರ ಒಗ್ಗಟ್ಟಿನ ಮುಷ್ಟಿ ದೇಶ ಕಟ್ಟುವ ಶಕ್ತಿಯಾಗಬೇಕಿದೆ. ಮುಂದೆಯೂ ಮಿತ್ರಪಕ್ಷ ಜೆಡಿಎಸ್ ಜತೆ ಸಹಕಾರದ ಹೆಜ್ಜೆಗಳನ್ನು ಇಡೋಣ. ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ಧೋರಣೆ ಮತ್ತು ಭ್ರಷ್ಟ ಆಡಳಿತವನ್ನು ಕೊನೆಗಾಣಿಸುವುದಕ್ಕಾಗಿ ಎಂಬ ಶಪಥ ಮಾಡೋಣ’ ಎಂದು ವಿಜಯೇಂದ್ರ ಹೇಳಿದ್ದಾರೆ.

‘ಯತ್ನಾಳ ಮೋಸಕ್ಕೆ ನಾವೆಲ್ಲ ಬಲಿ’

ಕೂಡಲಸಂಗಮ: ‘ಬೆಳಗಾವಿ ಅಧಿವೇಶನಕ್ಕೂ ಮುನ್ನ ಬೆಂಗಳೂರಿನಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ಕಾರ್ಯಕಾರಿಣಿ ಸಭೆ ಕರೆದು 2ಎ ಮೀಸಲಾತಿ ಹೋರಾಟದ ರೂಪುರೇಷ ನಿರ್ಧರಿಸಲಾಗುವುದು’ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಮಂಗಳವಾರ ನಡೆದ ಮಹಾಸಭಾದ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನ ಸಭೆಗೆ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಶಾಸಕ ಬಸವನಗೌಡ ಪಾಟೀಲ ಯತ್ನಾಳ ಅವರನ್ನು ಕರೆಯುವುದಿಲ್ಲ. ಮಾಜಿ ಸಚಿವ ಮುರುಗೇಶ ನಿರಾಣಿಯವರನ್ನು ಕರೆಯಲಾಗುವುದು’ ಎಂದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾವು ಮಾಡಿದ 2ಎ ಮೀಸಲಾತಿ ಹೋರಾಟ ಪ್ರಜ್ಞಾರಹಿತವಾಗಿತ್ತು. ಯತ್ನಾಳರ ಕುತಂತ್ರದಿಂದ ಹೋರಾಟದ ಹಾದಿ ದಿಕ್ಕು ತಪ್ಪುತ್ತಿದೆ. ಬಸವ ಜಯಮೃತ್ಯುಂಜಯ ಸ್ವಾಮೀಜಿ ಒಂದು ಪಕ್ಷಕ್ಕೆ ಸೀಮಿತರಾಗಿ ಹೋರಾಟ ಮಾಡುವುದನ್ನು ಖಂಡಿಸುತ್ತೇವೆ. ಒಂದು ಪಕ್ಷಕ್ಕೆ ಸೀಮಿತರಾದರೆ, ನಾವು ಪ್ರತ್ಯೇಕವಾಗಿ ಹೋರಾಟ ಆರಂಭಿಸುತ್ತೇವೆ’ ಎಂದರು.

ಮನುಸ್ಮೃತಿ ಬಗ್ಗೆ ಎಚ್ಚರವಹಿಸಿ: ಸಿ.ಎಂ ಸಿದ್ದರಾಮಯ್ಯ

ಸಂವಿಧಾನ ಬದಲಾವಣೆ ಹೇಳಿಕೆ: ಕ್ರಮ ಏಕಿಲ್ಲ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಸಂಪುಟದಲ್ಲಿ ಸಚಿವರಾಗಿದ್ದ ಅನಂತ ಕುಮಾರ ಹೆಗಡೆ ಅವರು ಸಂವಿಧಾನ ಬದಲಾವಣೆ ಬಗ್ಗೆ ಸಾರ್ವಜನಿಕವಾಗಿ ಹೇಳಿಕೆ ನೀಡಿದರು. ಆದರೆ, ಮೋದಿಯವರಾಗಲಿ, ಬಿಜೆಪಿಯವರಾಗಲಿ ಇದನ್ನು ವಿರೋಧಿಸಲಿಲ್ಲ. ಅವರನ್ನು ಮಂತ್ರಿ ಸ್ಥಾನದಿಂದ ಏಕೆ ಇಳಿಸಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸಮಾಜ ಕಲ್ಯಾಣ ಇಲಾಖೆ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಉದ್ಘಾಟಿಸಿ, ಪ್ರಜಾಪ್ರಭುತ್ವ ದಿನದ ಯಶಸ್ಸಿಗೆ ಶ್ರಮಿಸಿದ ಜಿಲ್ಲಾಧಿಕಾರಿಗಳು ಮತ್ತು ನಾಗರಿಕ ಸಂಘಟನೆಗಳ ಮುಖಂಡರಿಗೆ ಪ್ರಶಸ್ತಿ ಪತ್ರವನ್ನು ವಿತರಿಸಿ ಮಾತನಾಡಿದರು.

ದೇಶದಲ್ಲಿ ಸಂವಿಧಾನ ವಿರೋಧಿಗಳೂ ಇದ್ದಾರೆ. ಈ ಬಗ್ಗೆ ಎಚ್ಚರಿಕೆ ಇರಬೇಕು. ಸಂವಿಧಾನ ಜಾರಿಗೊಳಿಸುವುದನ್ನು ಹಿಂದೂ ಮಹಾಸಭಾದ ಸಾವರ್ಕರ್, ಗೋಳ್ವಾಲ್ಕರ್ ಕೂಡ ವಿರೋಧಿಸಿದ್ದರು. ಆರ್‌ಎಸ್‌ಎಸ್ ಸಹ ವಿರೋಧಿಸಿತ್ತು. ಅನಂತ ಕುಮಾರ ಹೆಗಡೆ ಅವರ ಮಾತಿಗೆ ಅವರೆಲ್ಲರ ಸಮ್ಮತಿ ಇತ್ತು ಅಂತಲೇ ಅರ್ಥ. ಇದನ್ನು ದೇಶದ ಜನತೆ ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

‘ಜಾತಿ ವ್ಯವಸ್ಥೆಯಿಂದಲೇ ಅಸಮಾನತೆ, ಮನುಷ್ಯರ ಮಧ್ಯೆ ತಾರತಮ್ಯ ಸೃಷ್ಟಿಯಾಗಿದೆ. ಸಂವಿಧಾನ ವಿರೋಧಿಗಳು ಮತ್ತು ಮನುಸ್ಮೃತಿ ಬಗ್ಗೆ ಎಚ್ಚರವಹಿಸಬೇಕು. ನಾನು ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿದ್ದೇ ಈ ಸಂವಿಧಾನ ಬಲದಿಂದ’ ಎಂದು ಪ್ರತಿಪಾದಿಸಿದರು.

ಇದೇ ವೇಳೆ ಸಿದ್ದರಾಮಯ್ಯ ಅವರು ಸಂವಿಧಾನ ಪೀಠಿಕೆ ವಾಚಿಸಿದರು. ಕ್ರೈಸ್ ಶಾಲೆಯ ಹಳೆಯ ವಿದ್ಯಾರ್ಥಿಗಳ ವೆಬ್‌ಸೈಟ್ ಅನ್ನು ಉದ್ಘಾಟಿಸಲಾಯಿತು ಮತ್ತು ಪಿಯು ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಿಸಲಾಯಿತು.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜ್, ನಜೀರ್ ಅಹ್ಮದ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಂಪತ್ ರಾಜ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂವಿಧಾನ ಪೀಠಿಕೆ ವಾಚಿಸಿದರು. ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದ ರಾಜ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಬದಲಾಯಿಸುತ್ತೇವೆ ಎಂದವರು ಮನೆಗೆ ಹೋದರು’

‘ಸಂವಿಧಾನವನ್ನು ಕಿತ್ತು ಹಾಕುತ್ತೇವೆ, ಹರಿದು ಹಾಕುತ್ತೇವೆ, ಬದಲಾಯಿಸುತ್ತೇವೆ ಎಂದ ಬಿಜೆಪಿಯವರನ್ನೇ ಜನರು ಬದಲಾಯಿಸಿದರು. ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದು ಹೇಳಿದವರೆಲ್ಲ ಮನೆಗೆ ಹೋಗಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಸಚಿವ ಎಚ್.ಸಿ. ಮಹದೇವಪ್ಪ ಅವರು ರಾಜಕೀಯದಿಂದ ನಿವೃತ್ತಿ ಪಡೆದ ಬಳಿಕ ಅವರನ್ನು ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಉಪನ್ಯಾಸಕರನ್ನಾಗಿ ಕಳುಹಿಸಬೇಕು ಎನ್ನುವ ಅಭಿಲಾಷೆ ಅವರ ಮಾತುಗಳನ್ನು ಕೇಳಿದಾಗ ಅನ್ನಿಸಿತು’ ಎಂದು ಹೇಳಿದರು.

‘ಸಂವಿಧಾನ, ಅಂಬೇಡ್ಕರ್ ಬಗ್ಗೆ ಕಾಂಗ್ರೆಸ್‌ಗೆ ತಿರಸ್ಕಾರವಿತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್‌ಗೆ ಆರಂಭದಿಂದಲೂ ಸಂವಿಧಾನ ಮಾತ್ರವಲ್ಲದೇ, ಶ್ರೇಷ್ಠ ಸಂವಿಧಾನ ಕೊಟ್ಟ ಡಾ. ಅಂಬೇಡ್ಕರ್ ಅವರ ಬಗ್ಗೆ ತಿರಸ್ಕಾರವಿತ್ತು. ಆದ್ದರಿಂದಲೇ ಕಾಂಗ್ರೆಸ್ ಆಡಳಿತದಲ್ಲಿದ್ದಾಗಲೆಲ್ಲ ಸಂವಿಧಾನದ ಮೂಲ ಆಶಯವನ್ನು ಬದಲಿಸುವ ಪ್ರಯತ್ನ ಮಾಡಿತ್ತು’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸಂವಿಧಾನ ದಿನಾಚರಣೆಯ ಪ್ರಯುಕ್ತ ಬಿಜೆಪಿ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ‘ಸಂವಿಧಾನ ಸನ್ಮಾನ ಅಭಿಯಾನ’ದಲ್ಲಿ ಅವರು ಮಾತನಾಡಿದರು.

ಸಂವಿಧಾನದ ಮೂಲ ಸ್ವರೂಪವನ್ನೇ ಬದಲಿಸಲು ಮುಂದಾದಾಗ ಅದನ್ನು ಕೇರಳದ ಕೇಶವಾನಂದ ಭಾರತೀ ಸ್ವಾಮೀಜಿ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದಲ್ಲಿ ಪ್ರಶ್ನಿಸಿದರು. ಸಂವಿಧಾನದ ಮೂಲ ಸ್ವರೂಪವನ್ನು ಬದಲಿಸಬಾರದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿತ್ತು ಎಂದರು.

ಇದರಿಂದಾಗಿ ಸಂವಿಧಾನ ಬದಲಿಸುವ ಕಾಂಗ್ರೆಸ್‌ನ ಮೊದಲ ಪ್ರಯತ್ನಕ್ಕೆ ಹಿನ್ನಡೆ ಆಗಿತ್ತು. ಆ ಬಳಿಕ ಕಾಂಗ್ರೆಸ್ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿತ್ತು. ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾಧ್ಯಮಗಳ ಸ್ವಾತಂತ್ರ್ಯವೂ ಸೇರಿ ಎಲ್ಲ ರೀತಿಯ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಮೊಟಕುಗೊಳಿಸಿದ್ದರು. ಇಂದಿರಾ ಗಾಂಧಿ ಅವರ ಪ್ರಧಾನಿ ಕುರ್ಚಿ ಉಳಿಸುವ ಸಲುವಾಗಿ, ವೈಯಕ್ತಿಕ ಕಾರಣಗಳಿಗಾಗಿ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದರು ಎಂದರು.



ಬಸವರಾಜ ಬೊಮ್ಮಾಯಿ

ರಾಜೀವ್‌ಗಾಂಧಿಯವರು ಪ್ರಧಾನಿ ಆಗಿದ್ದಾಗ ಶಾಬಾನು ಪ್ರಕರಣದಲ್ಲಿ ಹೆಣ್ಣು ಮಕ್ಕಳ ಜೀವನೋಪಾಯ ಕೊಡುವುದನ್ನು ವಿರೋಧಿಸಿ ಸಂವಿಧಾನ ತಿದ್ದುಪಡಿ ಮಾಡಿದ್ದರು ಎಂದರು.

ಕೇಶವಾನಂದ ಭಾರತೀಯವರ ತೀರ್ಪು ಮತ್ತು ಎಸ್.ಆರ್.ಬೊಮ್ಮಾಯಿ ವರ ಪ್ರಕರಣದಲ್ಲಿ ಒಕ್ಕೂಟ ವ್ಯವಸ್ಥೆಯ ರಕ್ಷಣೆ ಕುರಿತ ತೀರ್ಪಿನಿಂದ ಸಂವಿಧಾನದ ರಕ್ಷಣೆಯಾಗಿದೆ. ಖಾಲಿ ಪುಟಗಳ ಸಂವಿಧಾನ ಎಂಬುದು ಸಂವಿಧಾನದ ಕುರಿತ ಕಾಂಗ್ರೆಸ್ಸಿನ ಶೂನ್ಯ ನಂಬಿಕೆಯನ್ನು ಬಿಂಬಿಸುತ್ತದೆ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಭಾಗವಹಿಸಿದ್ದರು.

‘ಮುಸ್ಲಿಮರಿಗೆ ಮತದಾನದ ಹಕ್ಕು ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡುವ ಕಾನೂನು ಜಾರಿಗೆ ತರಬೇಕು’ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಆಗ್ರಹಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾರತೀಯ ಕಿಸಾನ್ ಸಂಘ ಮಂಗಳವಾರ ಹಮ್ಮಿಕೊಂಡಿದ್ದ ವಕ್ಫ್ ಮಂಡಳಿ ವಿರುದ್ಧದ ‘ರೈತರ ಗರ್ಜನಾ ರ್‍ಯಾಲಿ’ಯಲ್ಲಿ ಅವರು ಮಾತನಾಡಿದರು. ‘ಪಾಕಿಸ್ತಾನದಲ್ಲಿ ಬೇರೆಯವರಿಗೆ ಮತದಾನ ಮಾಡುವ ಅಧಿಕಾರ ಇಲ್ಲ. ಅದೇ ರೀತಿ ಭಾರತದಲ್ಲೂ ಅಂತಹ ಕಾನೂನು ಜಾರಿಗೆ ತಂದರೆ ಅವರ ಪಾಡಿಗೆ ಅವರು ಇರುತ್ತಾರೆ’ ಎಂದರು.

ಚಂದ್ರಶೇಖರನಾಥ ಸ್ವಾಮೀಜಿ

‘ಯಾವುದೇ ಕಾನೂನು ಇಲ್ಲದೇ ರೈತರ ಆಸ್ತಿಯನ್ನು ವಕ್ಫ್ ಮಂಡಳಿ ಕಸಿದುಕೊಳ್ಳುತ್ತಿರುವುದು ಅನ್ಯಾಯ. ಯಾರದ್ದೋ ಜಮೀನನ್ನು ಮತ್ಯಾರೋ ಕಸಿದುಕೊಳ್ಳುವುದು ಧರ್ಮ ಅಲ್ಲ. ಅವರ ಜಮೀನನ್ನು ಕಸಿದುಕೊಂಡರೆ ಸುಮ್ಮನೆ ಇರುತ್ತಾರೆಯೇ? ವಕ್ಫ್ ಮಂಡಳಿ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸಬೇಕಿದೆ. ಜಮೀನು ರೈತರ ಬಳಿಯೇ ಉಳಿಯಬೇಕು’ ಎಂದು ಒತ್ತಾಯಿಸಿದರು.

‘ರಾಜಕಾರಣಿಗಳು ಮತಕ್ಕಾಗಿ ಕೆಲವು ಸಮುದಾಯದವರನ್ನು ಓಲೈಸುತ್ತಿದ್ದಾರೆ. ವಕ್ಫ್ ಮಂಡಳಿಯನ್ನೇ ರದ್ದುಪಡಿಸಬೇಕು’ ಎಂದು ಹೇಳಿದರು.

‘ವಕ್ಫ್ ಮಂಡಳಿ ವಿರುದ್ಧ ಕಿಸಾನ್ ಸಂಘ ಪ್ರತಿಭಟನಾ ರ್‍ಯಾಲಿ ಆಯೋಜಿಸಿರುವುದು ಸ್ವಾಗತಾರ್ಹ. ಸರ್ಕಾರ ಪತನವಾದರೂ ತೊಂದರೆ ಇಲ್ಲ. ರಾಜ್ಯದ ರೈತರ ಕೃಷಿ ಜಮೀನು ಉಳಿವಿಗಾಗಿ ಒಗ್ಗಟ್ಟಿನಿಂದ ಹೋರಾಟ ನಡೆಸುವುದು ಅಗತ್ಯ’ ಎಂದು ಪ್ರತಿಪಾದಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ‘ರೈತರ ಜಮೀನನ್ನು ವಕ್ಫ್ ಮಂಡಳಿ ಕಸಿಯುತ್ತಿದೆ. ರೈತರು, ದಲಿತರು, ಶೋಷಿತರ ಜಮೀನು ಅವರ ಬಳಿಯೇ ಉಳಿಯಬೇಕು’ ಎಂದು ಆಗ್ರಹಿಸಿದರು.

ಡಿ.9ರ ಒಳಗೆ ಭಿನ್ನರ ವಿರುದ್ಧ ಕ್ರಮಕ್ಕೆ ಆಗ್ರಹ

ಒಂದನೇ ಪುಟದಿಂದ..

‘ನೀವೇ ದೆಹಲಿಗೆ ಹೋಗಿ ಭಿನ್ನಮತೀಯರ ವಿರುದ್ಧ ದೂರು ನೀಡಬೇಕು. ಇಲ್ಲವಾದರೆ ನಾವೇ ಹೋಗಿ ದೂರು ನೀಡಲು ಸಿದ್ಧರಿದ್ದೇವೆ’ ಎಂದು ಮುಖಂಡರೊಬ್ಬರು ಹೇಳಿದರು.

‘ಭಿನ್ನಮತೀಯರು ಪಕ್ಷದ ಬಾವುಟ ಬಳಸಿಕೊಳ್ಳಬಾರದು. ಅದಕ್ಕೆ ಅವಕಾಶ ನೀಡಬಾರದು. ಯಾರ ನೇತೃತ್ವದ ಹೋರಾಟದಲ್ಲಿ ಭಾಗವಹಿಸಬೇಕು ಎಂಬ ಗೊಂದಲ ಕಾರ್ಯಕರ್ತರ ವಲಯದಲ್ಲಿ ಸೃಷ್ಟಿಯಾಗಿದೆ. ನಿನ್ನೆ ಬೀದರ್‌ನಲ್ಲಿ ಆಗಿದ್ದು, ಇನ್ನು ಎಲ್ಲ ಜಿಲ್ಲೆಗಳಿಗೂ ಹಬ್ಬುತ್ತಾ ಹೋಗುತ್ತದೆ. ವಿಧಾನಮಂಡಲ ಅಧಿವೇಶನದಲ್ಲಿ ಒಗ್ಗಟ್ಟು ಎಂಬುದು ಇರುವುದೇ ಇಲ್ಲ. ಇದಕ್ಕೆ ಈಗಲೇ ಇತಿಶ್ರೀ ಹಾಡದಿದ್ದರೆ, ಮುಂದೆ ಭಿನ್ನಮತೀಯರು ಅಂಕೆಗೆ ಸಿಗುವುದಿಲ್ಲ’ ಎಂದು ಅಸಮಾಧಾನ ತೋಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ‘ತಾಳ್ಮೆ ವಹಿಸಬೇಕು. ಎಲ್ಲ ಚಟುವಟಿಕೆಗಳನ್ನು ವರಿಷ್ಠರು ಗಮನಿಸುತ್ತಿದ್ದಾರೆ. ಅವರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ಈ ವಿಷಯ ಅವರಿಗೆ ಬಿಡೋಣ’ ಎಂಬುದಾಗಿ ಸಮಾಧಾನಪಡಿಸಿದರು ಎಂದು ನಾಯಕರೊಬ್ಬರು ತಿಳಿಸಿದರು.

ಶಿವಾಚಾರ್ಯ ಪ್ರಶಸ್ತಿ

ಸಿಂದಗಿ (ವಿಜಯಪುರ ಜಿಲ್ಲೆ): ಸಾರಂಗಮಠದ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನವು ಲಿಂಗೈಕ್ಯ ಎನ್.ಚೆನ್ನಯ್ಯ ಸ್ವಾಮಿ ಮತ್ತು ಲಿಂಗೈಕ್ಯ ಶಾರದಾದೇವಿ ಜನಕಲ್ಯಾಣ ಫೌಂಡೇಷನ್ ವತಿಯಿಂದ ನೀಡುವ ಶಿವಯೋಗಿ ಶಿವಾಚಾರ್ಯ ರಾಷ್ಟ್ರೀಯ ಪ್ರಶಸ್ತಿಗೆ ಸಂಸ್ಕೃತ ವಿಶ್ವ ವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ಶಿವಕುಮಾರಸ್ವಾಮಿ ಆಯ್ಕೆಯಾಗಿದ್ದಾರೆ.

ರಾಜ್ಯದ ಮನವಿಗೆ ಸುಪ್ರೀಂ ಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: 2024-25ನೇ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿಗೆ ನಡೆಸಿದ ಪರೀಕ್ಷೆಯ ಅರ್ಧವಾರ್ಷಿಕ ಮೌಲ್ಯಮಾಪನಕ್ಕೆ ಅನುಮತಿ ವಿಷಯದಲ್ಲಿ ಅಕ್ಟೋಬರ್ 21ರಂದು ನೀಡಿದ ಆದೇಶವನ್ನು ಮಾರ್ಪಡಿಸುವಂತೆ ಕರ್ನಾಟಕ ಸರ್ಕಾರ ಮಾಡಿದ ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು ರಾಜ್ಯ ಸರ್ಕಾರ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿತು. ಈ ಮೌಲ್ಯಮಾಪನವು ವಿದ್ಯಾರ್ಥಿಯ ಒಟ್ಟಾರೆ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

8, 9 ಮತ್ತು 10ನೇ ತರಗತಿಗಳಿಗೆ ಅರ್ಧ ವಾರ್ಷಿಕ ಮೌಲ್ಯಾಂಕನ (ಬೋರ್ಡ್) ಪರೀಕ್ಷೆಗಳನ್ನು ನಡೆಸಿದ್ದ ಕರ್ನಾಟಕ ಸರ್ಕಾರವನ್ನು ಪೀಠವು ಅಕ್ಟೋಬರ್ 21ರಂದು ತರಾಟೆಗೆ ತೆಗೆದುಕೊಂಡಿತ್ತು. ಮುಂದಿನ ಆದೇಶದವರೆಗೆ ಪರೀಕ್ಷೆ ನಡೆಸದಂತೆ ಅಥವಾ ಈಗಾಗಲೇ ನಡೆದಿರುವ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸದಂತೆ ನಿರ್ಬಂಧ ವಿಧಿಸಿತ್ತು.

ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಒಕ್ಕೂಟ ಸಲ್ಲಿಸಿದ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಪೀಠವು, ‘ವಿದ್ಯಾರ್ಥಿಗಳ ಕತ್ತು ಹಿಸುಕುವ ಕೆಲಸ ಮಾಡಬೇಡಿ’ ಎಂದು ಕಟುವಾಗಿ ಹೇಳಿತ್ತು.

ವಕ್ಫ್: 4,720 ಎಕರೆ ಪಹಣಿ ಲಾಕ್

ಒಂದನೇ ಪುಟದಿಂದ...

‘ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ಪಹಣಿ ಮತ್ತು ದಾಖಲೆ ಪತ್ರಗಳಲ್ಲಿ ವಕ್ಫ್ ಆಸ್ತಿಗಳು ಎಂದು ನಮೂದಿಸದೇ ಇರುವ ಮತ್ತು ವ್ಯಕ್ತಿಗಳ ಹೆಸರು ಇರುವ ಕಾರಣ ಅವುಗಳಲ್ಲಿ ಅಕ್ರಮವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಭೂಮಿ ತಂತ್ರಾಂಶದಲ್ಲಿ ವಕ್ಫ್ ಆಸ್ತಿಗಳೆಂದು ನಮೂದು ಮಾಡಬೇಕು’ ಎಂದು ಸಮಿತಿ ಸೂಚಿಸಿತ್ತು.

ಈ ಪ್ರಕಾರ ಕ್ರಮ ತೆಗೆದುಕೊಂಡಿದ್ದ ಮಂಡಳಿಯು ಒತ್ತುವರಿದಾರರು ಎಂದು ಗುರುತಿಸಲಾಗಿದ್ದ ರೈತರು ಮತ್ತು ಭೂಮಾಲೀಕರಿಗೆ ನೋಟಿಸ್ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿತ್ತು. ಕಂದಾಯ ಇಲಾಖೆ, ಪಂಚಾಯತ್ ರಾಜ್ ಮತ್ತು ನಗರಾಭಿವೃದ್ಧಿ ಇಲಾಖೆಗಳ ‘ಭೂಮಿ’, ‘ಇ-ಸ್ವತ್ತು’ ಮತ್ತು ‘ಇ-ಆಸ್ತಿ’ ತಂತ್ರಾಂಶಗಳನ್ನು ಬಳಸಿಕೊಂಡು ಸಂಬಂಧಿತ ಜಮೀನುಗಳ ಪಹಣಿಗಳನ್ನು ಕಂದಾಯ ಇಲಾಖೆ ಅಧಿಕಾರಿಗಳ ಮೂಲ ಲಾಕ್ ಮಾಡಿಸಲಾಗಿತ್ತು.

ವಿಧಾನಮಂಡಲದ ಕಲ್ಯಾಣ ಸಮಿತಿಯು ವಿಧಾನಸಭೆಯಲ್ಲಿ ಮೊದಲನೇ ವರದಿ ಮಂಡಿಸುವ ವೇಳೆಗೆ ಕೆಲವೇ ಕೆಲವು ಆಸ್ತಿಗಳಿಗೆ ಸಂಬಂಧಿಸಿದ ಪಹಣಿಗಳನ್ನು ಮಾತ್ರ ಹೀಗೆ ಲಾಕ್ ಮಾಡಲಾಗಿತ್ತು. 2020ರ ಸೆಪ್ಟೆಂಬರ್ 22ರಂದು ಎರಡನೇ ವರದಿ ಮಂಡಿಸಿದ ವೇಳೆಗೆ ಹೀಗೆ ಲಾಕ್ ಮಾಡಲಾದ ಆಸ್ತಿಗಳ ವಿಸ್ತೀರ್ಣ 1,551 ಎಕರೆ. 2022ರ ಸೆಪ್ಟೆಂಬರ್ ನಲ್ಲಿ ಹೀಗೆ 4,720 ಎಕರೆ ವಿಸ್ತೀರ್ಣದ 4,734 ಆಸ್ತಿಗಳನ್ನು ಲಾಕ್ ಮಾಡಲಾಗಿತ್ತು.

ಹೀಗೆ ಲಾಕ್ ಅಥವಾ ಫ್ಲ್ಯಾಗ್ ಆಫ್ ಮಾಡಲಾದ ಆಸ್ತಿಗಳ ಮಾರಾಟ, ಉಡುಗೊರೆ ನೀಡಿಕೆ, ಪಹಣಿ ಬದಲಾವಣೆ ಅಥವಾ ತಿದ್ದುಪಡಿ, ಭೋಗ್ಯಕ್ಕೆ ಹಾಕುವುದು, ಅಡಮಾನ ಸಾಲ ಪಡೆಯುವುದು ಮತ್ತು ಇತರ ಯಾವುದೇ ಪ್ರಕ್ರಿಯೆಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಹೀಗೆ ಫ್ಲ್ಯಾಗ್ ಆಫ್ ಮಾಡಿದ ಪ್ರಕರಣಗಳಲ್ಲಿ ಹಲವು ರೈತರು ಮತ್ತು ಭೂಮಾಲೀಕರು ನ್ಯಾಯಾಲಯಗಳ ಮೊರೆ ಹೋಗಿದ್ದಾರೆ.

ತ್ಯಾಗಕ್ಕೆ ಸಚಿವರು ಸಿದ್ಧರಿರಬೇಕು: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷಕ್ಕೆ ತ್ಯಾಗದ ಇತಿಹಾಸವೇ ಇದೆ. ಸೋನಿಯಾ ಗಾಂಧಿ ಅವರು ಪ್ರಧಾನಿಯಾಗುವ ಅವಕಾಶವನ್ನು ಎರಡು ಬಾರಿ ನಿರಾಕರಿಸಿದರು. ಸಮಯ ಬಂದಾಗ ನಮ್ಮ ಸರ್ಕಾರದ ಸಚಿವರೂ ತಮ್ಮ ಸ್ಥಾನದ ತ್ಯಾಗಕ್ಕೆ ಸಿದ್ಧರಿರಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಭಾರತದ ಸಂವಿಧಾನ ಅಂಗೀಕಾರ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನೇ ಅಧಿಕಾರದಿಂದ ಕೆಳಗೆ ಇಳಿಸಲು ಹರಸಾಹಸ ಮಾಡಬೇಕಿದೆ. ಮಹಾತ್ಮ ಗಾಂಧಿ, ಸೋನಿಯಾ, ರಾಹುಲ್ ಅವರಂತೆ ಎಲ್ಲರೂ ಯೋಚಿಸಬೇಕು. ಆಗಮಾತ್ರ ಪಕ್ಷಕ್ಕೆ ಬಲತುಂಬಲು ಸಾಧ್ಯ ಎಂದರು.

ಕಾರ್ಯಕ್ರಮದ ನಂತರ ‘ಸಚಿವರ ತ್ಯಾಗ’ದ ಮಾತು ಹಾಗೂ ದೆಹಲಿ ಭೇಟಿ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಸಚಿವರು ತಕ್ಷಣಕ್ಕೆ ತಮ್ಮ ಸ್ಥಾನ ಬಿಡಬೇಕು ಎಂದು ಹೇಳಿಲ್ಲ. ತ್ಯಾಗಕ್ಕೆ ಸಿದ್ಧವಿರಬೇಕು ಎಂದು ಕಿವಿಮಾತು ಹೇಳಿರುವೆ. ಅದಕ್ಕೆ ಇನ್ನೂ ಸಮಯಾವಕಾಶವಿದೆ’ ಎಂದು ತಿಳಿಸಿದರು.

‘ಸಚಿವ ಸಂಪುಟ ಪುನರ್‌ರಚನೆ ವಿಚಾರ ಗೊತ್ತಿಲ್ಲ. ಗೊತ್ತಾದಾಗ ಮಾತನಾಡುತ್ತೇನೆ. ಈ ಕುರಿತು ಹೆಚ್ಚಿನ ಮಾಹಿತಿಗೆ ಮುಖ್ಯಮಂತ್ರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳನ್ನೇ ಕೇಳಿ’ ಎಂದರು.

‘ಮಹದಾಯಿ ವಿಷಯ ಚರ್ಚಿಸಲು ಕೇಂದ್ರ ಸಚಿವರ ಭೇಟಿಗಾಗಿ ದೆಹಲಿ ಪ್ರವಾಸಕ್ಕೆ ತೆರಳುತ್ತಿರುವೆ. ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮದ ರೂಪುರೇಷೆ ಕುರಿತು ಪಕ್ಷದ ಹೈಕಮಾಂಡ್ ಜತೆ ಚರ್ಚೆ ನಡೆಸುವೆ. ಹಾಗೆಯೇ, ಹೇಮಂತ್ ಸೊರೇನ್ ಅವರ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗವಹಿಸುವೆ. ದೆಹಲಿ ಭೇಟಿಗೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಕೊಟ್ಟ ಮಾತಿನಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮಹದಾಯಿಗೆ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಕೊಡಿಸಬೇಕು. ರಾಜ್ಯದ ಒಳಿತಾಗಿ ಅವರ ಸಹಕಾರ ಬಳಸಿಕೊಳ್ಳಲು ಸಿದ್ಧ’ ಎಂದರು.

ಗ್ಯಾರಂಟಿಗೆ ಅಪಸ್ವರ ಎತ್ತಿದರೆ ನೋಟಿಸ್

ಎಂತಹ ಪರಿಸ್ಥಿತಿ ಎದುರಾದರೂ ಗ್ಯಾರಂಟಿ ಯೋಜನೆ ಸ್ಥಗಿತಗೊಳಿಸುವುದಿಲ್ಲ. ಗ್ಯಾರಂಟಿಗಳ ವಿರುದ್ಧ ಹೇಳಿಕೆ ನೀಡುವ ಕಾಂಗ್ರೆಸ್ ಶಾಸಕರಿಗೆ ನೋಟಿಸ್ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಶಕ್ತಿ ಯೋಜನೆ ಸೇರಿದಂತೆ ಕೆಲ ಗ್ಯಾರಂಟಿ ಯೋಜನೆಗಳನ್ನು ಕೈಬಿಟ್ಟು ಬಡವರಿಗೆ ಮನೆಗಳನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದು ಒಳ್ಳೆಯದು’ ಎಂಬ ವಿಜಯನಗರ ಶಾಸಕ ಎಚ್.ಆರ್. ಗವಿಯಪ್ಪ ಅವರ ಬೇಡಿಕೆ ಒಪ್ಪಲು ಸಾಧ್ಯವಿಲ್ಲ. ಅವರಿಗೆ ವಿವರಣೆ ಕೇಳಿ ನೋಟಿಸ್ ನೀಡಲಾಗುವುದು, ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದರು.

‘ಈ ಯೋಜನೆಗಳ ಮೂಲಕ ಪ್ರತಿ ಕ್ಷೇತ್ರಕ್ಕೆ ₹250 ಕೋಟಿ ಹಣ ಹೋಗುತ್ತಿದೆ. ಇದು ಆ ಕ್ಷೇತ್ರದ ಜನರ ಅಭಿವೃದ್ಧಿಯಲ್ಲವೇ? ಜತೆಗೆ, ಇತರೆ ಅಭಿವೃದ್ಧಿ ಕಾರ್ಯಗಳಿಗೂ ಅನುದಾನ ನೀಡುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳ ಲಾಭವನ್ನು ಅನರ್ಹರು ಪಡೆಯುತ್ತಿದ್ದಾರೆ ಎಂಬ ದೂರುಗಳಿದ್ದರೆ ಪರಿಶೀಲಿಸಲಾಗುವುದು’ ಎಂದು ಭರವಸೆ ನೀಡಿದರು.

ಕರ್ನಾಟಕ, ಮಂಡ್ಯ, ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿ.ವಿ ಕಾರ್ಯಗಳು ಹಿನ್ನಡೆ

ವಿ.ವಿ: ರಚನೆಯಾಗದ ಶೋಧನಾ ಸಮಿತಿ

• ಬಿ.ಜೆ. ಧನ್ಯಪ್ರಸಾದ್

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ಮಂಡ್ಯ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಸರ್ಕಾರವು ಶೋಧನಾ ಸಮಿತಿಗಳನ್ನು ಇನ್ನೂ ರಚಿಸಿಲ್ಲ. ಕುಲಪತಿಗಳ ನೇಮಕ ಆಗದ ಕಾರಣ ಈ ವಿಶ್ವವಿದ್ಯಾಲಯಗಳಲ್ಲಿ ಹಲವು ಪ್ರಕ್ರಿಯೆಗಳು ನನೆಗುದಿಗೆ ಬಿದ್ದಿವೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಎರಡು ತಿಂಗಳ ಹಿಂದೆ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಮತ್ತು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಪತಿ ಕೆಲ ದಿನಗಳ ಹಿಂದೆ ನಿವೃತ್ತರಾಗಿದ್ದಾರೆ. ಆಡಳಿತ ನಿರ್ವಹಣೆಗೆ ಪ್ರಭಾರ ಕುಲಪತಿಗಳನ್ನು ನೇಮಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಶಿಕ್ಷಕರ ನೇಮಕಾತಿಗೆ ಕಳೆದ ವರ್ಷ ಅಧಿಸೂಚನೆ ಪ್ರಕಟಿಸಿ ಸ್ಪರ್ಧಾ ಪರೀಕ್ಷೆ ನಡೆಸಲಾಗಿದೆ. ಈ ಮಧ್ಯೆ ಕುಲಪತಿಯ ನಿವೃತ್ತಿಯಿಂದ ನೇಮಕಾತಿ ಪ್ರಕ್ರಿಯೆ ಅರ್ಧಕ್ಕೆ ಸ್ಥಗಿತಗೊಂಡಿದೆ. 1949ರ ಆಗಸ್ಟ್‌ನಲ್ಲಿ ಆರಂಭವಾದ ಈ ವಿಶ್ವವಿದ್ಯಾಲಯ ಈಗ ಅಮೃತ ಮಹೋತ್ಸವ ವರ್ಷ ಆಚರಿಸುತ್ತಿದೆ. ಆದರೆ, ಅಮೃತ ಮಹೋತ್ಸವ ಕಾರ್ಯಕ್ರಮಗಳು ಇನ್ನು ಆರಂಭವಾಗಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯದ ಮಂಜೂರಾದ ಹುದ್ದೆಗಳ ಪೈಕಿ ಅರ್ಧಕ್ಕೂ ಹೆಚ್ಚು ಖಾಲಿ ಇವೆ. ನೇಮಕಾತಿಗೆ ಅನುಮೋದನೆ ದೊರೆತಿಲ್ಲ. ವಿಶ್ವವಿದ್ಯಾಲಯವು ಆರ್ಥಿಕ ಸಂಕಷ್ಟ ಎದುರಿಸುತ್ತಿದೆ.

‘ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಅನುಮತಿ ಕೋರಿ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ’ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

‘ಹೊಸ ಕುಲಪತಿ ನೇಮಕಾತಿಗೆ ಸರ್ಕಾರವು ಶೀಘ್ರವೇ ಶೋಧನಾ ಸಮಿತಿ ರಚಿಸಬೇಕು. ವಿಶ್ವವಿದ್ಯಾಲಯವನ್ನು ಬೆಳೆಸುವ ಮತ್ತು ಕೀರ್ತಿಯನ್ನು ಹೆಚ್ಚಿಸುವಂಥ ವ್ಯಕ್ತಿಯನ್ನು ಕುಲಪತಿಯಾಗಿ ನೇಮಕ ಮಾಡಲು ಕ್ರಮ ವಹಿಸಬೇಕು’ ಎಂದು ಕುಲಪತಿ ಹುದ್ದೆಯ ಆಕಾಂಕ್ಷಿಯೊಬ್ಬರು ತಿಳಿಸಿದರು.

‘ಶೋಧನಾ ಸಮಿತಿ ರಚನೆಗೆ ಕ್ರಮ’

‘ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ವಿಶ್ವವಿದ್ಯಾಲಯ, ರಾಜ್ಯಪಾಲರಿಂದ ನಾಮನಿರ್ದೇಶನ ಸದಸ್ಯರ ಪ್ರಸ್ತಾವ ಬಂದ ತಕ್ಷಣ ಸರ್ಕಾರದ ನಾಮನಿರ್ದೇಶನ ಸದಸ್ಯರನ್ನು ನೇಮಿಸಿ ಶೋಧನಾ ಸಮಿತಿಗಳನ್ನು ರಚಿಸಿ ಮುಖ್ಯಮಂತ್ರಿಯವರ ಅನುಮೋದನೆಗೆ ಕಳುಹಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ತಿಳಿಸಿದರು.

‘ಶೋಧನಾ ಸಮಿತಿ ರಚನೆ ಬಳಿಕ ಅರ್ಜಿ ಆಹ್ವಾನಿಸಲಾಗುವುದು. ಮೂರೂ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕಕ್ಕೆ ಕ್ರಮ ವಹಿಸಲಾಗುವುದು’ ಎಂದರು.

ಡಾ.ಎಂ.ಸಿ. ಸುಧಾಕರ

ಶೋಧನಾ ಸಮಿತಿಗೆ ಒಬ್ಬರು ನಾಮನಿರ್ದೇಶನ ಸದಸ್ಯರ ಹೆಸರು ಕಳಿಸಲಾಗಿದೆ. ಸರ್ಕಾರ ಸೂಚಿಸಿದ ಬಳಿಕ ನೇಮಕಾತಿಗೆ ಅಧಿಸೂಚನೆ ಪ್ರಕಟಿಸಲಾಗುವುದು

ಎ.ಚನ್ನಪ್ಪ, ಕುಲಸಚಿವ, ಕರ್ನಾಟಕ ವಿಶ್ವವಿದ್ಯಾಲಯ

ಪೊಲೀಸ್ ಠಾಣೆಯಲ್ಲಿ ರೌಡಿಗಳಿಗೆ ಸನ್ಮಾನ!

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ಟೌನ್ ಪೊಲೀಸ್ ಠಾಣೆಯಲ್ಲಿ ಕಳೆದ ತಿಂಗಳು ಆಯುಧ ಪೂಜೆ ಮತ್ತು ವಿಜಯದಶಮಿ ಪ್ರಯುಕ್ತ ಹಮ್ಮಿಕೊಂಡಿದ್ದ ಪೂಜೆಯಲ್ಲಿ ರೌಡಿಗಳಾದ ನಗರಸಭೆ ಸದಸ್ಯ ಅಜ್ಮತ್ ಉಲ್ಲಾ ಮತ್ತು ಅಮ್ಜದ್‌ಗೆ ಠಾಣೆ ಸಬ್ ಇನ್‌ಸ್ಪೆಕ್ಟರ್ ಆಕಾಶ್, ಸನ್ಮಾನ ಮಾಡಿದ ಫೋಟೊ ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುತ್ತಿದೆ.

ಘಟನೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ವರದಿ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ರಾಮನಗರ ಡಿವೈಎಸ್‌ಪಿ ದಿನಕರ ಶೆಟ್ಟಿ ಅವರಿಗೆ ಸೂಚಿಸಿದ್ದಾರೆ.

ಸ್ವಾಭಿಮಾನಿ ದಲಿತ ಸಂಘಟನೆಗಳ ಒಕ್ಕೂಟವು ಘಟನೆ ಕುರಿತು ಗೃಹ ಸಚಿವರು ಹಾಗೂ ರಾಜ್ಯಪಾಲರಿಗೆ ದೂರು ಕೊಟ್ಟಿತ್ತು. ಅದರ ಬೆನ್ನಲ್ಲೇ ವರದಿ ಸಲ್ಲಿಸುವಂತೆ ಎಸ್‌ಪಿ ಸೂಚನೆ ನೀಡಿದ್ದಾರೆ.

ವರದಿ ಬಳಿಕ ಕ್ರಮ: ‘ಪೂಜಾ ಕಾರ್ಯಕ್ರಮದಲ್ಲಿ ರೌಡಿಗಳನ್ನು ಠಾಣೆಗೆ ಕರೆಯಿಸಿ ಸನ್ಮಾನ ಮಾಡಿರುವ ಘಟನೆ ಕುರಿತು ವಿಚಾರಿಸಿ ವರದಿ ನೀಡುವಂತೆ ಡಿವೈಎಸ್‌ಪಿ ಅವರಿಗೆ ಸೂಚಿಸಿರುವೆ. ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳ ಲಾಗುವುದು’ ಎಂದು ಎಸ್‌ಪಿ ಕಾರ್ತಿಕ್ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ರೌಡಿಸಂ ಸೇರಿದಂತೆ ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ನಿರತರಾಗಿರುವವರನ್ನು ಮಟ್ಟಹಾಕಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಿದ್ದ ಪೊಲೀಸರೇ ರೌಡಿಗಳನ್ನು ಠಾಣೆಗೆ ಕರೆದು ಸನ್ಮಾನಿಸಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆ. ಘಟನೆಗೆ ಕಾರಣರಾಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಸ್ವಾಭಿಮಾನಿ ದಲಿತ ಸಂಘಟನೆಗಳ ಒಕ್ಕೂಟದ ಕೊತ್ತಿಪುರ ಗೋವಿಂದರಾಜು ಆಗ್ರಹಿಸಿದ್ದಾರೆ.

ರಾಮನಗರ ಟೌನ್ ಪೊಲೀಸ್ ಠಾಣೆಯಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರೌಡಿ ಶೀಟರ್‌ಗಳಾದ ಅಜ್ಮತ್ ಉಲ್ಲಾ ಮತ್ತು ಅಮ್ಜದ್ (ಎಡದಿಂದ 2ನೇ ಮತ್ತು 5ನೇಯವರು)

ಷರತ್ತು ಉಲ್ಲಂಘಿಸಿದರೆ ₹ 25 ಸಾವಿರ ದಂಡ, ಒಂದು ವರ್ಷ ಸಜೆ; ದುರಂತ ತಪ್ಪಿಸಲು ಕ್ರಮ

ಕೊಳವೆಬಾವಿ: ಬರಲಿದೆ ಕಠಿಣ ಕಾನೂನು

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೊಳವೆಬಾವಿಗೆ ಕಂದಮ್ಮಗಳು ಬಿದ್ದು ಸಂಭವಿಸುವ ದುರಂತಗಳನ್ನು ತಡೆಯಲು ಮುಂದಾಗಿರುವ ರಾಜ್ಯ ಸರ್ಕಾರ, ಕೊಳವೆಬಾವಿ ಕೊರೆಯುವ ಜಮೀನಿನ ಮಾಲೀಕರು, ಅನುಷ್ಠಾನಗೊಳಿಸುವ ಸಂಸ್ಥೆಗಳು ಮತ್ತು ಕೊರೆಯುವ ಏಜೆನ್ಸಿಗಳು ಷರತ್ತುಗಳನ್ನು ಉಲ್ಲಂಘಿಸಿದರೆ ₹25 ಸಾವಿರವರೆಗೆ ದಂಡ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ತರಲು ನಿರ್ಧರಿಸಿದೆ.

ಈ ಉದ್ದೇಶದಿಂದ, ಬೆಳಗಾವಿಯಲ್ಲಿ ಡಿ.9ರಿಂದ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ‘ಕರ್ನಾಟಕ ಅಂತರ್ಜಲ (ನಿಯಂತ್ರಣ, ಅಭಿವೃದ್ಧಿ ಮತ್ತು ನಿರ್ವಹಣೆ) ಕಾಯ್ದೆ 2011’ಕ್ಕೆ ತಿದ್ದುಪಡಿಗೆ ಮಸೂದೆ ಮಂಡಿಸಲು ಸರ್ಕಾರ ತೀರ್ಮಾನಿಸಿದೆ.

ಕೊಳವೆಬಾವಿ ದುರಂತ ಮರುಕಳಿಸಲು ಕಾರಣವಾದ ಏಜೆನ್ಸಿಯ ಕೊರೆಯುವ ಉಪಕರಣಗಳು ಮತ್ತು ಇತರ ಯಂತ್ರೋಪಕರಣಗಳನ್ನು ವಶಪಡಿಸಿಕೊಳ್ಳಲು ಕೂಡಾ ಈ ತಿದ್ದುಪಡಿ ಮೂಲಕ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಕಳೆದ ಎರಡು ದಶಕಗಳಲ್ಲಿ ಎಂಟು ಕೊಳವೆಬಾವಿ ದುರಂತಗಳು ಸಂಭವಿಸಿವೆ. ಈ ಪೈಕಿ, ಐದು ಪ್ರಕರಣಗಳು ರಾಯಚೂರು, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ನಡೆದಿದೆ. ಎರಡು ಪ್ರಕರಣಗಳಲ್ಲಿ ಮಾತ್ರ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿತ್ತು.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಲಚ್ಯಾಣ ಗ್ರಾಮದಲ್ಲಿ ಇದೇ ಏಪ್ರಿಲ್ 3ರಂದು ತೆರೆದ ಕೊಳವೆಬಾವಿಗೆ ತಲೆಕೆಳಗಾಗಿ ಬಿದ್ದು, ಜೀವನ್ಮರಣ ಹೋರಾಟ ನಡೆಸಿದ್ದ 14 ತಿಂಗಳ ಮಗು ಸಾತ್ವಿಕ್ ಪವಾಡ ಸದೃಶವಾಗಿ ಬದುಕಿ ಬಂದಿದ್ದ. ಈ ಘಟನೆಯಿಂದ ಎಚ್ಚೆತ್ತುಕೊಂಡಿರುವ ಸರ್ಕಾರ, ಇಂತಹ ದುರಂತ ಮರುಕಳಿಸದಂತೆ ಕಟ್ಟೆಚ್ಚರ ವಹಿಸಲು ಗಂಭೀರ ಚಿಂತನೆ ನಡೆಸಿತ್ತು.

ಕಾಯ್ದೆಗೆ ತಿದ್ದುಪಡಿ ಯಾದರೆ, ಜಮೀನು ಮಾಲೀಕರು ಅಥವಾ ಅನುಷ್ಠಾನ ಸಂಸ್ಥೆಯು ಅಧಿಸೂಚಿತ ಪ್ರದೇಶವನ್ನು ಹೊರತುಪಡಿಸಿ ಇತರ ಪ್ರದೇಶದಲ್ಲಿ ಕೊಳವೆಬಾವಿ ಕೊರೆಯುವುದಕ್ಕಿಂತ ಕನಿಷ್ಠ 15 ದಿನ ಮುಂಚಿತವಾಗಿ ಸ್ಥಳೀಯ ಪ್ರಾಧಿಕಾರ ಅಥವಾ ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿಗೆ ಲಿಖಿತವಾಗಿ ತಿಳಿಸಬೇಕು. ಯಾವುದೇ ಅನಾಹುತ ಸಂಭವಿಸಬಾರದೆಂಬ ಕಾರಣಕ್ಕೆ, ಕೊಳವೆಬಾವಿ ಕೊರೆದ 24 ಗಂಟೆಯ ಒಳಗೆ ಜಮೀನಿನ ಮಾಲೀಕರು, ಕೊರೆದ ಏಜೆನ್ಸಿ ಅಥವಾ ಅನುಷ್ಠಾನ ಸಂಸ್ಥೆಯು ಬೋಲ್ಟ್‌ಗಳು ಮತ್ತು ನಟ್‌ಗಳ ಸ್ಟೀಲ್ ಕ್ಯಾಪ್‌ನಿಂದ ಅಥವಾ ಥ್ರೆಡ್ ಕ್ಯಾಪ್‌ನಿಂದ ಆ ಕೊಳವೆಬಾವಿಯನ್ನು ಸರಿಯಾಗಿ ಮುಚ್ಚಬೇಕು.

ವಿಫಲವಾದ ಅಥವಾ ಕೈಬಿಡಲಾದ ಅಥವಾ ಅಪೂರ್ಣ ಕೊಳವೆಬಾವಿ ಅಥವಾ ಕೊಳವೆ ಬಾವಿಯ ಗುಂಡಿ ಮತ್ತು ಕುಸಿತವನ್ನು ತಪ್ಪಿಸಲು, ಅದನ್ನು ಕಲ್ಲುಗಳು ಮತ್ತು ಕೆಸರಿನಿಂದ ತುಂಬಿಸಬೇಕು. ಅಲ್ಲದೆ, ಸುತ್ತ ನೆಲಮಟ್ಟದಿಂದ ಎರಡು ಅಡಿ ಎತ್ತರದಲ್ಲಿ ಗುಡ್ಡ ನಿರ್ಮಿಸಬೇಕು. ಬಳಿಕ ಮುಳ್ಳುತಂತಿ ಅಥವಾ ಮುಳ್ಳಿನ ಗಿಡಗಳಿಂದ ಬೇಲಿ ಹಾಕಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಸಂಬಂಧಪಟ್ಟ ಪ್ರಾಧಿಕಾರವು ತಪಾಸಣೆ ನಡೆಸಿ, ಕೊಳವೆಬಾವಿ ಸರಿಯಾಗಿ ಮುಚ್ಚಿರುವ ಬಗ್ಗೆ ದೃಢೀಕರಿಸುವ ಪ್ರಮಾಣಪತ್ರ ನೀಡಬೇಕು.

ಕೊಳವೆಬಾವಿಯನ್ನು ಮುಚ್ಚಿರುವ ಕುರಿತು ಕೊರೆಯುವ ಏಜೆನ್ಸಿ ಮತ್ತು ಜಮೀನು ಮಾಲೀಕರು ಆಯಾ ನಗರಸಭೆಯ ಆಯುಕ್ತ ಅಥವಾ ನಗರ ಸ್ಥಳೀಯ ಸಂಸ್ಥೆಯ ಮುಖ್ಯ ಅಧಿಕಾರಿಯ ಅಡಿಯಲ್ಲಿ ಕೆಲಸ ಮಾಡುವ ಕಿರಿಯ ಎಂಜಿನಿಯರ್‌ಗೆ ಗ್ರಾಮ ಪಂಚಾಯಿತಿ ಅಥವಾ ಗ್ರಾಮ ಆಡಳಿತಾಧಿಕಾರಿಗೆ ಜಂಟಿ ಘೋಷಣೆ ಸಲ್ಲಿಸಬೇಕು. ಕೊಳವೆ ಬಾವಿಯನ್ನು ದುರಸ್ತಿ ಮಾಡಲು ಸಬ್ ಮರ್ಸಿಬಲ್ ಪಂಪ್ ತೆಗೆದ ತಕ್ಷಣ ಮಾಲೀಕರು ಅಥವಾ ಸೇವಾ ಏಜೆನ್ಸಿಯು ಸ್ಟೀಲ್ ಕ್ಯಾಪ್ ಮೂಲಕ ಅಥವಾ ಥ್ರೆಡ್ ಕ್ಯಾಪ್‌ನಿಂದ ಸರಿಯಾಗಿ ಮುಚ್ಚಬೇಕು. ವಿಫಲ ಕೊಳವೆ ಬಾವಿಯನ್ನು ಪುನರುಜ್ಜೀವನ ಗೊಳಿಸಲು ಜಮೀನಿನ ಮಾಲೀಕರು ಬಯಸಿದರೂ ಕೂಡಾ ಸುರಕ್ಷಿತವಾಗಿ ಮುಚ್ಚಬೇಕು ಎಂದೂ ತಿದ್ದುಪಡಿ ಮಸೂದೆಯಲ್ಲಿದೆ.

ಕಾಯ್ದೆ ತಿದ್ದುಪಡಿಯಾದರೆ ಏನೇನು ಶಿಕ್ಷೆ?

- ಕೊಳವೆಬಾವಿ ಕೊರೆಯಲು ವಿಧಿಸಿದ ಷರತ್ತುಗಳನ್ನು ಪಾಲಿಸದಿದ್ದರೆ ಜಮೀನಿನ ಮಾಲೀಕರಿಗೆ ಆರು ತಿಂಗಳ ಜೈಲು ಶಿಕ್ಷೆ ಮತ್ತು ₹ 10 ಸಾವಿರ ದಂಡ
- ಕೊರೆಯುವ ಏಜೆನ್ಸಿಯವರು ಷರತ್ತುಗಳನ್ನು ಉಲ್ಲಂಘಿಸಿದರೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ₹ 25 ಸಾವಿರ ದಂಡ
- ಕೊಳವೆಬಾವಿ ಕೊರೆಯುವ ಸ್ಥಳದಲ್ಲಿ ಅನುಷ್ಠಾನ ಸಂಸ್ಥೆ ಅಥವಾ ಮಾಲೀಕರ ಸಂಪೂರ್ಣ ವಿಳಾಸದ ಫಲಕವನ್ನು ಕೊರೆಯುವ ಏಜೆನ್ಸಿಯವರು ಸ್ಥಾಪಿಸದಿದ್ದರೆ 3 ತಿಂಗಳು ಜೈಲು, ₹ 5 ಸಾವಿರ ದಂಡ
- ಕೊಳವೆಬಾವಿ ದುರಂತಕ್ಕೆ ಅಧಿಕಾರಿಗಳು ಕಾರಣರಾದರೆ, ದುಷ್ಕೃತ್ಯವೆಂದು ಪರಿಗಣಿಸಿ ಶಿಸ್ತು ಕ್ರಮ

11 ಮಸೂದೆ ಸಿದ್ಧ

‘ಕರ್ನಾಟಕ ಅಂತರ್ಜಲ (ನಿಯಂತ್ರಣ, ಅಭಿವೃದ್ಧಿ ಮತ್ತು ನಿರ್ವಹಣೆ) ಕಾಯ್ದೆ 2011’ಕ್ಕೆ ತಿದ್ದುಪಡಿ ಸೇರಿದಂತೆ ಒಟ್ಟು 11 ಮಸೂದೆಗಳನ್ನು ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಈ ಪೈಕಿ, ಬಿಬಿಎಂಪಿ (ಎರಡನೇ ತಿದ್ದುಪಡಿ), ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸುಗ್ರೀವಾಜ್ಞೆ ಹೊರಡಿಸಲಾಗಿದೆ. ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇ ಮಸೂದೆ, ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತರಕ್ಷಣೆ (ತಿದ್ದುಪಡಿ) ಮಸೂದೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರವೇ ಕುಲಪತಿಯನ್ನು ನೇಮಿಸುವ ಅಧಿಕಾರಕ್ಕೆ ಸಂಬಂಧಿಸಿದ ಕಾಯ್ದೆ ತಿದ್ದುಪಡಿಗೆ ಮಸೂದೆ, ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ರಚನೆ, ಕರ್ನಾಟಕ ಕಾರ್ಮಿಕ ಅಭಿವೃದ್ಧಿ ನಿಧಿ (ತಿದ್ದುಪಡಿ), ಚಾಣಕ್ಯ, ಅಲಯನ್ಸ್ ಮತ್ತು ಅಜೀಂ ಪ್ರೇಮ್‌ಜಿ ಈ ಮೂರೂ ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗೆ ಸರ್ಕಾರದ ಪ್ರತಿನಿಧಿಯನ್ನು ನೇಮಿಸಲು ಈ ವಿಶ್ವವಿದ್ಯಾಲಯಗಳ ಕಾಯ್ದೆ ತಿದ್ದುಪಡಿಗೆ ಮಸೂದೆ ಮಂಡಿಸಲು ಉದ್ದೇಶಿಸಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಸೇನಾ ನೇಮಕಾತಿ

ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ ಭಾರತೀಯ ಸೇನಾ ನೇಮಕಾತಿ ರ್‍ಯಾಲಿಯ 1,600 ಮೀಟರ್ ಓಟದ ಸ್ಪರ್ಧೆಯಲ್ಲಿ ಗುರಿಯತ್ತ ಮುನ್ನುಗ್ಗಿದ ಅಭ್ಯರ್ಥಿಗಳು ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

‘ಜನಪ್ರತಿನಿಧಿ, ಅಧಿಕಾರಿಗಳ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕಲಿಯಲಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ರಾಜ್ಯದ ಎಲ್ಲ ಸಚಿವರು, ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲಿ ಕಲಿಯುವಂತಾಗಬೇಕು. ಇಲ್ಲದಿದ್ದರೆ ಸರ್ಕಾರಿ ಶಾಲೆಗಳು ಉದ್ಧಾರ ಆಗುವುದಿಲ್ಲ. ಇದಕ್ಕಾಗಿ ರಾಜ್ಯದಾದ್ಯಂತ ಚಳವಳಿ ಆರಂಭಿಸಬೇಕಿದೆ’ ಎಂದು ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಮಂಗಳೂರು ಶಾಖಾ ಮಠದ ರಜತ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ‘ಬಿಜಿಎಸ್ ಕರಾವಳಿ ರತ್ನ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಂಗಳವಾರ ಮಾತನಾಡಿದರು.

‘ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಿದಾಗ ಸಚಿವರಿಗೆ, ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಆ ಶಾಲೆಯ ಅಭಿವೃದ್ಧಿ ಕುರಿತ ಉತ್ತರದಾಯಿತ್ವ ಹೆಚ್ಚುತ್ತದೆ. ಶಾಲೆಯ ಅವಶ್ಯಕತೆಗಳನ್ನು ಈಡೇರಿಸುವ ಬದ್ಧತೆ ಇರುತ್ತದೆ’ ಎಂದರು.

ರಾಜ್ಯದ ವಿವಿಧೆಡೆ ಸಂವಿತ್ ಶಾಲೆ: ‘ಕಡುಬಡತನದಲ್ಲಿದ್ದು ಶಿಕ್ಷಣ ಮುಂದುವರಿಸಲು ಸಾಧ್ಯವಿಲ್ಲದ ಪ್ರತಿಭಾನ್ವಿತ ಮಕ್ಕಳಿಗೆ ಅಂತರ ರಾಷ್ಟ್ರೀಯ ಗುಣಮಟ್ಟದ ಉತ್ಕೃಷ್ಟ ಶಿಕ್ಷಣ ವನ್ನು ಉಚಿತವಾಗಿ ಒದಗಿಸಲು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ವಿಜ್ಞಾತಂ ಇನ್‌ಸ್ಟಿಟ್ಯೂಟ್ ಫಾರ್ ಟ್ಯಾಲೆಂಟೆಡ್ (ಸಂವಿತ್) ಶಾಲೆಗಳನ್ನು ಆರಂಭಿಸಿದ್ದು, ಇದನ್ನು ರಾಜ್ಯದಾದ್ಯಂತ ವಿಸ್ತರಿಸಲಿದ್ದೇವೆ. ಆರನೇ ತರಗತಿಯಿಂದ ಉನ್ನತ ಶಿಕ್ಷಣದವರೆಗೆ ಆ ವಿದ್ಯಾರ್ಥಿಗಳ ಕಲಿಕಾ ವೆಚ್ಚವನ್ನು ಸಂಸ್ಥಾನವೇ ಭರಿಸಲಿದೆ. ಆಧುನಿಕ ಶಿಕ್ಷಣವನ್ನು ಒದಗಿಸುವುದರ ಜೊತೆಗೆ ಆಧ್ಯಾತ್ಮಿಕ ತಿಳಿವಳಿಕೆ ಮೂಡಿಸಿ ಪರಿಪೂರ್ಣ ಜ್ಞಾನವನ್ನು ನೀಡುವುದು ಇದರ ಉದ್ದೇಶ. ಮಂಗಳೂರಿನಲ್ಲೂ ಒಂದೆರಡು ವರ್ಷಗಳಲ್ಲಿ ಸಂವಿತ್ ಶಾಲೆ ಆರಂಭಿಸಲಿದ್ದೇವೆ’ ಎಂದು ಸ್ವಾಮೀಜಿ ತಿಳಿಸಿದರು.



ನಿರ್ಮಲಾನಂದನಾಥ ಸ್ವಾಮೀಜಿ

ಇದಕ್ಕೂ ಮುನ್ನ ಬಿಜಿಎಸ್ ಕರಾವಳಿ ರತ್ನ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಜಾನಪದ ವಿದ್ವಾಂಸ ಪ್ರೊ.ಕೆ.ಚಿನ್ನಪ್ಪ ಗೌಡ, ‘ರಾಜ್ಯದಲ್ಲಿ ಕನ್ನಡ ಉಳಿಯಬೇಕಾದರೆ ಸರ್ಕಾರಿ ಶಾಲೆಗಳನ್ನು ಉಳಿಸುವ ಅಗತ್ಯವಿದೆ’ ಎಂದರು. ವಿವಿಧ ಕ್ಷೇತ್ರಗಳ 24 ಮಂದಿಗೆ ‘ಬಿಜಿಎಸ್ ಕರಾವಳಿ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಿಬಿಐಗೆ ಮುಡಾ ತನಿಖೆ ಕೋರಿಕೆ: ಡಿ.10ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು’ ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್, ಡಿಸೆಂಬರ್ 10ಕ್ಕೆ ಮುಂದೂಡಿದೆ.

ಈ ಸಂಬಂಧ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಹಾಗೂ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಮಂಗಳವಾರ ವಿಚಾರಣೆಗೆ ನಿಗದಿಯಾಗಿತ್ತು.

ವಿವಾದಿತ ಜಮೀನಿನ ಮೂಲ ಮಾಲೀಕ ಜೆ.ದೇವರಾಜು ಪರ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದ ಸುಪ್ರೀಂ ಕೋರ್ಟ್ ಹಿರಿಯ ವಕೀಲ ದುಷ್ಯಂತ ದವೆ ಅವರು, ‘ಮುಡಾ ಪ್ರಕರಣದ ಪೊಲೀಸ್ ತನಿಖೆಗೆ ಅನುಮತಿಸಿರುವ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ದೇವರಾಜು ಅವರು ಇದೇ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಅದು ಡಿಸೆಂಬರ್ 5ಕ್ಕೆ ವಿಚಾರಣೆಗೆ ಬರಲಿದೆ. ಆದ್ದರಿಂದ, ಈ ಅರ್ಜಿ ವಿಚಾರಣೆಯನ್ನು ಡಿಸೆಂಬರ್ 5ರ ನಂತರ ವಿಚಾರಣೆಗೆ ನಿಗದಿಪಡಿಸಬೇಕು’ ಎಂದು ಕೋರಿದರು.

ಸ್ನೇಹಮಯಿ ಕೃಷ್ಣ ಪರ ಹಾಜರಾಗಿದ್ದ ಹಿರಿಯ ವಕೀಲ ಕೆ.ಜಿ.ರಾಘವನ್, ‘ವಿಚಾರಣೆ ಮುಂದೂಡುವುದಕ್ಕೂ ಮುನ್ನ ಪ್ರಕರಣದ ಕುರಿತಾದ ತನಿಖಾ ದಾಖಲೆಗಳನ್ನು ಪರಿಶೀಲಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ದುಶ್ಯಂತ್ ದವೆ, ‘ಈ ಹಂತದಲ್ಲಿ ತನಿಖಾ ದಾಖಲೆಗಳನ್ನು ಪರಿಶೀಲಿಸುವುದು ಅನ್ಯಾಯದ ಕ್ರಮವಾಗಲಿದೆ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, ‘ಇಂದು ಅರ್ಜಿ ವಿಚಾರಣೆ ನಡೆಸುತ್ತಿಲ್ಲ. ಹೀಗಾಗಿ, ದಾಖಲೆ ಪರಿಶೀಲಿಸುವ ಅಗತ್ಯವಿಲ್ಲ’ ಎಂಬ ಅಭಿಪ್ರಾಯದೊಂದಿಗೆ ವಿಚಾರಣೆಯನ್ನು ಡಿಸೆಂಬರ್ 10ಕ್ಕೆ ಮುಂದೂಡಿತು.

ಕಾರ್ಮಿಕರ ಬೋಗಸ್ ಕಾರ್ಡ್: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ‘ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಿಕೊಂಡಿರುವ ಬೋಗಸ್ ಸದಸ್ಯರನ್ನು ಪತ್ತೆ ಹಚ್ಚಲು ತನಿಖೆ ನಡೆಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ, ‘ಕರ್ನಾಟಕ ರಾಜ್ಯ ನಿರ್ಮಾಣ ಕಾರ್ಮಿಕರ ಕೇಂದ್ರ ಒಕ್ಕೂಟ’ ಹಾಗೂ ‘ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ’ದ ಪ್ರಧಾನ ಕಾರ್ಯರ್ಶಿಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕೆ.ಬಿ.ನಾರಾಯಣ ಸ್ವಾಮಿ ಅವರ ವಾದ ಆಲಿಸಿದ ನ್ಯಾಯಪೀಠ, ‘ಮಂಡಳಿಯಲ್ಲಿ ನಿಧಿ ಹೇಗೆ ಸಂಗ್ರಹವಾಗುತ್ತದೆ. ಕಾರ್ಡ್ ಯಾರಿಗೆ ಕೊಡುತ್ತಾರೆ? ನಿಧಿಯ ಹಣವನ್ನು ಕಾರ್ಡ್ ಹೊಂದಿರುವ ಸದಸ್ಯರಿಗೆ ಯಾವ ವಿಧದಲ್ಲಿ ಖರ್ಚು ಮಾಡಲಾಗುತ್ತದೆ? ಎಂಬೆಲ್ಲಾ ವಿವರಣೆಗಳ ಅಗತ್ಯ ಕಂಡು ಬರುತ್ತಿದೆ. ಆದ್ದರಿಂದ, ರಾಜ್ಯ ಸರ್ಕಾರ ಹಾಗೂ ಸಂಬಂಧಿಸಿದ ಇಲಾಖೆ ಈ ಕುರಿತಂತೆ ವಿವರಣೆ ಒದಗಿಸಬೇಕು’ ಎಂದು ಪ್ರತಿವಾದಿ ಸರ್ಕಾರಕ್ಕೆ ನಿರ್ದೇಶಿಸಿತು.

‘ಅಂತೆಯೇ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದರೆ ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಿ’ ಎಂದು ಕಾರ್ಮಿಕ ಇಲಾಖೆ ಹಾಗೂ ‘ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ’ಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 2019-20ರಲ್ಲಿ 17.57 ಲಕ್ಷ ಸದಸ್ಯರು ನೋಂದಾಯಿಸಿಕೊಂಡಿದ್ದರು. ಕೋವಿಡ್ ಅವಧಿಯಲ್ಲಿ ಈ ಸದಸ್ಯರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಯಿತು. 2020ರಿಂದ 2023ರವರೆಗೆ ಈ ಸಂಖ್ಯೆ 47 ಲಕ್ಷಕ್ಕೆ ಏರಿಕೆಯಾಯಿತು. ಈ ಕುರಿತು ಅನುಮಾನ ಮೂಡಿದ್ದರಿಂದಾಗಿ ತನಿಖೆ ನಡೆಸಲಾಯಿತು. ತನಿಖೆ ವೇಳೆ ಹಾವೇರಿ ಜಿಲ್ಲೆಯೊಂದರಲ್ಲೇ 2.94 ಲಕ್ಷ ಸದಸ್ಯರಲ್ಲಿ 2.23 ಲಕ್ಷ ಬೋಗಸ್ ಸದಸ್ಯರಿದ್ದುದು ಕಂಡು ಬಂದಿದೆ. ವಾಸ್ತವವಾಗಿ ಹಾವೇರಿ ಜಿಲ್ಲೆಯಲ್ಲಿ ಅರ್ಹ ಸದಸ್ಯರು ಇದ್ದುದೇ 50 ಸಾವಿರ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಒಳ ಮೀಸಲಾತಿ ರೇವಂತ್, ಮುನಿಯಪ್ಪ ಚರ್ಚೆ

ನವದೆಹಲಿ: ಆಹಾರ, ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರನ್ನು ಭೇಟಿಯಾಗಿ ಒಳಮೀಸಲಾತಿ ಜಾರಿ ಕುರಿತು ಚರ್ಚಿಸಿದರು.

ತೆಲಂಗಾಣ ಸರ್ಕಾರವು 60 ದಿನಗಳ ಒಳಗಾಗಿ ಒಳಮೀಸಲಾತಿಯ ಸಂಪೂರ್ಣ ವರದಿ ಪಡೆದು ಜಾರಿಗೊಳಿಸಲು ತೀರ್ಮಾನಿಸಿದೆ. ಈ ಕುರಿತು ರೇವಂತ್ ರೆಡ್ಡಿ ಜತೆಗೆ ಮುನಿಯಪ್ಪ ಚರ್ಚಿಸಿದರು. ಪರಿಶಿಷ್ಟ ಜಾತಿಯಲ್ಲಿ 101 ಉಪ ಜಾತಿಗಳಿದ್ದು, ಸಮಾನವಾಗಿ ಮೀಸಲಾತಿ ಹಂಚುವುದೇ ಮೂಲ ಉದ್ದೇಶ. ಕರ್ನಾಟಕ ಸರ್ಕಾರವು ನಿವೃತ್ತ ನ್ಯಾಯ ಮೂರ್ತಿ ನಾಗಮೋಹನದಾಸ್ ನೇತೃತ್ವದ ಆಯೋಗ ರಚಿಸಿದ್ದು 3 ತಿಂಗಳಲ್ಲಿ ವರದಿ ಪಡೆದು ಒಳ ಮೀಸಲಾತಿ ಜಾರಿಗೊಳಿಸಲಿದೆ ಎಂದು ಮುನಿಯಪ್ಪ ತಿಳಿಸಿದರು.

ಬಾಂಗ್ಲಾ ರಾಷ್ಟ್ರಧ್ವಜಕ್ಕೆ ಅಗೌರವ: ಹಿಂದೂ ಮುಖಂಡ ಜೈಲಿಗೆ

ಒಂದನೇ ಪುಟದಿಂದ...

ವಿಚಾರಣೆ ಆರಂಭಗೊಳ್ಳುತ್ತಿದ್ದಂತೆಯೇ ದಾಸ್ ಪರ ಹಾಜರಿದ್ದ ವಕೀಲ, ‘ದಾಸ್ ಅವರಿಗೆ ಬಂಧನ ವಾರಂಟ್ ಜಾರಿ ಮಾಡುತ್ತೀರಿ ಎಂದಾದರೆ, ನಮಗೆಲ್ಲರಿಗೂ ವಾರಂಟ್ ಜಾರಿ ಮಾಡಿ’ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶ, ‘ದಾಸ್ ಕುರಿತು ನಿಮಗಿರುವ ಭಾವನೆಗಳನ್ನು ಗೌರವಿಸುತ್ತೇನೆ’ ಎಂದರು.

ವಿಚಾರಣೆ ಮುಂದುವರಿಸಿದ ನ್ಯಾಯಾಲಯವು, ದಾಸ್ ಅವರ ಹೇಳಿಕೆ ಪಡೆದುಕೊಂಡಿತು. ವಾದ-ಪ್ರತಿವಾದದ ಬಳಿಕ ನ್ಯಾಯಾಲಯವು ದಾಸ್ ಅವರ ಅರ್ಜಿಯನ್ನು ತಿರಸ್ಕರಿಸಿತು. ಬಳಿಕ, ದಾಸ್ ಅವರನ್ನು ಜೈಲಿಗೆ ಕಳುಹಿಸಲಾಯಿತು. ಜೈಲು ನಿಯಮಗಳಂತೆ ದಾಸ್ ಅವರಿಗೆ ತಮ್ಮ ಧಾರ್ಮಿಕ ಆಚರಣೆಗಳನ್ನು ಅನುಸರಿಸುವ ಅವಕಾಶ ನೀಡಬೇಕು ಎಂದು ಜೈಲು ಅಧಿಕಾರಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡಿತು.

ಛಟಗಾವ್‌ನ ನೂತನ ಮಾರುಕಟ್ಟೆಯೊಂದರಲ್ಲಿ ಹಿಂದೂ ಸಮುದಾಯದವರು ಅ.25ರಂದು ರ್‍ಯಾಲಿ ನಡೆಸಿದ್ದರು. ಈ ವೇಳೆ ಪ್ರತಿಭಟನಕಾರರು ಬಾಂಗ್ಲಾದೇಶದ ರಾಷ್ಟ್ರಧ್ವಜಕ್ಕೆ ಅಗೌರವ ತೋರಿಸಿದ್ದರು ಎಂದು ಆರೋಪಿಸಿ 19 ಜನರ ಮೇಲೆ ಅ.30ರಂದು ಪ್ರಕರಣ ದಾಖಲಾಗಿತ್ತು.

ಘಟನೆ ಕುರಿತು ಬಾಂಗ್ಲಾದೇಶದ ನ್ಯಾಷನಲ್ ಪಕ್ಷದ (ಬಿಎನ್‌ಪಿ) ಮುಖಂಡರೊಬ್ಬರು ದೂರು ನೀಡಿದ್ದರು.

ಘರ್ಷಣೆ: ವಕೀಲ ಸಾವು

ಢಾಕಾ (ಪಿಟಿಐ): ಭದ್ರತಾ ಸಿಬ್ಬಂದಿ ಮತ್ತು ಹಿಂದೂ ಸಮುದಾಯದವರ ನಡುವೆ ನಡೆದ ಘರ್ಷಣೆಯಲ್ಲಿ ವಕೀಲರೊಬ್ಬರು ಮೃತಪಟ್ಟಿದ್ದಾರೆ.

ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್, 30 ವರ್ಷ ವಯಸ್ಸಿನ ಸೈಫುಲ್ ಇಸ್ಲಾಂ ಘರ್ಷಣೆಯಲ್ಲಿ ತೀವ್ರವಾಗಿ ಗಾಯಗೊಂಡರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂದೂ ಸಂಘಟನೆಯ ಮುಖಂಡ, ಬಂಧಿತ ಚಿನ್ಮಯಿ ಕೃಷ್ಣದಾಸ್ ಅವರಿಗೆ ಜಾಮೀನು ನಿರಾಕರಿಸಿದ ಸುದ್ದಿ ತಿಳಿದಂತೆ ಅವರ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದರು. ಅವರನ್ನು ಜೈಲಿಗೆ ಕರೆದೊಯ್ಯುತ್ತಿದ್ದ ವಾಹನಕ್ಕೆ ಅಡ್ಡಿ ಪಡಿಸಿದರು. ತಕ್ಷಣವೇ ಚಿನ್ಮಯಿ ಅವರ ಬಿಡುಗಡೆಗೆ ಆಗ್ರಹಿಸಿ ಘೋಷಣೆ ಕೂಗಿದರು ಎಂದು ಸ್ಥಳೀಯ ದೈನಿಕ ಡೈಲಿ ಸ್ಟಾರ್ ವರದಿ ಮಾಡಿದೆ.\

ಜನರನ್ನು ಚದುರಿಸಲು ಬಾಂಗ್ಲಾದೇಶದ ಗಡಿ ಭದ್ರತಾ ಪಡೆಯ ಸಿಬ್ಬಂದಿ ಲಾಠಿ ಬೀಸಿದರು. ಬೆಳಿಗ್ಗೆ 11.45ಕ್ಕೆ ನ್ಯಾಯಾಲಯದ ಆದೇಶ ಹೊರಬಂತು. ಮಧ್ಯಾಹ್ನ 3ರ ಸುಮಾರಿಗೆ ದಾಸ್ ಅವರನ್ನು ಜೈಲಿಗೆ ಕರೆದೊಯ್ಯಲಾಯಿತು. ಶಾಂತಿ ಕಾಪಾಡುವಂತೆ ವಾಹನದ ಒಳಗಿಂದಲೇ ದಾಸ್ ಅವರು ಪ್ರತಿಭಟನಕಾರರಲ್ಲಿ ಮನವಿ ಮಾಡಿದರು.

ಮಧ್ಯಾಹ್ನ 3ರ ಸುಮಾರಿಗೆ ದಾಸ್ ಅವರನ್ನು ಜೈಲಿಗೆ ಕರೆದೊಯ್ಯಲಾಯಿತು. ಶಾಂತಿ ಕಾಪಾಡುವಂತೆ ವಾಹನದ ಒಳಗಿಂದಲೇ ದಾಸ್ ಅವರು ಪ್ರತಿಭಟನಕಾರರಲ್ಲಿ ಮನವಿ ಮಾಡಿದರು. ಪ್ರತಿಭಟನಕಾರರು ‘ಜೈ ಶ್ರೀರಾಮ್’, ‘ನಮಗೆ ಜೈಲುವಾಸ ಬೇಡ, ನಮಗೆ ನಮ್ಮ ಹಕ್ಕುಗಳು ಬೇಕು’ ಎಂದು ಘೋಷಣೆಗಳನ್ನು ಕೂಗಿದರು. ಜೊತೆಗೆ, ಶಂಖಗಳನ್ನು ಎಸೆದರು.

ನಾವು ಈ ದೇಶದ ಅಥವಾ ಸರ್ಕಾರ ವಿರುದ್ಧ ಇಲ್ಲ. ನಾವು ಸನಾತನಿಗಳು, ದೇಶದ ಭಾಗವೇ ಆಗಿದ್ದೇವೆ. ಸೌಹಾರ್ದ ಹಾಳು ಮಾಡಲ್ಲ
ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ, ಹಿಂದೂ ಸಂಘಟನೆ ಮುಖಂಡ

ದೇಶದ ಸಾರ್ವಭೌಮತ್ವ ಹಾಗೂ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯತ್ನವನ್ನು ಯಾರೇ ನಡೆಸಿದರು ಅವರನ್ನು ಬಿಟ್ಟುಬಿಡಲು ಸಾಧ್ಯವಿಲ್ಲ
ಆಸಿಫ್ ಮಹಮ್ಮದ್, ಸರ್ಕಾರದ ವ್ಯವಹಾರಗಳ ಸಲಹೆಗಾರ

ಹೆಚ್ಚಿದ ದಾಳಿ ಭಾರತ ಕಳವಳ

ಒಂದನೇ ಪುಟದಿಂದ...

ಅಲ್ಪಸಂಖ್ಯಾತರ ಮನೆಗಳು, ವ್ಯಾಪಾರಿ ಕೇಂದ್ರಗಳನ್ನು ಲೂಟಿ ಮಾಡಿದ, ಬೆಂಕಿ ಹಚ್ಚಿದ ಹಾಗೂ ದೇವಾಲಯ, ಪ್ರಾರ್ಥನಾ ಮಂದಿರಗಳನ್ನು ಧ್ವಂಸಗೊಳಿಸಿದ ಮತ್ತು ಅಪವಿತ್ರಗೊಳಿಸಿದ ಹಲವು ಘಟನೆಗಳು ಬಾಂಗ್ಲಾದಲ್ಲಿ ನಡೆದಿವೆ ಎಂದು ಎಂಇಎ ಉಲ್ಲೇಖಿಸಿದೆ.

‘ಈ ಕೃತ್ಯಗಳನ್ನು ನಡೆಸಿದ ದುಷ್ಕರ್ಮಿಗಳು ಮುಕ್ತವಾಗಿ ಸಂಚರಿಸುತ್ತಿದ್ದರೂ ಶಾಂತಿಯುತ ಮತ್ತು ನ್ಯಾಯಸಮ್ಮತ ಬೇಡಿಕೆಗಳಿಗಾಗಿ ಧ್ವನಿಯೆತ್ತುವ ಧಾರ್ಮಿಕ ಮುಖಂಡರ ವಿರುದ್ಧ ಆರೋಪಗಳನ್ನು ಹೊರಿಸುವುದು ದುರದೃಷ್ಟಕರ’ ಎಂದು ಅದು ಹೇಳಿದೆ. ದಾಸ್ ಬಂಧನ ವಿರೋಧಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಅಲ್ಪಸಂಖ್ಯಾತರ ಮೇಲೆ ದಾಳಿಗಳು ನಡೆದಿರುವುದು ಸರಿಯಲ್ಲ ಎಂದು ಎಂಇಎ ತಿಳಿಸಿದೆ.

ದಿನಪತ್ರಿಕೆ ವಿತರಕರ ಸೌಲಭ್ಯಕ್ಕೆ ವಯೋಮಿತಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಯ ಫಲಾನುಭವಿಗಳಾದ ದಿನಪತ್ರಿಕೆ ವಿತರಣಾ ಕಾರ್ಮಿಕರ ವಯೋಮಿತಿಯನ್ನು 70 ವರ್ಷಕ್ಕೆ ವಿಸ್ತರಿಸಲಾಗಿದೆ.

ಈ ಬಗ್ಗೆ ಕಾರ್ಮಿಕ ಇಲಾಖೆ ತಿದ್ದುಪಡಿ ಆದೇಶ ಹೊರಡಿಸಿದೆ. ಅಸಂಘಟಿತ ವಲಯದ ವ್ಯಾಪ್ತಿಯಲ್ಲಿ ಬರುವ ದಿನಪತ್ರಿಕೆ ವಿತರಣಾ ಕಾರ್ಮಿಕರಿಗೆ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯಕ್ಕೆ ಕಳೆದ ವರ್ಷ ಯೋಜನೆ ಜಾರಿ ಮಾಡಿದ್ದ ಸರ್ಕಾರ, ಅರ್ಜಿದಾರರು 16ರಿಂದ 59 ವರ್ಷದವರಾಗಿರಬೇಕೆಂದು ಆದೇಶದಲ್ಲಿ ಹೇಳಿತ್ತು. ಇದರಿಂದಾಗಿ ಕೆಲವರು ಈ ಸೌಲಭ್ಯದಿಂದ ವಂಚಿತರಾಗಿದ್ದರು. ಈಗ ಆದೇಶ ತಿದ್ದುಪಡಿ ಮಾಡಿ, ವಯೋಮಿತಿ ವಿಸ್ತರಿಸಲಾಗಿದೆ. ಅಪಘಾತದಿಂದ ಮರಣ ಹೊಂದಿದಲ್ಲಿ ₹ 2 ಲಕ್ಷ, ಅಪಘಾತದಿಂದ ಅಂಗವಿಕಲರಾದಲ್ಲಿ ₹ 2 ಲಕ್ಷದವರೆಗೆ ಯೋಜನೆಯಡಿ ಆರ್ಥಿಕ ನೆರವು ನೀಡಲಾಗುತ್ತದೆ. ಅಪಘಾತ, ಮಾರಣಾಂತಿಕ ಕಾಯಿಲೆ ಅಥವಾ ಗಂಭೀರ ಅನಾರೋಗ್ಯ ಸಮಸ್ಯೆಗೆ ಒಳಗಾದಲ್ಲಿ ₹ 1 ಲಕ್ಷದವರೆಗೆ ಆಸ್ಪತ್ರೆ ವೆಚ್ಚ ಮರುಪಾವತಿಸಲಾಗುತ್ತದೆ.

ಎಲ್ಲ ಪತ್ರಿಕಾ ವಿತರಕರು ಇ-ಶ್ರಮ್ ಪೋರ್ಟಲ್ (eshram.gov.in) ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು. ಯೋಜನೆಯ ಪ್ರಯೋಜನವನ್ನು ಪಡೆಯಲು ನಿಗದಿಪಡಿಸಿದ ಅರ್ಜಿ ನಮೂನೆಯೊಂದಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು ಎಂದು ಇಲಾಖೆ ತಿಳಿಸಿದೆ.

ರಾಜ್ಯಗಳ ಒಲಿಸಲು ಕೇಂದ್ರ ಕಸರತ್ತು

ಒಂದನೇ ಪುಟದಿಂದ...

ಆ ಪ್ರದೇಶದ ಪರಿಸರ ವ್ಯವಸ್ಥೆ, ಅಲ್ಲಿನ ಜನರ ಹಕ್ಕುಗಳು, ಸವಲತ್ತುಗಳು ಮತ್ತು ಅಭಿವೃದ್ಧಿ ಆಕಾಂಕ್ಷೆ ಕುರಿತ ಸಲಹೆಗಳನ್ನು ಸಮಗ್ರ ರೀತಿಯಲ್ಲಿ ಸಮಿತಿ ಪರಿಶೀಲಿಸಲಿದೆ. ಈ ಸಮಿತಿಯು ರಾಜ್ಯಗಳಿಗೆ ಭೇಟಿ ನೀಡಿ ರಾಜ್ಯ ಸರ್ಕಾರದ ಉನ್ನತ ಅಧಿಕಾರಿ ಗಳೊಂದಿಗೆ ಸಮಾಲೋಚನೆ ನಡೆಸಲಿದೆ ಹಾಗೂ ಪಶ್ಚಿಮ ಘಟ್ಟದ ಪ್ರದೇಶದ ಜನರ ಅಹವಾಲುಗಳನ್ನು ಆಲಿಸಲಿದೆ. ಕರಡು ಅಧಿಸೂಚನೆ ಕುರಿತ ರಾಜ್ಯಗಳ ಸಲಹೆ ಹಾಗೂ ಶಿಫಾರಸುಗಳನ್ನು ಸಮಿತಿ ಪರಾಮರ್ಶೆ ನಡೆಸಲಿದೆ. ಬಳಿಕ ಕೇಂದ್ರ ಪರಿಸರ ಸಚಿವಾಲಯಕ್ಕೆ ಶಿಫಾರಸುಗಳನ್ನು ಸಲ್ಲಿಸಲಿದೆ.

ಪ್ರಮುಖ ನಿರ್ಣಯಗಳು

- ನಿವೇಶನ ರಹಿತರು ಒಪ್ಪಿಗೆ ಸೂಚಿಸಿದರೆ ಅವರಿಗೆ ಬೇರೆ ಕಡೆ ನಿವೇಶನ ಒದಗಿಸಿ ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಅರಣ್ಯದ ಅಂಚಿನಲ್ಲಿ ಜಮೀನುಗಳನ್ನು ಗುರುತಿಸಬೇಕು. ನಿವೇಶನ ಇದ್ದರೂ ಮನೆ ಇಲ್ಲದವರಿಗೆ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಮನೆ ಮಂಜೂರಾತಿಗೆ ಕ್ರಮ ಕೈಗೊಳ್ಳಬೇಕು
- ಬುಡಕಟ್ಟು ಜನರಿಗೆ ಹಕ್ಕುಪತ್ರ ವಿತರಣೆಗೆ ಇರುವ ತಾಂತ್ರಿಕ ತೊಡಕುಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಬೇಕು. ಹಕ್ಕು ಪತ್ರ ಹೊಂದಿರುವವರು ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅರ್ಹತೆ ಪಡೆಯುವ ಕುರಿತು ಕ್ರಮ ಕೈಗೊಳ್ಳಬೇಕು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹನೂರು

ಸಂಖ್ಯೆ:ಕೃ.ಉ.ಮಾ.ಸ.(ಹನೂರು)/133/2024–25 ದಿ: 19–11–2024

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಸಮಿತಿಯ ಮುಖ್ಯ ಮಾರುಕಟ್ಟೆ/ಚೆಕ್‌ಪೋಸ್ಟ್‌ಗಳಲ್ಲಿ ಭದ್ರತೆ ಕಾರ್ಯ ನಿರ್ವಹಿಸಲು 2024–25 ನೇ ಸಾಲಿನ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ದರಗಳಿಗನುಗುಣವಾಗಿ ಅನುಭವಿ ಭದ್ರತಾ ಏಜೆನ್ಸಿಗಳಿಂದ 2 ಸಂಖ್ಯೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಎಂಡಿ ಮತ್ತು ವೇಳಾಪಟ್ಟಿ ವಿವರ : ಇ.ಎಂ.ಡಿ ರೂ. 9500–00 ಮತ್ತು ಟೆಂಡರ್ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 09–12–2024 ಸಂಜೆ 4.30 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 11–12–2024 ರ ಬೆಳಿಗ್ಗೆ 11.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 13–12–2024ರ ಬೆಳಿಗ್ಗೆ 11–30 ಗಂಟೆಗೆ. ಯಾವುದೇ ಬದಲಾವಣೆಗಳಿದ್ದರೆ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಹಾಗೂ ಇಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನ್ನು ಸಂಪರ್ಕಿಸಬಹುದು.

ಸಹಿ/– (ಶ್ರೀ ಎನ್. ನಾಗೇಶ್) ಕಾರ್ಯದರ್ಶಿ, ಕೃ.ಉ.ಮಾ.ಸ., ಹನೂರು

ಸಹಿ/– (ಶ್ರೀ ವೈ.ಕೆ. ಗುರುಪ್ರಸಾದ್) ಆಡಳಿತಾದಿಕಾರಿಗಳು ಕೃ.ಉ.ಮಾ.ಸ., ಹನೂರು

ಸಂ:ವಾಸಾಸಂಇ:ಚಾನಗರ:434:2024–25

ಪ್ರಸಾರ ಭಾರತೀ ಪ್ರಸಾರ ಭಾರತಿ
(भारत का लोक सेवा प्रसारक) (ಭಾರತದ ಸಾರ್ವಜನಿಕ ಸೇವಾ ಪ್ರಸಾರಕರು)
दूरदर्शन केंद्र, बैंगलूरु ದೂರದರ್ಶನ ಕೇಂದ್ರ, ಬೆಂಗಳೂರು – 560006

ದಿನಾಂಕ 12.12.2024 ರಂದು 00.00 ಗಂಟೆಗೆ (ಎಂದರೆ 11.12.2024ರ ಮಧ್ಯರಾತ್ರಿ) ಡಿಡಿ ಚಂದನ ಡೌನ್‌ಲಿಂಕ್ ಪ್ಯಾರಾಮೀಟರ್‌ಗಳು ಬದಲಾಗುತ್ತವೆ. ವಿವರಗಳು ಈ ಕೆಳಗಿನಂತಿರುತ್ತದೆ:

ಸ್ಯಾಟೆಲೈಟ್: ಜಿಎಸ್‌ಎಟಿ–17 (93.5° ಇ) ಡೌನ್‌ಲಿಂಕ್ ಪೋಲರೈಸೇಶನ್: ಹಾರಿಜಾಂಟಲ್
ಡೌನ್‌ಲಿಂಕ್ ಫ್ರಿಕ್ವೆನ್ಸಿ: 3961 ಎಂಎಚ್‌ಜೆಡ್ ರೋಲ್ ಆಫ್ ಫ್ಯಾಕ್ಟರ್: 20%
ಕಂಪ್ರೆಷನ್: ಎಂಪಿಇಜಿ–2, ಡಿವಿಬಿ–ಎಸ್ ಎಫ್‌ಇಸಿ: ¾
ಮಾಡ್ಯುಲೇಶನ್: ಕ್ಯೂಪಿಎಸ್‌ಕೆ ಸಿಂಬಲ್ ರೇಟ್: 2.9 ಎಂಎಸ್‌ಪಿಎಸ್

ದೂರದರ್ಶನ, ಬೆಂಗಳೂರು – 560006

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ..ಹೆಚ್.ರಸ್ತೆ, ಬೆಂಗಳೂರು–560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ–ಮೇಲ್ : ctmc@mybmtc.com

ಸಂಖ್ಯೆ: ಬೆಂಮಸಾಸಂ/ಕೇಕಸಂ/ವಾ1703/3345/24–25 ದಿನಾಂಕ:25.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 23/2024–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಜಾಹಿರಾತು ಪ್ರದರ್ಶನ ನಿರ್ವಹಣೆಗೆ "Displaying Advertisement On full body of 3000 Non A/C buses", ಪರವಾನಗಿ ನೀಡಲು ಆಸಕ್ತ ವ್ಯಕ್ತಿ/ಏಜೆನ್ಸಿಗಳಿಂದ ಗುತ್ತಿಗೆದಾರರ ಆಯ್ಕೆಗಾಗಿ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	28.11.2024 ರಂದು 11:00 ಗಂಟೆಯವರೆಗೆ.	ಸ್ಥಳ: ಮಿನಿ ಮೀಟಿಂಗ್ ಹಾಲ್ 4ನೇ ಮಹಡಿ, ಕೇಂದ್ರ ಕಛೇರಿ
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	03.12.2024 ರಂದು 17:00 ಗಂಟೆಯವರೆಗೆ.	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	04.12.2024 ರಂದು 17:05 ಗಂಟೆಯವರೆಗೆ	
ಆರ್ಥಿಕ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು.	

ಇಎಂಡಿ ಮೊತ್ತ, ವಿಸ್ತೀರ್ಣ, ಇನ್ನಿತರ ಎಲ್ಲ ಮಾಹಿತಿ ಹಾಗೂ ಆಯ್ಕೆ ವಿಧಾನ ಇತ್ಯಾದಿಗಳಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–46010000; 080–68948777; ಅಥವಾ 7760997519, 7760991222 & 7760991026 ಇ–ಮೇಲ್: ctmc@mybmtc.com ಗೆ ಸಂಪರ್ಕಿಸಬಹುದು.

ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ1691/3352/2024–25 ದಿನಾಂಕ:26.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2024–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿವಿಧ ಬಸ್ ನಿಲ್ದಾಣಗಳಲ್ಲಿನ **ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಫ್ಲಾಟ್, ಸಾಮಾನ್ಯ ಮಳಿಗೆಗಳು(ಕಟ್ಟಿದ ಮತ್ತು ತೆರೆದ), ಉಪಹಾರ ಮಳಿಗೆಗಳು ಹಾಗೂ ವಾಣಿಜ್ಯ–ಕಛೇರಿ ಸ್ಥಳಗಳ ನಿರ್ವಹಣೆಗೆ ಪರವಾನಗಿದಾರರ ಆಯ್ಕೆಗಾಗಿ** ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಸಲ್ಲಿಸುವ ಕೊನೆಯ ದಿನಾಂಕ	11.12.2024 ರಂದು 17:00 ಗಂಟೆಯವರೆಗೆ.
ಆರ್ಥಿಕ ಬಿಡ್ ತೆರೆಯುವ ದಿನಾಂಕ	13.12.2024 ರಂದು 11:30 ಗಂಟೆಗೆ.

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ ಹಾಗೂ ವಿಸ್ತೀರ್ಣಗಳ ಹಾಗೂ ಇನ್ನಿತರ ಮಾಹಿತಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–46010000; 23010901; 22371090; 22340060; 22340948 ಅಥವಾ 7760991222 & 7760997519 ಇ–ಮೇಲ್: ctmc@mybmtc.comಗೆ ಸಂಪರ್ಕಿಸಬಹುದು

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ಉದ್ಯೋಗ ವಾಣಿ

Defence Electronics and beyond

भारत इलेक्ट्रॉनिक्स BHARAT ELECTRONICS
தரம், தொழில்நுட்பம், புத்தாக்கம்

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ರಕ್ಷಣಾ ಎಲೆಕ್ಟ್ರಾನಿಕ್ಸ್ ಕಂಪನಿಗೆ ತನ್ನ ಬೆಂಗಳೂರು ಘಟಕಕ್ಕೆ ಈ ಕೆಳಕಂಡ ಅಧಿಕಾರೇತರರುಗಳ ಆವಶ್ಯಕತೆ ಇವೆ:

ಕ್ರ. ಸಂ.	ಹುದ್ದೆ	ವಿದ್ಯಾರ್ಹತೆ	ವೃತ್ತಿ / ವಿಷಯ	ಹುದ್ದೆಗಳ ಸಂಖ್ಯೆ	ಅನುಭವ
೧	ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ.ಎ.ಟಿ.)	ಮಾನ್ಯತೆ ಪಡೆದ ಸಂಸ್ಥೆಯಿಂದ ಕನಿಷ್ಠ ೩ ವರ್ಷಗಳು ಇಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ.	ಎಲೆಕ್ಟ್ರಾನಿಕ್ಸ್	೧೦	ಶೂನ್ಯ
			ಮೆಕ್ಯಾನಿಕಲ್	೧೮	
			ಕಂಪ್ಯೂಟರ್ ಸೈನ್ಸ್	೦೬	
			ಎಲೆಕ್ಟ್ರಿಕಲ್	೦೨	
			ಒಟ್ಟು	೩೬	
೨	ತಂತ್ರಜ್ಞ'ಸಿ'	ಎಸ್.ಎಸ್.ಎಲ್.ಸಿ. + ಐ.ಟಿ.ಐ. + ಒಂದು ವರ್ಷ ಶಿಷ್ಯವೃತ್ತಿ ಅಥವಾ ಎಸ್.ಎಸ್.ಎಲ್.ಸಿ. + ೩ ವರ್ಷಗಳ ರಾಷ್ಟ್ರೀಯ ಶಿಷ್ಯವೃತ್ತಿ ಪ್ರಮಾಣಪತ್ರ ಅಧ್ಯಯನ	ಎಲೆಕ್ಟ್ರಾನಿಕ್ ಮೆಕ್ಯಾನಿಕ್	೧೪	
			ಫಿಟ್ಟರ್	೦೮	
			ಮೆಶಿನಿಸ್ಟ್	೦೮	
			ಎಲೆಕ್ಟ್ರಿಕಲ್	೦೪	
			ಒಟ್ಟು	೩೪	

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವಿವರಣಾತ್ಮಕ ಜಾಹೀರಾತಿಗೆ ದಯವಿಟ್ಟು www.bel-india.in ನಲ್ಲಿ "ಕೆರಿಯರ್ಸ್" ಭಾಗವನ್ನು ವೀಕ್ಷಿಸಿ.

‘ಹರ್ ಏಕ್ ಕಾಮ್ ದೇಶ್ ಕೆ ನಾಮ್’

ಶ್ರೀ ದುರ್ಗಾಂಬಿಕ ಪ.ಜಾತಿ/ಪ.ಪಂಗಡ ವಿದ್ಯಾಸಂಸ್ಥೆ (ರಿ.) ವಿಶ್ವನಾಥನಹಳ್ಳಿ

ಬಿ.ದುರ್ಗ ॥ ಹೋ ॥ ಹೊಳಲ್ಕೆರೆ ॥ ತಾ ॥ ಚಿತ್ರದುರ್ಗ ॥ ಜಿಲ್ಲೆ ॥ ಪಿನ್-577518
ಎಸ್.ಒ.ಆರ್ ನಂ.61 / 92–93

ಬೇಕಾಗಿದ್ದಾರೆ

ಮೇಲ್ಕಂಡ ವಿದ್ಯಾಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಶ್ರೀ ದುರ್ಗಾಂಬಿಕ ಪ್ರೌಢಶಾಲೆ ವಿಶ್ವನಾಥನಹಳ್ಳಿ ಬಿ.ದುರ್ಗ ॥ ಹೋ ॥ ಹೊಳಲ್ಕೆರೆ ॥ ತಾ ॥ ಚಿತ್ರದುರ್ಗ ॥ ಜಿಲ್ಲೆ ॥ ಇಲ್ಲಿ ಖಾಲಿ ಇರುವ ಸಹ ಶಿಕ್ಷಕ (ಆಂಗ್ಲ) ಹುದ್ದೆಗೆ ನೇರನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆಯ ವಿವರ	ವಿದ್ಯಾರ್ಹತೆ
ಸಹಶಿಕ್ಷಕ (ಆಂಗ್ಲ) 01 ಹುದ್ದೆಗೆ ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಇವರ ಆದೇಶ ಸಂಖ್ಯೆ: ಸಿ.8(4) (8) ಶಾ.ಶಿ.ಅ.ಖಾ.ಹು.ಭ ಅನು/ಇ 1353433/01/2023–24 ದಿನಾಂಕ: 07–08–2024ರಂತೆ ಮೀಸಲಾತಿ ಬಿಂದು–01. ಪರಿಶಿಷ್ಟ ಜಾತಿ.	ಅಂಗೀಕೃತ ವಿಶ್ವ ವಿದ್ಯಾಲಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಐಚ್ಛಿಕ ಆಂಗ್ಲ ವಿಷಯದಲ್ಲಿ ರಾಜ್ಯ ಸರ್ಕಾರ ನಿಗಧಿ ಪಡಿಸಿರುವ ಬಿ.ಎ., ಎಂ.ಎ., ಬಿ.ಇಡಿ ವಿದ್ಯಾರ್ಹತೆ ಹೊಂದಿರಬೇಕು. ಹಾಗೂ ಮೀಸಲಾತಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರ ಹೊಂದಿರತಕ್ಕದ್ದು.

ಮೇಲ್ಕಂಡ ಹುದ್ದೆಗೆ ಮಿಸಲಾತಿ ಬಿಂದು 01ರ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳು ರೂ.500 ಬ್ಯಾಂಕ್ ಹುಂಡಿಯೊಂದಿಗೆ ಮೇಲ್ಕಂಡ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಅವರಿಗೆ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗಾಗಿ ಸಂಬಂಧಿಸಿದ ದಾಖಲೆಗಳ ಧೃಡೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ಸ್ವ ವಿವರದೊಂದಿಗೆ ಅರ್ಜಿ ಸಲ್ಲಿಸಲು ಕೋರಿದೆ.

ಹಾಗೇಯೇ ಅರ್ಜಿಯ ಮತ್ತೊಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಚಿತ್ರದುರ್ಗ ಜಿಲ್ಲೆ ಇವರಿಗೆ ಸಲ್ಲಿಸಬೇಕು. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸಹಿ/– ಕಾರ್ಯದರ್ಶಿಗಳು, ಕೆ.ಹೆಚ್.ಶಿವಕುಮಾರ್ ಮೊ: 9902718826

ಸ್ಥಳ: ವಿಶ್ವನಾಥನಹಳ್ಳಿ
ದಿನಾಂಕ: 24–11–2024

THE PRINTERS (MYSORE) PRIVATE LIMITED

Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

SENIOR MANAGER / AGM- SALES

The candidates should be work in open for advertisement sales. Fluency in English & Kannada.
Experience: Preferred 10+ years experience in ad sales field.
Qualification: Any Degree
Job Location: Mysore
Primary prerequisites:
- Good Knowledge of local market and connects within the media industry.
- Needs to have experience in handling ad agency / agent.
- Outdoor advertising and Product launch. Revenue generation through Event & Activations.
- To maximize ad revenue and achieve monthly/ yearly sales targets
- To develop new clients /potential advertisers for all our group of publications.
- Collection Receivables to be taken care of.

Salary will be commensurate with qualification and experience.
Please send your application for the above position mentioning the job applied for (subject of the e-mail) and along with updated resume to:

The Manager-Recruitment
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ತಂತ್ರಜ್ಞಾನ





ಆನ್‌ಲೈನ್ ವಂಚನೆಗಳ ಬಲೆಗೆ ತಲೆಯೊಡ್ಡದಿರಿ

ಸೂರ್ಯನಾರಾಯಣ ವಿ.

ಎಸ್‌ಬಿಐ ಕ್ರೆಡಿಟ್ ಕಾರ್ಡ್ ಹೊಂದಿರುವ ನನಗೆ ವಾರದ ಹಿಂದೆ ಎಸ್‌ಬಿಐನಿಂದ ಬರುವ ಮಾದರಿಯಲ್ಲಿ, 'ನಿಮ್ಮ ಕ್ರೆಡಿಟ್ ಕಾರ್ಡ್ ಮಿತಿಯನ್ನು ₹4 ಲಕ್ಷಕ್ಕೆ ಹೆಚ್ಚಿಸಬಹುದು. ಕೆವೈಸಿ ಪೂರ್ಣಗೊಳಿಸಲು ಭೇಟಿ ನೀಡಿ' ಎಂದು ಒಂದು ಲಿಂಕ್ ಹೊಂದಿದ್ದ ಎಸ್‌ಎಂಎಸ್ ಮೊಬೈಲ್‌ಗೆ ಬಂತು. ಕಾರ್ಡ್ ಪಡೆದು ನಾಲ್ಕು ವರ್ಷ ಆದರೂ ಇನ್ನೂ ಮಿತಿ ಒಂದು ಲಕ್ಷ ದಾಟದೇ ಇದ್ದುದರಿಂದ, ಮಿತಿ ಹೆಚ್ಚಳಕ್ಕೆ ಈಗ ಅವಕಾಶ ನೀಡಿರಬಹುದೇನೋ ಎಂದುಕೊಂಡು ಲಿಂಕ್ ಒತ್ತಿದೆ. ಎಸ್‌ಬಿಐನ ಅಧಿಕೃತ ವೆಬ್‌ಸೈಟ್ ವಿಳಾಸದ ರೀತಿಯ ವಿಳಾಸವೇ (ಯುಆರ್‌ಎಲ್) ಇತ್ತು. ಆದರೆ, ವಿಳಾಸದಲ್ಲಿ ಮತ್ತೊಂದು ಪದವೂ (ಸ್ಪ್ರಿಂಟ್ ಎನ್ನುವ) ಇತ್ತು. ಅನುಮಾನ ಬಂದು ಮುಂದುವರಿಯಲಿಲ್ಲ. ಎರಡು ದಿನಗಳ ಹಿಂದೆ ಮತ್ತೆ ಅದೇ ರೀತಿಯ ಎಸ್‌ಎಂಎಸ್ ಬಂತು. ಈ ಸಲ ಕಂಪ್ಯೂಟರ್‌ನಲ್ಲಿ ಆ ವೆಬ್‌ಲಿಂಕ್ ಪೇಸ್ಟ್ ಮಾಡಿ ವೆಬ್‌ಸೈಟ್‌ಗೆ ಭೇಟಿ ನೀಡಿದೆ. ಇಂಟರ್‌ನೆಟ್‌ನಲ್ಲಿ ಆ ವೆಬ್‌ಸೈಟ್ ಬಗ್ಗೆ ಮಾಹಿತಿ ಹುಡುಕಾಡಿದೆ. ಹೆಚ್ಚು ಮಾಹಿತಿ ಸಿಗಲಿಲ್ಲ. ಆನ್‌ಲೈನ್ ಪ್ರಶ್ನೋತ್ತರ ವೇದಿಕೆಯೊಂದರಲ್ಲಿ ಈ ಬಗ್ಗೆ ಚರ್ಚೆ ನಡೆದಿದ್ದು ಗಮನಕ್ಕೆ ಬಂತು. ಅದು ವಂಚನೆ ಉದ್ದೇಶದ ನಕಲಿ ವೆಬ್‌ಸೈಟ್ ಆಗಿರುವ ಸಾಧ್ಯತೆ ಇದೆ ಎಂದು ಬಹುತೇಕರು ಅಭಿಪ್ರಾಯಪಟ್ಟಿದ್ದರು.

ಇಂತಹ ಅನುಭವ ಲಕ್ಷಾಂತರ ಮಂದಿಗೆ ಆಗಿರಬಹುದು. ಈ ಸಂದರ್ಭದಲ್ಲಿ ಕೊಂಚ ಎಚ್ಚರ ವಹಿಸಿ ಯೋಚನೆ ಮಾಡಿದರೆ ಆನ್‌ಲೈನ್ ವಂಚನೆಗೆ ಒಳಗಾಗುವುದರಿಂದ ತಪ್ಪಿಸಿಕೊಳ್ಳಬಹುದು. ಆದರೆ, ತರಾತುರಿಯಲ್ಲಿರುವ ಕೆಲವು ಜನರು ಯೋಚನೆ ಮಾಡದೆ ವಂಚಕರ ಬಲೆಗೆ ಬಿದ್ದು ಹಣವನ್ನು ಕಳೆದುಕೊಳ್ಳುತ್ತಿದ್ದಾರೆ.

ಕೃತಕಬುದ್ಧಿಮತ್ತೆ (ಎಐ) ಆಧಾರಿತ ಹೊಸ ಹೊಸ ತಂತ್ರಜ್ಞಾನ ಬಳಕೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಜನರು ಆನ್‌ಲೈನ್ ವಂಚನೆಗೆ ತುತ್ತಾಗುತ್ತಿರುವುದು ಜಾಸ್ತಿಯಾಗಿದೆ. ಡೀಪ್‌ಫೇಕ್ ತಂತ್ರಜ್ಞಾನವನ್ನು ಬಳಸಿಕೊಂಡು ಸಂಬಂಧಿಕರ ಧ್ವನಿಯನ್ನು ಅನುಕರಿಸುವುದು, ದೊಡ್ಡ ದೊಡ್ಡ ಉದ್ಯಮಿಗಳು, ಕ್ರೀಡಾಪಟುಗಳು, ಪ್ರಭಾವಿ ವ್ಯಕ್ತಿಗಳೇ ಬಂಡವಾಳ ಹೂಡಿಕೆಗೆ ಸಲಹೆ ನೀಡುತ್ತಿರುವ ವಿಡಿಯೊಗಳನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು, ದೊಡ್ಡ ಕಂಪನಿಗಳ ವೆಬ್‌ಸೈಟ್‌ಗಳನ್ನೇ ಹೋಲುವ ವೆಬ್ ವಿಳಾಸ (ಯುಆರ್‌ಎಲ್), ಇ-ಮೇಲ್ ಐಡಿಗಳನ್ನು ಸೃಷ್ಟಿಸಿ ಮೇಲ್, ವಾಟ್ಸ್‌ಆ್ಯಪ್, ಎಸ್‌ಎಂಎಸ್ ಮೂಲಕ ಲಿಂಕ್ ಕಳುಹಿಸುವಂತಹ ಕೆಲಸವನ್ನು ವಂಚಕರು ಮಾಡುತ್ತಿದ್ದಾರೆ. ತಂತ್ರಜ್ಞಾನ ಕಂಪನಿಗಳು ಅಥವಾ ದೂರಸಂಪರ್ಕ ಕಂಪನಿಗಳು ಎಷ್ಟೇ ಪ್ರಯತ್ನ ಪಟ್ಟರೂ ಇಂತಹ ನಕಲಿ/ಸ್ಪ್ಯಾಮ್ ಇ-ಮೇಲ್, ಎಸ್‌ಎಂಎಸ್‌ಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ.

ಜಗತ್ತಿನಾದ್ಯಂತ ಕೋಟ್ಯಂತರ ಮಂದಿ ಬಳಕೆದಾರರನ್ನು ಹೊಂದಿರುವ ಗೂಗಲ್ ಕಂಪನಿಯು ತನ್ನ ಬಳಕೆದಾರರು ಹಾಗೂ ಆ್ಯಂಡ್ರಾಯ್ಡ್ ಬಳಕೆದಾರರಿಗಾಗಿ ಆನ್‌ಲೈನ್ ವಂಚನೆ ಯತ್ನವನ್ನು ಪತ್ತೆ ಹಚ್ಚುವುದು ಮತ್ತು ಅದರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಇತ್ತೀಚೆಗೆ ಹಲವು ಸಲಹೆಗಳನ್ನು ನೀಡಿದೆ. ಜಿ-ಮೇಲ್‌ನಲ್ಲಿ ಬರುವ ಶೇ 99.9ರಷ್ಟು ಸ್ಪ್ಯಾಮ್‌ಗಳು, ಕುತಂತ್ರಾಂಶಗಳು, ವಂಚನೆಯ ಯತ್ನವನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ತಡೆಯಲಾಗುತ್ತಿದೆ ಎಂದು ಗೂಗಲ್ ಹೇಳಿಕೊಂಡಿದೆ. ಹಾಗಿದ್ದರೂ, ಬಳಕೆದಾರರು ಬಹಳ ಎಚ್ಚರಿಕೆಯಿಂದ ಇರಬೇಕು ಎಂಬುದು ಅದರ ಕಾಳಜಿ.

ಗೂಗಲ್‌ನ ಕೆಲವು ಸಲಹೆಗಳು

- ಸೆಲೆಬ್ರೆಟಿಗಳು, ಪ್ರಭಾವಿಗಳ ದನಿಯಲ್ಲಿರುವ ಆಡಿಯೊ, ವಿಡಿಯೊಗಳ ಬಗ್ಗೆ ಎಚ್ಚರದಿಂದಿರಿ. ಡೀಪ್‌ಫೇಕ್ ತಂತ್ರಜ್ಞಾನ ಆಧಾರಿತವಾಗಿ ಅವುಗಳನ್ನು ಸೃಷ್ಟಿಮಾಡಿರುವ ಸಾಧ್ಯತೆ ಇರುತ್ತದೆ. ಮೇಲ್ನೋಟಕ್ಕೆ ಇವುಗಳು ನಿಜವೆಂದು ಅನಿಸಿದರೂ ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ ಎಐ ಆಧಾರಿತ ಡೀಪ್‌ಫೇಕ್ ಆಡಿಯೊ, ವಿಡಿಯೊ ಎಂಬುದು ಗೊತ್ತಾಗುತ್ತದೆ. ಬಹುತೇಕ ಡೀಪ್‌ಫೇಕ್ ವಿಡಿಯೊದಲ್ಲಿ ತುಟಿಗಳ ಚಲನೆ ಹೋಲಿಕೆ ಯಾಗುವುದಿಲ್ಲ; ಮಾತನಾಡುವವರ ಹಾವಭಾವಕ್ಕೂ, ಕೇಳುವ ಮಾತಿಗೂ ವ್ಯತ್ಯಾಸವಿರುತ್ತದೆ.
- ಹೆಚ್ಚು ಗಳಿಕೆಯ ಭರವಸೆಯ ಕ್ರಿಪ್ಟೊ ಬಂಡವಾಳ ಹೂಡಿಕೆಯ ಮೇಲ್‌ಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಇವು ಬಂಡವಾಳ ಹೂಡಿಕೆ ವಂಚನೆಯ ಮೇಲ್ ಆಗಿರುವ ಸಾಧ್ಯತೆಯೇ ಹೆಚ್ಚು. ಇದರಲ್ಲಿ ಕಡಿಮೆ ಅವಧಿಯಲ್ಲಿ ಹಲವು ಪಟ್ಟು ಗಳಿಸಬಹುದು ಎಂದು ಆಮಿಷ ಒಡ್ಡಲಾಗುತ್ತದೆ.
- ನಕಲಿ ಆ್ಯಪ್, ವೆಬ್‌ಸೈಟ್‌ಗಳ ಬಗ್ಗೆಯೂ ಎಚ್ಚರದಿಂದ ಇರಬೇಕು. ಬ್ಯಾಂಕ್ ಅಥವಾ ವಿವಿಧ ಕಂಪನಿಗಳ ಅಧಿಕೃತ ವೆಬ್‌ಸೈಟ್ ಮತ್ತು ಆ್ಯಪ್‌ಗಳನ್ನು ಹೋಲುವ ವೆಬ್ ಮತ್ತು ಆ್ಯಪ್‌ಗಳನ್ನು ವಂಚಕರು ಸೃಷ್ಟಿಸಿರುತ್ತಾರೆ. ಡೌನ್‌ಲೋಡ್ ಮಾಡುವುದಕ್ಕೂ ಮುನ್ನ ಎರಡೆರಡು ಬಾರಿ ಪರಿಶೀಲಿಸುವುದು ಜಾಣ ನಡೆ.
- ಅಪರಿಚಿತರಿಂದ ಬರುವ ಇ-ಮೇಲ್‌ಗಳ ಬಗ್ಗೆ ಜಾಗರೂಕರಾಗಿರಿ. ನಿಮಗೆ ಗೊತ್ತಿಲ್ಲದ ವ್ಯಕ್ತಿಯೊಬ್ಬರು ಇ-ಮೇಲ್ ಕಳುಹಿಸಿ ನಿಮ್ಮ ವೈಯಕ್ತಿಕ ಮಾಹಿತಿ ಕೇಳುತ್ತಿದ್ದಾರೆ ಎಂದರೆ ಆ ಮೇಲ್‌ಗೆ ಪ್ರತಿಕ್ರಿಯಿಸದಿರಿ.
- ತುರ್ತಾಗಿ ನಿಮ್ಮ ವಿವರಗಳು, ಬ್ಯಾಂಕ್ ಖಾತೆಯ ವಿವರಗಳು, ಮನೆ ವಿಳಾಸ, ಕ್ರೆಡಿಟ್, ಡೆಬಿಟ್ ಕಾರ್ಡ್‌ಗಳ ಮಾಹಿತಿ ಕೇಳಿ ಬಂದಿರುವ ಇ-ಮೇಲ್‌ಗಳಿಗೆ ಸ್ಪಂದಿಸದಿರಿ.
- ನಿಮ್ಮ ಬ್ಯಾಂಕ್ ಅಥವಾ ಇನ್ಯಾವುದೇ ವಿಶ್ವಾಸನೀಯ ಮೂಲದಿಂದ ಬಂದ ಇ-ಮೇಲ್‌ನಲ್ಲಿರುವ ಮಾಹಿತಿಗಳ ಬಗ್ಗೆ ಅನುಮಾನ ಇದ್ದರೆ ಮುಂದುವರಿಯಬೇಡಿ. ಸಂಬಂಧಿಸಿದವರೊಂದಿಗೆ ವಿಚಾರಿಸಿ. ವಂಚಕರು, ಬ್ಯಾಂಕ್ ವೆಬ್ ವಿಳಾಸ ಅಥವಾ ಇ-ಮೇಲ್ ವಿಳಾಸವನ್ನೇ ಹೋಲುವ, ವ್ಯತ್ಯಾಸ ತಕ್ಷಣಕ್ಕೆ ಗಮನಕ್ಕೆ ಬಾರದ ರೀತಿಯ ವಿಳಾಸದಿಂದ ಮೇಲ್ ಮಾಡಿ ನಿಮ್ಮನ್ನು ನಂಬಿಸುವ ಸಾಧ್ಯತೆ ಇರುತ್ತದೆ.
- ಇ-ಮೇಲ್‌ನಲ್ಲಿ ಬಂದ ವಿವರಗಳಲ್ಲಿ ನಮೂದಿಸಿರುವ ವೆಬ್ ವಿಳಾಸದ ಬಗ್ಗೆ ಸಂದೇಹ ಮೂಡಿದರೆ, ಅದರಲ್ಲಿರುವ ಲಿಂಕ್ ಅನ್ನು ತೆರೆಯಬೇಡಿ. ಬದಲಿಗೆ ಯುಆರ್‌ಎಲ್ ಬಾರ್‌ನಲ್ಲಿ ಆ ವೆಬ್ ವಿಳಾಸವನ್ನು ಟೈಪ್ ಮಾಡಿ ಪರಿಶೀಲಿಸಿ. ಯುಆರ್‌ಎಲ್ ಬೇರೆ ವಂಚಕ ವೆಬ್‌ಸೈಟ್‌ಗೆ ಲಿಂಕ್ ಆಗಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಿ.
- ವಂಚಕರು ಎಐ ತಂತ್ರಜ್ಞಾನವನ್ನು ಬಳಸಿಕೊಂಡು ನಾಜೂಕಾಗಿ ಪದಗಳನ್ನು ಪೋಣಿಸಿ ಆಕರ್ಷಕವಾಗಿ ಇ-ಮೇಲ್ ಬರೆದಿರಬಹುದು. ಹಾಗಿದ್ದರೂ, ಆ ಮೇಲ್‌ಗಳಲ್ಲಿ ವ್ಯಾಕರಣದೋಷ ಇರಬಹುದು. ಕಾಗುಣಿತ ತಪ್ಪಾಗಿರಬಹುದು. ಅವುಗಳ ಬಗ್ಗೆಯೂ ಗಮನ ಹರಿಸಿ.
- ಪಾಸ್‌ವರ್ಡ್ ರಿಸೆಟ್ ಮಾಡಿ ಎಂದು ಮನವಿ ಮಾಡುವ ಹಲವು ಇ-ಮೇಲ್‌ಗಳು ಬರುತ್ತಿರುತ್ತವೆ. ಇವುಗಳ ಬಗ್ಗೆಯೂ ಎಚ್ಚರಿಕೆ ಅಗತ್ಯ. ನೀವಾಗಿಯೇ ಪಾಸ್‌ವರ್ಡ್ ಬದಲಿಸಲು ಮುಂದಾಗದೇ ಇದ್ದ ಸಂದರ್ಭದಲ್ಲಿ ಬಂದ ಮೇಲ್‌ಗಳಿಗೆ ಪ್ರತಿಕ್ರಿಯಿಸದಿರುವುದು ಒಳಿತು. ❖

ಮೂರು ಸೂತ್ರಗಳು ಸದಾ ನೆನಪಿರಲಿ

ಗೂಗಲ್ ಈ ಸೂತ್ರಗಳನ್ನು 'ಗೋಲ್ಡನ್ ರೂಲ್ಸ್' ಎಂದು ಕರೆದಿದೆ.

1.ತರಾತುರಿ ಬೇಡ, ನಿಧಾನ ವಹಿಸಿ

ಆನ್‌ಲೈನ್/ದೂರವಾಣಿ ಕರೆಗಳ ಮೂಲಕ ಮಾಡುವ ವಂಚನೆಯು ಕ್ಷಿಪ್ರವಾಗಿ ನಡೆದು ಹೋಗುತ್ತದೆ. ಈ ವಂಚನೆಯ ಸ್ವರೂಪದ ವಿನ್ಯಾಸವೂ ಅದೇ ರೀತಿ ಇದೆ. ವಂಚಕರು ತುಂಬಾ ತರಾತುರಿಯಲ್ಲಿ ಇರುತ್ತಾರೆ. ಜನರಿಗೆ ಯೋಚಿಸುವುದಕ್ಕೆ ಅವಕಾಶ ನೀಡುವುದಿಲ್ಲ. ಇಂತಹ ಸಂದರ್ಭದಲ್ಲಿ ಬಳಕೆದಾರರು ಗಾಬರಿ ಬೀಳಬಾರದು. ಅವಸರವೂ ಪಡಬಾರದು. ಹೆಚ್ಚು ಯೋಚಿಸಬೇಕು. ವಂಚಕರಿಗೆ ಹೆಚ್ಚೆಚ್ಚು ಪ್ರಶ್ನೆಗಳನ್ನು ಕೇಳುತ್ತಿರಬೇಕು. ನಿಧಾನವಾದಷ್ಟೂ ವಂಚನೆಯ ಬಗ್ಗೆ ಸುಳಿವು ಸಿಗುತ್ತದೆ. ಮೋಸ ಹೋಗುವುದರಿಂದ ಪಾರಾಗಬಹುದು.

2. ಮಾಹಿತಿಯನ್ನು ಪರಿಶೀಲಿಸಿ

ಮೇಲ್, ವಾಟ್ಸ್ ಆ್ಯಪ್, ಮೆಸೆಂಜರ್ ಅಥವಾ ಎಸ್‌ಎಂಎಸ್ ಮೂಲಕ ಬರುವ ಮಾಹಿತಿಗಳನ್ನು ನೀವು ಪರಿಶೀಲನೆಗೆ ಒಳಪಡಿಸುತ್ತೀರಾ? ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತೀರಾ? ಆನ್‌ಲೈನ್‌ನಲ್ಲಿ ಮೋಸ ಹೋಗುವವರು ಬಹುತೇಕರು ಬಂದ ಸಂದೇಶ ಅಥವಾ ವಿವರಗಳನ್ನು ಹೆಚ್ಚು ಪರಿಶೀಲಿಸಲು ಹೋಗುವುದಿಲ್ಲ. ಆ ತಪ್ಪನ್ನು ಯಾವಾಗಲೂ ಮಾಡಬಾರದು. ವಿವರಗಳನ್ನು ಇಂಟರ್‌ನೆಟ್‌ನಲ್ಲಿ ಜಾಲಾಡಿದಾಗ ವಾಸ್ತವ ಸಂಗತಿ ತಿಳಿಯುವ ಸಾಧ್ಯತೆ ಹೆಚ್ಚಿರುತ್ತದೆ.

3. ಸುಮ್ಮನಿರಿ; ಹಣ ಕಳುಹಿಸಬೇಡಿ

ಯಾವುದೇ ಪ್ರತಿಷ್ಠಿತ ಸಂಸ್ಥೆ ಅಥವಾ ವ್ಯಕ್ತಿಗಳು ಆನ್‌ಲೈನ್‌ನಲ್ಲಿ ತಕ್ಷಣವೇ ನಿಮ್ಮ ವೈಯಕ್ತಿಕ ವಿವರಗಳನ್ನು ಕೇಳುವುದಿಲ್ಲ ಅಥವಾ ಹಣ ನೀಡುವಂತೆ ಒತ್ತಾಯಿಸುವುದಿಲ್ಲ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಹಣವನ್ನು ಕೇಳಿದರೆ ಕಳುಹಿಸದೆ ಸುಮ್ಮನಿದ್ದುಬಿಡಿ.

ಔಷಧವ ಚಿಮ್ಮಿಸುವ ಗುಳಿಗೆ

ಕೊಳ್ಳೇಗಾಲ ಶರ್ಮ

ಗುಳಿಗೆ, ಇಂಜೆಕ್ಷನ್ನುಗಳಲ್ಲಿ ಹೊಸತೇನಿದೆ ಎನ್ನುವವರಿಗೆ ಈ ಸುದ್ದಿ. ಅಮೆರಿಕದ ಮಸ್ಯಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಂಜಿನಿಯರ್ ಜಿ ಟ್ರೇವರ್ಸೊ ಮತ್ತು ನೋವೊನಾರ್ಡಿಸ್ಕ್ ಕಂಪೆನಿಯ ವಿಜ್ಞಾನಿ ಎಸ್. ಟಿ. ಬಕ್ಲಿಯವರ ತಂಡ ಔಷಧವನ್ನು ಚಿಮ್ಮಿಸುವ ಗುಳಿಗೆಯನ್ನು ಸಿದ್ಧಪಡಿಸಿದೆ. ಇದಕ್ಕೆ ಪ್ರೇರಣೆ ಆಕ್ಟೋಪಸಿನ ವರ್ಗಕ್ಕೆ ಸೇರಿದ 'ಸ್ಕ್ವಿಡ್' ಎನ್ನುವ ಸಮುದ್ರಜೀವಿಯಂತೆ.

ಕರುಳು, ಜಠರದೊಳಗಿನ ಭಾಗಗಳಿಗೆ ನೇರವಾಗಿ ಔಷಧವನ್ನು ಒದಗಿಸಲು ಈ 'ಚಿಮ್ಮುವ ಗುಳಿಗೆ' ನೆರವಾಗಲಿದೆ. ವಿವಿಧ ರೋಗಗಳ ಚಿಕಿತ್ಸೆಗೆಂದು ಬಳಸುವ ಔಷಧಗಳನ್ನು ಒಂದೋ ಗುಳಿಗೆಯ ರೂಪದಲ್ಲಿ, ಇಲ್ಲವೇ ಇಂಜೆಕ್ಷನ್ನಿನ ರೂಪದಲ್ಲಿ ನೀಡುತ್ತಾರಷ್ಟೆ. ಗುಳಿಗೆಗಳು ಕರಗಿ, ಔಷಧವು ರಕ್ತದೊಳಗೆ ಸೇರಿ, ತನ್ಮೂಲಕ ವಿವಿಧ ಅಂಗಗಳಿಗೆ ಸರಬರಾಜಾಗುತ್ತದೆ. ಕೆಲವೊಮ್ಮೆ ಅಗತ್ಯವಾದ ಅಂಗಗಳಿಗೆ ಸಾಕಷ್ಟು ರಕ್ತಪೂರೈಕೆ ಇಲ್ಲದ್ದರಿಂದ ಅಲ್ಲಿಗೆ ತಲುಪದೆಯೂ ಹೋಗಬಹುದು. ಇಂಜೆಕ್ಷನ್ನುಗಳು ಕೂಡ ಹೀಗೆಯೇ ಸ್ನಾಯುಗಳು ಇಲ್ಲವೇ ರಕ್ತಕ್ಕೆ ಔಷಧವನ್ನು ಸೇರಿಸುತ್ತವೆ. ಗುಳಿಗೆಗಳಿಗಿಂತಲೂ ವೇಗವಾಗಿ ರಕ್ತದಲ್ಲಿ ಔಷಧದ ಪ್ರಮಾಣವನ್ನು ಹೆಚ್ಚಿಸಲು ಈ ಮಾರ್ಗ ಅನುಕೂಲ.

ಆದರೆ, ಕರುಳು, ಜಠರಗಳಿಗೆ ಔಷಧಗಳನ್ನು ಪೂರೈಸುವುದರಲ್ಲಿ ಒಂದು ಸಮಸ್ಯೆ ಇದೆ. ನುಂಗಿದ ಗುಳಿಗೆ ಕರುಳನ್ನು ಸೇರುತ್ತದಾದರೂ, ಕರುಳಿನಲ್ಲಿ ತೊಂದರೆ ಇರುವ ಕಡೆಗಷ್ಟೆ ಅದು ಔಷಧವನ್ನು ತಲುಪಿಸುತ್ತದೆನ್ನುವ ಖಾತ್ರಿ ಇಲ್ಲ. ಜಠರದಲ್ಲಿನ ಭಾಗಗಳಿಗೆ ಔಷಧ ಒದಗಿಸಲೂ ಇದೇ ಸಮಸ್ಯೆ ಇದೆ. ಹೀಗಾಗಿ ಅವಶ್ಯಕ್ಕಿಂತಲೂ ಹೆಚ್ಚಿನ ಔಷಧವನ್ನು ನುಂಗಬೇಕು. ಅದು ತೊಂದರೆ ಇರುವ ಜಾಗಕ್ಕೆ ಸೇರುತ್ತದೆಂದು ಆಶಿಸಬೇಕಾಗುತ್ತದೆ.

ಇತ್ತೀಚೆಗೆ ಈ ಸಮಸ್ಯೆಗೆ ಎಂಡೋಸ್ಕೋಪನ್ನು ಬಳಸಿ ಔಷಧವನ್ನು ಚುಚ್ಚುವ ಉಪಾಯಗಳನ್ನು ಯೋಜಿಸಲಾಗಿತ್ತು. ಕೊಳವೆಯಂತಹ ಸಾಧನದ ತುದಿಯಲ್ಲಿ ಔಷಧವಿರುವ ಸಿರಿಂಜನ್ನೋ, ಅಥವಾ ಔಷಧ ತುಂಬಿದ ಮುಳ್ಳುಗಳಿರುವ ಚಾಪೆಯಂತಹ ಸಾಧನವನ್ನೋ ಇರಿಸಿ, ಗಂಟಲಿನ ಮೂಲಕ ಅನ್ನನಾಳದೊಳಗೆ ತೂರಿಸಬಹುದು. ಅಲ್ಲಿ ನಿರ್ದಿಷ್ಟ ಸ್ಥಾನವನ್ನು ತಲುಪಿದಾಗ, ಸಿರಿಂಜನ್ನು ಒತ್ತಿಯೋ, ಮುಳ್ಳುಚಾಪೆಯನ್ನು ಅಂಟಿಸಿಯೋ ಔಷಧವನ್ನು ಒದಗಿಸಬಹುದು ಎನ್ನುವುದು ಯೋಜನೆ. ಈ ಉಪಾಯದಲ್ಲಿಯೂ ಅತಿ ಸೂಕ್ಷ್ಮವಾದ ದೇಹದ ಒಳಭಾಗಗಳಿಗೆ ಸೂಜಿಯನ್ನು ಚುಚ್ಚಲೇಬೇಕು; ಗಾಯವನ್ನು ಮಾಡಲೇಬೇಕು. ಗಾಯವನ್ನು ಮಾಡದೆಯೇ ಔಷಧವನ್ನು ಒದಗಿಸುವ ಉಪಾಯವೇ ಈ ಚಿಮ್ಮುವ ಗುಳಿಗೆ.

'ಮೈಕ್ರೊ ಇಂಜೆಕ್ಷನ್ ಡಿವೈಸ್' ಎನ್ನುವ ಈ ಸಾಧನದ ಎರಡು ಬಗೆಗಳನ್ನು ಟ್ರೇವರ್ಸೊ-ಬಕ್ಲಿ ತಂಡ ರೂಪಿಸಿದೆ. ಮೊದಲನೆಯದು ಸಿರಿಂಜಿನಂತೆ. ಆದರೆ ಸಿರಿಂಜಿನಲ್ಲಿರುವ ಸೂಜಿಯ ಬದಲಿಗೆ ಅದರ ಮೂತಿಯಲ್ಲಿ ಹಾಗೂ ಎರಡೂ ಬದಿಗಳಲ್ಲಿ ರಂಧ್ರವಿರುತ್ತದೆ. ಎಂಡೋಸ್ಕೋಪಿನ ನೆರವಿನಿಂದ ಅನ್ನನಾಳದೊಳಗೆ ನಿರ್ದಿಷ್ಟ ಜಾಗವನ್ನು ತಲುಪಿದಾಗ ಸಿರಿಂಜನ್ನು ಒತ್ತಿ ಔಷಧವನ್ನು ರಂಧ್ರಗಳ ಮೂಲಕ ಚಿಮ್ಮಿಸಬಹುದು. ಮತ್ತೊಂದು ಸಾಧನ ಗುಳಿಗೆಯ ರೀತಿಯದ್ದು. ಒಂದು ಸೆಂಟಿಮೀಟರಿನ ಗೋಲಿಯಂತೆ ಇರುವ ಇದರೊಳಗೆ ಔಷಧದ ಜೊತೆಗೆ ಕಾರ್ಬನ್ ಡಯಾಕ್ಸೈಡನ್ನು ಅತಿ ಒತ್ತಡದಲ್ಲಿ ತುಂಬಿಟ್ಟಿರುತ್ತಾರೆ. ಅದರಲ್ಲಿಯೂ ಮೂತಿಯಲ್ಲಿ ಹಾಗೂ ಬದಿಯಲ್ಲಿ ರಂಧ್ರಗಳಿರುತ್ತವೆ. ಈ ರಂಧ್ರಗಳನ್ನು ಸಕ್ಕರೆಯ ಬೆಣೆಯಿಂದ ಮುಚ್ಚಿರುತ್ತಾರೆ. ಅನ್ನನಾಳ ಅಥವಾ ಜಠರವನ್ನು ತಲುಪಿದಾಗ ಈ ಸಕ್ಕರೆಯ ಬೆಣೆ ಕರಗಿ ರಂಧ್ರ ತೆರೆದುಕೊಳ್ಳುತ್ತದೆ. ಒಳಗಿರುವ ಕಾರ್ಬನ್ ಡಯಾಕ್ಸೈಡಿನ ಒತ್ತಡದಿಂದಾಗಿ ಔಷಧ ಚಿಲುಮೆಯಾಗಿ ಚಿಮ್ಮುತ್ತದೆ.

ಈ ತಂತ್ರಗಳೇನೋ ಸರಳವೇ. ಆದರೆ ಹೀಗೆ ಚಿಮ್ಮಿದ ಔಷಧ ಎಷ್ಟು ಫಲಕಾರಿ? ಬೇಕಿದ್ದಷ್ಟು ಔಷಧ ಬೇಕಾದ ಜಾಗಕ್ಕೆ ತಲುಪುತ್ತದೆಯೇ? ಇದು ಪ್ರಶ್ನೆ. ಇದನ್ನೂ ಇವರು ಪರೀಕ್ಷಿಸಿದ್ದಾರೆ. ಪ್ರಾಣಿಗಳಿಂದ ಹೆಕ್ಕಿದ ಕರುಳು, ಜಠರ ಮೊದಲಾದ ಅಂಗಗಳೊಳಗೆ ಈ ಸಾಧನಗಳನ್ನಿಟ್ಟು, ಔಷಧ ಪ್ರಯೋಗ ಮಾಡಿದ್ದಾರೆ. ಅನಂತರ ಆ ಅಂಗಾಂಶದಲ್ಲಿ ಔಷಧ ಕೂಡಿಕೊಂಡಿದೆಯೇ ಎಂದು ಪರೀಕ್ಷಿಸಿದ್ದಾರೆ. ಮೂತಿಗೆ ಎದುರಾಗಿ ಇರುವ ಹಾಗೂ ಬದಿಯ ರಂಧ್ರದಿಂದ ಸುಮಾರು ಅರವತ್ತು ಡಿಗ್ರಿ ಕೋನದಲ್ಲಿರುವ ಭಾಗಗಳಿಗೂ ಔಷಧ ಕೂಡಿಕೊಂಡಿರುವುದನ್ನು ಗಮನಿಸಿದ್ದಾರೆ. ಸಾಧನ ಯಾವ ಭಾಗವನ್ನೂ ಮುಟ್ಟದಿದ್ದರೂ ಔಷಧ ಕರುಳಿನ ಮೇಲ್ಮೈನಲ್ಲಿಯಷ್ಟೆ ಅಲ್ಲ, ಒಳಪದರಗಳಲ್ಲಿಯೂ ಕೂಡಿಕೊಂಡಿತ್ತು ಎನ್ನುವುದು ವಿಶೇಷ.

ಅಷ್ಟೇ ಅಲ್ಲ. ಹಂದಿ, ನಾಯಿಗಳಲ್ಲಿ ಈ ಎರಡೂ ಸಾಧನಗಳನ್ನೂ ಬಳಸಿ, ಇನ್ಸುಲಿನ್, ಗ್ಲುಕಾಗಾನ್‌ನಂತಹ 'ಪೆಪ್ಟೈಡು' ಹಾಗೂ 'ಆರ್-ಆರ್‌ಎನ್‌ಎ'ಯನ್ನು ಚುಚ್ಚಿದ್ದಾರೆ. ಪೆಪ್ಟೈಡುಗಳನ್ನು ಗುಳಿಗೆಗಳ ರೂಪದಲ್ಲಿ ನೀಡುವುದು ಅಪರೂಪ. ಅನಂತರ ಗಮನಿಸಿದಾಗ ಈ ಔಷಧಗಳು ಸಾಧಾರಣ ಇಂಜೆಕ್ಷನ್ ಕೊಟ್ಟಾಗ ದೇಹದಲ್ಲಿ ಕಾಣಿಸುವ ಪ್ರಮಾಣದಷ್ಟೇ ಇತ್ತು. ಸಾಧನದಲ್ಲಿರುವ ಒತ್ತಡವನ್ನು ಹೆಚ್ಚೂ ಕಡಿಮೆ ಮಾಡಿ ದೇಹ ಸೇರುವ ಔಷಧದ ಪ್ರಮಾಣವನ್ನು ಬದಲಿಸಬಹುದು.

ಇಂಜೆಕ್ಷನ್ನು ಕೊಡುವುದು ಅಸಾಧ್ಯವೆನ್ನಿಸುವ ಒಳಾಂಗಗಳಿಗೆ ಹೀಗೆ ಔಷಧವನ್ನು ಚಿಮ್ಮಿಸುವ ಮೂಲಕ ಚಿಕಿತ್ಸೆ ಮಾಡುವುದು ಸಾಧ್ಯ ಎಂದು ಟ್ರೇವರ್ಸೋ-ಬಕ್ಲಿ ತಂಡದ ಸಂಶೋಧನೆಗಳು ನಿರೂಪಿಸಿವೆ. 'ನೇಚರ್' ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಈ ಶೋಧದ ವಿವರಗಳು ಪ್ರಕಟವಾಗಿವೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ನಮ್ಮ ಪರಿಸರ

4) ಪೋಷಣಾ ಸ್ತರಗಳು ಎಂದರೇನು? ಆಹಾರ ಸರಪಳಿಗೆ ಒಂದು ಉದಾಹರಣೆ ಕೊಡಿ ಮತ್ತು ಅದರಲ್ಲಿನ ವಿವಿಧ ಪೋಷಣಾ ಸ್ತರಗಳನ್ನು ಹೆಸರಿಸಿ.

ಉತ್ತರ:– ಆಹಾರ ಶಕ್ತಿಯು ವರ್ಗಾವಣೆಯಾಗುವ ಆಹಾರಸರಪಳಿಯ ಹಂತಗಳನ್ನು ಪೋಷಣಾ ಸ್ತರಗಳು ಎನ್ನುತ್ತಾರೆ ಉದಾ ಹುಲ್ಲುಗಾವಲಿನಲ್ಲಿ ಕಂಡುಬರುವ ಆಹಾರ ಸರಪಳಿ

ಹುಲ್ಲು ⇨ ಕೀಟಗಳು ⇨ ಕಪ್ಪೆಗಳು ⇨ ಹಾವುಗಳು

ಹುಲ್ಲು................ಪೋಷಣಾ ಸ್ತರ–1

ಕೀಟಗಳು ....ಪೋಷಣಾ ಸ್ತರ–2

ಕಪ್ಪೆಗಳು ....ಪೋಷಣಾ ಸ್ತರ–3

5) ಪರಿಸರದಲ್ಲಿರುವ ಆಹಾರ ಸರಪಳಿಗಳ ಚಿತ್ರ ಬರೆಯಿರಿ



(a) ಕಾಡಿನಲ್ಲಿ (b) ಹುಲ್ಲುಗಾವಲಿನಲ್ಲಿ ಮತ್ತು (c) ಕೆರೆಯಲ್ಲಿ

6) ಪೋಷಣಾಸ್ತರವನ್ನು ಚಿತ್ರವನ್ನು ಬರೆಯಿರಿ

ಉತ್ತರ:–



7) ಒಂದು ರೂಪದ ಶಕ್ತಿಯು ಇನ್ನೊಂದು ರೂಪಕ್ಕೆ ಬದಲಾಗುವಾಗ ಸ್ವಲ್ಪ ಪ್ರಮಾಣದ ಶಕ್ತಿಯು ಮತ್ತೆ ಬಳಸಲಾಗದ ಸ್ವರೂಪಗಳಲ್ಲಿ ಪರಿಸರದಲ್ಲಿ ಕಳೆದು ಹೋಗುತ್ತದೆ. ಪರಿಸರದ ವಿವಿಧ ಘಟಕಗಳ ನಡುವೆ ಶಕ್ತಿಯ ಹರಿವನ್ನು ವ್ಯಾಪಕವಾಗಿ ಅಧ್ಯಯನ ಮಾಡಲಾಗಿದೆ. ಅದರ ಬಗ್ಗೆ ಬರೆಯಿರಿ

ಉತ್ತರ:–

ಭೂ ಪರಿಸರವ್ಯವಸ್ಥೆಯಲ್ಲಿನ ಎಲ್ಲಾ ಹಸಿರು ಸಸ್ಯಗಳು ತಮ್ಮ ಎಲೆಗಳ ಮೇಲೆ ಬೀಳುವ ಸೌರ ಬೆಳಕಿನ ಪ್ರಮಾಣದಲ್ಲಿ ಕೇವಲ ಶೇ. 1ರಷ್ಟನ್ನು ಸೆರೆಹಿಡಿಯುತ್ತವೆ ಮತ್ತು ಆಹಾರಶಕ್ತಿಯನ್ನಾಗಿ ಪರಿವರ್ತಿಸುತ್ತವೆ.

■ ಹಸಿರು ಸಸ್ಯಗಳನ್ನು ಪ್ರಾಥಮಿಕ ಭಕ್ಷಕಗಳು ಸೇವಿಸಿದಾಗ ಹೆಚ್ಚಿನ ಪ್ರಮಾಣದ ಶಕ್ತಿಯು ಶಾಖವಾಗಿ ಪರಿಸರದಲ್ಲಿ ಕಳೆದುಹೋಗುತ್ತದೆ, ಸ್ವಲ್ಪ ಪ್ರಮಾಣ ಜೀರ್ಣಕ್ರಿಯೆಗೆ ಮತ್ತು ಕೆಲಸ ಮಾಡಲು ಬಳಸಲ್ಪಡುತ್ತದೆ ಮತ್ತು ಸ್ವಲ್ಪಭಾಗ ಬೆಳವಣಿಗೆ ಮತ್ತು ಸಂತಾನೋತ್ಪತ್ತಿಗೆ ಬಳಕೆಯಾಗುತ್ತದೆ. ಇನ್ನುಳಿದ ಆಹಾರದ ಸರಾಸರಿ ಶೇ. 10ರಷ್ಟು ಭಾಗವು ತನ್ನದೇ ದೇಹ ಕಣವಾಗಿ ಮಾರ್ಪಾಟಾಗುತ್ತದೆ ಮತ್ತು ಮುಂದಿನ ಹಂತದ ಭಕ್ಷಕರಿಗೆ ಲಭ್ಯವಾಗುತ್ತದೆ ಆದ್ದರಿಂದ, ಪ್ರತಿಹಂತದಲ್ಲಿ ಕಂಡುಬರುವ ಸಾವಯವ ಪದಾರ್ಥದ ಪ್ರಮಾಣದಲ್ಲಿ ಸರಾಸರಿ ಮುಂದಿನ ಹಂತದ ಭಕ್ಷಕರಿಗೆ ತಲುಪುವ ಪ್ರಮಾಣವನ್ನು ಶೇ. 10 ಎಂದು ಪರಿಗಣಿಸಬಹುದು.

■ ಭಕ್ಷಕರ ಮುಂದಿನ ಹಂತಕ್ಕೆ ಸ್ವಲ್ಪವೇ ಶಕ್ತಿಯು ಲಭ್ಯವಿರುವುದರಿಂದ, ಆಹಾರ ಸರಪಳಿಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತವೆ. ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯು ಉಳಿಯುತ್ತದೆ.

■ ಸಾಮಾನ್ಯವಾಗಿ ಪರಿಸರವ್ಯವಸ್ಥೆಯ ಕೆಳಗಿನ ಪೋಷಣಾಸ್ತರದಲ್ಲಿ ಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ ಅವುಗಳಲ್ಲಿ ಉತ್ಪಾದಕರ ಸಂಖ್ಯೆಯೇ ಅಧಿಕ.

■ ಆಹಾರ ಸರಪಳಿಗಳ ಉದ್ದ ಮತ್ತು ಸಂಕೀರ್ಣತೆಯಲ್ಲಿ ಬಹಳ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರತಿಯೊಂದು ಜೀವಿಯು ಸಾಮಾನ್ಯವಾಗಿ ಇತರ ಅನೇಕ ಜೀವಿಗಳಿಂದ ತಿನ್ನಲ್ಪಡುವ ಎರಡು ಅಥವಾ ಹೆಚ್ಚು ವಿಧದ ಜೀವಿಗಳಿಂದ ತಿನ್ನಲ್ಪಡುತ್ತದೆ. ಹಾಗಾಗಿ, ಈ ಸಂಬಂಧವನ್ನು ನೇರ ರೇಖೆ ಆಹಾರ ಸರಪಳಿಯ ಬದಲಿಗೆ ಆಹಾರಜಾಲ (food web) ಎಂದು ಕರೆಯಲ್ಪಡುವ ಕವಲೊಡೆದ ಸರಪಣಿಯಂತೆ ತೋರಿಸಲಾಗುತ್ತದೆ ಶಕ್ತಿಯ ಹರಿವು ಎರಡು ವಿಷಯಗಳು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಶಕ್ತಿಯ ಹರಿವು ಏಕಮುಖವಾಗಿರುತ್ತದೆ. ಸ್ವಪೋಷಕಗಳಿಂದ ಸೆರೆಹಿಡಿಯಲಾದ ಶಕ್ತಿಯು ಪುನಃ ಸೌರಶಕ್ತಿಗೆ ಹಿಂದಿರುಗುವುದಿಲ್ಲ ಮತ್ತು ಸಸ್ಯಾಹಾರಿಗಳಿಗೆ ಸೇರಿಹೋದ ಶಕ್ತಿಯು ಸ್ವಪೋಷಕರಿಗೆ ಹಿಂದೆ ಬರುವುದಿಲ್ಲ. ಇದು ವಿವಿಧ ಪೋಷಣಾಸ್ತರಗಳ ಮೂಲಕ ಕ್ರಮೇಣವಾಗಿ ಮುಂದೆ ಸಾಗಿದಂತೆ ಹಿಂದಿನ ಪ್ರತಿ ಹಂತದಲ್ಲಿ ಶಕ್ತಿಯ ನಷ್ಟದಿಂದಾಗಿ ಕ್ರಮೇಣ ಕಡಿಮೆಯಾಗುತ್ತದೆ. ಹಂತಗಳಿಗೆ ಸಿಗುವುದಿಲ್ಲ. ಎರಡನೆಯದಾಗಿ, ಪ್ರತಿಯೊಂದು ಪೋಷಣಾಸ್ತರದಲ್ಲಿ ಲಭ್ಯವಿರುವ ಶಕ್ತಿಯು ಪ್ರತಿ ಹಂತದಲ್ಲಿ ಶಕ್ತಿಯ ನಷ್ಟದಿಂದಾಗಿ ಕ್ರಮೇಣ ಕಡಿಮೆಯಾಗುತ್ತದೆ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

EVOLUTION

17. Write brief note on vestigial organs in man.

Ans:- (.....Contd)

(4) Coccyx (or) tail Bone – It is a small triangular bone that lies at the end of sacrum.



The bone if formed by fusion of 3-5 reduced tail vertebrae.

(5) Caecum and vermiform appendix – these two are well developed in herbivorous animals. They occur at the beginning of large intestine and store food for the bacterial digestion of cellulose. However, in human beings the two have become vestigial as food taken by human beings is soft and cooked. Caecum is 6 cm wide small blind sac while vermiform appendix is narrow finger like blind tubular projection of 8–9 cm length.



At times appendix gets infected. The disorder is called appendicitis. The infected appendix is removed surgically (appendectomy).

(6) Auricular or Ear muscles – Anterior, superior and inferior are three patches of muscles attached to external ear or pinna.



They are used in moving the pinna in different directions for gathering sound waves. The requirement has ceased in human beings due to erect posture and ability of head to rotate in different directions. Therefore, ear muscles have become nonfunctional in humans.

(7) Mammae in Males – Males have reduced mammae due to nonrequirement.



(8) Scalp and Abdominal Muscles – They are rudimentary in human beings due to presence of hair. Scalp muscles are fully functional in many mammals for flying off irritating objects. The same is the case with abdominal muscles. But, the muscles of fore head continue to be operational in man for moving eyebrows.

(9) The body of the mammals ids covered by profuse growth of hair. The same are nearly absent in human females while sparse and short hair occur in human males. It is due to covering of body by human beings.

18. Write brief note on vestigial organs in animals.

Ans:- Vestigial organs in animals –

a) Ears of Whales – External ears have little usefulness inside water. They are, therefore, reduced in whales.

b) Teeth in whales – normal teeth have disappeared in whales. The same are replaced by whale bone.

c) Hind limbs in whales – They are absent but in Greenland Whale rudiments of pelvic girdle and hind limbs are present.

d) Pythons and Boas – snakes are limbless. They possess rudiments of reptilian jaw apparatus. Python and Boa also possess rudiments of pelvic girdles and hind limbs.

e) Splint Bones of Horse – Only the third toe is functional in Horse. Second and fourth toes are reduced and are represented by splint bones.



f) Flightless birds – They possess small nonfunctional wings, (Contd.....)

ದೇಶಕ್ಕೆ ಸಂವಿಧಾನವೇ ದಾರಿದೀಪ: ಮೋದಿ

ನವದೆಹಲಿ (ಪಿಟಿಐ): ದೇಶಕ್ಕೆ ಪರಿವರ್ತನೆಯ ಸಮಯದಲ್ಲಿ ಸಂವಿಧಾನವು ದಾರಿದೀಪವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬಣ್ಣಿಸಿದರು.

ಸಂವಿಧಾನ ದಿನಾಚರಣೆಯ ಅಂಗವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, 'ನಮ್ಮ ಸರ್ಕಾರವು ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ತರಲು ಹಲವು ಕಲ್ಯಾಣ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸಿದೆ' ಎಂದು ಪ್ರತಿಪಾದಿಸಿದರು.

ತುರ್ತು ಪರಿಸ್ಥಿತಿಯ ಸಮಯ ಸೇರಿದಂತೆ ದೇಶದ ಅಗತ್ಯತೆಗಳು ಮತ್ತು ನಿರೀಕ್ಷೆಗಳನ್ನು ಈಡೇರಿಸುತ್ತಾ ಜೀವಂತವಾಗಿರುವ ಸಂವಿಧಾನವು 'ಹರಿಯುವ ನದಿ' ಎನಿಸಿದೆ. ಅಲ್ಲದೆ, ಇದು ಬದಲಾಗುತ್ತಿರುವ ಕಾಲದಲ್ಲೂ ರಾಷ್ಟ್ರಕ್ಕೆ ಮಾರ್ಗದರ್ಶನ ನೀಡುವುದನ್ನು ಮುಂದುವರಿಸುತ್ತದೆ ಎಂದು ಬಣ್ಣಿಸಿದರು.

1949ರ ನವೆಂಬರ್ 26ರಂದು ಸಂವಿಧಾನ ಸಭೆಯಲ್ಲಿ ರಾಜೇಂದ್ರ ಪ್ರಸಾದ್ ಅವರು ತಮ್ಮ ಸಮಾರೋಪ ಭಾಷಣದಲ್ಲಿ ಹೇಳಿದ ಮಾತುಗಳನ್ನು ಸ್ಮರಿಸಿದ ಮೋದಿ, 'ದೇಶದ ಹಿತಾಸಕ್ತಿಗಳನ್ನು ಕಾಪಾಡುವ ಪ್ರಾಮಾಣಿಕ ಜನರ ಗುಂಪಿಗಿಂತ ಭಾರತಕ್ಕೆ ಹೆಚ್ಚೇನೂ ಅಗತ್ಯವಿಲ್ಲ. 'ದೇಶ ಮೊದಲು' ಎಂಬ ಈ ಭಾವನೆಯು ಮುಂದಿನ ಶತಮಾನಗಳ ಕಾಲ ಸಂವಿಧಾನವನ್ನು ಜೀವಂತವಾಗಿರಿಸುತ್ತದೆ ಎಂದರು.

'ಸಂವಿಧಾನ ದಿನ' ಆಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದನೆ

'ಸಂವಿಧಾನ: ಬದುಕಿನ ಅವಿಭಾಜ್ಯ ಅಂಗ'

ನವದೆಹಲಿ (ಪಿಟಿಐ): 'ಭಾರತದ ಸಂವಿಧಾನ ನಮ್ಮ ಬದುಕಿನ ಅವಿಭಾಜ್ಯ ಅಂಗವೇ ಆಗಿದೆ. ಅದು ಪ್ರಗತಿಶೀಲ ದಾಖಲೆಯೂ ಆಗಿದೆ. ಇಂತಹ ಶ್ರೇಷ್ಠ ಸಂವಿಧಾನದ ಮೂಲಕ ನಾವು ಸಾಮಾಜಿಕ ನ್ಯಾಯ, ಎಲ್ಲರನ್ನೂ ಒಳಗೊಳ್ಳುವಿಕೆಯಂತಹ ಗುರಿಗಳನ್ನು ಸಾಧಿಸಿದ್ದೇವೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮಂಗಳವಾರ ಹೇಳಿದ್ದಾರೆ.

'ಸಂವಿಧಾನ ರಚನೆಕಾರರು ದೂರದೃಷ್ಟಿ ಉಳ್ಳವರಾಗಿದ್ದರು. ಬದಲಾಗುವ ಸಮಯ ಹಾಗೂ ಅಗತ್ಯಗಳಿಗೆ ತಕ್ಕಂತೆ ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಕೂಡ ರೂಪಿಸಿದ್ದಾರೆ' ಎಂದು ಮುರ್ಮು ಹೇಳಿದರು.

ಸಂವಿಧಾನವನ್ನು ಅಂಗೀಕರಿಸಿ ರುವುದಕ್ಕೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ಸಂಸತ್ ಭವನದ 'ಸಂವಿಧಾನ ಸದನ'ದಲ್ಲಿ ಹಮ್ಮಿಕೊಂಡಿದ್ದ 'ಸಂವಿಧಾನ ದಿನ' ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

'ಜನಸಾಮಾನ್ಯರ ಜೀವನ ಗುಣಮಟ್ಟ ಸುಧಾರಿಸಲು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಒಟ್ಟಾಗಿ ಕಾರ್ಯನಿರ್ವಹಿಸುವುದು ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗದ ಜವಾಬ್ದಾರಿ' ಎಂದೂ ಹೇಳಿದರು.

'ಭಾರತವು ಅಳವಡಿಸಿಕೊಂಡಿರುವ ಹೊಸ ವಿಧಾನಗಳಿಂದಾಗಿ ಜಾಗತಿಕವಾಗಿ ಹೊಸ ಅನನ್ಯತೆ ಪಡೆಯುತ್ತಿದ್ದೇವೆ. ಅಂತರರಾಷ್ಟ್ರೀಯವಾಗಿ ಶಾಂತಿ, ಸುರಕ್ಷತೆ ಖಾತ್ರಿಪಡಿಸಲು ಮಹತ್ವದ ಪಾತ್ರ ವಹಿಸುವಂತೆ ಸಂವಿಧಾನ ರಚನಾಕಾರರು ಭಾರತಕ್ಕೆ ನಿರ್ದೇಶನವನ್ನು ಕೂಡ ನೀಡಿದ್ದಾರೆ' ಎಂದರು.

'ಸಂವಿಧಾನ ದಿನಾಚರಣೆ' ಅಂಗವಾಗಿ ಕೋಲ್ಕತ್ತದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂವಿಧಾನ ಪುಸ್ತಕದ ಮಾದರಿ ಹಿಡಿದು ಸಾಗಿದರು ಎಎಫ್‌ಪಿ ಚಿತ್ರ

ಧರ್ಮಕ್ಕೇ ಮಹತ್ವ ನೀಡಿದರೆ ಸ್ವಾತಂತ್ರ್ಯಕ್ಕೆ ಅಪಾಯ: ಉಪರಾಷ್ಟ್ರಪತಿ ಧನಕರ್

'ರಾಜಕೀಯ ಪಕ್ಷಗಳು ದೇಶಕ್ಕಿಂತಲೂ ಧರ್ಮಕ್ಕೆ ಹೆಚ್ಚು ಮಹತ್ವ ನೀಡಿದಲ್ಲಿ ನಮ್ಮ ಸ್ವಾತಂತ್ರ್ಯಕ್ಕೆ ಮತ್ತೊಮ್ಮೆ ಅಪಾಯ ತಪ್ಪಿದ್ದಲ್ಲ ಎಂಬುದಾಗಿ ಡಾ.ಬಿ.ಆರ್. ಅಂಬೇಡ್ಕರ್ ಎಚ್ಚರಿಸಿದ್ದರು' ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಮಂಗಳವಾರ ಹೇಳಿದರು.

'ಸಂವಿಧಾನ ದಿನ' ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರತಿಯೊಂದನ್ನೂ ಅಡಚಣೆ ಉಂಟು ಮಾಡುವುದೇ ಕಾರ್ಯತಂತ್ರವನ್ನಾಗಿ ಮಾಡಿಕೊಂಡಿದ್ದು ಅದು ಪ್ರಜಾತಾಂತ್ರಿಕ ಸಂಸ್ಥೆಗಳಿಗೆ ಅಪಾಯ ಒಡ್ಡಲಿದೆ' ಎಂದು ಎಚ್ಚರಿಸಿದರು. 'ರಚನಾತ್ಮಕ ಮಾತುಕತೆ, ಚರ್ಚೆ, ಅರ್ಥಪೂರ್ಣ ಸಂವಾದದ ಮೂಲಕ ನಮ್ಮ ಪ್ರಜಾತಾಂತ್ರಿಕ ಸಂಸ್ಥೆಗಳ ಪಾವಿತ್ರ್ಯ ಮರುಸ್ಥಾಪಿಸುವುದು ಹಾಗೂ ಪರಿಣಾಮಕಾರಿ ಜನಸೇವೆ ಮಾಡುವ ಸಮಯ ಬಂದಿದೆ' ಎಂದರು.

ಪ್ರಸ್ತಾವನೆಯ ಆರಂಭಿಕ ಸಾಲುಗಳು ಆಳ ಅರ್ಥ ಹೊಂದಿವೆ. ದೇಶದ ಪ್ರಜೆಗಳ ಕೈಯಲ್ಲಿಯೇ ಅಂತಿಮ ಅಧಿಕಾರವಿದೆ. ಸಂಸತ್ ಎಂಬುದು ಜನರಿಗೆ ದನಿಯಾಗಬೇಕು ಎಂಬ ವಿಶಾಲ ಅರ್ಥ ಅಡಕವಾಗಿದೆ' ಎಂದು ಹೇಳಿದರು.

ರಾಷ್ಟ್ರಪತಿ ಹೇಳಿದ್ದು

- ಸ್ವಾತಂತ್ರ್ಯ ಗಳಿಸಿದ್ದ ದೇಶವು ಸಂವಿಧಾನ ರಚನೆಯ ಮಹತ್ಕಾರ್ಯ ಸಾಧಿಸಿದ್ದಕ್ಕೆ 75 ವರ್ಷಗಳ ಹಿಂದೆ ಇದೇ ದಿನ (ನ.26) 'ಸಂವಿಧಾನ ಸದನ'ದ ಸೆಂಟ್ರಲ್ ಹಾಲ್ ಸಾಕ್ಷಿಯಾಗಿತ್ತು.
- ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದಂತಹ ಮೌಲ್ಯಗಳು ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕವಾಗಿವೆ. ಇವು, ಅನಾದಿ ಕಾಲದಿಂದಲೂ ಭಾರತೀಯರು ಅನುಸರಿಸುತ್ತಿರುವ ಜೀವನಧರ್ಮವೇ ಆಗಿವೆ
- ಪ್ರತಿಯೊಬ್ಬ ಪ್ರಜೆಯು ಮೂಲಭೂತ ಕರ್ತವ್ಯಗಳನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ದೇಶದ ಏಕತೆ, ಸಮಗ್ರತೆ ಕಾಪಾಡುವುದು, ಸೌಹಾರ್ದ ಕಾಪಾಡುವುದು ಹಾಗೂ ಮಹಿಳೆಯರ ಘನತೆ ರಕ್ಷಣೆಯನ್ನು ಖಾತ್ರಿಪಡಿಸಲಾಗಿದೆ
- ಸಂವಿಧಾನದ ಪ್ರಸ್ತಾವನೆಯಲ್ಲಿ ಉಲ್ಲೇಖವಾಗಿರುವ ಆದರ್ಶಗಳ ಒಂದಕ್ಕೊಂದು ಪೂರಕವಾಗಿವೆ. ಇವು, ಭಾರತದ ಪ್ರತಿಯೊಬ್ಬ ಪ್ರಜೆ ಪ್ರಗತಿ ಹೊಂದಿ, ಸಮಾಜಕ್ಕೆ ಕೊಡುಗೆ ನೀಡುವುದಕ್ಕೆ ಅವಕಾಶ ಒದಗಿಸುವಂತಹ ವಾತಾವರಣವನ್ನು ಸೃಷ್ಟಿಸಿವೆ
- ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಹಾಗೂ ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆ ಮೂಲಕ ನಮ್ಮ ಸಾಂವಿಧಾನಿಕ ಆದರ್ಶಗಳು ಗಟ್ಟಿಗೊಳ್ಳುತ್ತಿವೆ. ಸಂಸತ್ ರೂಪಿಸಿದ ಹಲವಾರು ಶಾಸನಗಳು ಜನರ ಆಶೋತ್ತರಗಳನ್ನು ಈಡೇರಿಸಿವೆ
- ಸಮಾಜದಲ್ಲಿರುವ ದುರ್ಬಲ ವರ್ಗಗಳ ಏಳಿಗೆಗೆ ಕಳೆದ ಕೆಲ ವರ್ಷಗಳಲ್ಲಿ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಇವು ಜನರ ಜೀವನ ಗುಣಮಟ್ಟ ಸುಧಾರಿಸಿವೆ ಹಾಗೂ ಅವರ ಏಳಿಗೆಗಾಗಿ ಹೊಸ ಅವಕಾಶಗಳನ್ನು ಸೃಷ್ಟಿಸಿವೆ
- ಮಹಿಳಾ ಮೀಸಲಾತಿ ಕುರಿತ ಕಾನೂನು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳಾ ಸಬಲೀಕರಣದಲ್ಲಿ ಹೊಸ ಶಕೆ ಆರಂಭಕ್ಕೆ ದಾರಿ ಮಾಡಿಕೊಟ್ಟಿದೆ

ರಾಹುಲ್ ವಿರುದ್ಧ ಬಿಜೆಪಿ ಆರೋಪ

'ಸಂಸತ್‌ನಲ್ಲಿ ಆಯೋಜಿಸಿದ್ದ ಸಂವಿಧಾನ ದಿನ ಆಚರಣೆ ಕಾರ್ಯಕ್ರಮದಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ನಮಸ್ಕರಿಸದೇ ಅವರಿಗೆ ಅಗೌರವ ತೋರಿದ್ದಾರೆ' ಎಂದು ಬಿಜೆಪಿ ಮಂಗಳವಾರ ಆರೋಪಿಸಿದೆ.

'ಸಂವಿಧಾನ ದಿನಾಚರಣೆ' ಕಾರ್ಯಕ್ರಮಗಳಲ್ಲದ ಎನ್ನಲಾದ ಎರಡು ವಿಡಿಯೊ ತುಣುಕುಗಳನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ, 'ರಾಹುಲ್ ಗಾಂಧಿ ಎಂತಹ ದುರಹಂಕಾರಿ ಎಂದರೆ, ಅವರು ರಾಷ್ಟ್ರಪತಿ ಅವರಿಗೂ ಗೌರವ ಕೊಡಲಿಲ್ಲ' ಎಂದು ಟೀಕಿಸಿದೆ.

'ಮುರ್ಮು ಅವರು ಬುಡಕಟ್ಟು ಸಮುದಾಯಕ್ಕೆ ಸೇರಿದವರು ಹಾಗೂ ಮಹಿಳೆ. ಅದೇ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಉತ್ತರಾಧಿಕಾರಿ? ಎಂತಹ ಕ್ಷುಲ್ಲಕ ಮನಸ್ಥಿತಿ ಇದು?' ಎಂದು ಹೇಳಿದೆ.

ರಾಷ್ಟ್ರಪತಿ ಮುರ್ಮು ಅವರು ಆಸೀನರಾಗುವುದಕ್ಕೂ ಮುನ್ನವೇ ರಾಹುಲ್ ಗಾಂಧಿ ಅವರು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದ ದೃಶ್ಯವನ್ನು ಬಿಜೆಪಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿದೆ.

ಅಲ್ಲದೇ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಎದ್ದು ನಿಂತುಕೊಳ್ಳುವಂತೆ ರಾಹುಲ್ ಅವರಿಗೆ ಸೂಚಿಸುತ್ತಿರುವ ದೃಶ್ಯವೂ ಈ ವಿಡಿಯೊದಲ್ಲಿದೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ ಹಾಗೂ ಖರ್ಗೆ ಅವರು, ಮುರ್ಮು ಅವರಿಗೆ ವಂದಿಸಲು ನಿಂತಿದ್ದಾಗ, ರಾಹುಲ್ ಅವರು ಅಲ್ಲಿ ಕಾಣಿಸದಿರುವ ದೃಶ್ಯ ಮತ್ತೊಂದು ವಿಡಿಯೊದಲ್ಲಿದೆ.

ವಿಮಾನದಲ್ಲಿ ಪಾನಮತ್ತರಿಂದ ನ್ಯಾಯಮೂರ್ತಿಗಳಿಗೆ ಕಿರಿಕಿರಿ

ನವದೆಹಲಿ (ಪಿಟಿಐ): ವಿಮಾನದಲ್ಲಿ ಇಬ್ಬರು ಪಾನಮತ್ತ ಸಹ ಪ್ರಯಾಣಿಕರಿಂದ ತಮಗೆ ಮತ್ತು ಮತ್ತೊಬ್ಬ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ಇತ್ತೀಚೆಗೆ ಅಹಿತಕರ ಅನುಭವ ಉಂಟಾಯಿತು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಕೆ.ವಿ. ವಿಶ್ವನಾಥನ್ ಮಂಗಳವಾರ ಹೇಳಿದ್ದಾರೆ.

ಅಹ್ಮದಾಬಾದ್‌ನಿಂದ ವಿಮಾನದಲ್ಲಿ ಪ್ರಯಾಣಿಸುವಾಗ ನಡೆದ ಘಟನೆ ಕುರಿತು, ಹಲವು ಪ್ರಯಾಣಿಕರನ್ನು ನಿಭಾಯಿಸಲು ಅಗತ್ಯ ಕ್ರಮವನ್ನು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ವಿಶ್ವನಾಥನ್ ಅವರು ತಮಗಾದ ಕಹಿ ಅನುಭವವನ್ನು ವಿವರಿಸಿದರು.

'ನಮಗೆ ಇತ್ತೀಚೆಗೆ 2.40 ಗಂಟೆಯ ವಿಮಾನ ಪ್ರಯಾಣದಲ್ಲಿ, ಇಬ್ಬರು ಪುರುಷ ಪ್ರಯಾಣಿಕರು ಕಂಠಪೂರ್ತಿ ಕುಡಿದಿದ್ದರು. ಅದರಲ್ಲಿ ಒಬ್ಬ ಶೌಚಾಲಯಕ್ಕೆ ಹೋಗಿ ಮಲಗಿದ್ದ. ಇನ್ನೊಬ್ಬ ಹೊರಗಡೆ ವಾಂತಿ ಮಾಡಲು ಬ್ಯಾಗ್ ಇಟ್ಟುಕೊಂಡಿದ್ದ. ವಿಮಾನ ದಲ್ಲಿದ್ದ ಸಿಬ್ಬಂದಿ ಎಲ್ಲರೂ ಮಹಿಳೆಯರು. 30 ರಿಂದ 35 ನಿಮಿಷವಾದರೂ ಯಾರೂ ಶೌಚಾಲಯದ ಬಾಗಿಲು ತೆರೆಯಲು ಸಾಧ್ಯವಾಗಲಿಲ್ಲ' ಎಂದು ಅವರು ಘಟನೆಯನ್ನು ಎಳೆಎಳೆಯಾಗಿ ವಿವರಿಸಿದರು.

ಗೌರವ ನಮನ

2008 ನವೆಂಬರ್ 26ರಂದು ಮುಂಬೈನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದವರಿಗೆ ಗೇಟ್ ವೇ ಆಫ್ ಇಂಡಿಯಾ ಬಳಿ ನೂರಾರು ಜನರು ಮಂಗಳವಾರ ಗೌರವ ಸಲ್ಲಿಸಿದರು ಪಿಟಿಐ ಚಿತ್ರ

'ಪರಿಶಿಷ್ಟರ ದಾರಿ ನಡುವಿನ ಗೋಡೆ ಗಟ್ಟಿಗೊಳಿಸುತ್ತಿರುವ ಮೋದಿ'

ನವದೆಹಲಿ (ಪಿಟಿಐ): 'ದೇಶದ ದಲಿತರು, ಆದಿವಾಸಿಗಳು ಹಾಗೂ ಒಬಿಸಿಗಳ ದಾರಿಯಲ್ಲಿ ದೊಡ್ಡ ಗೋಡೆ ಇದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಆರ್‌ಎಸ್‌ಎಸ್‌ನವರು ಈ ಗೋಡೆಯನ್ನು ಗಟ್ಟಿಗೊಳಿಸುತ್ತಿದ್ದಾರೆ' ಎಂದು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಂಗಳವಾರ ಆರೋಪಿಸಿದರು.

'ಸಂವಿಧಾನ ರಕ್ಷಕ ಅಭಿಯಾನ' ಉದ್ದೇಶಿಸಿ ಮಾತನಾಡಿದ ಅವರು,'ಈ ಗೋಡೆಯನ್ನು ದುರ್ಬಲಗೊಳಿಸಲು ಯುಪಿಎ ನೇತೃತ್ವದ ಸರ್ಕಾರ ಕ್ರಮ ಕೈಗೊಂಡಿತ್ತು. ಆದರೆ, ಅಗತ್ಯವಿರುವಷ್ಟು ಮಟ್ಟದಲ್ಲಿ ಆ ಕಾರ್ಯ ಮಾಡಲಿಲ್ಲ' ಎಂದರು.

'ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳ ಜನರ ವಿರುದ್ಧ ದೇಶದ ಇಡೀ ವ್ಯವಸ್ಥೆಯನ್ನೇ ಎತ್ತಿ ಕಟ್ಟಲಾಗಿದೆ' ಎಂದೂ ರಾಹುಲ್ ಹೇಳಿದರು.

> ತೆಲಂಗಾಣದಲ್ಲಿ ಜಾತಿಗಣತಿ ಆರಂಭವಾಗಿರುವುದು ಐತಿಹಾಸಿಕ ಕ್ರಮ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ರಾಜ್ಯಗಳಲ್ಲೆಲ್ಲ ಈ ಕಾರ್ಯ ನಡೆಸಲಿದೆ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಸಂಸತ್‌ನ 'ಸಂವಿಧಾನ ಸದನ'ದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಪ್ರಸ್ತಾಪಿಸಿ, 'ಪ್ರಧಾನಿ ಮೋದಿ ಸಂವಿಧಾನವನ್ನು ಓದಿಯೇ ಇಲ್ಲ. ಈ ಮಾತನ್ನು ಬಹಳ ಖಾತ್ರಿಯಿಂದ ಹೇಳಬಲ್ಲೆ. ಒಂದು ವೇಳೆ ಅವರು ಈ ಪುಸ್ತಕವನ್ನು ಓದಿದ್ದಲ್ಲಿ, ಅವರ ಕಾರ್ಯವೈಖರಿ ಈ ರೀತಿ ಇರುತ್ತಿರಲಿಲ್ಲ' ಎಂದ ರಾಹುಲ್, ಸಂವಿಧಾನದ ಪ್ರತಿಯನ್ನು ಪ್ರದರ್ಶಿಸಿದರು.

'ಯುಪಿಎ ಸರ್ಕಾರವು ನರೇಗಾ, ಭೂಸ್ವಾಧೀನ ಕಾಯ್ದೆ ಹಾಗೂ ಆಹಾರದ ಹಕ್ಕು ಕಾಯ್ದೆಗಳನ್ನು ಜಾರಿಗೆ ತಂದಿತ್ತು. ಇವು ಪರಿಶಿಷ್ಟರು, ಆದಿವಾಸಿಗಳು ಹಾಗೂ ಒಬಿಸಿಗಳ ದಾರಿ ಮಧ್ಯದಲ್ಲಿರುವ ಗೋಡೆಯನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿದ್ದ ಕಾರ್ಯಕ್ರಮಗಳಾಗಿದ್ದವು' ಎಂದರು.

'ಈಗ ಒಮ್ಮೆ ಹಿಂದಿರುಗಿ ನೋಡಿದಾಗ, ಅಗತ್ಯದಷ್ಟು ಪ್ರಮಾಣದಲ್ಲಿ ಈ ಗೋಡೆಯನ್ನು ಯುಪಿಎ ಸರ್ಕಾರ ದುರ್ಬಲಗೊಳಿಸಲಿಲ್ಲ ಎಂದೇ ನಾನು ಹೇಳುತ್ತೇನೆ. ಎಷ್ಟೊಂದು ಕಠಿಣ ಕ್ರಮ ಕೈಗೊಳ್ಳಬೇಕಿತ್ತೋ ಆ ಪ್ರಮಾಣದ ಕಾರ್ಯವಾಗಲಿಲ್ಲ' ಎಂದು ಹೇಳಿದರು.

ಟೆಂಟ್ ಮೇಲೆ ಲಾರಿ ಹರಿದು ಐವರ ಸಾವು

ತ್ರಿಶ್ಯೂರ್ (ಕೇರಳ) (ಪಿಟಿಐ): ರಸ್ತೆಬದಿ ಹಾಕಿದ್ದ ಟೆಂಟ್‌ಗಳ ಮೇಲೆ ಲಾರಿ ಹರಿದು, ಇಬ್ಬರು ಮಕ್ಕಳು ಸೇರಿ ಕನಿಷ್ಠ ಐವರು ಮೃತಪಟ್ಟಿರುವ ಘಟನೆ ಕೇರಳದ ತ್ರಿಶ್ಯೂರ್ ಜಿಲ್ಲೆಯಲ್ಲಿ ನಡೆದಿದೆ.

ನಾಟ್ಟಿಕಾ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಮುಂಜಾನೆ ಘಟನೆ ನಡೆದಿದೆ. ಮೃತರು ಅಲೆಮಾರಿಗಳಾಗಿದ್ದು, ಹೆದ್ದಾರಿಯ ಪಕ್ಕದಲ್ಲಿ ತಾತ್ಕಾಲಿಕ ಟೆಂಟ್‌ಗಳಲ್ಲಿ ವಾಸಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಮರದ ದಿಮ್ಮಿಗಳನ್ನು ತುಂಬಿಕೊಂಡಿದ್ದ ಈ ಲಾರಿ, ಕಣ್ಣೂರಿನಿಂದ ಬರುತ್ತಿತ್ತು. ಅಪಘಾತದ ವೇಳೆ ಕ್ಲೀನರ್ ಲಾರಿ ಚಲಾಯಿಸುತ್ತಿದ್ದ. ಆತನ ಬಳಿ ಚಾಲನಾ ಪರವಾನಗಿಯೂ(ಡಿ.ಎಲ್) ಇರಲಿಲ್ಲ. ಚಾಲಕ ಮತ್ತು ಕ್ಲೀನರ್‌ನನ್ನು ವಶಕ್ಕೆ ಪಡೆದಿದ್ದು, ಇಬ್ಬರೂ ಮದ್ಯ ಕುಡಿದಿರುವುದು ದೃಢಪಟ್ಟಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಹಾ' ಸರ್ಕಾರ ರಚನೆ: ಮೋದಿ, ಶಾ ಅಖಾಡಕ್ಕೆ

ಒಂದನೇ ಪುಟದಿಂದ...

ಬಿಜೆಪಿ ಸಿದ್ಧ ಇಲ್ಲ: ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಬಿಜೆಪಿ ಹಾಗೂ ಅದರ ಸೈದ್ಧಾಂತಿಕ ಮಾರ್ಗದರ್ಶಿಯಾಗಿರುವ ಆರ್‌ಎಸ್‌ಎಸ್, ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಹುದ್ದೆಯನ್ನು ಮಿತ್ರಪಕ್ಷಗಳಿಗೆ ಬಿಟ್ಟುಕೊಡಲು ಸಿದ್ಧ ಇಲ್ಲ.

ಫಡಣವೀಸ್ ಅವರೇ ಮುಖ್ಯಮಂತ್ರಿ ಆಗಬೇಕು ಎಂಬುದು ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ರಾಜ್ಯ ಘಟಕದ ಬೇಡಿಕೆ. ಮಿತ್ರಪಕ್ಷ ಶಿವಸೇನಾ ಇದಕ್ಕೆ ಒಪ್ಪುತ್ತಿಲ್ಲ.

ಎರಡು ಬಾರಿ ಮುಖ್ಯಮಂತ್ರಿ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿದ್ದ ಫಡಣವೀಸ್ ಅವರ ಬಗ್ಗೆ ಬಿಜೆಪಿ ಹೈಕಮಾಂಡ್ ಒಲವು ಹೊಂದಿದೆ. ಮುಂದಿನ ಐದು ವರ್ಷ ಅವರೇ ಮುಖ್ಯಮಂತ್ರಿ ಹುದ್ದೆಗೆ ಸೂಕ್ತ ಎಂಬ ನಿಲುವೂ ಅದರದು.

'ಏಕನಾಥ ಶಿಂದೆ ಅವರೇ ಮಹಾಯುತಿಯ ಪ್ರಚಾರವನ್ನು ಮುನ್ನಡೆಸಿದ್ದು, ಅವರ 'ಸಾಮಾನ್ಯ ವ್ಯಕ್ತಿ' ವರ್ಚಸ್ಸು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿರುವ ಕಾರಣ ಅವರೇ ಮುಖ್ಯಮಂತ್ರಿಯಾಗಬೇಕು' ಎಂದು ಶಿವಸೇನಾ ಪ್ರತಿಪಾದಿಸುತ್ತಿದೆ.

ಮಹಾಯುತಿಯ ಮತ್ತೊಂದು ಅಂಗಪಕ್ಷವಾದ ಎನ್‌ಸಿಪಿ (ಅಜಿತ್ ಪವಾರ್), ಫಡಣವೀಸ್ ಅವರೇ ಮುಖ್ಯಮಂತ್ರಿ ಆಗಬೇಕು ಎಂಬುದಕ್ಕೆ ಬೆಂಬಲ ವ್ಯಕ್ತಪಡಿಸಿದೆ.

ಈ ಎಲ್ಲ ಬೆಳವಣಿಗೆಗಳ ಕಾರಣ, ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ನಿರ್ಣಾಯಕ ಹಂತಕ್ಕೆ ತಲುಪಿಲ್ಲ.

ಇನ್ನೊಂದೆಡೆ, 'ದೇವೇಂದ್ರ ಫಡಣವೀಸ್ ಅವರೇ ಮುಖ್ಯಮಂತ್ರಿ ಆಗಬೇಕು. ಇಲ್ಲದಿದ್ದರೆ ಅವರು ಕೇಂದ್ರ ಸಂಪುಟ ಸೇರಬೇಕು' ಎಂದು ಕೇಂದ್ರ ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ರಾಮದಾಸ ಆಠವಲೆ ಹೇಳಿದ್ದಾರೆ.

ಈ ಮಾತಿಗೆ ಪ್ರತಿಕ್ರಿಯಿಸಿರುವ ಶಿವಸೇನಾ ವಕ್ತಾರ ಸಂಜಯ್ ಶಿರ್ಸಾಟ್,'ಆಠವಲೆ ಅವರು ತಮಗೆ ಸಂಬಂಧಿಸದ ವಿಚಾರ ಕುರಿತು ಈ ರೀತಿ ಹೇಳಿಕೆ ನೀಡಬಾರದು' ಎಂದಿದ್ದಾರೆ.

ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ

ಸಂಖ್ಯೆ: ಮನಪಾಬ/ತಾಶಾ/ಟೆ.ಪ್ರ/2024-25 ದಿನಾಂಕ: 26.11.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2023-24 ಮತ್ತು 2024-25ನೇ ಸಾಲಿನ ಸಾಮಾನ್ಯ ನಿಧಿಯಲ್ಲಿ ಟೆಂಡರ್ ಇಟ್ಟ ಕನಿಷ್ಠ ಮೊತ್ತ ರೂ.3.33 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.81.74 ಲಕ್ಷಗಳು ಇರುತ್ತದೆ. ಇಂಡೆಂಟ್ ಸಂಖ್ಯೆ: 1) DMA/2024-25/IND3858, 2) DMA/2024-25/IND3910 & 3) DMA/2024-25/OW/WORK_INDENT32583 ಗೆ ಟೆಂಡರ್ ಸಲ್ಲಿಸಲು ದಿನಾಂಕ: 07.12.2024 ರ ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.12.2024 ರ ಬೆಳಿಗ್ಗೆ 10.30 ಗಂಟೆಗೆ. ಮತ್ತು ಕಾಮಗಾರಿಯ ಎಲ್ಲಾ ವಿವರಗಳಿಗಾಗಿ, ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್: http://kppp.karnataka.gov.in ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/- ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಕುಂದಾಪುರ ವಿಭಾಗ, ಕುಂದಾಪುರ. ದೂ: 08254-230349
ಇ-ಮೇಲ್: kpurforest@yahoo.com, dcfknd@aranya.gov.in

ಸಂ.ಎ2/ಬಿಯುಡಿ/ಇ-ಟೆಂಡರು/ವಿವ-70/2024-25 ದಿನಾಂಕ: 20-11-2024

ಸಂಕ್ಷಿಪ್ತ ಪ್ರಕಟಣೆ

2024-25ನೇ ಸಾಲಿನಲ್ಲಿ ಕುಂದಾಪುರ ವಿಭಾಗದ ವ್ಯಾಪ್ತಿಯಲ್ಲಿ ಕೆ-ಶೋರ್ ಯೋಜನೆಯಡಿ ಅರಣ್ಯೀಕರಣ ಕಾಮಗಾರಿಗಳ ನಿರ್ವಹಣೆಗೆ ಗುತ್ತಿಗೆದಾರರ ಆಯ್ಕೆಗಾಗಿ ಪ್ರಕಟಣೆಯನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ (https://kppp.karnataka.gov.in) ದಿನಾಂಕ: 20-12-2024 ರಂದು ಸಂಜೆ 4.00 ವರೆಗೆ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಗುತ್ತಿಗೆ ಅರ್ಹತೆಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ಕೋರಿದೆ. ಟೆಂಡರು ಪೂರ್ವಭಾವಿ ಸಭೆ ದಿನಾಂಕ: 29-11-2024.

ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ. ದೂರವಾಣಿ 08254-230349

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ವಿಭಾಗ, ಕುಂದಾಪುರ.

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಹಂಪನಕಟ್ಟಾ, ಮಂಗಳೂರು, ದ.ಕ-575001
E-mail ID: supwenlock@gmail.com
ಸಂಖ್ಯೆ: ಎಸ್‌ಯುಪಿ(1)/D-20/2024-25 ದಿನಾಂಕ: 19.11.2024

ಇ-ಟೆಂಡರ್ ಅಧಿಸೂಚನೆ

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಜನರಿಕ್ ಔಷಧಗಳ ಖರೀದಿಗಾಗಿ ಕೆ.ಟಿ.ಪಿ.ಪಿ 1999-2000 ನಿಯಮದಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು kppp portal ಮೂಲಕ ಆಹ್ವಾನಿಸಲಾಗಿದೆ. ವಿವರಗಳನ್ನು kpp.karnataka.gov.in ರಲ್ಲಿ ವೀಕ್ಷಿಸಬಹುದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 20.11.2024, ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 04.12.2024 ಅಪರಾಹ್ನ 4.30ರ ಒಳಗಾಗಿ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.12.2024 04:30 ಕ್ಕೆ, ಇ.ಎಂ.ಡಿ ರೂ. 2.50 ಲಕ್ಷ

(ಅಥವಾ ಅಂತಿಮ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದರೆ ಮರುದಿನ ಸರ್ಕಾರಿ ಕೆಲಸದ ದಿನದಂದು ಬಿಡ್‌ಗಳನ್ನು ತೆರೆಯಲಾಗುವುದು)

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/MNG/KSMCA/891/24-25 dt.26.11.2024

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಛೇರಿ, 1ನೇ ಮಹಡಿ,
ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು-560 052.
ಸಂಖ್ಯೆ: ಉಪ್ರವ್ಯ-1/ಬಿಎಸ್‌ಡಬ್ಲ್ಯೂಎಂಎಲ್/ತಿದ್ದುಪಡಿ/02/2024-25 ದಿನಾಂಕ: 25.11.2024

ತಿದ್ದುಪಡಿ-II

ಟೆಂಡರ್ ಪ್ರಕಟಣೆ ಸಂಖ್ಯೆ. ಉಪ್ರವ್ಯ-1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/08/2024-25 ದಿನಾಂಕ: 07.11.2024 ಕ್ಕೆ ಸಂಬಂಧಿಸಿದಂತೆ ಬಿಡ್ ಪೂರ್ವ ವಿಚಾರಣೆಗಳನ್ನು ಅಪ್‌ಲೋಡ್ ಮಾಡುವ ದಿನಾಂಕವನ್ನು 25.11.2024 ರಿಂದ 27.11.2024 ರ ಸಂಜೆ 5:00 ಗಂಟೆಯವರೆಗೆ ವಿಸ್ತರಿಸಲಾಗಿದೆ ಎಂದು ಸೂಚಿಸುವ ತಿದ್ದುಪಡಿ-II ರನ್ನು ಪ್ರಕಟಿಸಲಾಗುತ್ತಿದೆ. ತಮ್ಮ ವಿಚಾರಣೆಗಳನ್ನು ಕೆಳಕಂಡ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು ಅಥವಾ ನಮ್ಮ ಕಛೇರಿಯನ್ನು ಸಂಪರ್ಕಿಸಬಹುದು.

ಇ-ಮೇಲ್: dgm1bswml@gmail.com

ಕಛೇರಿ ವಿಳಾಸ: ಉಪ ಪ್ರಧಾನ ವ್ಯವಸ್ಥಾಪಕರು-1, ಬಿಎಸ್‌ಡಬ್ಲ್ಯೂಎಂಎಲ್ ಕಛೇರಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560 052.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1,
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾಪ್ರ/3443/ಆಕಾರ್/2024-25

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಆಯುಕ್ತರವರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560001

NO: DTE-PLAN0SPS1/36/2024 Dated: 26/11/2024

ಇ-ಟೆಂಡರ್ ಅಧಿಸೂಚನೆ

ಆಯುಕ್ತರು ಕಾಲೇಜು ಮತ್ತು ಶಿಕ್ಷಣ ಇಲಾಖೆ ಬೆಂಗಳೂರು ಇವರು ಈ ಕೆಳಕಂಡ ಸಾಮಗ್ರಿಗಳನ್ನು ಮತ್ತು ಸೇವೆಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್‌ದಾರರಿಂದ ಇ-ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರೆ ವಿವರಗಳಿಗಾಗಿ http://kppp.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ಮಾಹಿತಿಯು ಈ ಕೆಳಗಿನಂತಿದೆ

ಟೆಂಡರ್ ಮಾಹಿತಿ	ಕೆಪಿಪಿ ಪೋರ್ಟಲ್‌ನಲ್ಲಿ ದಸ್ತಾವೇಜನ್ನು ಅಪ್ ಲೋಡ್ ಮಾಡುವ ದಿನಾಂಕ	ಪ್ರೀ ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
ಟೆಂಡರ್ ಸಂಖ್ಯೆ: DTE/2024-25/IND0021, ಪೀಠೋಪಕರಣಗಳ ಸರಬರಾಜು	23.10.2024	-	28.11.2024 5.30 p.m
ಟೆಂಡರ್ ಸಂಖ್ಯೆ: DTE/2024-25/IND0026, ಪೀಠೋಪಕರಣಗಳ ಸರಬರಾಜು	26.11.2024	04.12.2024 03.00 p.m	10.12.2024 5.30 p.m

The Department reserves the right to cancel or reject the tenders without any notification. Details in this regard may be obtained from the website https://kppp.karnataka.gov.in.

ಸಹಿ/- ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ

DIPR/CP/RO/3429/2024-25

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ)
ಕೊಠಡಿ ಸಂಖ್ಯೆ 123, ಜಿಲ್ಲಾಡಳಿತ ಭವನ, ಗದಗ-582101
Ph & Fax :08372-231877, Email ka.gadag.dudc@gmail.com
ಸಂಖ್ಯೆ:ಜಿನಕೋ/ಅಭಿವೃದ್ಧಿ/ಅಮೃತ್ ನಗರೋತ್ಥಾನ ಹಂತ-4/ವಹಿ-25/2021-22
ದಿನಾಂಕ : 22-11-2024

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು ಜಿಲ್ಲಾನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಲಯ ಗದಗ ಜಿಲ್ಲೆ ಗದಗ ಇವರು ಎರಡು ಲಕೋಟೆ ಪದ್ಧತಿಯಲ್ಲಿ ಕೆ.ಜಿ & ಕೆ.ಡಬ್ಲ್ಯು-2. 3 & 4 ಟೆಂಡರ್ ದಸ್ತಾವೇಜಿನಲ್ಲಿ ಗದಗ ಜಿಲ್ಲೆಯ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ ಮುನ್ಸಿಪಾಲಿಟಿ ಹಂತ-4ರ ಯೋಜನೆಯಡಿ ಪ್ಯಾಕೇಜ್ ಪದ್ಧತಿಯಲ್ಲಿ ಅರ್ಹ ದರ್ಜೆಯ ಗುತ್ತಿಗೆದಾರರಿಂದ / ಪೂರೈಕೆದಾರರಿಂದ ಕೆಟಿಪಿಪಿ ಅಧಿನಿಯಮ 1999 ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಬಿಡ್ಡದಾರರು / ತಯಾರಕರು ಟೆಂಡರ್ ವಿವರಗಳನ್ನು e-Procurement portal ರಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು electronic ಪದ್ಧತಿಯಲ್ಲಿ ತುಂಬಿ ನಿಗಧಿಪಡಿಸಿದ ದಿನಾಂಕಗಳನ್ನು ಟೆಂಡರ್ www.kppp.karnataka.gov.in. ಸಲ್ಲಿಸಬಹುದಾಗಿದೆ. (1) ಮುಂಡರಗಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಬಗೆಯ ಕಟ್ಟಡಗಳ ನಿರ್ಮಾಣ ಕಾಮಗಾರಿ DMA/2024-25/OW/WORK_INDENT17797/CALL-2 (ಟೆಂಡರ್‌ಗಿಟ್ಟ ಮೊತ್ತ ರೂ. 108.01 ಲಕ್ಷ) (2) ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಸತ್ಯಭವನ (10 ಸ್ಥಳಗಳಲ್ಲಿ) ನಿರ್ಮಾಣ ಕಾಮಗಾರಿ DMA/2024-25/BD/WORK_INDENT32573. (ಟೆಂಡರ್‌ಗಿಟ್ಟ ಮೊತ್ತ ರೂ. 40.58 ಲಕ್ಷ) (3) ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಸ್ಪೋರ್ಟ್ಸ್ ಕೋರ್ಟ್‌ಗಳ ನಿರ್ಮಾಣ ಕಾಮಗಾರಿ DMA/2024-25/OW/WORK_INDENT32574. (ಟೆಂಡರ್‌ಗಿಟ್ಟ ಮೊತ್ತ ರೂ. 74.24 ಲಕ್ಷ) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : 07-12-2024 upto 17.00 hr ಟೆಂಡರ್ ತೆರೆಯುವ ದಿನಾಂಕ : (Technical Bid) 09-12-2024 at 11.00 hrs. (4) MOTORIZED TWO WHEELER 124 CC AND ABOVE GEAR LESS WITH RETRO FITMENT OF ADDITIONAL TWO WHEELS ATTACHMENT ಗಳನ್ನು ಪೂರೈಸುವುದು. DMA/2024-25/IND3054/CALL-2. ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : 10-12-2024 upto 17.30 hrs ಟೆಂಡರ್ ತೆರೆಯುವ ದಿನಾಂಕ: (Technical Bids) 12-12-2024 at 10.30 hrs. ಸದರಿ ಟೆಂಡರ್‌ಗೆ ಸಂಬಧಿಸಿದಂತೆ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ e-Procurement portal ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾನಗರಾಭಿವೃದ್ಧಿ ಕೋಶ ಗದಗ.

ವಾಸಾಸಂಇ/ಗದಗ/ಕೆಎಸ್‌ಎಂಸಿಎ/412/2024-25

ರೇಷ್ಮೆ ಉಪನಿರ್ದೇಶಕರ ಕಛೇರಿ, (ಜಿ.ಪಂ.,),
ಚಿತ್ರದುರ್ಗ ಎನ್.ಹೆಚ್.-04, ಚಿತ್ರದುರ್ಗ-577501
ಫೋನ್ : 08182-222816 ಇ-ಮೇಲ್:dds.zp.cta@gmail.com
ಸಂ.ತಾಂ3/ಸೋ.ನಿ/ಅ.ಟಿ./20/2023-24 ದಿನಾಂಕ: 20.11.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

(ಇ-ಪ್ರಕ್ಯೂರ್‌ಮೆಂಟ್ ಮೂಲಕ)

ಚಿತ್ರದುರ್ಗ ಜಿಲ್ಲೆಯ ರೇಷ್ಮೆ ಬೆಳೆಗಾರಿಗೆ ವಿತರಿಸಲು ರೇಷ್ಮೆ ಬೆಳೆಗೆ ಬಳಸಲು ಗ್ರೇಡ್ ಒನ್ ಬ್ಲೀಚಿಂಗ್ ಪೌಡರ್, ಸೋಂಕು ನಿವಾರಕಗಳು, ಸಸ್ಯಸಂವರ್ಧಕಗಳು ಮತ್ತು ಸ್ಲೇಕ್ಡ್ ಲೈಮ್ ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ 'ಇ- ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppy Karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ- ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

(1) ಟೆಂಡರ್ ವಿವರ: ರೇಷ್ಮೆ ಬೆಳೆಗೆ ಬಳಸುವ ಗ್ರೇಡ್ ಒನ್ ಬ್ಲೀಚಿಂಗ್ ಪೌಡರ್, ಸೋಂಕು ನಿವಾರಕಗಳು ಮತ್ತು ಸ್ಲೇಕ್ಡ್ ಲೈಮ್ ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆ (2) ಟೆಂಡರ್ ಸಂಖ್ಯೆ: SD/2024-25/IND0056 Date:21.11.2024 (3) ಕಛೇರಿ ವಿಳಾಸ ರೇಷ್ಮಾ ಉಪನಿರ್ದೇಶಕರ ಕಛೇರಿ, ಎನ್.ಹೆಚ್-04, ಚಿತ್ರದುರ್ಗ-577501 (4) ಟೆಂಡರ್ ಡೌನ್‌ಲೋಡ್ ಮಾಡಲು & ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 06.12.2024 (5) ಇ.ಎಂ ಡಿ ಹಾಗೂ ಭದ್ರತಾ ಠೇವಣಿ ಮೊತ್ತ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: & ಸಮಯ 07.12.2024ರ ಮಧ್ಯಾಹ್ನ: 1.23 ಗಂಟೆಗೆ (7) ಆರ್ಥಿಕ ಬಿಡ್ ತೆರೆಯುವ ದಿನಾಂಕ:10.12.2024 ಮಧ್ಯಾಹ್ನ: 01.23 ಗಂಟೆಗೆ (ತಾತ್ಕಾಲಿಕ ವೇಳಾಪಟ್ಟಿ-ಬದಲಾವಣೆಗೆ ಬಳಪಟ್ಟಿದೆ.) ಆಸಕ್ತ ಸರಬರಾಜುದಾರರು ಇ-ಪೋರ್ಟಲ್ ಮುಖಾಂತರ ಬಿಡ್ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

DIPR/CTA/KSMCA/395/2024-25

ಸಹಿ/- ರೇಷ್ಮೆ ಉಪ ನಿರ್ದೇಶಕರು,
(ಜಿ.ಪಂ), ಚಿತ್ರದುರ್ಗ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop
ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-667/2024-25/CALL-2 ದಿನಾಂಕ: 26.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Name of the Item	Quantity	EMD (Rs.)
1	Manufacturing and supply of Bread, Bun, Muffin & Cakes under Nandini brand including storage, Marketing, distribution till retailers for a period of two years.	As detailed in tender document	10,86,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ : 26.11.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 03.12.2024 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 10.12.2024 ರ ಸಂಜೆ 5.00 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 12.12.2024 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
Tel. No.: 08338-275101 E-Mail: ee.rdws.ckd@gmail.com
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು3&4:ಟೆಂಡರ್:2024-25/12/1685 ದಿನಾಂಕ:25/11/2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3,&4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ-ಪ್ರೊಕ್ಯೂರಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No 8719, 8723

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೊಟಾಲ್ (https://kppp.karnataka.gov.in/) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01)ಟೆಂಡರ ಪೂರ್ವಬಾವಿ ಸಭೆ:30-11-2024 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ, 02)ಇ-ಪೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 03-12-2024 ಸಾಯಂಕಾಲ 17.00 ಘಂಟೆವರೆಗೆ, 03)ಇ-ಪ್ರೊಕ್ಯೂರಮೆಂಟ್ ತಾಂತಿಕ ಬಿಡ್ಡನ್ನು ತೆರೆಯುವ ದಿನಾಂಕ:04-12-2024 ಸಾಯಂಕಾಲ 5.30 ಘಂಟೆ ನಂತರ ತೆರೆಯಲಾಗುವುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.

DIPR/BGM/RO-NO-1197/KSMCA/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಆಯ್ಕೆ ಮಾಡುವ ನಿಮ್ಮ ಶಕ್ತಿಯನ್ನು ವಿವೇಕದಿಂದ ಬಳಸಿ.
–ಆಗ್ ಮ್ಯಾಂಡಿನೊ

ಉಪಚುನಾವಣೆ: ಕಾಂಗ್ರೆಸ್‌ಗೆ ಹುರುಪು ಇನ್ನಾದರೂ ಆಡಳಿತಕ್ಕೆ ಚುರುಕು ಮುಟ್ಟಿಸಿ

ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳು ಪ್ರತಿಷ್ಠೆಯಾಗಿ ಪರಿಗಣಿಸಿದ್ದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಎಲ್ಲ ಸ್ಥಾನಗಳನ್ನೂ ಗೆದ್ದುಕೊಂಡಿದೆ. ಶಕ್ತಿಯನ್ನು ಪಣಕ್ಕಿಟ್ಟು ಪೈಪೋಟಿ ನೀಡಿದ್ದ ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಸೋಲನುಭವಿಸಿದೆ. ಉಪ ಚುನಾವಣೆಗಳಲ್ಲಿ ಆಡಳಿತ ಪಕ್ಷಕ್ಕೆ ಅನುಕೂಲಕರ ವಾತಾವರಣ ಇರುವುದು ನಿಜ. ಆದರೆ, ಈ ಸಲ ಕಾಂಗ್ರೆಸ್‌ಗೆ ಅಂತಹ ಅನುಕೂಲಕರ ಪರಿಸ್ಥಿತಿಯೇನೂ ಇರಲಿಲ್ಲ. ಕೆಲವೇ ತಿಂಗಳ ಹಿಂದೆ ನಡೆದ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ ಆಗಿತ್ತು. ಸರ್ಕಾರದ ಕೊರಳಿಗೆ ವಿವಿಧ ಹಗರಣ–ಆರೋಪಗಳು ಸುತ್ತಿಕೊಂಡಿದ್ದವು. ಇವುಗಳನ್ನು ರಾಜಕೀಯ ಅಸ್ತ್ರವಾಗಿ ವಿರೋಧ ಪಕ್ಷಗಳು ಬಳಸಿಕೊಂಡಿದ್ದವು. ಇದರಿಂದಾಗಿ ಸರ್ಕಾರದ ವರ್ಚಸ್ಸಿಗೆ ಸ್ವಲ್ಪಮಟ್ಟಿಗೆ ಕುಂದು ಉಂಟಾಗಿತ್ತು. ವಾಲ್ಮೀಕಿ ನಿಗಮದ ಹಣದ ವರ್ಗಾವಣೆ ಅಕ್ರಮ, ಮುಡಾ ಬದಲಿ ನಿವೇಶನ ಹಂಚಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬದ ವಿರುದ್ಧವೇ ಪ್ರಕರಣ ದಾಖಲು, ವಕ್ಫ್ ಮಂಡಳಿಯ ಆಸ್ತಿಗೆ ಸಂಬಂಧಿಸಿದ ವಿವಾದವನ್ನು ಬಳಸಿಕೊಂಡು ಉಪಚುನಾವಣೆಯಲ್ಲಿ ಮೇಲುಗೈ ಸಾಧಿಸಲು ವಿರೋಧ ಪಕ್ಷಗಳು ಪ್ರಯತ್ನಿಸಿದ್ದವು. ಇದರಿಂದಾಗಿ ಇರಿಸುಮುರಿಸಿಗೆ ಒಳಗಾಗಿದ್ದ ಕಾಂಗ್ರೆಸ್‌ಗೆ ಉಪಚುನಾವಣೆಯ ಫಲಿತಾಂಶ ಚೈತನ್ಯ ತುಂಬಿದೆ.

ಗೆಲುವಿನಲ್ಲಿ ಮೈಮರೆಯದೆ ಜನರ ದುಃಖ– ದುಮ್ಮಾನ ಆಲಿಸುವ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಕೆಲಸಕ್ಕೆ ಆಡಳಿತಾರೂಢರು ಮುಂದಾಗಬೇಕಿದೆ

ಚುನಾವಣೆಯನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದರು. 2023ರಲ್ಲಿ ಗೆದ್ದಿದ್ದ ಒಂದು ಕ್ಷೇತ್ರವನ್ನು ಉಳಿಸಿಕೊಳ್ಳುವುದರ ಜತೆಗೆ, ಉಳಿದ ಎರಡು ಕ್ಷೇತ್ರಗಳಲ್ಲಿಯೂ ತಮ್ಮ ಅಸ್ತಿತ್ವ ಸಾಬೀತುಪಡಿಸಬೇಕಿತ್ತು. ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ತಾವು ಎರಡು ಬಾರಿ ಪ್ರತಿನಿಧಿಸಿದ್ದ ಚನ್ನಪಟ್ಟಣ ಕ್ಷೇತ್ರದಲ್ಲಿ ಮಗನನ್ನು ಗೆಲುವಿನ ದಡ ಮುಟ್ಟಿಸಿ, ತಮ್ಮ ಸಾಮರ್ಥ್ಯವನ್ನು ತೋರುವ ಸವಾಲು ಇತ್ತು. ಶಿಗ್ಗಾವಿಯನ್ನು ನಾಲ್ಕು ಬಾರಿ ಪ್ರತಿನಿಧಿಸಿ, ಮುಖ್ಯಮಂತ್ರಿಯೂ ಆಗಿದ್ದ ಬಸವರಾಜ ಬೊಮ್ಮಾಯಿ ಅವರಿಗೂ ತಮ್ಮ ಮಗನ ಗೆಲುವು ಮುಖ್ಯವಾಗಿತ್ತು. ಕ್ಷೇತ್ರದಲ್ಲಿನ ಪ್ರಭಾವಳಿ, ಚುನಾವಣೆ ಕಾರ್ಯತಂತ್ರ, ಜಾತಿಬಲ ಹಾಗೂ ಸಂಪನ್ಮೂಲ ಹೀಗೆ ಎಲ್ಲದರಲ್ಲೂ ಆಡಳಿತ ಮತ್ತು ವಿರೋಧ ಪಕ್ಷದವರು ಸಮಬಲದ ಪೈಪೋಟಿ ನೀಡುವಷ್ಟು ಬಲಾಢ್ಯರೇ ಆಗಿದ್ದರು. ಇವುಗಳನ್ನು ಪರಿಗಣಿಸಿ ಫಲಿತಾಂಶವನ್ನು ನಿಕಷಕ್ಕೆ ಒಡ್ಡಿದರೆ, ಕಾಂಗ್ರೆಸ್‌ಗೆ ದಕ್ಕಿರುವ ಗೆಲುವು ಸಾಮಾನ್ಯವಾದುದಲ್ಲ ಎಂಬುದು ಮನವರಿಕೆಯಾಗುತ್ತದೆ. ಚನ್ನಪಟ್ಟಣದಲ್ಲಿ ಮೊಮ್ಮಗನ ಗೆಲುವಿಗಾಗಿ ಎಚ್‌.ಡಿ. ದೇವೇಗೌಡ ಅವರೂ ಶ್ರಮ ಹಾಕಿದ್ದರು. ಲೋಕಸಭೆ ಚುನಾವಣೆಯಲ್ಲಿ ತಮ್ಮ ಸಹೋದರ ಡಿ.ಕೆ. ಸುರೇಶ್ ಸೋಲಿನಿಂದ ಆದ ರಾಜಕೀಯ ಹಿನ್ನಡೆಗೆ ತಿರುಗೇಟು ಕೊಡುವ ಹವಣಿಕೆಯಲ್ಲಿ ಶಿವಕುಮಾರ್ ಇದ್ದರು. ಬಿಜೆಪಿಯಲ್ಲಿದ್ದ ಸಿ.ಪಿ. ಯೋಗೇಶ್ವರ್ ಕೊನೇ ಗಳಿಗೆಯಲ್ಲಿ ಕಾಂಗ್ರೆಸ್ ಸೇರಿ ಹುರಿಯಾಳಾದರೂ 25 ಸಾವಿರಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಈ ಗೆಲುವು ಶಿವಕುಮಾರ್ ಕೈ ಬಲಪಡಿಸಿದೆ. ಇದರಿಂದಾಗಿ ರಾಮನಗರ ಜಿಲ್ಲೆಯಲ್ಲಿ ಜೆಡಿಎಸ್‌ಗೆ ಪ್ರಾತಿನಿಧ್ಯ ಇಲ್ಲದಂತಾಗಿದೆ. ಬಿ.ವೈ. ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ಮೊದಲು ಎದುರಿಸಿದ ಉಪಚುನಾವಣೆಯಲ್ಲಿ ಆಗಿರುವ ಸೋಲು ಅವರಿಗೆ ಹಿನ್ನಡೆ ಉಂಟುಮಾಡಿದೆ.

ಕಾಂಗ್ರೆಸ್ ಜಾರಿಗೆ ತಂದ 'ಗ್ಯಾರಂಟಿ' ಯೋಜನೆಗಳು ಮುಂದುವರಿಯುವುದರ ಬಗ್ಗೆ ಅನುಮಾನ ಮೂಡಿಸುವ ರೀತಿಯಲ್ಲಿ ಬಿಜೆಪಿ–ಜೆಡಿಎಸ್ ನಾಯಕರು ಮಾತನಾಡಿದ್ದರು. ಸಿದ್ದರಾಮಯ್ಯ ಅವರ ಸೊಕ್ಕು ಮುರಿಯುತ್ತೇವೆ, ಸರ್ಕಾರ ಉರುಳಿಸುತ್ತೇವೆ ಎಂಬ ಮಾತುಗಳನ್ನೂ ಆಡಿದ್ದರು. ಇದು ಕೂಡ ಫಲಿತಾಂಶದ ಮೇಲೆ ಪರಿಣಾಮ ಬೀರಿರಬಹುದು. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನಾಯಕತ್ವಕ್ಕೆ ಈ ಚುನಾವಣೆ ಬಲ ತಂದುಕೊಟ್ಟಿದೆ. ಇಷ್ಟಾಗಿಯೂ ಸಂಡೂರಿನಲ್ಲಿ ತಿಣುಕಾಡಿ ಗೆದ್ದಿರುವುದು ಕಾಂಗ್ರೆಸ್‌ಗೆ ಎಚ್ಚರಿಕೆಯೂ ಆಗಿದೆ. ಗೆಲುವಿನಲ್ಲಿ ಮೈಮರೆಯದೆ, ಜನರ ಮಧ್ಯೆ ಹೋಗಿ ಅವರ ದುಃಖ– ದುಮ್ಮಾನ ಆಲಿಸುವ, ಅಭಿವೃದ್ಧಿಗೆ ವೇಗ ತುಂಬುವ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಕೆಲಸಕ್ಕೆ ಅಧಿಕಾರದ ಚುಕ್ಕಾಣಿ ಹಿಡಿದವರು ಒತ್ತು ನೀಡಲು ಇದು ಸಕಾಲ.

ದಿನದ ಟ್ವೀಟ್

ಎಚ್ಚರ ವಹಿಸಿ, ಅಪಘಾತ ತಪ್ಪಿಸಿ

ಬಹುತೇಕ ಬೈಕ್ ಸವಾರರು ತಮಗೆ ಅಪಾಯಕಾರಿ ಆಗಿದ್ದರೂ ಕೆಲವೇ ಸೆಕೆಂಡುಗಳಷ್ಟು ಸಮಯ ಉಳಿಸಲು, ಅತ್ಯಂತ ಕಿರಿದಾದ ಜಾಗಗಳಲ್ಲಿ ನುಸುಳಿಕೊಂಡು ಹೋಗುತ್ತಾರೆ. ಅಂತಹವರು ಬಸ್ಸುಗಳು ಮತ್ತು ಲಾರಿಗಳಿಂದ ಅಪಘಾತಕ್ಕೆ ಈಡಾಗುವುದು ಹೆಚ್ಚು. ದೊಡ್ಡ ವಾಹನಗಳು ಟರ್ನ್ ತೆಗೆದುಕೊಳ್ಳುವವರೆಗೆ ಕಾಯದ ಬೈಕ್ ಸವಾರರು ಅಲ್ಲಿನ ಇಕ್ಕಟ್ಟಾದ ಸ್ಥಳದಲ್ಲೇ ನುಗ್ಗಿಕೊಂಡು ಹೋಗುತ್ತಾರೆ. ಅದು ಅಪಾಯಕಾರಿ ಎಂಬುದು ಅವರಿಗೂ ಗೊತ್ತು, ಆದರೂ ಅದನ್ನು ಲೆಕ್ಕಿಸುವವರು ಯಾರು? ಬರೀ ಒಂದಷ್ಟು ಪೆಟ್ರೋಲ್ ಉಳಿಸುವ ಸಲುವಾಗಿ ಹಲವು ಚಾಲಕರು ತಪ್ಪಾಗಿ ತಿರುವುಗಳನ್ನು ತೆಗೆದುಕೊಂಡು ಅಪಘಾತಗಳಿಗೆ ಕಾರಣರಾಗುತ್ತಾರೆ.

ವರುಣ್ ರಾವ್, ಎಂಜಿನಿಯರ್

ಕಿಡಿನುಡಿ

ನಮ್ಮ ಸಂಸದರು ಮತ್ತು ಶಾಸಕರು ಒಂದಲ್ಲ ಒಂದು ಕಾರಣದಿಂದ ಕಲಾಪವನ್ನು ಮುಂದೂಡುವಂತೆ ಮಾಡಿದಾಗ, ಅಂತಹ ದಿನಗಳಲ್ಲಿ ಅವರಿಗೆ ವೇತನ, ಭತ್ಯೆಯಂತಹವು ಸಿಗದಂತೆ ಮಾಡಿದರೆ ಹೇಗೆ? ವಿಷಯ ತಮ್ಮ ಬುಡಕ್ಕೇ ಬಂದಾಗ ಸರಿಯಾಗಿ ನಡೆದುಕೊಳ್ಳುವುದನ್ನು ಅವರು ಕಲಿಯುತ್ತಾರೆ.

ಜಸ್‌ಪ್ರೀತ್ ಸಿಂಗ್

25 ವರ್ಷಗಳ ಹಿಂದೆ

ಶನಿವಾರ, 27-11-1999

• ಕಲ್ಯಾಣ್ ಸಿಂಗ್ ಟೀಕೆ ಸಹಿಸಲು ಅಸಾಧ್ಯ ಅಡ್ವಾಣಿ ಎಚ್ಚರಿಕೆ

ನವದೆಹಲಿ, ನ. 26 (ಪಿಟಿಐ)– ತಮಗೆ ವಿವರಣೆ ನೀಡಲು ಯಾವುದೇ ರೀತಿಯ ಅವಕಾಶ ನೀಡದೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು ಎಂಬ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ಹೇಳಿಕೆ 'ಅತ್ಯಂತ ಬೇಜವಾಬ್ದಾರಿಯುತ ಮತ್ತು ಆಧಾರರಹಿತ' ಎಂದು ಕೇಂದ್ರ ಗೃಹ ಸಚಿವ ಎಲ್‌.ಕೆ. ಅಡ್ವಾಣಿ ಅವರು ಹೇಳಿದ್ದಾರೆ.

ತಮ್ಮ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕಲ್ಯಾಣ್ ಸಿಂಗ್ ಅವರ ಹೇಳಿಕೆಗೆ ಇಂದು ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ತಮ್ಮ ವಿರುದ್ಧ ಮಾಡಿರುವ ಆರೋಪ 'ಆಧಾರರಹಿತ' ಎಂದಿದ್ದಾರೆ.

ಮುಲಾಯಂ ಸಿಂಗ್ ಯಾದವ್ ಅವರ ಮಗನ ಮದುವೆಯ ಆರತಕ್ಷತೆ ಸಮಾರಂಭದಲ್ಲಿ ಅವರು ವರದಿಗಾರರ ಜತೆ ಮಾತನಾಡಿದರು.

• ಗ್ರಾಮಾಂತರ ಕೃಪಾಂಕ ರದ್ದು: ಹೈಕೋರ್ಟಿನ ಮುದ್ರೆ

ಬೆಂಗಳೂರು, ನ. 26– ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಕೃಪಾಂಕ ಕೊಡುವುದನ್ನು ರದ್ದುಗೊಳಿಸಿದ ಹೈಕೋರ್ಟಿನ ಏಕ ನ್ಯಾಯಮೂರ್ತಿಯವರ ತೀರ್ಪನ್ನು ವಿಭಾಗೀಯ ನ್ಯಾಯಪೀಠ ಇಂದು ಎತ್ತಿಹಿಡಿಯಿತು.

ಕೃಪಾಂಕ ಕೊಡುವುದು ಸಂವಿಧಾನದ 14, 15 ಮತ್ತು 16ನೇ ವಿಧಿಗಳಿಗೆ ವಿರುದ್ಧವಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ವೈ. ಭಾಸ್ಕರ ರಾವ್ ಮತ್ತು ನ್ಯಾಯಮೂರ್ತಿ ಎ.ವಿ. ಶ್ರೀನಿವಾಸ ರೆಡ್ಡಿ ಅವರಿದ್ದ ವಿಭಾಗೀಯ ನ್ಯಾಯಪೀಠ ಅಭಿಪ್ರಾಯಪಟ್ಟಿತು.

50 ವರ್ಷಗಳ ಹಿಂದೆ

ಬುಧವಾರ, 27-11-1974

• ನಾಡಬಾಂಬ್ ಸಹಿತ ಲೋಕಸಭೆಗೆ ನುಸುಳಲೆತ್ನ

ನವದೆಹಲಿ, ನ. 26– ಸ್ಫೋಟಕ ವಸ್ತುವಿದ್ದ ಸೀಸೆ ಮತ್ತು ಚೂರಿ ಸಹಿತ ಪ್ರೇಕ್ಷಕರ ಗ್ಯಾಲರಿಯನ್ನು ಪ್ರವೇಶಿಸಲು ಯತ್ನಿಸಿದ 24 ವರ್ಷದ ಯುವಕನಿಗೆ ಲೋಕಸಭೆ ಇಂದು ಡಿಸೆಂಬರ್ 20ರವರೆಗೆ ಕಠಿಣ ಶಿಕ್ಷೆ ವಿಧಿಸಿತು.

ಯುವಕನ ಹೆಸರು ಇಂದ್ರಜಿತ್ ಸಿಂಗ್. ಲೋಕಸಭೆಯ ಕಾವಲು ಸಿಬ್ಬಂದಿ ಈ ದಿನ ಮಧ್ಯಾಹ್ನ 12.25ರಲ್ಲಿ ಆತನನ್ನು ಬಂಧಿಸಿತು. ಆತ ಪ್ರೇಕ್ಷಕರ ಗ್ಯಾಲರಿ ಪ್ರವೇಶಿಸಲು ಕಾಯುತ್ತಿದ್ದ.

ಯುವಕನಿಗೆ ಶಿಕ್ಷೆ ವಿಧಿಸುವ ನಿರ್ಣಯವನ್ನು ಸಂಸದೀಯ ವ್ಯವಹಾರಗಳ ಸಚಿವ ರಘುರಾಮಯ್ಯ ಅವರು ಮಂಡಿಸಿದರು.

• 'ಹಣ, ಹೆಂಡಕ್ಕೆ ಮತ ತಪ್ಪಿಸಲು' ಹೊಸ ಪಕ್ಷ

ಬೆಂಗಳೂರು, ನ. 26– 'ಹಣ, ಹೆಂಡಕ್ಕಾಗಿ ತಮ್ಮ ಪವಿತ್ರವಾದ ಮತಗಳನ್ನು ಮಾರಿಕೊಳ್ಳದಂತೆ, ಸ್ವಾರ್ಥ ಸಾಧಕರು ಹಾಗೂ ಭ್ರಷ್ಟರಿಗೆ ಮತ ಕೊಡದಿರುವಂತೆ' ಜನಸಾಮಾನ್ಯರಲ್ಲಿ ತೀವ್ರ ಪ್ರಚಾರ ನಡೆಸುವ ಉದ್ದೇಶದಿಂದ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದಿದೆ.

ಕಳೆದ 24ರಂದು ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರ ಮನೆಯಲ್ಲಿ ನಡೆದ ಸಭೆಯೊಂದರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲು ನಿರ್ಧಾರ ಕೈಗೊಳ್ಳಲಾಯಿತು.

ಕಡಿದಾಳ್ ಮಂಜಪ್ಪನವರ ಪ್ರಧಾನ ಸಂಚಾಲಕತ್ವದಲ್ಲಿ ಮುಂದಿನ ಕಾರ್ಯಕ್ರಮ ರೂಪಿಸಲು ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲಾಯಿತು.

ಮಹತ್ವದ ಅಂಶಗಳಿಂದಾಗಿ ಇದು ಇತರ ದೇಶಗಳ ಸಂವಿಧಾನಗಳಿಗಿಂತ ಭಿನ್ನವಾಗಿದೆ

ಭಾರತ ಸಂವಿಧಾನ: ಜಗತ್ತಿಗೇ ದಾರಿದೀಪ

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಭಾರತದ ಸಂವಿಧಾನಕ್ಕೀಗ 75 ವಸಂತಗಳ ಸಂಭ್ರಮ. ಸಂವಿಧಾನ ಕರಡು ರಚನಾ ಸಮಿತಿಯು ರಚಿಸಿದ್ದ ಭಾರತದ ಸಂವಿಧಾನವನ್ನು 1949ರ ನ. 26ರಂದು ಅಂಗೀಕರಿಸಲಾಗಿತ್ತು. ಜಗತ್ತಿನಲ್ಲಿಯೇ ಅತ್ಯಂತ ಶಕ್ತಿಶಾಲಿ ಪ್ರಜಾಪ್ರಭುತ್ವವಿರುವ, ಬಹುತ್ವವನ್ನು ಒಪ್ಪಿಕೊಂಡಿರುವ, ಹೆಚ್ಚು ಜನಸಂಖ್ಯೆ ಇರುವ ಭಾರತಕ್ಕೆ ನವೆಂಬರ್ 26ರ ದಿನ ಅತೀವ ಸಂಭ್ರಮದ್ದು ಎಂದರೆ ತಪ್ಪಾಗುವುದಿಲ್ಲ.

ಈ 75 ವಸಂತಗಳ ಪ್ರಯಾಣದ ಹಾದಿಯು ಸುಗಮವಾಗಿಯೇನೂ ಇರಲಿಲ್ಲ. ಹಲವು ಏರಿಳಿತಗಳನ್ನು ಈ ಪ್ರಯಾಣ ಕಂಡಿದೆ. ಆದರೆ, ಭಾರತವು ಸಾಧಿಸಿದ ಪ್ರಗತಿಯನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ. ಶಕ್ತಿಯುತ ಆರ್ಥಿಕತೆ ಹೊಂದಿರುವ ಜಗತ್ತಿನ ಮೊದಲ ಐದು ದೇಶಗಳ ಪಟ್ಟಿಯಲ್ಲಿ ಭಾರತವೂ ಸ್ಥಾನ ಪಡೆದಿದೆ. ಇಂಥ ಸಾಧನೆಯ ಜೊತೆಯಲ್ಲಿಯೇ ಭಾರತವು ತನ್ನ ಸಂವಿಧಾನ, ಏಕತೆ, ಸಮಗ್ರತೆಯನ್ನು ಕಾಪಾಡಿಕೊಂಡಿದೆ.

ಭಾರತದ ಸಂವಿಧಾನವು ಅತ್ಯಂತ ಬಾಳಿಕೆಯ ಗುಣ ಹೊಂದಿದೆ ಎಂದು ಅಧ್ಯಯನಗಳು ತೋರಿಸಿವೆ. ತಿದ್ದುಪಡಿಗಳಿಗೆ ಅವಕಾಶವಿರುವ, ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಗುಣ ಇರುವ ಕಾರಣದಿಂದಲೇ ನಮ್ಮ ಸಂವಿಧಾನಕ್ಕೆ ಹೆಚ್ಚಿನ ಆಯಸ್ಸು ಪ್ರಾಪ್ತಿಯಾಗಿದೆ. ಕೆಲವು ದೇಶಗಳ ಸಂವಿಧಾನಕ್ಕೆ ಈ ಎರಡೂ ಗುಣಗಳು ಇರುವುದಿಲ್ಲ. ನಮ್ಮ ಸಂವಿಧಾನಕ್ಕೆ 106 ತಿದ್ದುಪಡಿಗಳನ್ನು ಮಾಡಲಾಗಿದೆ. ಇದೇ ವಿಚಾರವನ್ನು ಮುಂದಿಟ್ಟುಕೊಂಡು ಕೆಲವು ಪಾಶ್ಚಿಮಾತ್ಯ ವಿದ್ವಾಂಸರು ನಮ್ಮ ಸಂವಿಧಾನದ ಕುರಿತು ಅಪಹಾಸ್ಯವನ್ನೂ ಮಾಡಿದ್ದಾರೆ. ಆದರೆ, ತಿದ್ದುಪಡಿಗೆ ಅವಕಾಶ ಇರುವ ಕಾರಣದಿಂದಲೇ ನಮ್ಮ ಸಂವಿಧಾನಕ್ಕೆ ಹೆಚ್ಚು ಬಾಳಿಕೆಯ ಗುಣ ಪ್ರಾಪ್ತವಾಗಿದೆ ಹಾಗೂ ಇದರಿಂದಲೇ ಭಾರತದ ಏಕತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿದೆ. ತಮ್ಮ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎಂದು ಭಾರತೀಯರಿಗೆ ತಿಳಿದಿದೆ. ಆದರೆ, ಪಾಶ್ಚಿಮಾತ್ಯರಿಗೆ ಇದು ತಿಳಿದಿಲ್ಲ.

ಹೆಚ್ಚಿನ ಸಂವಿಧಾನಗಳು 15ರಿಂದ 19 ವರ್ಷಗಳಲ್ಲೇ ಅಪ್ರಸ್ತುತವಾಗುತ್ತವೆ. 'ಲಿಖಿತ ಸಂವಿಧಾನದ ಜೀವಿತಾವಧಿ' ಎನ್ನುವ ವಿಷಯಕ್ಕೆ ಸಂಬಂಧಿಸಿ ಷಿಕಾಗೊ ವಿಶ್ವವಿದ್ಯಾಲಯದ ಕಾನೂನು ಶಾಲೆಯು ಅಧ್ಯಯನ ನಡೆಸಿ, ವಿಷಯ ಮಂಡಿಸಿದೆ. 'ಹೆಚ್ಚಿನ ಸಂವಿಧಾನಗಳ ಸರಾಸರಿ ಜೀವಿತಾವಧಿಯು 17 ವರ್ಷಗಳು ಮಾತ್ರ ಆಗಿದೆ' ಎನ್ನುತ್ತದೆ ಈ ಅಧ್ಯಯನ. 'ಅಂಗೀಕಾರಗೊಂಡ 18ನೇ ವರ್ಷಕ್ಕೆ ಜಗತ್ತಿನ ಅರ್ಧದಷ್ಟು ಸಂವಿಧಾನಗಳು ತಮ್ಮ ಪ್ರಸ್ತುತತೆ ಕಳೆದುಕೊಳ್ಳುತ್ತವೆ. 50 ವರ್ಷಗಳವರೆಗೆ ತಮ್ಮ ಪ್ರಸ್ತುತತೆಯನ್ನು ಶೇ 19ರಷ್ಟು ಸಂವಿಧಾನಗಳು ಮಾತ್ರ ಉಳಿಸಿಕೊಳ್ಳುತ್ತವೆ. ಅಂಗೀಕಾರಗೊಂಡ ಒಂದೇ ವರ್ಷದಲ್ಲಿ ಶೇ 7ರಷ್ಟು ಸಂವಿಧಾನಗಳು ಸಾಯುತ್ತವೆ' ಎಂದು ಅಧ್ಯಯನದಲ್ಲಿ ಹೇಳಲಾಗಿದೆ. ಈ ಕಾರಣಕ್ಕಾಗಿಯೇ, ನಮ್ಮ ಸಂವಿಧಾನಕ್ಕೆ 75 ವಸಂತ ತುಂಬಿರುವುದು ಅತ್ಯಂತ ಸಂತಸದ ವಿಚಾರ. ಜಗತ್ತಿನ 80ಕ್ಕೂ ಹೆಚ್ಚು ಸಂವಿಧಾನಗಳ ಪರಾಮರ್ಶೆಯನ್ನು ನಡೆಸಿದಾಗ ಹಲವಾರು ಮಹತ್ವದ ಅಂಶಗಳು ನನ್ನ ಗಮನಕ್ಕೆ ಬಂದವು. ಪ್ರಜಾಪ್ರಭುತ್ವದ ಮೂಲಭೂತ ಅಂಶಗಳು ಹಾಗೂ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ನೀಡಿರುವ ಮೂಲಭೂತ ಹಕ್ಕುಗಳ ಕಾರಣಕ್ಕಾಗಿ ಭಾರತದ ಸಂವಿಧಾನವು ಬೇರೆಲ್ಲಾ ಸಂವಿಧಾನಗಳಿಗಿಂತ ಮಿಗಿಲಾಗಿ ನಿಲ್ಲುತ್ತದೆ. ಇಂಥ ಹಕ್ಕುಗಳು ಜಗತ್ತಿನ ಬೇರೆ ಯಾವ ಸಂವಿಧಾನದಲ್ಲಿಯೂ ಇಲ್ಲ ಎಂಬುದು ನನಗೆ ಮನವರಿಕೆಯಾಯಿತು.

ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳ ಕುರಿತೇ ನೋಡಿ: ಕಾನೂನಿನ ಮುಂದೆ ಎಲ್ಲರೂ ಸಮಾನರು ಮತ್ತು ಕಾನೂನಿನ ಮೂಲಕ ರಕ್ಷಣೆ ಪಡೆದುಕೊಳ್ಳಲು ಎಲ್ಲರಿಗೂ ಸಮಾನ ಹಕ್ಕಿದೆ (ವಿಧಿ 14); ಧರ್ಮ, ಜಾತಿ, ಲಿಂಗ, ಜನ್ಮಸ್ಥಳದ ಆಧಾರದಲ್ಲಿ ತಾರತಮ್ಯ ಮಾಡುವಂತಿಲ್ಲ (ವಿಧಿ 15); ಸರ್ಕಾರಿ ಉದ್ಯೋಗದಲ್ಲಿ ತಾರತಮ್ಯ ಮಾಡುವಂತಿಲ್ಲ (ವಿಧಿ 16); ಎಲ್ಲ ರೀತಿಯ ಸ್ವಾತಂತ್ರ್ಯ (ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘ–ಸಂಸ್ಥೆ ಸ್ಥಾಪಿಸುವ ಸ್ವಾತಂತ್ರ್ಯ, ದೇಶದಲ್ಲಿ ಎಲ್ಲಿ ಬೇಕಾದರೂ ಓಡಾಡುವ ಸ್ವಾತಂತ್ರ್ಯ, ಯಾವುದೇ ವೃತ್ತಿಯನ್ನು ಮಾಡುವ ಸ್ವಾತಂತ್ರ್ಯ, ದೇಶದಲ್ಲಿ ಎಲ್ಲಿ ಬೇಕಾದರೂ ವಾಸಿಸುವ ಸ್ವಾತಂತ್ರ್ಯ: ವಿಧಿ 19); ಯಾವುದೇ ನಂಬಿಕೆಯನ್ನು ಅನುಸರಿಸುವ ಹಾಗೂ ಯಾವುದೇ ಧರ್ಮವನ್ನು ಆಚರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯ (ವಿಧಿ 25); ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ (ವಿಧಿ 26); ಎಲ್ಲ ರೀತಿಯ ಅಲ್ಪಸಂಖ್ಯಾತರು (ಭಾಷೆ ಅಥವಾ ಧರ್ಮ) ತಮ್ಮದೇ ಶೈಕ್ಷಣಿಕ ಸಂಸ್ಥೆ ಸ್ಥಾಪಿಸುವ ಹಾಗೂ ಅದರ ಆಡಳಿತ ನಡೆಸುವ ಸ್ವಾತಂತ್ರ್ಯ (ವಿಧಿ 30). ಹೀಗೆ ಹಲವು ಸ್ವಾತಂತ್ರ್ಯಗಳನ್ನು ಅಲ್ಪಸಂಖ್ಯಾತರಿಗೆ ನೀಡಲಾಗಿದೆ.

ಈ ಎಲ್ಲದಕ್ಕೂ ಮಿಗಿಲಾಗಿ, ಸರ್ಕಾರದಿಂದ ಸಂಪೂರ್ಣವಾಗಿ ಧನಸಹಾಯ ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಪಾಠ ಮಾಡುವುದನ್ನು ಸಂವಿಧಾನದ 28ನೇ ವಿಧಿ ನಿರ್ಬಂಧಿಸುತ್ತದೆ.

ನಮ್ಮ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗಾಗಿ ಹಾಗೂ ವೈಯಕ್ತಿಕ ನೆಲಗಟ್ಟಿನಲ್ಲಿ ಇಷ್ಟೊಂದು ಹಕ್ಕುಗಳನ್ನು ಯಾಕಾಗಿ ನೀಡಲಾಗಿದೆ ಎಂದು ಯಾರಿಗಾದರೂ ಆಶ್ಚರ್ಯವಾಗಬಹುದು. ಹಾಗಾದರೆ, ಜನಾಂಗೀಯ, ಧಾರ್ಮಿಕ, ಭಾಷಿಕ, ಸಾಮಾಜಿಕ ಹಾಗೂ ರಾಜಕೀಯ ವೈವಿಧ್ಯವನ್ನು ಗೌರವಿಸಲು ಮತ್ತು ದೇಶದ ಎಲ್ಲ ವರ್ಗದ ಜನರು ಉದಾರವಾದಿ ಹಾಗೂ ಪ್ರಜಾಪ್ರಭುತ್ವವಾದಿ ವಾತಾವರಣದಲ್ಲಿ ಜೀವಿಸಲು ಅನುವು ಮಾಡಿಕೊಡಲು ಇಷ್ಟೆಲ್ಲ ಹಕ್ಕುಗಳನ್ನು ನೀಡಲಾಗಿದೆಯೇ? ಅಲ್ಪಸಂಖ್ಯಾತರಿಗೆ ಯಾಕಾಗಿ ಇಷ್ಟೊಂದು ಹಕ್ಕುಗಳನ್ನು ನೀಡಲಾಗಿದೆ ಎಂಬುದಕ್ಕೆ ಸರಳ ಉತ್ತರವಿದೆ. ಭಾರತವು ಬಹಳ ಹಿಂದಿನಿಂದಲೂ ಜಾತ್ಯತೀತವಾದ ಹಾಗೂ ಪ್ರಜಾಪ್ರಭುತ್ವವಾದಿ ರಾಷ್ಟ್ರ. ಇದಕ್ಕೆ ಋಗ್ವೇದ ಕಾಲದಲ್ಲಿ ಸಾಕ್ಷ್ಯಗಳು ದೊರಕುತ್ತವೆ. ಸಾವಿರಾರು ವರ್ಷಗಳ ಹಿಂದಿನ ಮಹಾಉಪನಿಷತ್‌ನಲ್ಲಿ ಹಾಗೂ ಇತರ ಗ್ರಂಥಗಳಲ್ಲಿಯೂ ಇದಕ್ಕೆ ಸಾಕ್ಷ್ಯಗಳಿವೆ.



ಜಾತ್ಯತೀತ ಹಾಗೂ ಪ್ರಜಾಪ್ರಭುತ್ವ ಸಿದ್ಧಾಂತವನ್ನು ನಾವು ಬ್ರಿಟಿಷರಿಂದ ಹಾಗೂ ಅಮೆರಿಕದವರಿಂದ ಎರವಲು ಪಡೆದುಕೊಂಡಿದ್ದೇವೆ ಎಂಬುದನ್ನು ವಸಾಹತುಶಾಹಿ ಕಾಲಘಟ್ಟದಲ್ಲಿ ಹಾಗೂ ನೆಹರೂ ಆಡಳಿತದ ಅವಧಿಯಲ್ಲಿ ಹೇಳಲಾಯಿತು. ಆದರೆ, ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವಾದಿ ಪರಂಪರೆ ಇತ್ತು.

ಭಾರತದಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಪ್ರಜಾಪ್ರಭುತ್ವ ಇತ್ತು ಎನ್ನುವ ಕುರಿತು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಬಿ.ಆರ್. ಅಂಬೇಡ್ಕರ್ ಕೂಡ ಸಾಕ್ಷ್ಯಗಳ ಆಧಾರದಲ್ಲಿಯೇ ಮಾತನಾಡಿದ್ದಾರೆ. ಭಾರತಕ್ಕೆ ಪ್ರಜಾಪ್ರಭುತ್ವವು ಹೊಸತಲ್ಲ ಎಂದಿದ್ದಾರೆ. 'ಭಾರತಕ್ಕೆ ರಾಜಕೀಯ ಪ್ರಜಾಪ್ರಭುತ್ವ ಮಾತ್ರ ಸಾಕಾಗುವುದಿಲ್ಲ. ಭಾರತದ ಜನರಿಗೆ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವವೂ ಬೇಕು' ಎಂದು ಅಂಬೇಡ್ಕರ್ ಹೇಳಿದ್ದರು. ಕರ್ನಾಟಕದಲ್ಲಿ ದೇವರಾಜ ಅರಸು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ (1970) ಸಾಮಾಜಿಕ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚು ಒತ್ತು ನೀಡಿದ್ದರು. ಅಂಬೇಡ್ಕರ್ ಅವರ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವದ ಮಾದರಿಯನ್ನು ನಮ್ಮ ಸರ್ಕಾರಗಳು ಅನುಸರಿಸಿದವು ಎನ್ನುವುದನ್ನು ಅರಸು ಅವರ ಆಡಳಿತ ಅವಧಿಯು ತೋರಿಸುತ್ತದೆ.

ವಿವಿಧ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿದ ಬಳಿಕ ನಾನು ಎಂಟು ಅಂಶಗಳನ್ನು ಒಳಗೊಂಡ ಪ್ರಜಾಪ್ರಭುತ್ವ ಸೂಚ್ಯಂಕವನ್ನು ರೂಪಿಸಿದ್ದೇನೆ. ಈ ಎಲ್ಲ ಅಂಶಗಳನ್ನು ಪೂರೈಸಿದ ದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಜಾಪ್ರಭುತ್ವವಿದೆ ಎಂದರ್ಥ. ಅವು ಇಂತಿವೆ: 1. ಅಭಿವ್ಯಕ್ತಿ ಹಾಗೂ ಇತರ ಮೂಲಭೂತ ಸ್ವಾತಂತ್ರ್ಯಗಳು ಮತ್ತು ಮೂಲಭೂತ ಹಕ್ಕುಗಳನ್ನು ರಕ್ಷಿಸುವಲ್ಲಿ ಬದ್ಧತೆ. 2. ಜಾತ್ಯತೀತ ತತ್ವಕ್ಕೆ ಬದ್ಧತೆ. 3. ಸರ್ಕಾರ ಮತ್ತು ಧರ್ಮ ಪ್ರತ್ಯೇಕವಾಗಿರಬೇಕು. 4. ಗಣರಾಜ್ಯ. 5. ಕಾನೂನಿನ ಮುಂದೆ ಎಲ್ಲರೂ ಸಮಾನರು ಹಾಗೂ ಕಾನೂನಿನಡಿ ಎಲ್ಲರಿಗೂ ರಕ್ಷಣೆ ಪಡೆದುಕೊಳ್ಳುವ ಸಮಾನ ಹಕ್ಕು. 6. ಜೀವಿಸುವ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು. 7. ಲಿಂಗ ಸಮಾನತೆ. 8. ಅರ್ಹ ಎಲ್ಲರಿಗೂ ಮತದಾನದ ಹಕ್ಕು.

ಭಾರತದ ಸಂವಿಧಾನವು ಈ ಎಲ್ಲ ಅಂಶಗಳನ್ನು ಒಳಗೊಂಡಿದೆ. ಆದ್ದರಿಂದಲೇ ನಮ್ಮ ಸಂವಿಧಾನವು ಬೇರೆಲ್ಲಾ ಸಂವಿಧಾನಗಳಿಗಿಂತ ಮಿಗಿಲಾಗಿದೆ.

ದೇಶದಲ್ಲಿ 'ಏನಾದರೂ ಸಮಸ್ಯೆಯಾದರೆ, ಅನಾಹುತವಾದರೆ ಅದಕ್ಕೆ ನಾವು ಕೆಟ್ಟ ಸಂವಿಧಾನವನ್ನು ಹೊಂದಿದ್ದೇವೆ ಎಂಬುದು ಕಾರಣವಲ್ಲ. ಇದಕ್ಕೆ ಕಾರಣ ವ್ಯಕ್ತಿಗಳಲ್ಲಿನ ಲೋಪ ಎಂದು ನಾವು ಹೇಳಬೇಕಾಗುತ್ತದೆ'. ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಯಶಸ್ಸು ಗಳಿಸಬೇಕು ಎಂದಾದರೆ, ಅಂಬೇಡ್ಕರ್ ಅವರು ಹೇಳಿದ ಈ ಮಾತನ್ನು ಮರೆಯಬಾರದು.

ಚುರುಮುರಿ

ಸರ್ಕಾರಿ ಎಕ್ಸ್‌ಪ್ರೆಸ್

• ಮಣ್ಣೆ ರಾಜು

ಚನ್ನಪಟ್ಟಣ, ಶಿಗ್ಗಾವಿ, ಸಂಡೂರಿನಲ್ಲಿ ಮೂವರು ಹೊಸ ಪ್ಯಾಸೆಂಜರ್‌ಗಳು ಸರ್ಕಾರಿ ಎಕ್ಸ್‌ಪ್ರೆಸ್ ಹತ್ತಿದರು.

'ಆಪರೇಷನ್ ಮಾಡೋರು ಬಸ್ ಹತ್ತಿದ್ರೆ ಕೆಳಗಿಳಿಸಿ...' ಚಾಲಕರು ಕೂಗಿ ಹೇಳಿದರು.

'ಆಪರೇಷನ್ ಮಾಡೋರು ಅಪ್ಸೆಟ್ಟಾಗಿ ತೆಪ್ಪಗಾಗಿದ್ದಾರೆ. ಇರೋರೆಲ್ಲಾ ನಮ್ಮ ಪ್ಯಾಸೆಂಜರ್‌ಗಳೇ. ರೈಟ್ ರೈಟ್...' ನಿರ್ವಾಹಕರು ವಿಶಲ್ ಊದಿದರು.

'ಸಾರ್, ಈ ಬಸ್ ಅಭಿವೃದ್ಧಿ ಪಥದಲ್ಲಿ ಹೋಗುತ್ತಾ? ಜನರ ಬಳಿಗೆ ಬಸ್ ತರ್ತೀನಿ ಅಂತ ಭರವಸೆ ಕೊಟ್ಟಿದ್ದೆ' ಹೊಸ ಪ್ಯಾಸೆಂಜರ್ ಹೇಳಿದರು.

'ಹೋಗುತ್ತೆ. ಅಭಿವೃದ್ಧಿ ಪಥದಲ್ಲಿ ಗುಂಡಿಗುದರ ಜಾಸ್ತಿ, ಪ್ರಯಾಣ ತಡವಾಗುತ್ತದೆ. ಸುಗಮವಾದ ಗ್ಯಾರಂಟಿ ಪಥದಲ್ಲಿ ಸಾಗಿದರೆ ಪ್ರಯಾಣವೂ ಸುಖಕರವಾಗಿರುತ್ತದೆ, ಜನರನ್ನೂ ಬೇಗ ತಲುಪಬಹುದು' ಅಂದರು ನಿರ್ವಾಹಕರು.

'ಡ್ರೈವರ್ ಚೇಂಜ್ ಆಗ್ತಾರಾ ಸಾರ್?'

'ಐದು ವರ್ಷ ಯಶಸ್ವಿ ಚಾಲನೆ ಮಾಡಿದ ಅನುಭವಿ ಡ್ರೈವರ್ ಕಣ್ರೀ, ಈ ಅವಧಿಯಲ್ಲೂ ಅವರೇ ಬಸ್ ಓಡಿಸ್ತಾರೆ' ಎಂದರು ಇನ್ನೊಬ್ಬರು.

'ಬೇರೆಯವರಿಗೂ ಡ್ರೈವಿಂಗ್ ಅವಕಾಶ ಸಿಗಬೇಕು' ಎಂದ್ರು ಒಬ್ಬರು. ವಾದ-ವಿವಾದ ಶುರುವಾಯ್ತು.

'ಯಾರ್ರೀ ಗಲಾಟೆ ಮಾಡ್ತಿರೋರು? ಡ್ರೈವಿಂಗ್‌ಗೆ ಡಿಸ್ಟರ್ಬ್ ಆಗುತ್ತೆ, ಗಲಾಟೆ ಮಾಡೋರನ್ನು ಬಸ್ಸಿನಿಂದ ಕೆಳಗಿಳಿಸಿಬಿಡ್ತೀನಿ...' ಚಾಲಕರು ರೇಗಿದರು.

'ಚಾಲಕರ ಬದಲಾವಣೆ ಬಗ್ಗೆ ದೊಡ್ಡವರು ನಿರ್ಧರಿಸುತ್ತಾರೆ. ಜನ ಚೇಂಜ್ ಕೇಳಿದ್ರೆ ಚಾಲಕರು ಚೇಂಜ್ ಆಗ್ತಾರೆ...' ನಿರ್ವಾಹಕರು ಗೊಂದಲಕ್ಕೆ ತೆರೆ ಎಳೆದರು.

'ಅರ್ಧ ಗಂಟೆ ಟೈಮ್ ಇದೆ, ಊಟ ಮಾಡೋರು ಮಾಡಬಹುದು' ಎಂದು ಹೇಳಿ ಚಾಲಕರು ಬಸ್ ನಿಲ್ಲಿಸಿ ಕೆಳಗಿಳಿದರು.

ವಾಪಸ್ ಬಂದಾಗ ಚಾಲಕರ ಸೀಟ್ ಮೇಲೆ ಯಾರೋ ಐದಾರು ಟವೆಲ್ ಹಾಕಿದ್ದರು. 'ಪಾಪ! ಎಲ್ಲರಿಗೂ ಈ ಸೀಟ್ ಮೇಲೇ ಕಣ್ಣು!...' ಎಂದು ನಗುತ್ತಾ ಚಾಲಕರು ಟವೆಲ್ ತೆಗೆದು ಸೈಡಿಗಿಟ್ಟು ಬಸ್ ಸ್ಟಾರ್ಟ್ ಮಾಡಿದರು.

ಸಂಗತ

ಅಬ್ಬರವೇ ಎಲ್ಲ, ಅಭಿರುಚಿ ಇಲ್ಲ

ಮಕ್ಕಳ ಸೃಜನಶೀಲ ಪ್ರತಿಭೆಯನ್ನು ಹೊರಹಾಕುವ, ಅವರಲ್ಲಿ ಉತ್ತಮ ಅಭಿರುಚಿ ಮೂಡಿಸುವ ದಿಸೆಯಲ್ಲಿ ಶಾಲಾ ವಾರ್ಷಿಕೋತ್ಸವಗಳು ಪ್ರಮುಖ ಪಾತ್ರ ವಹಿಸುತ್ತವೆ

• ಗಿರಿಜಾಶಂಕರ್ ಜಿ.ಎಸ್. ಇಡೇಹಳ್ಳಿ

ಶಾಲಾ ವಾರ್ಷಿಕೋತ್ಸವವು ಮಕ್ಕಳ ಸೃಜನಶೀಲ ಪ್ರತಿಭೆಯನ್ನು ಹೊರಹಾಕುವ ಪ್ರಮುಖ ವೇದಿಕೆ. ಈ ಕಾರ್ಯಕ್ರಮದ ಅಂಗವಾಗಿ ಜರುಗುವ ವಿವಿಧ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕೆ ವಿದ್ಯಾರ್ಥಿಗಳು ನಾಮುಂದು, ತಾಮುಂದು ಎನ್ನುತ್ತಾ ಮುಗಿಬೀಳುತ್ತಾರೆ. ಅಲ್ಲದೆ ಈ ಸ್ಪರ್ಧೆಗಳಲ್ಲಿ ಜಯಶಾಲಿಗಳಾದ ವಿದ್ಯಾರ್ಥಿಗಳು ವಾರ್ಷಿಕೋತ್ಸವ ಸಮಾರಂಭದಲ್ಲಿ ಬಹುಮಾನ ಪಡೆಯಲು ತುಂಬಾ ಉತ್ಸುಕರಾಗಿರುತ್ತಾರೆ. ಶಾಲೆಯಲ್ಲಿ ಓದಿನಲ್ಲಿ ದಡ್ಡ ಎನಿಸಿಕೊಂಡ ವಿದ್ಯಾರ್ಥಿ ಅಂದು ಕ್ರೀಡಾ ಚಾಂಪಿಯನ್ ಆಗಿ ಎಲ್ಲರ ಗಮನ ಸೆಳೆಯಬಹುದು.

ವಾರ್ಷಿಕೋತ್ಸವದ ನೆಪದಲ್ಲಿ ವಿದ್ಯಾರ್ಥಿಗಳ ನಿಜವಾದ ಆಸ್ತಕಿಗಳು ಆ ಸಂದರ್ಭದಲ್ಲಿ ಬಯಲಿಗೆ ಬರುತ್ತವೆ. ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳೆಂದರೆ ಬೀಜ ಬಿತ್ತುವುದಕ್ಕೆ ಇರುವ ಹಸನಾದ ಭೂಮಿ ಇದ್ದಂತೆ. ಯಾವ ಬೀಜ ಬಿತ್ತಿದರೂ ತಕ್ಷಣ ಮೊಳಕೆಯೊಡೆದು ಬೇರಿಳಿಸಿಕೊಳ್ಳುತ್ತದೆ. ಬೀಜವು ಹೆಮ್ಮರವಾಗಿ ರುಚಿಭರಿತ ಹಣ್ಣುಗಳನ್ನು ಕೊಡುತ್ತದೆಯೋ ವಿಷಭರಿತ ಹಣ್ಣುಗಳನ್ನು ಕೊಡುತ್ತದೆಯೋ ಎನ್ನುವುದನ್ನು ಆ ಭೂಮಿ ಗಮನಿಸುವುದಿಲ್ಲ. ಒಂದು ರೀತಿಯಲ್ಲಿ ಮೃದುವಾದ ಗೋಡೆ ಇದ್ದ ಹಾಗೆ ಎಂದು ಸಹ ಹೇಳಬಹುದು. ಅಂತಹ ಗೋಡೆಗೆ ಒಂದು ಕಲ್ಲು ಒಗೆದರೂ ಅದು ಗೋಡೆಯಲ್ಲೇ ಗಟ್ಟಿಯಾಗಿ ಉಳಿದುಬಿಡುತ್ತದೆ. ಒಣಗಿದ ಬಳಿಕ ಆ ಕಲ್ಲನ್ನು ಕಿತ್ತುಹಾಕುವುದು ಅಷ್ಟು ಸುಲಭವಲ್ಲ. ಆದ್ದರಿಂದಲೇ ಮನೆ, ಶಾಲೆಯ ಪರಿಸರ ಮಕ್ಕಳ ಪಾಲಿಗೆ ಚೆನ್ನಾಗಿರಬೇಕು.

ಇಂತಹ ಕಾರ್ಯಕ್ರಮಗಳಿಂದ ಮಕ್ಕಳ ಅಭಿರುಚಿ ರೂಪುಗೊಳ್ಳುತ್ತದೆ. ಹೀಗಾಗಿ, ಶಾಲಾ ಜೀವನದಲ್ಲಿ ಉತ್ತಮವಾದ ಅಭಿರುಚಿ, ಆಸಕ್ತಿ, ಒಳ್ಳೆಯ ಮನೋಭಾವ ರೂಢಿಸಿಕೊಳ್ಳುವಂತೆ ಮಾಡುವುದು ತುಂಬಾ ಅವಶ್ಯ. ವಾರ್ಷಿಕೋತ್ಸವದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹುಮುಖ್ಯವಾದವು. ಹಾಡು, ನೃತ್ಯ, ನಾಟಕ, ರೂಪಕದಂತಹ ಅಭಿವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಹೊರಬರುತ್ತವೆ. ಆದರೆ ಹೆಚ್ಚಿನ ಶಾಲೆಗಳಲ್ಲಿ ಈ ಹಾಡು, ನೃತ್ಯಗಳು ತಮ್ಮ ಉದ್ದೇಶಗಳನ್ನು ಸಾಧಿಸುವಲ್ಲಿ ವಿಫಲವಾಗುತ್ತಿವೆ.

ಇಂದು ನೃತ್ಯವೆಂದರೆ ಸಿನಿಮಾ ಹಾಡುಗಳಿಗೆ ಮಕ್ಕಳು ಹೆಜ್ಜೆ ಹಾಕುವುದು ಎಂದು ಶಿಕ್ಷಕರೇ ನಂಬಿದ್ದಾರೆ. ಬಹುತೇಕ ಶಾಲೆಗಳ ವಾರ್ಷಿಕೋತ್ಸವದಲ್ಲಿ ಸಿನಿಮಾ ಹಾಡುಗಳೇ ಪ್ರಾಧಾನ್ಯ ಪಡೆಯುತ್ತವೆ. ಹಾಗೆಂದು ಸಿನಿಮಾ ಹಾಡುಗಳನ್ನು ಬಳಸಬಾರದು ಎಂದಲ್ಲ. ಇಂದು ಸಿನಿಮಾ ಹಾಡುಗಳು ಮಕ್ಕಳನ್ನು ತಲುಪಲು ಬಹಳಷ್ಟು ಮಾಧ್ಯಮಗಳಿವೆ. ಮನೆಮನೆಗಳಲ್ಲಿ ಟಿ.ವಿಗಳು, ಮೊಬೈಲ್ ಫೋನ್‌ಗಳಿವೆ. ಮಕ್ಕಳು ಸಿನಿಮಾ ನೃತ್ಯಗಳನ್ನು ಇವುಗಳಲ್ಲೇ ನೋಡುತ್ತಾರೆ. ಸಹಜವಾಗಿ ವಾರ್ಷಿಕೋತ್ಸವದಲ್ಲಿ ಮಕ್ಕಳು ಅದನ್ನು ಅನುಕರಿಸುತ್ತಾರೆ. ಚಿತ್ರಗೀತೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಅಭಿರುಚಿ ಕಾಣೆಯಾಗಿದೆ. ಸಿನಿಮಾ ಗೀತೆಗಳಲ್ಲಿ ಸಾಹಿತ್ಯದ ಮೌಲ್ಯಕ್ಕಿಂತ ಸಂಗೀತದ ಅಬ್ಬರವೇ ಹೆಚ್ಚಾಗಿರುತ್ತದೆ. ಅನುಕರಣೆ ಬಿಟ್ಟರೆ ಹೆಚ್ಚಿನ ಪ್ರಯೋಜನವೇನೂ ಇರುವುದಿಲ್ಲ. ಸಕಾರಾತ್ಮಕ ಪರಿಣಾಮಗಳೂ ಇರುವುದಿಲ್ಲ. ಹಿಂದೆಲ್ಲಾ ಶಾಲಾ ವಾರ್ಷಿಕೋತ್ಸವದಲ್ಲಿ ಭಾವಗೀತೆ, ಜನಪದ ಗೀತೆ, ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ಆದ್ಯತೆ ಪಡೆದುಕೊಳ್ಳುತ್ತಿದ್ದವು. ನೃತ್ಯ, ರೂಪಕ, ನಾಟಕ, ಕೋಲಾಟ, ಗೀಗೀ ಪದ, ಸುಗ್ಗಿಯ ಹಾಡುಗಳು, ಏಕಪಾತ್ರಾಭಿನಯದಂತಹವನ್ನು ಪ್ರದರ್ಶಿಸಲು ಎರಡು– ಮೂರು ವಾರ ತಾಲೀಮು ನಡೆಸುವುದರಿಂದ ಮತ್ತು ಈ ಸಂದರ್ಭದಲ್ಲಿ ಪರೀಕ್ಷೆಯ, ಅಂಕಗಳ ಒತ್ತಡವೂ ಇಲ್ಲದ ಕಾರಣ ತುಂಬಾ ಸಂತೋಷವಾಗಿ ಎಲ್ಲರೂ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಈ ಮೂಲಕ ಅವರ ವ್ಯಕಿತ್ವವೂ ಅದರ ಜೊತೆಗೇ ವಿಕಸಿಸುತ್ತದೆ.

ದುರದೃಷ್ಟವಶಾತ್ ಇತ್ತೀಚೆಗೆ ಬಹುತೇಕ ಶಾಲೆಗಳ ವಾರ್ಷಿಕೋತ್ಸವದಲ್ಲಿ ಕಲೆ, ಸಂಸ್ಕೃತಿ, ಪರಂಪರೆಗಿಂತ ಅಬ್ಬರದ ಕಾರ್ಯಕ್ರಮಗಳಿಗೇ ಆದ್ಯತೆ ನೀಡಲಾಗಿರುತ್ತದೆ. ಸೃಜನಾತ್ಮಕ ಕಲೆಗಳ ಅನಾವರಣಕ್ಕೆ ವೇದಿಕೆ ಆಗಬೇಕಾಗಿದ್ದ ಶಾಲಾ ಉತ್ಸವವು ಅಬ್ಬರದ ಸಂಗೀತ, ಅಭಿರುಚಿ ಕೊರತೆಯ ಗೀತೆಗಳಿಗೆ ಬಳಕೆಯಾಗುತ್ತಿದೆ.

ವಾರ್ಷಿಕೋತ್ಸವದ ಆಯೋಜನೆಗಾಗಿ ಕೆಲವು ಶಾಲೆಗಳು ಪೋಷಕರಿಂದ ಸಾವಿರಾರು ರೂಪಾಯಿ ಪಡೆಯುತ್ತವೆ. ಆಕರ್ಷಕವಾದ ಬೃಹತ್ ವೇದಿಕೆ, ಕಣ್ಣು ಕೋರೈಸುವ ಬೆಳಕಿನಂತಹ ಆಡಂಬರಕ್ಕೆ ಆಯೋಜಕರು ಒತ್ತು ನೀಡುತ್ತಾರೆ. ಕಾರ್ಯಕ್ರಮಗಳ ತಿರುಳು ಅವಗಣನೆಗೆ ಒಳಗಾಗುತ್ತದೆ. ಮಕ್ಕಳು ಬಣ್ಣ ಬಣ್ಣದ ಬಟ್ಟೆ ಧರಿಸಿ ಕಣ್ಣು ಕೋರೈಸುವ ಬೆಳಕಿನಲ್ಲಿ ಕುಣಿದು ಕುಪ್ಪಳಿಸಿದರೆ ಸಾಕು, ಅದೇ ಭಾಗ್ಯ ಎಂಬಂತೆ ಪೋಷಕರು ಖುಷಿಪಡುವಂತಹ ಸ್ಥಿತಿ ನಿರ್ಮಾಣವಾಗಿದೆ!

ಮಕ್ಕಳು ಎಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ, ಎಂಥ ಅಭಿರುಚಿಯನ್ನು ಮೈಗೂಡಿಸಿಕೊಳ್ಳುತ್ತಿದ್ದಾರೆ ಎಂದು ಯೋಚಿಸುವ ವ್ಯವಧಾನ ಪೋಷಕರಲ್ಲಿ ಕಾಣೆಯಾಗಿದೆ. ಆಯೋಜಕರೂ ಆ ದಿಸೆಯಲ್ಲಿ ಹೆಚ್ಚಿನ ಗಮನಹರಿಸದೇ ಇರುವುದರಿಂದ ಕಾರ್ಯಕ್ರಮಗಳ ಗುಣಮಟ್ಟ ದಿನೇದಿನೇ ಕುಸಿಯತೊಡಗಿದೆ. ಮಕ್ಕಳಲ್ಲಿ ಸದಭಿರುಚಿ ಮೂಡಿಸುವಂತಹ, ಅವರಲ್ಲಿನ ಸುಪ್ತ ಪ್ರತಿಭೆಯನ್ನು ಹೊರಗೆ ಎಳೆಯುವಂತಹ ವೇದಿಕೆ ಇದು ಎಂಬುದನ್ನು ಶಿಕ್ಷಕರು ಮತ್ತು ಪೋಷಕರು ಮನಗಾಣಬೇಕು. ಅದಕ್ಕೆ ಅನುವು ಮಾಡಿಕೊಡುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿದರೆ, ಶಾಲಾ–ಕಾಲೇಜು ಉತ್ಸವಗಳ ನಿಜವಾದ ಉದ್ದೇಶ ಈಡೇರುತ್ತದೆ.

ವಾಚಕರ ವಾಣಿ

ಧಾರ್ಮಿಕ ಸಂಸತ್ತು: ಜೈನ ಪರಂಪರೆಯಲ್ಲಿ ಉಲ್ಲೇಖ

ಕೊಪ್ಪಳ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ತಮ್ಮ 'ನುಡಿ ಬೆಳಗು' ಅಂಕಣದ (ಪ್ರ.ವಾ., ನ. 21) 'ಕಲ್ಯಾಣ ಕಟ್ಟುವ ಕಾಯಕ!' ಎಂಬ ಬರಹದಲ್ಲಿ ಅನುಭವ ಮಂಟಪವನ್ನು ಪ್ರಸ್ತಾಪಿಸಿ, ಇದು ಇಡೀ ಜಗತ್ತಿನ ಮೊದಲ ಧಾರ್ಮಿಕ ಸಂಸತ್ ಎಂದು ಹೇಳಿದ್ದಾರೆ. ಇದು 12ನೇ ಶತಮಾನದ್ದು ಎಂದು ಕೂಡ ಅವರೇ ಹೇಳಿದ್ದಾರೆ. ಈ ಅನುಭವ ಮಂಟಪ ಬರುವುದಕ್ಕೆ ಮುನ್ನ ಜೈನ ಪರಂಪರೆಯಲ್ಲಿ ತೀರ್ಥಂಕರರ ಸಮವಸರಣ ಮಂಟಪ ಅಥವಾ ಸಮವಸರಣ ಸಭೆಗಳು (ಧಾರ್ಮಿಕ ಸಂಸತ್‌ಗಳು) ನಡೆಯುತ್ತಿದ್ದವು ಎನ್ನುವುದನ್ನು ಪೂಜ್ಯರ ಗಮನಕ್ಕೆ ತರಬಯಸುತ್ತೇನೆ.

ಜೈನ ಪರಂಪರೆಯಲ್ಲಿ ಅನಾದಿ ಕಾಲದಲ್ಲಿ ಆಗಿಹೋದ ಪ್ರಥಮ ತೀರ್ಥಂಕರ ಆದಿನಾಥರಿಂದ ಮೊದಲ್ಗೊಂಡು ಇತಿಹಾಸ ಪ್ರಮಾಣಿತ ತೀರ್ಥಂಕರ ಮಹಾವೀರರವರೆಗೆ 24 ಜನ ತೀರ್ಥಂಕರರು ಆಗಿಹೋದರು. ಈ ಎಲ್ಲ ತೀರ್ಥಂಕರರ ಬೋಧನೆ ಮತ್ತು ಶಿಷ್ಯ ಸಮೂಹದ ಸಂದೇಹಗಳ ನಿವಾರಣೆಗೆ ಏರ್ಪಡುತ್ತಿದ್ದ ಧಾರ್ಮಿಕ ಸಂಸತ್ತುಗಳು 'ಸಮವಸರಣ ಸಭೆಗಳು' ಎಂದು ಜೈನ ಪರಿಭಾಷೆಯಲ್ಲಿ ಕರೆಯಲ್ಪಟ್ಟಿವೆ. 24ನೆಯ ತೀರ್ಥಂಕರ ಮಹಾವೀರರನ್ನೇ ಗಣನೆಗೆ ತೆಗೆದುಕೊಂಡರೂ ಅವರು ನಿರ್ವಾಣ ಹೊಂದಿ 2550 ವರ್ಷಗಳು ಸಂದಿದ್ದು, ಆ ಕಾಲದಲ್ಲೇ ಸಮವಸರಣ ಸಭೆ ಕರ್ನಾಟಕವೂ ಸೇರಿದಂತೆ ಭಾರತದ ವಿವಿಧ ಪ್ರಾಂತಗಳಲ್ಲಿ ನಡೆಯುತ್ತಿತ್ತು. ಹೀಗೆ ಜಗತ್ತಿನ ಮೊದಲ ಧಾರ್ಮಿಕ ಸಂಸತ್ತು ಎಂದರೆ ಅದು ತೀರ್ಥಂಕರರ ಸಮವಸರಣ ಸಭೆ ಆಗಿದೆ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

70 ಗಂಟೆ ಕೆಲಸ: ತಿರುಳನ್ನಷ್ಟೇ ಗ್ರಹಿಸೋಣ

ಯುವಜನ ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು ಎಂಬ ಇನ್ಫೊಸಿಸ್ ಸಹ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ಹೇಳಿಕೆಯ ಹಿಂದೆ ಅಡಗಿರುವ ಉದ್ದೇಶವನ್ನು ಗ್ರಹಿಸಬೇಕು. ಅವರು ಐ.ಟಿ, ಬಿ.ಟಿ ಉದ್ಯೋಗಿಗಳಿಗೆ ಮಾತ್ರ ಅನ್ವಯವಾಗುವಂತೆ ಈ ಹೇಳಿಕೆ ನೀಡಿಲ್ಲ. ಶ್ರದ್ಧೆ, ಆಸಕ್ತಿಯಿಂದ ಶ್ರಮಪಟ್ಟು ಹೆಚ್ಚು ಕೆಲಸ ಮಾಡಿದರೆ ವೈಯಕ್ತಿಕವಾಗಿ ಆರ್ಥಿಕ ಲಾಭ ಉಂಟಾಗುವುದಲ್ಲದೆ, ತಾವು ಕೆಲಸ ಮಾಡುವ ಸಂಸ್ಥೆಗಳು ಅಭಿವೃದ್ಧಿ ಪಥದಲ್ಲಿ ಸಾಗಿ, ಒಟ್ಟಾರೆ ದೇಶ ಮುನ್ನಡೆಯಲು ಸಹಕಾರಿಯಾಗುತ್ತದೆ ಎನ್ನುವುದು ಅವರ ಹೇಳಿಕೆಯ ಸಾರಾಂಶ. ಯಾವುದೇ ರಂಗದಲ್ಲಾಗಲಿ, ಹೆಚ್ಚು ಕೆಲಸ ಮಾಡಿದರೆ ದೇಶ ಅಭಿವೃದ್ಧಿಯತ್ತ ಸಾಗುತ್ತದೆ ಎನ್ನುವುದು ಅವರ ಅನಿಸಿಕೆ. ಕೋರ್ಟು ಕಚೇರಿಗಳ ಸಿಬ್ಬಂದಿ ಹೆಚ್ಚು ಕೆಲಸ ಮಾಡಿ ಕೇಸುಗಳ ವಿಲೇವಾರಿ ತ್ವರಿತವಾದರೆ ಎಷ್ಟು ಮಾನವ ಗಂಟೆಗಳ ಉಳಿತಾಯವಾಗುತ್ತದೆ. ನ್ಯಾಯಾಂಗ ಇಲಾಖೆ, ಬ್ಯಾಂಕಿಂಗ್ ಕ್ಷೇತ್ರ, ಉತ್ಪಾದನಾ ರಂಗ ಅಥವಾ ಸೇವಾ ಕ್ಷೇತ್ರದಲ್ಲಿ ಹೆಚ್ಚು ಮುತುವರ್ಜಿ, ಸೇವಾ ಮನೋಭಾವದಿಂದ ತಮ್ಮ ತಮ್ಮ ಕರ್ತವ್ಯ ಮಾಡಿದರೆ ದೇಶದ ಅಭಿವೃದ್ಧಿಗೆ ಅಳಿಲು ಸೇವೆ ಸಲ್ಲಿಸಿದಂತೆ ಆಗುತ್ತದೆ.

ಒಬ್ಬ ಯಶಸ್ವಿ ಉದ್ಯಮಿಯು ಜೀವನದಲ್ಲಿ ಸಾಧಿಸಿರುವ ಯಶಸ್ಸನ್ನು ಮಾದರಿಯಾಗಿ ಇಟ್ಟುಕೊಂಡು, ಎಲ್ಲರೂ ಜೀವನದಲ್ಲಿ ಮುಂದೆ ಬರಬೇಕೆನ್ನುವುದು ಅವರ ಹೇಳಿಕೆಯಲ್ಲಿನ ಕಳಕಳಿ. ವಾರಕ್ಕೆ 70 ಗಂಟೆ ಕೆಲಸ ಮಾಡುವಂತೆ ಕಾನೂನು ಬದಲಾವಣೆ ಮಾಡಬೇಕೆಂದು ಅವರೇನೂ ಆಗ್ರಹಿಸಿಲ್ಲ. ಅವರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಯದೆ, ಅಪಾರ್ಥ ಮಾಡಿಕೊಳ್ಳದೆ ಅದರ ತಿರುಳನ್ನು ಮಾತ್ರ ಗ್ರಹಿಸಬೇಕು. ವಾದ– ಪ್ರತಿವಾದ ಮಾಡಿ, ಅನೇಕ ಉದಾಹರಣೆಗಳ ಮೂಲಕ ಅವರ ಹೇಳಿಕೆಯನ್ನು ತಿರಸ್ಕರಿಸಿದರೆ, ಅದರಿಂದ ಅವರಿಗೇನೂ ನಷ್ಟವಿಲ್ಲ.

ಟಿ.ವಿ.ಬಿ. ರಾಜನ್, ಬೆಂಗಳೂರು

ಸಹಕಾರಿ ರಂಗ: ದ್ವಂದ್ವ ನೀತಿ ಏಕೆ?

ನಬಾರ್ಡ್ ಕಡಿತಗೊಳಿಸಿರುವ, ಕೃಷಿಗೆ ನೆರವು ನೀಡುವ ಉದ್ದೇಶಕ್ಕಾಗಿ ಸಹಕಾರಿ ಸಂಸ್ಥೆಗಳಿಗೆ ನೀಡುವ ಸಾಲದ ಮೊತ್ತವನ್ನು ಹೆಚ್ಚಿಸಬೇಕೆಂಬ ಕರ್ನಾಟಕದ ಮನವಿಯನ್ನು ಕೇಂದ್ರ ತಿರಸ್ಕರಿಸಿರುವುದಾಗಿ ವರದಿಯಾಗಿದೆ. ಸಹಕಾರಿ ರಂಗವನ್ನು ದುರ್ಬಲಗೊಳಿಸಿ ಖಾಸಗಿ ರಂಗಕ್ಕೆ ಉತ್ತೇಜನ ನೀಡುವ ನವ-ಉದಾರವಾದಿ ನೀತಿಗಳ ಭಾಗವಾಗಿ ಕೇಂದ್ರ ಸರ್ಕಾರ ಈ ನಿರ್ಧಾರಕ್ಕೆ ಬಂದಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಧೋರಣೆಗೆ ವ್ಯತಿರಿಕ್ತವಾಗಿ ಇತ್ತೀಚೆಗೆ ಪತ್ರಿಕೆಗಳಲ್ಲಿ ಕೇಂದ್ರ ಸರ್ಕಾರದ 'ಸಹಕಾರ ಸಚಿವಾಲಯ'ದ ಒಂದು ಜಾಹೀರಾತು ಪ್ರಕಟವಾಗಿದೆ. ಅದರಲ್ಲಿ, ಆ ಯೋಜನೆಯ ಇತರ ಅಂಶಗಳ ಜತೆಯಲ್ಲಿ 'ನಗರ ಹಾಗೂ ಗ್ರಾಮೀಣ ಬ್ಯಾಂಕುಗಳನ್ನು ಬಲಪಡಿಸುವುದು' ಮತ್ತು 'ಪ್ರಾಥಮಿಕ ಕೃಷಿ ಕ್ರೆಡಿಟ್ ಸೊಸೈಟಿಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸುವುದು ಮತ್ತು ಪಾರದರ್ಶಕಗೊಳಿಸುವುದು' ಎಂದಿದೆ. ಒಂದೆಡೆ, ನಬಾರ್ಡನ್ನು ದುರ್ಬಲಗೊಳಿಸುವುದು, ಮತ್ತೊಂದೆಡೆ, ಸಹಕಾರಿ ಬ್ಯಾಂಕುಗಳು ಮತ್ತು ಸೊಸೈಟಿಗಳನ್ನು ಸಶಕ್ತಗೊಳಿಸುತ್ತೇವೆ ಎನ್ನುವುದು. ಕೇಂದ್ರ ಸರ್ಕಾರದ ಇಂತಹ ದ್ವಂದ್ವ ನೀತಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇ ಸರಿ.

ಟಿ.ಸುರೇಂದ್ರ ರಾವ್, ಬೆಂಗಳೂರು

ವಿಮಾ ಯೋಜನೆ: ವಿವೇಚನೆ ಬಳಸಬೇಕಿದೆ

'ವಿಮಾ ಮೋಸ; ಪಾರಾಗುವುದು ಹೇಗೆ?' ಎಂಬ ರಾಜೇಶ್ ಕುಮಾರ್ ಟಿ.ಆರ್. ಅವರ ಲೇಖನ (ಪ್ರ.ವಾ., ನ. 25), ಜೀವವಿಮೆ ಮತ್ತು ಜನರ ಹಣಕಾಸಿನ ಉಳಿತಾಯ ಜ್ಞಾನದ ಬಗೆಗೆ ಅಸ್ಪಷ್ಟ ನಿಲುವನ್ನು ಹೊಂದಿದೆ. ಗ್ರಾಹಕರಿಗೆ ಟರ್ಮ್ ಇನ್ಶ್ಯೂರೆನ್ಸ್ ಹೆಚ್ಚು ಅನುಕೂಲ ಎಂಬ ಅಭಿಪ್ರಾಯವು ಪೂರ್ಣವಾಗಿ ಸರಿಯಲ್ಲ. ಯಾರಿಗೆ ಹಣವನ್ನು ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆ, ಚಿನ್ನ, ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡುವ ಅರಿವು ಮತ್ತು ಸಮಯ ಇರುತ್ತದೋ ಅಂತಹವರಿಗೆ ಈ ಟರ್ಮ್ ಪಾಲಿಸಿಗಳು ಅನುಕೂಲಕರ ಅಷ್ಟೆ. ಏಕೆಂದರೆ ಅವುಗಳಲ್ಲಿ ಪಕ್ವತೆಯ ಲಾಭ (ಮೆಚ್ಯೂರಿಟಿ ಬೆನಿಫಿಟ್) ಎಂಬುದು ಇರುವುದಿಲ್ಲ. ವಿಮಾ ಅವಧಿ ಪೂರೈಸುವುದಕ್ಕೆ ಮುನ್ನ ವ್ಯಕ್ತಿ ಸತ್ತರೆ ಮಾತ್ರ ವಿಮಾ ಮೊಬಲಗು ನಾಮಿನಿಗೆ ಲಭ್ಯವಾಗುತ್ತದೆ. ಎಂಡೊಮೆಂಟ್ ಮತ್ತು ಮನಿಬ್ಯಾಕ್‌ನಂತಹ ಪಾಲಿಸಿಗಳಲ್ಲಿ, ಅವಧಿ ಮುಗಿದ ತಕ್ಷಣ ವಿಮಾ ಮೊಬಲಗಿನ ಜೊತೆಗೆ ಒಟ್ಟುಗೂಡಿದ ಬೋನಸ್ ಮತ್ತು ಪ್ರತ್ಯೇಕ ಅಂತಿಮ ಬೋನಸ್ ಎಲ್ಲ ಸೇರಿ ಗ್ರಾಹಕರಿಗೆ ಲಭ್ಯವಾಗುತ್ತದೆ. ಅಲ್ಲದೆ ಯಾವುದೇ ಸಂದರ್ಭದಲ್ಲಿ (ಪಾಲಿಸಿ ಚಾಲ್ತಿಯಲ್ಲಿದ್ದರೆ) ಮರಣವಾದರೆ ನಾಮಿನಿಗೆ ಪೂರ್ಣ ವಿಮಾ ಮೊಬಲಗು ಮತ್ತು ಎಷ್ಟು ವರ್ಷಗಳು ಕಳೆದಿರುತ್ತವೋ ಅಷ್ಟು ವರ್ಷಗಳಲ್ಲಿ ಸೇರಿರಬಹುದಾದ ಬೋನಸ್ ಸಹ ಬರುತ್ತದೆ. ಆದ್ದರಿಂದ ಬಹುಪಾಲು ಮಂದಿ ಆರಿಸಿಕೊಳ್ಳುವುದು ಈ ಪಾಲಿಸಿಗಳನ್ನೇ. ಆದರೂ ವಿಮೆಯು ಸಾಮಾನ್ಯವಾಗಿ ದೀರ್ಘಾವಧಿಯ ಯೋಜನೆಯಾದ್ದರಿಂದ, ಸಾರ್ವಜನಿಕರು ಚೆನ್ನಾಗಿ ಯೋಚನೆ ಮಾಡಿ, ಏಜೆಂಟರೊಂದಿಗೆ ಪೂರ್ಣ ಪ್ರಮಾಣದ ಸಮಾಲೋಚನೆ ಮಾಡಿ, ವಿವೇಚನೆಯಿಂದ ಪಾಲಿಸಿ ಪಡೆದುಕೊಳ್ಳುವುದು ಉತ್ತಮ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕ ಚಿನ್ನದ ಹೊಳಪು

ದಲಿತ, ರೈತ ಚಳವಳಿ ಸೃಷ್ಟಿಸಿದ ಹೊಸ ಕರ್ನಾಟಕ

● ನಟರಾಜ್ ಹುಳಿಯಾರ್

ಕರ್ನಾಟಕದ ದಲಿತ ಚಳವಳಿ ಹಾಗೂ ರೈತ ಚಳವಳಿ ಸುದೀರ್ಘ ಹೋರಾಟಗಳನ್ನು ಕಟ್ಟಿಬೆಳೆಸುತ್ತ ಕರ್ನಾಟಕವನ್ನು ಸೃಷ್ಟಿಸಲು ಶುರುಮಾಡಿ ಐವತ್ತು ವರ್ಷಗಳಾಗುತ್ತಾ ಬಂದಿದೆ. ಇವೆರಡೂ ಚಳವಳಿಗಳು ಕನ್ನಡ ಭಾಷೆಗೆ ಹೊಸ ನ್ಯಾಯದ ಪರಿಭಾಷೆಗಳನ್ನು ಬೆಸೆದು, ಕರ್ನಾಟಕದ ಚರಿತ್ರೆಯ ದಿಕ್ಕನ್ನು ಬದಲಿಸಿದವು.

ದಲಿತ ಚಳವಳಿಯ ಆರಂಭದಿಂದಲೂ ದಲಿತರ ಹಕ್ಕುಗಳ ಹೋರಾಟದ ಜೊತೆಗೆ ವೈಚಾರಿಕ ಕರ್ನಾಟಕವನ್ನು ಕಟ್ಟಬೇಕೆಂಬ ಹಂಬಲವೂ ಬೆರೆತಿತ್ತು. ಇದಕ್ಕಿಂತ ಮೊದಲು ಎಪ್ಪತ್ತರ ದಶಕದ ಶುರುವಿನಲ್ಲಿ ಪ್ರಜ್ಞಾವಂತ ವ್ಯಕ್ತಿಗಳ ಮೂಲಕ ವೈಚಾರಿಕ ಸಂಘರ್ಷ ಆರಂಭವಾಗಿತ್ತು. ಎಂ.ಡಿ.ನಂಜುಂಡಸ್ವಾಮಿ ವಿಚಾರವಂತ ತರುಣರ ಜೊತೆಗೂಡಿ 'ಸಮಾಜವಾದಿ ಯುವಜನ ಸಭಾ' ಆರಂಭಿಸಿದರು. ಅಷ್ಟೊತ್ತಿಗಾಗಲೇ ಶಾಂತವೇರಿ ಗೋಪಾಲಗೌಡರು ಸಮಾಜವಾದಿ ನೋಟವನ್ನು ರಾಜಕಾರಣದ ಜೊತೆಗೆ ಬೆಸೆದಿದ್ದರು. ಇದು ಲೋಹಿಯಾವಾದವನ್ನು ಕನ್ನಡಕ್ಕೆ ಒಗ್ಗಿಸಿದ ಕಾಲ. ಮುಂದೆ ದಲಿತ ಚಳವಳಿ ಕಟ್ಟಿದ ಬಿ.ಕೃಷ್ಣಪ್ಪ, ದೇವನೂರ ಮಹಾದೇವ, ಗೋವಿಂದಯ್ಯ, ಶ್ರೀಧರ ಕಲಿವೀರ ಮೊದಲಾದವರು ಸಮಾಜವಾದಿ ಯುವಜನ ಸಭಾದ ಜೊತೆಗಿದ್ದರು. ಕವಿ ಸಿದ್ಧಲಿಂಗಯ್ಯ ಮಾರ್ಕ್ಸ್‌ವಾದದ ಸಂಘರ್ಷದ ಭಾಷೆಯನ್ನು ಬಳಸುತ್ತಿದ್ದರು. ಪೆರಿಯಾರ್ ಚಿಂತನೆಯನ್ನೂ ವೈಚಾರಿಕ ಕರ್ನಾಟಕ ಸ್ವೀಕರಿಸಿತು. ಪ್ರಗತಿಶೀಲ ಸಾಹಿತ್ಯವೂ ಸೇರಿದಂತೆ ಹಲ ಬಗೆಯ ಸಾಂಸ್ಕೃತಿಕ ಬೆಳವಣಿಗೆಗಳು ಏಕೀಕರಣದ ನಂತರದ ವೈಚಾರಿಕ ಕರ್ನಾಟಕವನ್ನು, ಪ್ರಗತಿಪರ ಪರಿಭಾಷೆಯ ಕನ್ನಡವನ್ನು, ವೈಚಾರಿಕ ನೋಟದ ಹೊಸ ಕನ್ನಡಿಗರನ್ನು ಸೃಷ್ಟಿಸಿದವು.

ಬೂಸಾ ಪ್ರಕರಣ, ದಲಿತಕಲಾ, ದಲಿತ ಸಂಘರ್ಷ ಸಮಿತಿಗಳ ಘಟ್ಟದಲ್ಲಿ ದಲಿತ ಚಳವಳಿಯ ಹೋರಾಟ, ಕರಪತ್ರ, ಭಾಷಣಗಳು, ಅಂಬೇಡ್ಕರ್ ರೂಪಿಸಿದ ಸಮಾನತೆ, ಜಾತಿವಿನಾಶ, ಸಾಮಾಜಿಕ ನ್ಯಾಯದ ಪರಿಕಲ್ಪನೆಗಳನ್ನು ಹಬ್ಬಿಸತೊಡಗಿದವು.

ದಲಿತ ಕಮ್ಯುನಿಟಿಗಳಲ್ಲಿ ಜೆ.ರಾಮಯ್ಯ, ಓ.ಶ್ರೀಧರನ್ ಮೊದಲಾದವರಿಂದ ಮಾರ್ಕ್ಸಿಸ್ಟ್ ನೋಟ ಕ್ರಮವೂ ಚಳವಳಿಗೆ ಸೇರಿಕೊಂಡಿತು. ಕೋಲಾರ ವಲಯದಲ್ಲಿ ಗದ್ದರ್ ಕ್ರಾಂತಿಕಾರಿ ಹಾಡುಗಳ ವರ್ಗಸಂಘರ್ಷವೂ ಬೆರೆಯಿತು. ನಂತರದ ದಲಿತ ಚಳವಳಿ ಅಂಬೇಡ್ಕರ್ ಚಿಂತನ-ಮಾರ್ಗಗಳನ್ನು ಹೆಚ್ಚು ಬಳಸತೊಡಗಿತು. ಆದರೂ, ದಲಿತ ಚಳವಳಿಯ ಮೂರನೆಯ ತಲೆಮಾರಿನ ಮಾವಳ್ಳಿ ಶಂಕರ್, ಲಕ್ಷ್ಮೀನಾರಾಯಣ ನಾಗವಾರರವರೆಗೂ ಅಂಬೇಡ್ಕರ್-ಪೆರಿಯಾರ್-ಸಮಾಜವಾದಿ ವೈಚಾರಿಕ ಭಾಷೆ ಮುಂದುವರಿದಿದೆ. ಇದೆಲ್ಲದರ ಫಲವಾಗಿ ಕರ್ನಾಟಕದ ದಲಿತ ಚಳವಳಿಯ ಭಾಷೆ, ಧೋರಣೆಗಳು ಭಾರತದ ಇತರ ರಾಜ್ಯಗಳಿಗಿಂತ ಭಿನ್ನವಾಗಿವೆ.

ದಲಿತ ಚಳವಳಿಯ ಗುರಿಗಳಲ್ಲಿ ಜಾತ್ಯತೀತ ಕರ್ನಾಟಕದ ಸೃಷ್ಟಿಯೂ ಇದ್ದುದರಿಂದ ದಲಿತ ಚಳವಳಿ ಕರ್ನಾಟಕದ ಹಲವು ಪ್ರಗತಿಪರ ಚಳವಳಿಗಳ ಜೊತೆ ಕೈ ಜೋಡಿಸುತ್ತಾ ಬಂದಿದೆ. ದಲಿತ ಚಳವಳಿಯ ಭಾಷೆ ಇತರ ಪ್ರಗತಿಪರ ಸಂಘಟನೆಗಳ ಭಾಷೆಯ ಜೊತೆ ಬೆರೆತಿದೆ. ನಂತರ ಬಂದ ಬಂಡಾಯ ಸಾಹಿತ್ಯ ಚಳವಳಿಯ ಲೇಖಕ, ಲೇಖಕಿಯರು ದಲಿತ ಚಳವಳಿಯ ಭಾಷೆ, ಧೋರಣೆಗಳನ್ನು ಬಹುತೇಕ ಒಪ್ಪಿದವರಾಗಿದ್ದರು. ಬಂಡಾಯ ಚಳವಳಿ ಸೃಷ್ಟಿಸಿದ ವೈಚಾರಿಕ ಕರ್ನಾಟಕವು ದಲಿತ ಚಳವಳಿಯ ಮತ್ತೊಂದು ಬಗೆಯ ಮುಂದುವರಿಕೆಯಾಯಿತು. ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯಗಳು ಮೂರು ತಲೆಮಾರುಗಳ ಬೃಹತ್ ವೈಚಾರಿಕ ಓದುಗ, ಲೇಖಕ ಸಮುದಾಯವನ್ನು ಸೃಷ್ಟಿಸಿವೆ. ಈ ವೈಚಾರಿಕ ಭಾಷೆ ಕೋಮುವಾದ ವಿರೋಧಿ ಚಳವಳಿ, ಕಮ್ಯುನಿಸ್ಟ್ ಚಳವಳಿ ಮುಂತಾಗಿ ಹಲವೆಡೆ ಬೆರೆತುಕೊಂಡಿದೆ.

ಪ್ರಜ್ಞಾವಂತ ವ್ಯಕ್ತಿಯೊಬ್ಬ ಏಕಾಂಗಿಯಾಗಿಯೂ ವ್ಯವಸ್ಥೆಯನ್ನು ಎದುರಿಸಬಹುದು ಎಂಬುದನ್ನು ಕಲಿಸಿದ್ದ ಗಾಂಧೀವಾದ, ಸಮಾಜವಾದಗಳಿಂದ ಎಂ.ಡಿ. ನಂಜುಂಡಸ್ವಾಮಿ (ಎಂ.ಡಿ.ಎನ್) ಪ್ರೇರಣೆ ಪಡೆದಿದ್ದರು. ರೈತರು ಬೆಳೆದ ಬೆಳೆಯ ಒಂದು ಭಾಗವನ್ನು ಲೆವಿ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕೆಂಬ ಕಾನೂನನ್ನು ವಿರೋಧಿಸಿ ಎಂ.ಡಿ.ಎನ್. ಏಕವ್ಯಕ್ತಿ ಚಳವಳಿ ಆರಂಭಿಸಿದರು. ಇದು 'ಕರಿಯರನ್ನು ಅಸಮಾನವಾಗಿ ಕಾಣುವ ಭ್ರಷ್ಟ ಅಮೆರಿಕ ಸರ್ಕಾರಕ್ಕೆ ತೆರಿಗೆ ಕೊಡುವುದಿಲ್ಲ' ಎಂದು ಸವಾಲೆಸೆದು ಕಾಡಿಗೆ ಹೋದ ಲೇಖಕ ಹೆನ್ರಿ ಡೇವಿಡ್ ಥೋರೊ ಮಾಡಿದಂಥ 'ನಾಗರಿಕ ಅವಿಧೇಯತೆ'ಯ ಕರ್ನಾಟಕದ ರೂಪವಾಗಿತ್ತು. ಎನ್.ಡಿ.ಸುಂದರೇಶ್, ಪೂರ್ಣಚಂದ್ರ ತೇಜಸ್ವಿ ಕೂಡ ಏಕವ್ಯಕ್ತಿ ಚಳವಳಿ ಶುರು ಮಾಡಿದರು. ನಂತರ 'ಕಬ್ಬು ಬೆಳೆಗಾರರ ಸಂಘ' ಹುಟ್ಟಿತು. 1980ರಲ್ಲಿ ನರಗುಂದ, ನವಲಗುಂದದಲ್ಲಿ ಚಳವಳಿ ನಿರತ ರೈತರ ಮೇಲೆ ಗೋಲಿಬಾರ್ ನಡೆದ ನಂತರ 'ಕರ್ನಾಟಕ ರಾಜ್ಯ ರೈತ ಸಂಘ' ಅಸ್ತಿತ್ವಕ್ಕೆ ಬಂತು.

ಅಂದು ರೈತ ಚಳವಳಿಯ ಮುಖ್ಯ ಭಾಷಣಕಾರರಾಗಿದ್ದ ಎಂ.ಡಿ.ಎನ್, ಸುಂದರೇಶ್, ಕಡಿದಾಳು ಶಾಮಣ್ಣ ಲೋಹಿಯಾವಾದಿಗಳಾಗಿದ್ದರು. ಎಂ.ಡಿ.ಎನ್-ತೇಜಸ್ವಿ ಸೇರಿ ಲೋಹಿಯಾ ಚಿಂತನೆಗಳ 'ಕೆಂಪು ಪುಸ್ತಕ' ಪ್ರಕಟಿಸಿ ಸಮಾಜವಾದವನ್ನು ಹೊಸ ತಲೆಮಾರಿಗೆ ಪರಿಚಯಿಸಿದರು. ಈ ತಲೆಮಾರಿನ ವಿಚಾರವಾದಿಗಳು ಸಣ್ಣಪುಟ್ಟ ತಂಡಗಳಲ್ಲಿ ಜಾತಿವಿನಾಶ ಚಳವಳಿ, ವಿಚಾರವಾದಿ ಸಂಘಟನೆಗಳು, ದಲಿತ ಚಳವಳಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಮುಂದೆ ಈ ವಲಯ ರೈತ ಚಳವಳಿಯತ್ತಲೂ ಹೊರಳಿತು. ಈ ಚಳವಳಿಗಳ ಸಭೆಗಳಲ್ಲಿ ಭಾಗಿಯಾಗುತ್ತಿದ್ದ ವಿಚಾರವಂತರಲ್ಲಿ ಎರಡೂ ಚಳವಳಿಗಳು ಬೆರೆಯತೊಡಗಿದ್ದವು. ಈ ಚಳವಳಿಗಳನ್ನು ಬೆಂಬಲಿಸಿಯೂ, ಅವುಗಳ ವಿಮರ್ಶಕರಾಗಿದ್ದ ಕೆ.ರಾಮದಾಸ್, ಡಿ.ಆರ್.ನಾಗರಾಜ್, ಲಂಕೇಶ್ ಥರದವರೂ ಇದ್ದರು.

ಕಳೆದ ಐವತ್ತು ವರ್ಷಗಳಲ್ಲಿ ದಲಿತ ಚಳವಳಿ ಬಳಸುತ್ತಾ ಬಂದಿರುವ ನೀಲಿ ಬಾವುಟ, ರೈತ ಚಳವಳಿಯ ಹಸಿರು ಟವಲ್ ಕರ್ನಾಟಕದ ಚಿರಪರಿಚಿತ ಸಂಕೇತಗಳಾಗಿವೆ. ಕನ್ನಡ ಭಾಷೆಗೆ ಹೊಸ ನುಡಿಗಟ್ಟುಗಳನ್ನು ಕೊಡುತ್ತಲೇ ಹೊಸ ಕನ್ನಡ ಸಂಸ್ಕೃತಿಯನ್ನು ರೂಪಿಸಿದ ಈ ಚಳವಳಿಗಳು ಕರ್ನಾಟಕದಲ್ಲಿ ಬೇರೆ ಬೇರೆ ರೀತಿಯಲ್ಲಿ ಮುಂದುವರಿಯುತ್ತಲೇ ಇವೆ. ದಲಿತ ಸ್ವಾಭಿಮಾನ, ರೈತ ಸ್ವಾಭಿಮಾನ ಕರ್ನಾಟಕದಲ್ಲಿ ಗಟ್ಟಿಯಾಗಿ ನೆಲೆಗೊಂಡಿವೆ. ಇವೆರಡೂ ಚಳವಳಿಗಳು ಕನ್ನಡ ಭಾಷೆಗೆ ಹೊಸ ನ್ಯಾಯದ ಪರಿಭಾಷೆಗಳನ್ನು ಬೆಸೆದು, ಕರ್ನಾಟಕದ ಚರಿತ್ರೆಯ ದಿಕ್ಕನ್ನು ಬದಲಿಸಿವೆ

ಕೋಲಾರದಲ್ಲಿ ನಡೆದ ರಾಜ್ಯ ದಲಿತ ವಿದ್ಯಾರ್ಥಿಗಳ ಮೊದಲ ಸಮ್ಮೇಳನವನ್ನು ಉದ್ದೇಶಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪತ್ನಿ ಸವಿತಾ ಅಂಬೇಡ್ಕರ್ ಮಾತನಾಡಿದ್ದರು. ದಲಿತ ನಾಯಕರಾದ ಬಿ.ಕೃಷ್ಣಪ್ಪ, ರಾಮದಾಸ್ ಆಠವಲೆ ಮತ್ತು ಸಾಹಿತಿ ದೇವನೂರ ಮಹಾದೇವ ಪಾಲ್ಗೊಂಡಿದ್ದರು



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಎನ್‌.ಡಿ. ಸುಂದರೇಶ್ ನೇತೃತ್ವದಲ್ಲಿ 1992ರ ಫೆಬ್ರುವರಿ 23ರಂದು ಬೆಂಗಳೂರಿನ ವಿಧಾನಸೌಧದ ಮುಂಭಾಗ ರೈತ ಸಂಘ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾರಿ ಸಂಖ್ಯೆಯಲ್ಲಿ ರೈತರು ಸೇರಿದ್ದರು ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

ದಲಿತ ಚಳವಳಿಯ ಸಾಮಾಜಿಕ ನ್ಯಾಯದ ಪರಿಭಾಷೆ ಹಾಗೂ ರೈತ ಚಳವಳಿಯ ಗ್ರಾಮಪರ-ರೈತಪರ ನಿಲುವಿನ ಪರಿಭಾಷೆಗಳು ಕನ್ನಡ ಸಂಸ್ಕೃತಿಯ ಭಾಗವಾಗತೊಡಗಿದವು. ಆರ್ಥಿಕ, ಸಾಮಾಜಿಕ ಚಳವಳಿಗಳಾಗಿದ್ದ ಈ ಚಳವಳಿಗಳು ಕರ್ನಾಟಕದ ಸಾಂಸ್ಕೃತಿಕ ಚಳವಳಿಗಳಾದವು. ಈ ಚಳವಳಿಗಳಲ್ಲಿ ಮೈದಾಳಿದ ಸ್ಫೂರ್ತಿದಾಯಕ ಹಾಡುಗಳು ಜನ್ನಿ, ಪಿಚ್ಚಳ್ಳಿ ಶ್ರೀನಿವಾಸ್, ಯುವರಾಜರಂಥ ಹಾಡುಗಾರರ ಕಂಠದಲ್ಲಿ ಕನ್ನಡ ಹೋರಾಟದ ಹಾಡುಗಳ ಹೊಸ ಪರಂಪರೆಯನ್ನೇ ಸೃಷ್ಟಿಸಿದವು. ಈ ಹಾಡುಗಳು ಇವತ್ತಿಗೂ ದಲಿತ, ರೈತ ಸಭೆಗಳಲ್ಲಿ ಪ್ರತಿಧ್ವನಿಸುತ್ತಿವೆ.

ಈ ಚಳವಳಿಗಳು ಹೊರ ತಂದ ಕರಪತ್ರಗಳ ಭಾಷೆ ಕನ್ನಡ ಭಾಷೆಗೆ ಹೊಸ ನುಡಿಗಟ್ಟುಗಳನ್ನು ಕೊಟ್ಟಿತು. ದಲಿತ ಚಳವಳಿಯ ಆರಂಭದಲ್ಲಿ ದೇವನೂರ ಬರೆದ ಕರಪತ್ರಗಳು; ರೈತಸಂಘದ ಸಮಾವೇಶಗಳಿಗಾಗಿ ಎಂ.ಡಿ.ಎನ್. ಬರೆದ ಖಚಿತ ಅಂಕಿಅಂಶಗಳುಳ್ಳ ಕರಪತ್ರಗಳು- ಇವೆರಡೂ ಕನ್ನಡ ಕರಪತ್ರ ಬರವಣಿಗೆಯ ಮುಖ್ಯ ಮಾದರಿಗಳಾಗಿವೆ. ಇವು ಊರೂರುಗಳಲ್ಲಿ ಮುದ್ರಣಗೊಂಡು ಮರುಹುಟ್ಟು ಪಡೆಯುತ್ತಾ, ಚಳವಳಿಯ ಅನುಯಾಯಿಗಳು ಹಾಗೂ ಚಳವಳಿಯ 'ಅನುಮಾನಿ'ಗಳು ಇಬ್ಬರಿಗೂ ಶಿಕ್ಷಣ ನೀಡಲೆತ್ನಿಸಿವೆ.

ಬಿ.ಕೃಷ್ಣಪ್ಪ, ಸಿದ್ಧಲಿಂಗಯ್ಯ, ದೇವನೂರ ಮಹಾದೇವ ಚಳವಳಿಯ ಒಡನಾಟದಲ್ಲೇ ರೂಪಿಸಿಕೊಂಡ ಭಾಷಣದ ಮೂರು ಮಾದರಿಗಳೂ ದಲಿತ ಚಳವಳಿ ಬೇರೂರಲು ನೆರವಾಗಿವೆ. ಬಿ.ಕೃಷ್ಣಪ್ಪ ದಲಿತರ ಜೀವನ್ಮರಣದ ಸಮಸ್ಯೆಗಳನ್ನು, ಅಂಬೇಡ್ಕರ್ ಚಿಂತನೆಗಳನ್ನು ಸಭೆಯಲ್ಲಿದ್ದ ಅನಕ್ಷರಸ್ಥರಿಗೂ ಅರ್ಥ ಮಾಡಿಸುತ್ತಿದ್ದರು. ಸಿದ್ಧಲಿಂಗಯ್ಯ ಸ್ಫೋಟಕವಾಗಿ ಮಾತಾಡಿ ದಲಿತರನ್ನೂ, ದಲಿತೇತರರನ್ನೂ ಚಳವಳಿಯೆಡೆಗೆ ಸೆಳೆಯುತ್ತಿದ್ದರು. ಇವೆರಡೂ ಮಾದರಿಗಳನ್ನು ದಲಿತ ಚಳವಳಿಯ ಹೊಸ ತಲೆಮಾರುಗಳೂ ಮುಂದುವರಿಸುತ್ತಿವೆ. ದೇವನೂರರ ಮಾತುಗಳು ಶೋಷಕ-ಶೋಷಿತರಿಬ್ಬರೂ ಆತ್ಮಪರೀಕ್ಷೆ ಮಾಡಿಕೊಳ್ಳಬಲ್ಲ ಗಾಂಧೀ ಭಾಷೆಯನ್ನು ಅಂಬೇಡ್ಕರ್ ಪರಿಭಾಷೆಯೊಂದಿಗೆ ಬೆಸೆಯುತ್ತಿದ್ದವು; ಜಾತಿವಾದಿ ದಲಿತೇತರರನ್ನೂ ಬದಲಿಸಲೆತ್ನಿಸುತ್ತಿದ್ದವು. ದಲಿತ ಚಳವಳಿಯ ಪ್ರಭಾವದಿಂದಾಗಿ ಸಿದ್ಧಲಿಂಗಯ್ಯ ಹಾಗೂ ಎಲ್.ಹನುಮಂತಯ್ಯ ವಿಧಾನ ಪರಿಷತ್ ಸದಸ್ಯರಾದರು. ಹಲವು ದಲಿತ, ದಲಿತೇತರ ರಾಜಕಾರಣಿಗಳು ದಲಿತ ಚಳವಳಿಯ ಬೆಂಬಲದಿಂದಲೂ ಶಾಸಕರಾದರು.

ರೈತರ ಬೃಹತ್ ಸಭೆಗಳಲ್ಲಿ ಸಿಟ್ಟು, ವ್ಯಂಗ್ಯ, ಗಾಂಭೀರ್ಯ ಬೆರೆತ ಎಂ.ಡಿ.ಎನ್. ಭಾಷಣಗಳು ರೈತರ ದಮನ ಮಾಡುತ್ತಿದ್ದ ಸ್ಥಳೀಯ, ಜಾಗತಿಕ ವಿದ್ಯಮಾನಗಳ ಬಗೆಗಿನ ಆಳವಾದ ತಿಳಿವಳಿಕೆ ನೀಡುತ್ತಿದ್ದವು. ಎನ್.ಡಿ. ಸುಂದರೇಶ್, ಪುಟ್ಟಣ್ಣಯ್ಯನವರ ಸ್ಫೋಟಕ ಭಾಷಣಗಳ ಜೊತೆಗೆ, ರವಿವರ್ಮಕುಮಾರ್ ಅವರ ಕಾನೂನಿನ ನೋಟಗಳೂ ಇರುತ್ತಿದ್ದವು. ಮಹೇಂದ್ರ ಟಿಕಾಯತ್ ಥರದ ಭಾರತೀಯ ರೈತ ನಾಯಕರೂ ರೈತ ಸಭೆಗಳಲ್ಲಿ ಭಾಗಿಯಾಗುತ್ತಿದ್ದರು. ದೇಶಿ ಬೀಜಗಳ ರಕ್ಷಣೆಗಾಗಿ ಬೀಜ ಸತ್ಯಾಗ್ರಹದ ಮಾದರಿಗಳನ್ನು ರೂಪಿಸಿದ ರೈತಸಂಘ, 'ಡೈರೆಕ್ಟ್ ಆ್ಯಕ್ಷನ್'ನ ನೇರ ದಾಳಿಯನ್ನೂ ಹಮ್ಮಿಕೊಂಡಿತ್ತು. ರೈತ ಚಳವಳಿಯ ಬಾಬಾಗೌಡ ಪಾಟೀಲ, ಎಂ.ಡಿ. ನಂಜುಂಡಸ್ವಾಮಿ, ಪುಟ್ಟಣ್ಣಯ್ಯ ವಿಧಾನಸಭೆಯಲ್ಲಿ ರೈತದನಿಯನ್ನು ಮೊಳಗಿಸಿದರು. ಸರ್ಕಾರಗಳು ರೈತಪರವಾಗಲೇಬೇಕಾದ ಕಾಲ ಬಂತು.

ಕಳೆದ ಐವತ್ತು ವರ್ಷಗಳಲ್ಲಿ ದಲಿತ ಚಳವಳಿ ಬಳಸುತ್ತಾ ಬಂದಿರುವ ನೀಲಿ ಬಾವುಟ, ರೈತ ಚಳವಳಿಯ ಹಸಿರು ಟವಲ್ ಕರ್ನಾಟಕದ ಚಿರಪರಿಚಿತ ಸಂಕೇತಗಳಾಗಿವೆ. ಕನ್ನಡ ಭಾಷೆಗೆ ಹೊಸ ನುಡಿಗಟ್ಟುಗಳನ್ನು ಕೊಡುತ್ತಲೇ ಹೊಸ ಕನ್ನಡ ಸಂಸ್ಕೃತಿಯನ್ನು ರೂಪಿಸಿದ ಈ ಚಳವಳಿಗಳು ಕರ್ನಾಟಕದಲ್ಲಿ ಬೇರೆ ಬೇರೆ ರೀತಿಯಲ್ಲಿ ಮುಂದುವರಿಯುತ್ತಲೇ ಇವೆ. ದಲಿತ ಸ್ವಾಭಿಮಾನ, ರೈತ ಸ್ವಾಭಿಮಾನಗಳು ಕರ್ನಾಟಕದಲ್ಲಿ ಗಟ್ಟಿಯಾಗಿ ನೆಲೆಗೊಂಡಿವೆ.

ಈ ಕಾಲದಲ್ಲಿ ನಾನಾ ಕಾರಣಗಳಿಂದ ಒಡೆದುಹೋಗಿರುವ ಈ ಚಳವಳಿಗಳ ಬಣಗಳು ಆಗಾಗ್ಗೆ ಒಂದಾಗಲೆತ್ನಿಸಿವೆ. 'ಚಳವಳಿಗಳು ಕಾವು ಕಳೆದುಕೊಂಡಿವೆ' ಎನ್ನುವವರಿಗೆ ಎಂ.ಡಿ.ನಂಜುಂಡಸ್ವಾಮಿಯವರೇ ಒಮ್ಮೆ ಉತ್ತರ ಕೊಟ್ಟಿದ್ದರು: 'ರೈತ ಚಳವಳಿ ತನ್ನ ಕಾವು ಕಳೆದುಕೊಂಡಿದೆ ಎನ್ನುವವರು ತಂತಮ್ಮ ಕಾವನ್ನು ಪರೀಕ್ಷಿಸಿಕೊಳ್ಳುವುದು ಉತ್ತಮ.'

ಈ ಮಾತು ಎರಡೂ ಚಳವಳಿಗಳ ಹೊರ ಟೀಕಾಕಾರರನ್ನು ಆತ್ಮಪರೀಕ್ಷೆಗೆ ಒಡ್ಡುವಂತಿದೆ. ದಲಿತ ಚಳವಳಿ, ರೈತ ಚಳವಳಿಗಳು ನಾಯಕರ, ಕಾರ್ಯಕರ್ತ, ಕಾರ್ಯಕರ್ತೆಯರ ತ್ಯಾಗ, ಬದ್ಧತೆಗಳಿಂದ ಬೆಳೆದಿವೆ; ಚಳವಳಿಗಳ ಬಗ್ಗೆ ಸಹಾನುಭೂತಿಯುಳ್ಳವರು, ಮಾಧ್ಯಮಗಳು ಹಾಗೂ ಹಲಬಗೆಯ ಸಹಾಯ ಹಸ್ತಗಳಿಂದಲೂ ಬೆಳೆದಿವೆ. ದಲಿತರ ಜನಸಂಖ್ಯೆಗನುಗುಣವಾಗಿ ಬಜೆಟ್ ಮೀಸಲಿಡಬೇಕಾದ ಸರ್ಕಾರಿ ಯೋಜನೆಗಳವರೆಗೂ ದಲಿತ ಚಳವಳಿಯ ಪ್ರಬಲ ಪ್ರಭಾವವಿದೆ. 21ನೇ ಶತಮಾನದ ಅತಿವ್ಯಕ್ತಿ ಕೇಂದ್ರಿತತೆಯ ಫಲವಾಗಿ, ಒಡಕಿನ ನಡೆ ನುಡಿಗಳಿಂದಾಗಿ, ಸಿದ್ಧಾಂತಗಳ ತಿಳಿವಳಿಕೆಯ ಕೊರತೆಯಿಂದಾಗಿಯೂ ಚಳವಳಿಗಳ ಬೆಂಬಲಿಗರು ಕಡಿಮೆಯಾಗತೊಡಗಿದ್ದಾರೆ. ಚಳವಳಿಗಳ ಬಗ್ಗೆ ಕ್ಷುಲ್ಲಕ ಪ್ರಶ್ನೆಗಳನ್ನೆತ್ತುವ ಬೇಜವಾಬ್ದಾರಿ ಗುಂಪುಗಳಿವೆ. ಚಳವಳಿಗಳನ್ನು ಬೆಂಬಲಿಸುವ ಸೋಷಿಯಲ್ ಮೀಡಿಯಾ ಗುಂಪುಗಳೂ ಇವೆ. ದಲಿತ ಚಳವಳಿಯಲ್ಲಿ ಹೊಸ ಹಾಡುಗಾರರು, ಲೇಖಕ, ಲೇಖಕಿಯರು ರೂಪುಗೊಂಡಿದ್ದಾರೆ. ಕ್ಷಿಪ್ರವಾಗಿ ಬದಲಾಗುವ 'ಟ್ರೆಂಡ್'ಗಳ ಈ ಕಾಲದಲ್ಲಿ ಕರ್ನಾಟಕದ ದಲಿತ, ರೈತ ಚಳವಳಿಗಳಿಗೆ ಹೊಸ ಪರಿಭಾಷೆ, ಹೊಸ ಸಂಘಟನಾಕ್ರಮ, ಅಂಬೇಡ್ಕರ್‌ವಾದ, ಸಮಾಜವಾದಗಳ ಮರುಅಧ್ಯಯನ, ಇನ್ನಿತರ ಸಿದ್ಧಾಂತಗಳ ಜೊತೆಗಿನ ಅರ್ಥಪೂರ್ಣ ಒಡನಾಟ ಹಾಗೂ ಹೊಸ ಸಾಂಸ್ಕೃತಿಕ ಚೌಕಟ್ಟುಗಳನ್ನು ರೂಪಿಸಿಕೊಳ್ಳಬೇಕಾದ ಅಗತ್ಯ ಇಂದು ಹಿಂದಿಗಿಂತ ಹೆಚ್ಚಾಗಿದೆ

ಲೇಖಕ: ವಿಮರ್ಶಕ

ಮಾಧ್ಯಮಗಳ ಕೊಡುಗೆ



ದಲಿತ, ರೈತ ಚಳವಳಿಗಳ ಹಕ್ಕೊತ್ತಾಯಗಳು, ಆಶಯಗಳನ್ನು ಜನಪ್ರಿಯಗೊಳಿಸಿ ಅವುಗಳ ನ್ಯಾಯಬದ್ಧತೆಯನ್ನು ಬೆಂಬಲಿಸಿದ ಕನ್ನಡ ಪತ್ರಿಕೆಗಳ ಕೊಡುಗೆಯೂ ಮಹತ್ವದ್ದಾಗಿದೆ. ಎಂಬತ್ತರ ದಶಕದಲ್ಲಿ 'ಪ್ರಜಾವಾಣಿ' ಹಾಗೂ ಖಾದ್ರಿ ಶಾಮಣ್ಣನವರ ಸಂಪಾದಕತ್ವದ 'ಕನ್ನಡಪ್ರಭ,' ಅನಂತರ ರಾಜಶೇಖರ ಕೋಟಿಯವರ 'ಆಂದೋಲನ' ಥರದ ಹಲವು ಪತ್ರಿಕೆಗಳು ದಲಿತ, ರೈತ ಚಳವಳಿಯ ಚಿಂತನೆ, ಪರಿಕಲ್ಪನೆಗಳನ್ನು ಲಕ್ಷಾಂತರ ಓದುಗರಿಗೆ ಮುಟ್ಟಿಸುತ್ತಿದ್ದವು. ದಸಂಸದ 'ಪಂಚಮ', ರೈತ ಸಂಘದ 'ನಮ್ಮ ನಾಡು' ಪತ್ರಿಕೆಗಳು ಚಳವಳಿಯ ವೇದಿಕೆಗಳಾಗಿದ್ದವು. ದಲಿತ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದ ಇಂದೂಧರ ಹೊನ್ನಾಪುರ, ರಾಮದೇವ ರಾಕೆ, ಶಿವಾಜಿ ಗಣೇಶನ್ ಮೊದಲಾದವರು 'ಪ್ರಜಾವಾಣಿ'ಯ ವರದಿಗಾರರಾಗಿದ್ದರು. ಕೆಲ ಕಾಲ ದಲಿತ ಚಳವಳಿ, ರೈತ ಚಳವಳಿಗಳನ್ನು ಬೆಂಬಲಿಸಿದ 'ಲಂಕೇಶ್ ಪತ್ರಿಕೆ' ಈ ಚಳವಳಿಗಳ ವರದಿ, ವಿಶ್ಲೇಷಣೆ, ವಿಮರ್ಶೆಗಳನ್ನು ಪ್ರಕಟಿಸುತ್ತಿತ್ತು. 'ಸುದ್ದಿ ಸಂಗಾತಿ'ಯೂ ಈ ಕೆಲಸ ಮಾಡಿತು. ಇಂಥ ಪತ್ರಿಕೆಗಳ ಹೊಣೆಗಾರಿಕೆ, ಕಾಳಜಿಗಳಿಂದಾಗಿ ದೂರದೂರದ ಊರುಗಳ ದಲಿತ, ರೈತ ಕುಟುಂಬಗಳ ಹೊಸ ತಲೆಮಾರಿನ ತರುಣರು ಚಳವಳಿಗಳ ಬಗ್ಗೆ ಒಲವು ಬೆಳೆಸಿಕೊಂಡು ತಂತಮ್ಮ ಊರುಗಳಲ್ಲೂ ಸಂಘಟನೆಗಳನ್ನು ಶುರು ಮಾಡಿದರು. ಲಕ್ಷಾಂತರ ಕಾಯಕರ್ತರು, ಕಾರ್ಯಕರ್ತೆಯರು ಸಂಘಟನೆಗಳ ಬೆನ್ನೆಲುಬಾಗಿ ದುಡಿದು, ಅಹಿಂಸಾತ್ಮಕ, ಪ್ರಜಾಪ್ರಭುತ್ವವಾದಿ ಮಾರ್ಗದಲ್ಲಿ ಚಳವಳಿಗಳನ್ನು ಬೆಳೆಸಿದರು.

ಕನ್ನಡದ ಹೆಮ್ಮೆ

ದೇವನೂರ ಮಹಾದೇವ

(ಜನನ: ಜೂ.10, 1948)

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೇವನೂರ ಮಹಾದೇವ, ಒಂದು ವಿಶಿಷ್ಟ ಪ್ರತಿಭೆ. ಅವರು ನವ್ಯೋತ್ತರ ಕಾಲಘಟ್ಟದಲ್ಲಿ ಬರವಣಿಗೆ ಆರಂಭಿಸಿ ದಲಿತ ಬಂಡಾಯ ಪಂಥದ ಪ್ರಮುಖ ಲೇಖಕರೆನಿಸಿಕೊಂಡವರು; ದಲಿತ ಲೋಕದ ಕಥೆಗಳನ್ನು ಅತ್ಯಂತ ಖಚಿತವಾಗಿ ಕಂಡರಿಸಿದ ಹಿರಿಮೆ ಅವರದ್ದು. ಅವರು ಅನುಸರಿಸಿದ ಅಭಿವ್ಯಕ್ತಿ ಕ್ರಮ ಮತ್ತು ಭಾಷೆ ಅತ್ಯಂತ ಸ್ವೋಪಜ್ಞವಾದವು.

'ದ್ಯಾವನೂರು' ಕಥಾ ಸಂಕಲನದ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ದಿಕ್ಕು ತೋರಿದವರು ಮಹಾದೇವ. ನಂತರ ಅವರು ಬರೆದ 'ಒಡಲಾಳ', 'ಕುಸುಮಬಾಲೆ' ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳೆಂದು ಪರಿಗಣಿತವಾದವು.

ಕನ್ನಡ ಅಧ್ಯಾಪಕರಾಗಿ ಒಂದಷ್ಟು ಕಾಲ ಕೆಲಸ ಮಾಡಿ ನಂತರ ಪೂರ್ಣಾವಧಿ ಬೇಸಾಯಗಾರರಾದ ಮಹಾದೇವ, ಸಾಹಿತ್ಯ ರಚನೆ, ದಲಿತ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಲೋಹಿಯಾ ಸಮಾಜವಾದದಿಂದ ಪ್ರಭಾವಿತರಾಗಿದ್ದ ಮಹಾದೇವ, ನಂತರ ಅಂಬೇಡ್ಕರ್ ಚಿಂತನೆಯನ್ನೇ ತಮ್ಮ ಬದುಕು ಮತ್ತು ಸಾಹಿತ್ಯದ ಮೂಲ ದ್ರವ್ಯವನ್ನಾಗಿಸಿಕೊಂಡರು. ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿಯ ಆರಂಭಕ್ಕೆ ಒತ್ತಾಸೆಯಾಗಿ, ಅದರ ಬೌದ್ಧಿಕ ಶಕ್ತಿಯಾದರು.

ನಮ್ಮ ಕಾಲದ ಬಹು ಮುಖ್ಯ ಸಾಮಾಜಿಕ, ರಾಜಕೀಯ ವಾಗ್ವಾದಗಳಿಗೆ ಪ್ರತಿಕ್ರಿಯಿಸುತ್ತಾ, ನಾಡಿನ ಸಾಕ್ಷಿಪ್ರಜ್ಞೆ ಎನ್ನಿಸಿಕೊಂಡರು.

ಮಹಾದೇವ ಅವರು ಸೃಷ್ಟಿಸಿರುವ ಅಮ್ಮಾ, ಸಾಕವ್ವ, ಕುಸುಮಬಾಲೆಯಂಥ ಪಾತ್ರಗಳು, ದಟ್ಟ ಪ್ರಾದೇಶಿಕತೆಯ ಭಾಷೆ, ಕಾವ್ಯಾತ್ಮಕ ಶೈಲಿ ಬೆರೆತ ಕಥನ ಕ್ರಮದ ಜತೆಗೆ ಅವರ ವಿಶಿಷ್ಟ ಕಾಣ್ಕೆಯೂ ಸೇರಿ ಅವರನ್ನು ಕನ್ನಡ ಸಂಸ್ಕೃತಿಯ ಅಪೂರ್ವ ಬರಹಗಾರರನ್ನಾಗಿಸಿವೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಹಿನ್ನೆಲೆ ಧ್ವನಿಯನ್ನು** ಒಳಗೊಂಡಿರುವ ಮಾಂಟೇಜ್ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗುತ್ತಿದೆ. 'ಬಾಲಕಿಯರನ್ನು ಕಲ್ಲು ಹೊಡೆದು ಸಾಯಿಸುತ್ತಿರುವ ಈ ದೇಶದಲ್ಲಿ ಮಾನವೀಯತೆ ಎಲ್ಲಿದೆ? ಇಲ್ಲಿ ಭಯೋತ್ಪಾದಕರನ್ನು ಬಹಿರಂಗವಾಗಿ ಬೆಂಬಲಿಸಲಾಗುತ್ತಿದೆ. ಶತ್ರುದೇಶದ ಪರ ಜಿಂದಾಬಾದ್ ಕೂಗಲಾಗುತ್ತಿದೆ. ರಾಮನ ಅಸ್ತಿತ್ವವನ್ನು ಪ್ರಶ್ನಿಸಲಾಗುತ್ತಿದೆ...' ಮುಂತಾಗಿ ವಿಡಿಯೊದಲ್ಲಿನ ಹಿನ್ನೆಲೆ ಧ್ವನಿ ಹೇಳುತ್ತದೆ. 'ಖ್ಯಾತ ನಟ ಅಮಿತಾಭ್ ಬಚ್ಚನ್ ಅವರು ಅಂತಿಮವಾಗಿ ಮೌನ ಮುರಿದಿದ್ದು, ಜನರನ್ನು ಎಚ್ಚರಿಸುವ ಸಲುವಾಗಿ ದೇಶದ ಪ್ರಸ್ತುತ ಸ್ಥಿತಿಯ ಬಗ್ಗೆ ಮಾತನಾಡಿದ್ದಾರೆ' ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ಅಮಿತಾಭ್ ಅವರ ಧ್ವನಿಗೆ** ಇರುವ ಆಳ ವಿಡಿಯೊದಲ್ಲಿನ ಧ್ವನಿಯಲ್ಲಿ ಇಲ್ಲ. ಜತೆಗೆ ವಾಕ್ಯಗಳನ್ನು ಉಚ್ಚರಿಸುವ ರೀತಿ ಕೂಡ ಭಿನ್ನವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಹಿನ್ನೆಲೆ ಧ್ವನಿಯ ಕೊನೆಯಲ್ಲಿ 'ವಿಡಿಯೊ ಅನ್ನು ಎಲ್ಲರೂ ಶೇರ್ ಮಾಡಿ' ಎಂದು ಕೇಳಲಾಗಿದೆ. ಇವೆಲ್ಲವನ್ನೂ ಗಮನಿಸಿದರೆ, ವಿಡಿಯೊದಲ್ಲಿರುವುದು ಬಚ್ಚನ್ ಅವರ ಧ್ವನಿ ಅಲ್ಲ ಎನ್ನುವುದು ತಿಳಿಯುತ್ತದೆ. ಜತೆಗೆ, 'ಇಲೆವೆನ್ ಲ್ಯಾಬ್ಸ್'ನ ಟೆಕ್ಸ್ಟ್ ಟು ಸ್ಪೀಚ್ ಆಯ್ಕೆಯನ್ನು ಬಳಸಿ ಅದೇ ವಾಕ್ಯಗಳನ್ನು ಪ್ಲೇ ಮಾಡಿದಾಗ, ವಿಡಿಯೊದಲ್ಲಿ ಇರುವಂಥದ್ದೇ ಧ್ವನಿ ಕೇಳಿಸಿತು. ಅಂದರೆ, ಇದು ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಿದ ಧ್ವನಿ ಎನ್ನುವುದು ಖಚಿತವಾಯಿತು. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದುಃಖಕ್ಕೆ ಏನು ಕಾರಣ?

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

75

ಈ ದೇಶದ ದೊಡ್ಡ ಜ್ಞಾನಿ ಪತಂಜಲಿ ಮಹರ್ಷಿ. ಮನುಷ್ಯನಿಗೆ ಯಾವ ಕಾರಣಗಳಿಂದ ದುಃಖ ಆಗತೈತಿ ಅಂತ ಅವರು ಸಂಶೋಧನೆ ಮಾಡ್ಯಾರ. ಮೂರು ಕಾರಣಗಳಿಂದ ಮನುಷ್ಯನಿಗೆ ದುಃಖ ಆಗುತ್ತದೆ ಎಂದು ಅವರು ಕಂಡುಕೊಂಡಾರ. ಮೊದಲನೆಯದ್ದು ಪರಿಣಾಮ ದುಃಖ.

ಜಗತ್ತಿನ ಎಲ್ಲ ವಸ್ತುಗಳೂ ಪರಿಣಾಮ ಅಂದರ ಬದಲಾವಣೆ ಹೊಂದುತ್ತವೆ. ಅಂದರ ಇದ್ದದ್ದು ಇದ್ದಾಂಗೆ ಇರೋದಿಲ್ಲ. ಮನುಷ್ಯನ ಆಸೆ ಎರಡು ಧ್ರುವಗಳ ಸುತ್ತ ತಿರುಗತೈತಿ. ಅದೇನೆಂದರ, 'ನನ್ನ ದೇಹ ಸೊರಗಬಾರದು, ನನ್ನ ಸಂಪತ್ತು ಕರಗಬಾರದು' ಎಂದು ಮನಸ್ಸು ಬಯಸುತ್ತದೆ. ದೇಹ ಸೊರಗಿದರೆ, ಸಂಪತ್ತು ಹೋದರೆ ದುಃಖ ಆಗತೈತಿ. ಆದರೆ, ವಾಸ್ತವ ಸತ್ಯ ಏನೆಂದರ ದೇಹ ಸೊರಗುತೈತಿ, ಸಂಪತ್ತು ಕರಗುತೈತಿ. ಇದು ಸತ್ಯ. ಇದನ್ನು ಮನುಷ್ಯ ತಿಳಕೋಬೇಕು. ರಾಜ ಮಹಾರಾಜರು ಬರೆಸಿದ ಶಿಲಾಶಾಸನಗಳೇ ಅಳಿಯುತ್ತವೆ. ರಾಜಕಾರಣಿಗಳು ಮಾಡಿದ ಶಿಲಾನ್ಯಾಸವೂ ಉಳಿಯೋದಿಲ್ಲ. ಪಂಚ ಮಹಾಭೂತಗಳೇ ತರುಗುತಾವ. ನಮ್ಮನ್ನು ಹೊತ್ತ ಭೂಮಿ ಕೂಡಾ ತಿರಗತೈತಿ. ಹಿಮಾಲಯದ ಹಿಮ ಕೂಡಾ ಕರಗಲು ಹತ್ತೈತಿ. ನನಗಾಗಿ ಒಂದು ಬೆಡ್ ರೂಂ ಕಟ್ಟಬೇಕು ಅಂತಾ ಹಾತೊರಿಯುತ್ತೀರಲ್ಲ, ಆದರೆ ನಿಮಗಾಗಿ ಕಟ್ಟಿದ ಬೆಡ್ ರೂಂ ಒಂದು ದಿನ ಡೆಡ್ ರೂಂ ಆಗತೈತಿ ಅನ್ನೋ ಸತ್ಯಾನೂ ತಿಳಕೋಬೇಕು. ಇದು ಜೀವನದ ಯತಾರ್ಥ ಜ್ಞಾನ. ನಮಗೆ ದುಃಖ ಯಾಕೆ ಆಗೈತಿ ಅಂದರ ಇದು ಗೊತ್ತಿಲ್ಲದಿರುವುದಕ್ಕೆ.

ಯುರೋಪ್‌ನಲ್ಲಿ ಒಂದು ಘಟನೆ ನಡೆಯಿತು. ಒಬ್ಬ ಸಮಾಜ ಸೇವಕ ಇದ್ದ. ಅವನ ಮೂರ್ತಿ ಮಾಡಿ ಊರಿನ ವೃತ್ತದಲ್ಲಿ ನಿಲ್ಲಿಸಿದರು. ಉದ್ಘಾಟನೆಯೂ ಆತು. ಇವ ಮನೆಗೆ ಬಂದು ರಾತ್ರಿ ಮೂರ್ತಿಯನ್ನು ನೋಡಾಕೆ ಶುರು ಹಚ್ಚಿದ. ಇವನಿಗೆ ಬಹಳ ಸಂತೋಷ ಆಗೋತು. ತನ್ನಂಥ ಸಮಾಜ ಸೇವಕ ಯಾರಿದ್ದಾರ ಅಂದುಕೊಂಡ. ಮೂರ್ತಿಯ ಹತ್ತಿರಕ್ಕೆ ಹೋದರೆ ಇನ್ನೂ ಸಂತೋಷ ಆಗತೈತಿ ಅಂತ ಅದರ ಬಳಿಗೆ ಹೋದ. ಆಗ ಯಾರೋ ನಗುವ ಶಬ್ದ ಕೇಳಿತು. ಯಾರು ನಗುತ್ತಿದ್ದಾರೆ ಎಂದು ಹುಡುಕುವಾಗ ಮೆಟ್ಟಿಲು ಹೇಳಿತು, 'ನಗತಾ ಇರೋದು ನಾನು' ಅಂತ. 'ನೀ ಯ್ಯಾಕ ನಗಾಕ ಹತ್ತಿದಿ' ಎಂದು ಕೇಳಿದ ಇವ. 'ನಿನ್ನ ಹುಚ್ಚುತನಕ್ಕೆ ನಗಾಕ ಹತ್ತೀನಿ ನಾನು' ಅಂತು ಮೆಟ್ಟಿಲು. 'ನಂದೇನು ಹುಚ್ಚುತನ ಐತಿ ಇಲ್ಲಿ' ಎಂದ. 'ಜನ ನಿನಗೆ ಗೌರವ ಕೊಟ್ಟು ಮೂರ್ತಿ ನಿಲ್ಲಿಸ್ಯಾರೆ ಎಂದು ತಿಳಕೊಂಡೀಯಲ್ಲ. ಅದೇ ಹುಚ್ಚುತನ ಅಂತು' ಮೆಟ್ಟಿಲು. 'ಅದು ಸುಳ್ಳೇನು' ಎಂದು ಕೇಳಿದ ಅವ. 'ಒಂದು ತಿಳಕೋ ನಾನೂ ನಿನ್ನ ಹಾಗೆಯೇ ಸಮಾಜ ಸೇವಕ ಆಗಿದ್ದೆ. ನನ್ನ ಮೂರ್ತಿನೂ ನಿಲ್ಲಿಸಿದ್ದರು. ಈಗ ನೀನು ಬಂದಿ ಅಂತ ನನ್ನನ್ನು ಮೆಟ್ಟಿಲು ಮಾಡಿ ನಿನ್ನ ಮೂರ್ತಿ ನಿಲ್ಲಿಸ್ಯಾರ. ಮುಂದೆ ಇನ್ನೊಬ್ಬ ಬರ್ತಾನ. ಆಗ ನೀನೂ ನನ್ನ ಹಾಂಗೇ ಮೆಟ್ಟಿಲು ಆಗ್ತೀಯ' ಅಂತು.

ಇದು ಕೇಳಿ ಅವನಿಗೆ ದುಃಖ ಆತು. ದುಃಖ ಯಾಕಾಗೈತಿ ಅಂದರೆ ನನ್ನ ಮಕ್ಕಳು ಕಾಯಂ ನನ್ನ ಫೋಟೋ ಹಾಕಿರ್ತಾರ ಅಂತ ತಿಳಕೊಂಡಿದ್ದರಿಂದ ದುಃಖ ಆತು. ಸಂಪತ್ತು, ಕೀರ್ತಿ, ಅಧಿಕಾರ ಎಲ್ಲವೂ ಸೊರಗತಾವ ಎನ್ನುವುದು ಮನುಷ್ಯನಿಗೆ ಗೊತ್ತಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಾದಶಿ ಅಹೋರಾತ್ರ ನಕ್ಷತ್ರ: ಚಿತ್ತಾ ಅಹೋರಾತ್ರ ಯೋಗ: ಆಯುಷ್ಮಾನ್ ಗಂ. 15-13 ಕರಣ: ಕೌಲವ ಗಂ. 17-08, ವೃಶ್ಚಿಕ ಮಾಸದ 11 ನೇ ದಿನ, ಮಳೆನಕ್ಷತ್ರ: ಅನುರಾಧ 3.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-39 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 24 ಜುಮಾದುಲ್ಲಾವಲ್
ದಿನ ವಿಶೇಷ : ವಂಜೂಲಿ ಮಹಾದ್ವಾದಶಿ, ಅದೃಷ್ಟ ಸಂಖ್ಯೆ : 2, 5

ಮೇಷ: ಮನೆಯಲ್ಲಿ ನಡೆಯಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಒಡಹುಟ್ಟಿದವರೊಡನೆ ಗಹನ ಮಾತುಕತೆ ನಡೆಯಲಿದೆ. ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ.

ವೃಷಭ: ಮಕ್ಕಳನ್ನು ಶಿಕ್ಷೆಗೆ ಒಳಪಡಿಸದೆ ನಯವಾದ ಮಾತುಗಳಿಂದ ತಿದ್ದುವ ಪ್ರಯತ್ನ ಮಾಡಿ. ತಂದೆಯ ಅನಾರೋಗ್ಯದಿಂದ ದಿನಚರಿಯಲ್ಲಿ ಕೆಲವೊಂದು ಬದಲಾವಣೆಯಾಗಬಹುದು.

ಮಿಥುನ: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವುದರಿಂದ ಮಾನಸಿಕ ಶಾಂತಿ ಹೆಚ್ಚಾಗಲಿದೆ. ಉದಾರ ಮನೋಭಾವ ಅನುಕೂಲ ಒದಗಿಸಲಿದೆ. ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ.

ಕರ್ಕಾಟಕ: ಆಲಂಕಾರಿಕ ವಸ್ತುಗಳ ಮಾರಾಟಗಾರರು ಉತ್ತಮ ಸಂಪಾದನೆಯಿಂದ ನೆಮ್ಮದಿ ಕಾಣಬಹುದು. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ಸಹೋದರರೊಂದಿಗೆ ಕಾಲ ಕಳೆಯುವಿರಿ.

ಸಿಂಹ: ಸುಖ-ದುಃಖ, ನೋವು, ಅನಾರೋಗ್ಯ, ಲಾಭ-ನಷ್ಟಗಳ ಮಿಶ್ರಫಲವನ್ನು ಅನುಭವಿಸಬೇಕಾಗುತ್ತದೆ. ಆರ್ಥಿಕತೆಯಲ್ಲಿ ಅಗೌರವವಾಗುವ ಸನ್ನಿವೇಶ ಎದುರಾಗಿ ಕೊನೆಯ ಕ್ಷಣದಲ್ಲಿ ಹಣಕಾಸಿನ ಹೊಂದಿಕೆಯಾಗುವುದು.

ಕನ್ಯಾ: ಕುಟುಂಬದ ಸದಸ್ಯರಲ್ಲಿ ಮೂಡಿರುವ ಮನಸ್ತಾಪವನ್ನು ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು. ನುರಿತವರ ಸಲಹೆ ಸೂಚನೆಗಳನ್ನು ವ್ಯವಹಾರದಲ್ಲಿ ಅಳವಡಿಸಿಕೊಳ್ಳುವುದು ಉತ್ತಮ.

ತುಲಾ: ಭವಿಷ್ಯದ ಯೋಜನೆಗಳಿಗೆ ಗಮನ ಕೊಡುವುದರಿಂದ ಗುರಿ ತಲುಪಲು ಸುಲಭವಾಗುವುದು. ಗಂಟಲು ಬೇನೆ ಕಾಣಿಸಿಕೊಂಡಲ್ಲಿ ಗಿಡಮೂಲಿಕೆಗಳ ಬಳಕೆಯಿಂದ ಶಮನವಾಗುವುದು. ಗಣೇಶನ ಧ್ಯಾನ ಶುಭ ತರಲಿದೆ.

ವೃಶ್ಚಿಕ: ನಿವೇಶನ ಮಾರಾಟದಿಂದ ಲಾಭ ಪಡೆಯುವಿರಿ. ಇದರಿಂದ ಹಣಕಾಸಿನ ಬಗೆಗಿನ ಚಿಂತೆಗಳು, ಸಾಲವು ದೂರವಾಗಿ ಆರ್ಥಿಕವಾಗಿ ವೃದ್ಧಿ ಕಾಣಲಿದ್ದೀರಿ. ನ್ಯಾಯಾಂಗ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಪ್ರಗತಿ.

ಧನು: ಪೂರ್ವ ನಿಯೋಜಿತ ಕೆಲಸಗಳನ್ನು ಉತ್ತಮವಾಗಿ ನೆರವೇರಿಸುವುದರಿಂದ ನೆಮ್ಮದಿ ಇರುವುದು. ಮಹಿಳೆಯರಿಗೆ ಆದರ, ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಲಾಭ ಪಡೆದುಕೊಳ್ಳುವಿರಿ.

ಮಕರ: ತೋಟದ ಕೆಲಸ ಮಾಡಬೇಕಾದ ಸಂದರ್ಭದಲ್ಲಿ ವಿಷಜಂತುಗಳ ಅಥವಾ ಕಾಡುಪ್ರಾಣಿಗಳಿಂದ ತೊಂದರೆ ಆಗಬಹುದು. ವಿದ್ಯಾರ್ಥಿಗಳಿಗೆ ಪ್ರತಿಭಾ ಪ್ರದರ್ಶನಕ್ಕೆ ಬೇಕಾದ ಅವಕಾಶಗಳು ಅರಸಿ ಬರಲಿವೆ. ಬಳಸಿಕೊಳ್ಳಿ.

ಕುಂಭ: ಸಹೋದ್ಯೋಗಿಗಳ ಮಾತಿನಿಂದ ಭಿನ್ನಾಭಿಪ್ರಾಯಗಳು ಸೃಷ್ಟಿಯಾಗುತ್ತವೆ. ನಿವೇಶನ ಖರೀದಿಸುವ ಬಗ್ಗೆ ಮನೆಯವರೊಂದಿಗೆ ಚರ್ಚೆ ಮಾಡುವಿರಿ. ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿ, ಮಾರಾಟದಿಂದ ವರಮಾನ ಗಳಿಸುವಿರಿ.

ಮೀನ: ಸ್ನೇಹಿತರಿಗೆ ಸ್ವಯಂಪ್ರೇರಣೆಯಿಂದ ಸಲಹೆ ಕೊಡುವುದು ಸರಿಯಲ್ಲ. ಮಗನ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಅತೀವ ಸಂತೋಷ. ಇತರರನ್ನು ಮಾತಿನ ಮೂಲಕ ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ.

ಪದಬಂಧ 5874

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆತುರವಾಗಿ ಓಡುತ್ತಿರುವ ಕುದುರೆ (3)
3.ಶ್ರೀ ಕೃಷ್ಣನ ಸೋದರಮಾವ (2)
5.ಸೂಕ್ಷ್ಮದೃಷ್ಟಿಯುಳ್ಳ ದೊಡ್ಡ ಹಕ್ಕಿ (2)
6.ಅನುಕರಣೆಗೆ ಯೋಗ್ಯವಾದುದು (3)
7.ಹಲಗೆ ಹತ್ತಿರ ಉಳುವ ಸಾಧನವಿದೆ! (2)
8.ರಾಜ್ಯದ 31 ನೇ ಜಿಲ್ಲೆಯಾಗಿ ಉದಯಿಸಿದ ಜಿಲ್ಲೆ (6)
10.ಅನೇಕ ಸುಂದರ ಜಲಪಾತಗಳಿರುವ ಕರಾವಳಿ ಜಿಲ್ಲೆ (6)
14.ಅರಣ್ಯ ಇಲ್ಲಿ ಕಾಣುತ್ತಿದೆ (2)
15.ಅವಸರ ಅಥವಾ ಕುತೂಹಲ (3)
16.ದಾರದ ಉಂಡೆ (2)
17.ತಿರುಗಿದ ವರನಿಗೆ ಕೇಳಿದ ಧ್ವನಿ (2)
18.ಬೆಲೆಯನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ
1.ಒತ್ತಾದ ಕೂದಲುಗಳುಳ್ಳ ರೆಪ್ಪೆ (4)
2.ಹಂಚಿಕೆಯಿಲ್ಲಿ ತಿರುವುಮುರುವಾಗಿದೆ (4)
4.ನೆಮ್ಮದಿಗೊಂದು ಪರ್ಯಾಯ ಪದ (4)
5.ದಾವಣಗೆರೆ ಜಿಲ್ಲೆಯ ಈ ತಾಲೂಕು ತುಂಗಭದ್ರಾ ನದಿ ದಡದಲ್ಲಿದೆ (4)
9.ಯಮನ ಹತ್ತಿರವಿರುವ ಜೋಡಿ! (3)
10.ಶರಣೆ ಅಕ್ಕಮಹಾದೇವಿಯ ಹುಟ್ಟೂರು (4)
11.ಬೆಲೆ ಬಾಳುವ ಮಣಿಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ಪೇಢೆಗೆ ಹೆಸರುವಾಸಿಯಾದ ನಗರವು ಉಲ್ಟಾ ಕಾಣುತ್ತಿದೆ (4)
13.ಈಕೆ ಅತ್ಯಂತ ಬುದ್ಧಿವಂತೆ! (4)



5873ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಯೋಗ 3.ಒಡ್ಡೋಲಗ
5.ಜುಲುಮೆ 6.ತರ್ಜನಿ
8.ದುರುಳ 9.ನಿಮಿಷ
10.ನಗದು 12.ತಾಲವ್ಯ
14.ರಣಹೇಡಿ 15.ನತದೃಷ್ಟ

ಮೇಲಿಂದ ಕೆಳಕ್ಕೆ:
1.ಉಪೋದ್ಘಾತ 2.ಗಲೀಜು
3.ಒಲುಮೆ 4.ಗಟ್ಟಿಕುಳ
7.ನಿಕಷ 8.ದುಮ್ಮಾನ
9.ನಿರುತ್ತರ 11.ದುರಾದೃಷ್ಟ
12.ತಾಯ್ನುಡಿ 13.ವ್ಯಸನ

ಸುಡೊಕು 6259

	2			3		4		6
4		1	5		2		8	
	6			4			5	1
	9				4	6		
6		2		8				5
		4	2			3		
				2				9
	1	3	8		5			
9	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6258 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಅಡಿಕೆ ಧಾರಣೆ (₹ಗಳಲ್ಲಿ)

ಸಾಗರ	
ಬಿಳಿಗೋಟು	19214-24100
ಚಾಲಿ	28599-33111
ಕೋಕ	21214-21214
ರಾಶಿ	40599-49009
ಸಿಪ್ಪೆಗೋಟು	15025-16289
ಶಿವಮೊಗ್ಗ	
ಬೆಟ್ಟೆ	45359-56800
ಗೊರಬಲು	16100-35109
ಹೊಸತು	29299-49589
ರಾಶಿ	30118-49751
ಸರಕು	52159-80110
ಸಿದ್ದಾಪುರ	
ಬಿಳಿಗೋಟು	23899-29509
ಚಾಲಿ	33299-36809
ಕೋಕ	20789-26419
ಕೆಂಪುಗೋಟು	19109-21609
ರಾಶಿ	42099-46799
ತಟ್ಟಿಬೆಟ್ಟೆ	29009-44009
ಶಿರಸಿ	
ಬೆಟ್ಟೆ	29199-41299
ಬಿಳಿಗೋಟು	23389-31469
ಚಾಲಿ	33099-37811
ಕೆಂಪುಗೋಟು	16299-23069
ರಾಶಿ	42569-46499
ಯಲ್ಲಾಪುರ	
ಬಿಳಿಗೋಟು	15109-29800
ಚಾಲಿ	30869-37709
ಕೋಕ	4900-17490
ಕೆಂಪುಗೋಟು	14099-24269
ರಾಶಿ	38009-57009
ತಟ್ಟಿಬೆಟ್ಟೆ	28010-36000

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ 24,221
ಇಂದಿನ ಅಂತ್ಯ 24,194
▼ 27
ದಿನದ ಕನಿಷ್ಠ 24,125

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹610
12 ಕ್ಕೆ ₹80
ಮೈಸೂರು
100ಕ್ಕೆ ₹612

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹476-651
ದ್ವಿತಳಿ (ಬಿ.ವಿ) ₹360-779

2.0 ಯೋಜನೆಗೆ ಒಪ್ಪಿಗೆ: ಕ್ಯೂಆರ್ ಕೋಡ್ ಕಾರ್ಡ್ ಲಭ್ಯ

ಬಳಕೆದಾರಸ್ನೇಹಿ ಪ್ಯಾನ್

ನವದೆಹಲಿ (ಪಿಟಿಐ): ಪ್ರಸ್ತುತ ಬಳಕೆಯಲ್ಲಿರುವ ಪ್ಯಾನ್ ಕಾರ್ಡ್ (ಶಾಶ್ವತ ಖಾತೆ ಸಂಖ್ಯೆ) ವ್ಯವಸ್ಥೆಯನ್ನು ಪರಿಷ್ಕರಿಸುವ ಸಂಬಂಧ 'ಪ್ಯಾನ್ 2.0' ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದಕ್ಕಾಗಿ ₹1,435 ಕೋಟಿ ಮೀಸಲಿಟ್ಟಿದೆ.

ಬಳಕೆದಾರಸ್ನೇಹಿ ಪ್ಯಾನ್ ಕಾರ್ಡ್ ವಿತರಿಸುವುದು ಸರ್ಕಾರದ ಗುರಿಯಾಗಿದೆ. ಜೊತೆಗೆ, ತಂತ್ರಜ್ಞಾನದ ಬಲದೊಂದಿಗೆ ಪ್ಯಾನ್ ಕಾರ್ಡ್‌ಗಳ ಸುರಕ್ಷತೆಗೆ ಒತ್ತು ನೀಡುವ ಉದ್ದೇಶ ಹೊಂದಿದೆ.

ಹಾಲಿ ಇರುವ ಕಾರ್ಡ್‌ಗಳ ಮಾನ್ಯತೆ ರದ್ದಾಗುವುದಿಲ್ಲ. ಬಳಕೆದಾರರು ಹೊಸ ಪ್ಯಾನ್ ಕಾರ್ಡ್ ಪಡೆದರೂ ಅವರ ನಂಬರ್ ಬದಲಾಗುವುದಿಲ್ಲ. ಅವರಿಗೆ ಕ್ಯೂಆರ್ ಕೋಡ್ ಹೊಂದಿದ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಇದರಿಂದ ಕಾರ್ಡ್‌ಗಳ ಪರಿಶೀಲನೆ ಸುಲಭವಾಗುತ್ತದೆ. ಅಲ್ಲದೆ, ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ನೇರವಾಗಿ ಬಳಕೆದಾರರ ಮಾಹಿತಿಯನ್ನು ಪರಿಶೀಲಿಸಬಹುದಾಗಿದೆ ಎಂದು ಸರ್ಕಾರ ಹೇಳಿದೆ.

ಹೊಸ ಕಾರ್ಡ್‌ಗೆ ಬಳಕೆದಾರರು ಯಾವುದೇ ಶುಲ್ಕ ಪಾವತಿಸುವಂತಿಲ್ಲ. ಉಚಿತವಾಗಿ ವಿತರಿಸಲಾಗುವುದು ಎಂದು ತಿಳಿಸಿದೆ.

ತೆರಿಗೆದಾರರು ಹಾಗೂ ಉದ್ಯಮಗಳ ಹಣಕಾಸಿನ ವ್ಯವಹಾರವನ್ನು ಸುಧಾರಿಸಲು 2.0 ಯೋಜನೆಯನ್ನು ರೂಪಿಸಲಾಗಿದೆ. ತ್ವರಿತಗತಿಯಲ್ಲಿ ಕಾರ್ಯ ನಿರ್ವಹಣೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದೆ.

ಈ ಕಾರ್ಡ್‌ಗಳು ಪರಿಸರ ಸ್ನೇಹಿಯಾಗಿದ್ದು, ಹೆಚ್ಚು ಸುರಕ್ಷಿತವಾಗಿವೆ. ತೆರಿಗೆ ನೋಂದಣಿ ಪ್ರಕ್ರಿಯೆ ವೇಗವಾಗಿ ನಡೆಯಲಿದೆ. ಸರ್ಕಾರಿ ಏಜೆನ್ಸಿಗಳ ಡಿಜಿಟಲ್ ವ್ಯವಸ್ಥೆಯಲ್ಲಿ ಗುರುತಿನ ದೃಢೀಕರಣಕ್ಕಾಗಿ ಈ ಪ್ಯಾನ್ ಕಾರ್ಡ್ ಅನ್ನು ಸಾಮಾನ್ಯ ಗುರುತಿನ ಸಾಧನವಾಗಿ ಪರಿಗಣಿಸಲಾಗುತ್ತದೆ ಎಂದು ಹೇಳಿದೆ.

'ಹೊಸ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ'

ನವದೆಹಲಿ (ಪಿಟಿಐ): 'ಪ್ರಸ್ತುತ ಪ್ಯಾನ್ ಕಾರ್ಡ್ ಹೊಂದಿರುವವರು 2.0 ಯೋಜನೆಯಡಿ ಹೊಸ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ' ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ದೇಶದಲ್ಲಿ 78 ಕೋಟಿ ಪ್ಯಾನ್ ಕಾರ್ಡ್ ಹಾಗೂ 73.28 ಲಕ್ಷ ಟ್ಯಾನ್ ಕಾರ್ಡ್‌ಗಳಿವೆ. ಕ್ಯೂಆರ್ ಕೋಡ್ ಹೊಸದೇನಲ್ಲ. 2017–18ರಿಂದ ವಿತರಿಸಿರುವ ಕಾರ್ಡ್‌ಗಳಲ್ಲಿ ಈಗಾಗಲೇ ಇದನ್ನು ಅನುಷ್ಠಾನಗೊಳಿಸಲಾಗಿದೆ. ಹಳೆಯ ಕಾರ್ಡ್‌ಗಳಲ್ಲಿ ಇದನ್ನು ನಮೂದಿಸಿಲ್ಲ. ಕ್ಯೂಆರ್ ಕೋಡ್ ಇರುವ ಕಾರ್ಡ್‌ಗಳನ್ನು ಪಡೆಯಲು ಇಚ್ಛಿಸುವ ಹಳೆಯ ಕಾರ್ಡ್‌ದಾರರಿಗೆ 2.0 ಯೋಜನೆಯಡಿ ಅರ್ಜಿ ಸಲ್ಲಿಸುವ ಆಯ್ಕೆಯನ್ನು ನೀಡಲಾಗಿದೆ ಎಂದು ಸ್ಪಷ್ಟಪಡಿಸಿದೆ.

ಹಾಲಿನ ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಆರ್ಥಿಕ ಸಾಲಿನಡಿ 239.30 ದಶಲಕ್ಷ ಟನ್ ಹಾಲು ಉತ್ಪಾದನೆಯಾಗಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 4ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಮೀನುಗಾರಿಕೆ, ಪಶುಪಾಲನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ತಿಳಿಸಿದ್ದಾರೆ.

ಮಂಗಳವಾರ ನಡೆದ ರಾಷ್ಟ್ರೀಯ ಹಾಲು ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2022–23ರಲ್ಲಿ 230.58 ದಶಲಕ್ಷ ಟನ್ ಹಾಲು ಉತ್ಪಾದನೆಯಾಗಿತ್ತು ಎಂದರು.

ತಲಾವಾರು ಹಾಲಿನ ಲಭ್ಯತೆ ಪ್ರಮಾಣದಲ್ಲೂ ಏರಿಕೆಯಾಗಿದೆ. 2022–23ರಲ್ಲಿ ದಿನವೊಂದಕ್ಕೆ ಒಬ್ಬರಿಗೆ 459 ಗ್ರಾಂ ಹಾಲು ಲಭಿಸುತ್ತಿತ್ತು. 2023–24ರಲ್ಲಿ 471 ಗ್ರಾಂಗೆ ಏರಿಕೆಯಾಗಿದೆ. ಹಾಲು ಉತ್ಪಾದನೆಯಲ್ಲಿ ಜಾಗತಿಕ ಸರಾಸರಿ ಏರಿಕೆ ಶೇ 2ಕ್ಕೆ ಹೋಲಿಸಿದರೆ ಭಾರತದಲ್ಲಿ ಶೇ 6ರಷ್ಟು ಹೆಚ್ಚಳವಾಗಿದೆ ಎಂದು ಮಾಹಿತಿ ನೀಡಿದರು.

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಎರಡನೇ ದಿನವಾದ ಮಂಗಳವಾರ ಕೂಡ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹1,250 ಇಳಿಕೆಯಾಗಿದ್ದು, ₹78,150 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಇಳಿಕೆಯಾಗಿದ್ದು, ₹77,750 ಆಗಿದೆ.

ಬೆಳ್ಳಿ ಬೆಲೆಯು ಕೆ.ಜಿಗೆ ₹1,100 ಇಳಿಕೆಯಾಗಿದ್ದು, ₹90,600 ಆಗಿದೆ.

ಅದಾನಿ ಕಂಪನಿ: ರೇಟಿಂಗ್ಸ್‌ಗೆ ಪೆಟ್ಟು



ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ವಿರುದ್ಧ ಲಂಚ ನೀಡಿದ್ದ ಆರೋಪ ಕೇಳಿಬಂದ ಬೆನ್ನಲ್ಲೇ ಜಾಗತಿಕ ಕ್ರೆಡಿಟ್ ರೇಟಿಂಗ್ಸ್ ಏಜೆನ್ಸಿಗಳಾದ ಮೂಡಿಸ್ ಹಾಗೂ ಫಿಚ್, ಅದಾನಿ ಸಮೂಹದ ಕಂಪನಿಗಳಿಗೆ ನೀಡಿದ್ದ ಮುನ್ನೋಟದ ರೇಟಿಂಗ್ಸ್ ಅನ್ನು ಪರಿಷ್ಕರಿಸಿವೆ.

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ ಹಾಗೂ ಅದಾನಿ ಪೋರ್ಟ್ಸ್ ಕಂಪನಿಯನ್ನು 'ಸ್ಥಿರ' ರೇಟಿಂಗ್ಸ್ ಪಟ್ಟಿಯಿಂದ 'ಋಣಾತ್ಮಕ' ಪಟ್ಟಿಗೆ ಸೇರಿಸಿವೆ.

ಏಳು ಕಂಪನಿಗಳಿಗೆ ಮೂಡಿಸ್ ಕಡಿಮೆ ರೇಟಿಂಗ್ಸ್ ನೀಡಿದೆ. ಮೂಡಿಸ್ ನೀಡಿರುವ ಋಣಾತ್ಮಕ ಪಟ್ಟಿಯಲ್ಲಿ ಅದಾನಿ ಗ್ರೀನ್ ಎನರ್ಜಿ, ಅದಾನಿ ಟ್ರಾನ್ಸ್‌ಮಿಷನ್, ಅದಾನಿ ಎಲೆಕ್ಟ್ರಿಸಿಟಿ, ಅದಾನಿ ಪೋರ್ಟ್ಸ್ ಮತ್ತು ಅದಾನಿ ಇಂಟರ್‌ನ್ಯಾಷನಲ್ ಕಂಟೈನರ್ ಸೇರಿವೆ.

ಫಿಚ್ ಸಂಸ್ಥೆಯು ಅದಾನಿ ಇಂಟರ್‌ನ್ಯಾಷನಲ್ ಕಂಟೈನರ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಎನರ್ಜಿ ಸಲ್ಯೂಷನ್ ಕಂಪನಿಯನ್ನು ಋಣಾತ್ಮಕ ಪಟ್ಟಿಗೆ ಸೇರಿಸಿದೆ. ಇದು ಅದಾನಿ ಕಂಪನಿಗಳ ವಹಿವಾಟು ಮತ್ತು ಹೂಡಿಕೆ ಮೇಲೆ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಆಂಧ್ರದಲ್ಲಿ ಒಪ್ಪಂದ ರದ್ದು?

ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ನೇತೃತ್ವದ ಸರ್ಕಾರ ಹಾಗೂ ಅದಾನಿ ಸಮೂಹದ ವಿರುದ್ಧ ಕೇಳಿಬಂದಿರುವ ಲಂಚದ ಆರೋಪ ಕುರಿತು ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಈ ಒಪ್ಪಂದ ರದ್ದುಪಡಿಸುವ ಬಗ್ಗೆಯೂ ಸರ್ಕಾರ ಚಿಂತನೆ ನಡೆಸಿದೆ ಎಂದು ಆಂಧ್ರಪ್ರದೇಶದ ಹಣಕಾಸು ಸಚಿವ ಪಯ್ಯಾವುಲ ಕೇಶವ ತಿಳಿಸಿದ್ದಾರೆ. ಅದಾನಿ ಸಮೂಹವು ಹಿಂದಿನ ಸರ್ಕಾರದಲ್ಲಿ ವಿದ್ಯುತ್ ಖರೀದಿಗೆ ಒಪ್ಪಂದ ಮಾಡಿಕೊಂಡಿದೆ. ಇದಕ್ಕಾಗಿ ಸರ್ಕಾರಿ ಅಧಿಕಾರಿಗಳಿಗೆ ₹1,750 ಕೋಟಿ ಲಂಚ ನೀಡಿದೆ ಎಂದು ಅಮೆರಿಕದ ಕೋರ್ಟ್‌ನಲ್ಲಿ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ.

ಶ್ರೀಲಂಕಾ: ತನಿಖೆಗೆ ಆದೇಶ

ಕೊಲಂಬೊ (ಎಎಫ್‌ಪಿ): ತನ್ನ ನೆಲದಲ್ಲಿ ಅದಾನಿ ಸಮೂಹದ ಹೂಡಿಕೆಯ ಯೋಜನೆಗಳ ಬಗ್ಗೆ ಶ್ರೀಲಂಕಾ ಸರ್ಕಾರ ಮಂಗಳವಾರ ತನಿಖೆಗೆ ಆದೇಶಿಸಿದೆ.

ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ನೇತೃತ್ವದ ಹೊಸ ಸರ್ಕಾರದ ಮೊದಲ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸರ್ಕಾರದ ವಕ್ತಾರರಾದ ನಳಿಂದಾ ಜಯತಿಸ್ಸಾ, 'ಭಾರತೀಯ ಮೂಲದ ಅದಾನಿ ಸಂಸ್ಥೆಗೆ ನೀಡಲಾದ ಮೂಲಸೌಕರ್ಯ ಯೋಜನೆಗಳನ್ನು ಪರಿಶೀಲಿಸಲು ಹಣಕಾಸು ಮತ್ತು ವಿದೇಶಾಂಗ ಸಚಿವಾಲಯಕ್ಕೆ ಸೂಚಿಸಲಾಗಿದೆ' ಎಂದು ಹೇಳಿದರು.

'ಈ ಯೋಜನೆಗಳಿಗೆ ಸಂಬಂಧಿಸಿ ನಮಗೆ ಲಭ್ಯ ಇರುವ ಎರಡು ವರದಿಗಳನ್ನು ಆಧರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಮಾಹಿತಿ ಮತ್ತು ಆರೋಗ್ಯ ಸಚಿವರೂ ಆಗಿರುವ ಜಯತಿಸ್ಸಾ ಹೇಳಿದರು.

ಪವನ ವಿದ್ಯುತ್ ಯೋಜನೆಗಾಗಿ ಅದಾನಿ ಸಮೂಹವು ಶ್ರೀಲಂಕಾದಲ್ಲಿ ಸುಮಾರು ₹3,725 ಕೋಟಿ (44.2 ಕೋಟಿ ಡಾಲರ್) ಹೂಡಿಕೆ ಮಾಡಿದೆ. ಆದರೆ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಯೋಜನೆ ಕೈಗೊಳ್ಳದಂತೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಷೇರಿನ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ಷೇರಿನ ಮೌಲ್ಯವು ಮಂಗಳವಾರ ಇಳಿಕೆಯಾಗಿದೆ. ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ (ಎಜಿಇಎಲ್) ಷೇರಿನ ಮೌಲ್ಯ ಶೇ 7.05ರಷ್ಟು ಕುಸಿದಿದೆ.

ಅದಾನಿ ಎಂಟರ್‌ಪ್ರೈಸಸ್ ಕಂಪನಿ ಶೇ 4.78, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 3.79, ಅದಾನಿ ಟೋಟಲ್ ಗ್ಯಾಸ್ ಶೇ 3.50, ಅದಾನಿ ಪೋರ್ಟ್ಸ್ ಶೇ 3.23, ಅದಾನಿ ವಿಲ್ಮರ್ ಶೇ 2.44, ಅಂಬುಜಾ ಸಿಮೆಂಟ್ಸ್ ಶೇ 2.30, ಅದಾನಿ ಪವರ್ ಶೇ 2.04, ಶಾಂಘೈ ಇಂಡಸ್ಟ್ರಿಸ್ ಶೇ 1.91, ಎಸಿಸಿ ಶೇ 1.37 ಹಾಗೂ ಎನ್‌ಡಿಟಿವಿ ಷೇರಿನ ಮೌಲ್ಯದಲ್ಲಿ ಶೇ 0.09ರಷ್ಟು ಇಳಿಕೆಯಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಘುವೀರ್, ಹುಬ್ಬಳ್ಳಿ

- **ಪ್ರಶ್ನೆ: ನಾನು ಕಳೆದ ಕೆಲವು ವರ್ಷಗಳಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಫಂಡ್‌ಗಳಲ್ಲಿನ ಹೂಡಿಕೆಗೂ ಮೊದಲು ನಾವು ಅನ್ಯರ ಊಹಾಪೋಹಕ್ಕೆ ಗಂಟುಬಿದ್ದು ನಡೆಸುವ ಹೂಡಿಕೆಗಿಂತ ಸ್ವತಃ ಕೆಲವು ಮಾಹಿತಿಯನ್ನು ಮೊದಲೇ ಅಧ್ಯಯನ ನಡೆಸಿ ಫಂಡ್ ಉತ್ತಮವಾದುದೇ, ಈ ಹಿಂದಿನ ವರ್ಷಗಳ ಲಾಭಾಂಶ ಎಷ್ಟಿದೆ ಎಂಬ ಮಾಹಿತಿ ಅರಿತು ಹೂಡಿಕೆ ಮಾಡುವುದು ಅಗತ್ಯ ಎಂಬ ವಿಚಾರ ಇತ್ತೀಚೆಗೆ ವ್ಯಾಪಕವಾಗಿ ಅರಿವಿಗೆ ಬರುತ್ತಿದೆ. ಈ ಹಂತದಲ್ಲಿ ಬೆಂಚ್ ಮಾರ್ಕ್ ಸೂಚ್ಯಂಕ ಹಾಗೂ ಹೂಡಿಕೆಗೆ ಉದ್ದೇಶಿಸಿರುವ ಫಂಡ್ ಹೇಗೆ ಮಾರುಕಟ್ಟೆಯ ಒಂದೇ ಸಮಯದಲ್ಲಿ ಪ್ರತಿಕ್ರಿಯಿಸಿದೆ ಎನ್ನುವ ಗ್ರಾಫ್ ನೋಡಿದ್ದೆ. ಇದರಲ್ಲಿ ಆಯಾ ಸೂಚ್ಯಂಕದ ಜೊತೆಗೆ ಟಿಆರ್‌ಐ ರಿಟರ್ನ್ಸ್ ಎಂಬ ವಿಶೇಷವಾದ ಸೂಚ್ಯಂಕ ಕೂಡ ಇರುವುದನ್ನು ಕಂಡಿದ್ದೇನೆ. ನನ್ನ ಪ್ರಶ್ನೆ ಏನೆಂದರೆ ಸಾಮಾನ್ಯ ಸೂಚ್ಯಂಕ ಹಾಗೂ ಈ 'ಟಿಆರ್‌ಐ ಸೂಚ್ಯಂಕ'ಕ್ಕೂ ವ್ಯತ್ಯಾಸ ಏನು. ನಾವು ಹೂಡಿಕೆಯ ಸಲುವಾಗಿ ಇವುಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಮಾಹಿತಿ ನೀಡಿ.**

ಉತ್ತರ: ಮ್ಯೂಚುವಲ್ ಫಂಡ್ ಸಂಸ್ಥೆಗಳು ಸಾಮಾನ್ಯವಾಗಿ ತಮ್ಮ ಬೆಂಚ್ ಮಾರ್ಕ್ ರಿಟರ್ನ್ ಅನ್ನು ಆಯಾ ವಿಭಾಗದ ಸೂಚ್ಯಂಕದ ಮೌಲ್ಯಕ್ಕೆ ಹೋಲಿಕೆ ಮಾಡುತ್ತವೆ. ಇದು ಆಯಾ ಸ್ಕೀಂ ನಿಗದಿತ ಬೆಂಚ್ ಮಾರ್ಕ್ ಸೂಚ್ಯಂಕಕ್ಕಿಂತ ಉತ್ತಮವಾಗಿ ನಿರ್ವಹಿಸಲ್ಪಟ್ಟಿದೆಯೇ, ಇಲ್ಲವೇ ಎಂಬುದನ್ನು ಹೂಡಿಕೆದಾರರಿಗೆ ಮನವರಿಕೆ ಮಾಡಿ ಕೊಡುತ್ತದೆ. ಪ್ರೈಸ್ ರಿಟರ್ನ್ ಇಂಡೆಕ್ಸ್ ಕೇವಲ ಮೌಲ್ಯದಲ್ಲಿ ಆಗುವ ಏರಿಳಿತವನ್ನು ಮಾತ್ರ ಪರಿಗಣಿಸಿ ಲಾಭದ ಪ್ರಮಾಣ ನಿರ್ಧರಿಸುತ್ತದೆ. ಆದರೆ, ಟೋಟಲ್ ರಿಟರ್ನ್ಸ್ ಇಂಡೆಕ್ಸ್ ಆಯಾ ಸ್ಕೀಂ ಬಿಡುಗಡೆ ಮಾಡಿದ ಡಿವಿಡೆಂಡ್ (ಲಾಭಾಂಶ) ಇತ್ಯಾದಿಯನ್ನೂ ಪರಿಗಣಿಸಿ ಫಂಡ್ ನೀಡಿರುವ ಲಾಭದ ನಿಖರ ಮಾಹಿತಿಯನ್ನು ಹೂಡಿಕೆದಾರರಿಗೆ ನೀಡುತ್ತದೆ. ಹೀಗಾಗಿ, ಹೂಡಿಕೆದಾರರು ಟಿಆರ್‌ಐ ಸಹಿತವಾದ ಹೋಲಿಕೆಯು ಹೆಚ್ಚು ಸಮಂಜಸವಾಗಿದೆ ಎಂದು ತಿಳಿಯಬಹುದು. ಇದು ಸೆಬಿ ನಿಯಮದ ಪಾಲನೆಯ ಭಾಗವೂ ಆಗಿದೆ.

ಹೆಸರು ಬೇಡ, ಬೆಂಗಳೂರು.

- **ಪ್ರಶ್ನೆ: ನಾನು ಹಿರಿಯ ನಾಗರಿಕನಾಗಿದ್ದು, ಹಲವು ವರ್ಷಗಳಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹಣವನ್ನು ವಿನಿಯೋಗಿಸುತ್ತಾ ಇದ್ದೇನೆ. ಇತ್ತೀಚೆಗೆ ನನ್ನ ಒಂದು ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣವನ್ನು ಮತ್ತೆ ಬೇರೆ ಆಸ್ತಿ ಖರೀದಿಸಲು ಅನುಕೂಲವಾಗುವಂತೆ 2023ರ ಏಪ್ರಿಲ್ 1ರ ನಂತರ ಲಿಕ್ವಿಡ್ ಫಂಡ್‌ಗಳಲ್ಲಿ ವಿನಿಯೋಗಿಸಿದ್ದೆ. ಇದರಿಂದ ಸುಮಾರು ಶೇ 6-7ರಷ್ಟು ಆದಾಯ ಬಂದರೂ ಆದಾಯ ತೆರಿಗೆಗೆ ಒಳಪಡುವುದರಿಂದ ನನಗೆ ಲಿಕ್ವಿಡ್ ಫಂಡ್‌ಗಳಲ್ಲಿ ಮುಂದುವರಿಯಲು ಆಸಕ್ತಿ ಇಲ್ಲ. ಈಗಾಗಲೇ, ಈಕ್ವಿಟಿ ಫಂಡ್‌ಗಳಲ್ಲಿ ಸಾಕಷ್ಟು ವಿನಿಯೋಗ ಇರುವುದರಿಂದ ಲಿಕ್ವಿಡ್ ಫಂಡ್‌ಗಳನ್ನು ಮಾರಾಟ ಮಾಡಿ ಆ ಹಣವನ್ನು ಡೈನಮಿಕ್ ಅಸೆಟ್ ಅಲೋಕೇಷನ್ ಫಂಡ್‌ಗಳಲ್ಲಿ ವಿನಿಯೋಗಿಸುವುದು ಭದ್ರತೆ, ವೃದ್ಧಿ ಹಾಗೂ ಆದಾಯ ತೆರಿಗೆಯ ವಿಚಾರದಿಂದ ಒಳ್ಳೆಯ ಉಪಾಯವೇ ಎಂದು ತಿಳಿಸಿ ಅಥವಾ ಬೇರೆ ಒಳ್ಳೆಯ ಪರ್ಯಾಯ ಉಪಾಯಗಳು ಇದ್ದರೆ ತಿಳಿಸಿ.**

ಉತ್ತರ: ನೀವು ಮ್ಯೂಚುವಲ್ ಫಂಡ್ ವಿಭಾಗದಲ್ಲಿ ಹೆಚ್ಚಿನ ಆದಾಯ ಪಡೆಯುವ ಅವಕಾಶ ಇರುವ ಉತ್ಪನ್ನಗಳಿಗೆ ನಿಮ್ಮ ಹಣವನ್ನು ವರ್ಗಾಯಿಸುವ ಉದ್ದೇಶ ಹೊಂದಿರುವುದು ಸರಿಯಾಗಿದೆ. ಆದರೆ, ಈ ನಿರ್ಧಾರದ ಹಿಂದೆ ಅನೇಕ ಮಾಹಿತಿ ಹೊಂದಿರುವುದೂ ಅಗತ್ಯ. ಸಾಮಾನ್ಯವಾಗಿ ಉತ್ತಮ ಮಾರುಕಟ್ಟೆ ಸನ್ನಿವೇಶದಲ್ಲಿ ಎಲ್ಲ ಈಕ್ವಿಟಿ ಹೂಡಿಕೆ ಉತ್ಪನ್ನಗಳು ಉತ್ತಮ ಆದಾಯ ನೀಡುವುದು ಸಹಜ.

ಆದರೆ, ಈ ಸ್ಥಿತಿ ಸತತವಾಗಿ ಇರುತ್ತದೆ ಎಂಬುದು ಸಾರ್ವಕಾಲಿಕವಲ್ಲ. ಹೀಗಾಗಿ, ನಿಮ್ಮ ನಿರ್ಣಯದ ಹಿಂದೆ ಈ ಕೆಳಗಿನ ವಿಮರ್ಶೆ ಮಾಡಿ.

- **ಹೂಡಿಕೆಯ ಸಮಯದ ಪರಿಧಿ:** ಎಲ್ಲದಕ್ಕಿಂತ ಪ್ರಮುಖವಾಗಿ ನಿಮ್ಮ ಹೂಡಿಕೆಯ ಅವಧಿ ಎಷ್ಟು ವರ್ಷ ಇರಬೇಕು ಎನ್ನುವ ನಿರ್ಧಾರ ನಿಮ್ಮ ವೈಯಕ್ತಿಕ ಹಣಕಾಸಿಗೆ ಸಂಬಂಧಿಸಿದ್ದು ಹಾಗೂ ಇದು ನೀವು ಮಾತ್ರ ಊಹಿಸಬಹುದಾಗಿರುವ ವಿಚಾರ. ಸಾಮಾನ್ಯವಾಗಿ ಈಕ್ವಿಟಿ ವಿಭಾಗದ ಹೂಡಿಕೆಗಳಾಗಿದ್ದರೆ, ಕೆಲವೊಮ್ಮೆ ಅಲ್ಪಾವಧಿಯಲ್ಲಿ ಅತಿ ವೇಗದ ಲಾಭ ಕಂಡುಬಂದರೂ, ಮಾರುಕಟ್ಟೆಯ ಏರಿಳಿತದ ಸ್ಥಿತಿಯಲ್ಲಿ ಇದು ನಿರಂತರವಲ್ಲ. ಹೀಗಾಗಿ, ದೀರ್ಘಾವಧಿ ಹೂಡಿಕೆಗಳೇ ಹೆಚ್ಚು ಸೂಕ್ತ. ಈ ಅವಧಿಗೂ ಮೊದಲು ನಿಮ್ಮ ನಿರ್ಧರಿತ ಲಾಭ ಬಂದರೆ ಮಾರಾಟ ಮಾಡುವ ಅವಕಾಶ ಇಲ್ಲವೆಂದಲ್ಲ. ಆದರೆ, ಮಾರುಕಟ್ಟೆಯ ಅನಿವಾರ್ಯ ಪರಿಸ್ಥಿತಿಯ ಸಂದರ್ಭದಲ್ಲಿ ಉಂಟಾದ ನಷ್ಟವನ್ನು ದೀರ್ಘಾವಧಿ ಹೂಡಿಕೆಗಳಷ್ಟೇ ಭರಿಸುವ ಸಾಮರ್ಥ್ಯ ಹೊಂದಿವೆ. ನಿಮ್ಮ ಹೂಡಿಕೆ ನಿರ್ಧಾರ 3 ರಿಂದ 5 ವರ್ಷದ್ದಾಗಿದ್ದರೆ ಮಾತ್ರ ಇದು ಹೆಚ್ಚಿನ ಹಾಗೂ ನಿಯತ ಲಾಭ ಕೊಡಬಲ್ಲದು. ಈಕ್ವಿಟಿ ವಿಭಾಗದ ಉತ್ತಮ ಹೂಡಿಕೆಗಳು ಆರ್ಥಿಕ ಅಪಾಯ ಇಲ್ಲದ ಹೂಡಿಕೆಗಳಿಗೆ ಹೋಲಿಕೆ ಮಾಡಿದರೆ ದ್ವಿಗುಣ ಆದಾಯ ಕೊಟ್ಟಿರುವುದು ಕಂಡುಬರುತ್ತದೆ.
- **ಆರ್ಥಿಕ ಅಪಾಯ:** ಸಾಮಾನ್ಯವಾಗಿ ಯಾವುದೇ ಈಕ್ವಿಟಿ ವಿಭಾಗದ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೊದಲು ಆಯಾ ಸ್ಕೀಮ್‌ಗೆ ಸಂಬಂಧಪಟ್ಟ ದಾಖಲೆಗಳಲ್ಲಿ ರಿಸ್ಕೋ ಮೀಟರ್ ಪ್ರಕಟಿಸಲಾಗುತ್ತದೆ. ನಿಮ್ಮ ಹೂಡಿಕೆಯ ಅವಧಿಗೆ ಹೋಲಿಕೆ ಮಾಡಿ ಈ ಬಗ್ಗೆ ನಿರ್ಧಾರ ಕೈಗೊಳ್ಳಿ. ಯಾವುದೇ ಕ್ಷಿಪ್ರ ಅಗತ್ಯಗಳಿಗೆ ಬೇಕಾಗಿರುವ ಹಣವನ್ನು ಇಲ್ಲಿ ಹೂಡಿಕೆ ಮಾಡಬೇಡಿ.
- **ತೆರಿಗೆ ದರ:** ಈಕ್ವಿಟಿ ವಿಭಾಗದ ಹೂಡಿಕೆಗಳಾಗಿದ್ದರೆ, ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಮಾರಾಟ ಮಾಡಿದರೆ, ಅಲ್ಪಾವಧಿ ಹೂಡಿಕೆಯಾಗುತ್ತದೆ. ಇದು ಶೇ 20ರ ದರದಲ್ಲಿ ತೆರಿಗೆಗೆ ಒಳಪಡುತ್ತದೆ. ಅದುವೇ ಒಂದು ವರ್ಷಕ್ಕೂ ಮೇಲ್ಪಟ್ಟು ಹೂಡಿಕೆ ಮಾಡಿ ಮಾರಾಟ ಮಾಡಿದಾಗ ದೀರ್ಘಾವಧಿ ಲಾಭವಾಗುತ್ತದೆ. ₹1.25 ಲಕ್ಷದ ತನಕದ ಲಾಭಕ್ಕೆ ತೆರಿಗೆ ಇಲ್ಲ. ಇದಕ್ಕೂ ಮೇಲ್ಪಟ್ಟ ಮೊತ್ತಕ್ಕೆ ಶೇ 12.5ರಷ್ಟು ತೆರಿಗೆ ಇದೆ.
- **ಸರಣಿ ಹೂಡಿಕೆ:** ನಿಮ್ಮ ಮೊತ್ತ ಒಂದೇ ಬಾರಿ ಒಂದೇ ಫಂಡ್‌ನಲ್ಲಿ ಹೂಡುವುದಕ್ಕಿಂತ ಈಕ್ವಿಟಿ ವಿಭಾಗದ ನಾಲ್ಕೈದು ಫಂಡ್‌ಗಳಲ್ಲಿ ವಿಂಗಡಿಸಿ ಹೂಡಿಕೆ ಮಾಡುವುದು ಆರ್ಥಿಕ ಅಪಾಯ ನಿರ್ವಹಣೆಯ ದೃಷ್ಟಿಯಲ್ಲಿ ಹೆಚ್ಚು ಸಮಂಜಸ.
- **ಎಕ್ಸಿಟ್ ಲೋಡ್:** ಬಹುತೇಕ ಫಂಡ್‌ಗಳು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯ ಈಕ್ವಿಟಿ ವಿಭಾಗದ ಹೂಡಿಕೆಗಳಿಗೆ, ಹೂಡಿಕೆ ಮರಳಿ ಪಡೆಯುವ ಸಂದರ್ಭದಲ್ಲಿ ಎಕ್ಸಿಟ್ ಲೋಡ್ ವಿಧಿಸುವುದಿಲ್ಲ. ಅನಿವಾರ್ಯ ಸಂದರ್ಭದಲ್ಲಿ ಈ ಅವಧಿಗೂ ಮುನ್ನ ಹಣ ಬೇಕಾದರೆ ಶೇ 1ರಷ್ಟು ಎಕ್ಸಿಟ್ ಲೋಡ್ ವಿಧಿಸುವ ಅವಕಾಶ ಇರುತ್ತದೆ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಕೆ ಬಿ. ಜಯರಾಮ್
ಛೇರ್‌ಮನ್ ಪಾರಿಜಾತ ಗ್ರೂಪ್
ದಿ: 18.11.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ತಾ. 28.11.2024ನೇ ಗುರುವಾರದಂದು ಬೆಳಿಗ್ಗೆ 12.00ಘಂಟೆಗೆ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
---------: ದುಃಖತಪ್ತರು :---------
ಸುಲೋಚನ ಜಯರಾಮ (ಧರ್ಮಪತ್ನಿ)
ಸುದೇಶ್, ರಮೇಶ್, ಯಮುನ
ಕುಟುಂಬವರ್ಗದವರು ಮತ್ತು ಬಂಧುಮಿತ್ರರು
ಪಾರಿಜಾತ ಸಂಸ್ಥೆಯ ಸಿಬ್ಬಂದಿ ಮತ್ತು ಕಾರ್ಮಿಕರು

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ. ಆರ್. ಅಂಬಿಕಾಪತಿ
ಮಾಜಿ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ
ಮಾಜಿ ಅಧ್ಯಕ್ಷರು, ಬಿಬಿಎಂಪಿ ಗುತ್ತಿಗೆದಾರರ ಸಂಘ
20.05.1954 - 27.11.2023
ನೀವು ನಮ್ಮನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ಸವಿನೆನಪು ನಮ್ಮ ಮನದಂಗಳದಲ್ಲಿ ಸದಾ ಹಸಿರಾಗಿಯೇ ಉಳಿದಿದೆ.
ಸದಾ ನಿಮ್ಮ ನೆನಪಿನಲ್ಲಿರುವ
ಕುಟುಂಬದವರು ಮತ್ತು ಬಂಧುಮಿತ್ರರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಬೇಕಾಗಿದ್ದಾರೆ
ಬಿ.ಎಸ್ಸಿ., ಬಿ.ಎಡ್. ಎಂ.ಎಸ್.ಡಬ್ಲ್ಯು ಎಂ.ಎ. ಸೋಷಿಯಾಲಜಿ, ಹಾಗೂ ಒಂದು ವರ್ಷದ ಎನ್.ಜಿ.ಒ. ನಲ್ಲಿ ಅನುಭವವುಳ್ಳವರು ಬೇಕಾಗಿದ್ದಾರೆ.
ನಿಮ್ಮ ಸಿವಿ ಮತ್ತು ಮಾರ್ಕ್ಸ್ ಕಾರ್ಡ್ ಘಟಿಕೋತ್ಸವ ಪ್ರಮಾಣಪತ್ರ ಮತ್ತು ಫೋಟೋವನ್ನು ಕೆಳಗಿನ ಇಮೇಲ್ ಐಡಿಗೆ ಕಳುಹಿಸಿ:
mahatmagandhitrust@gmail.com
ಭಾರತ ಸರ್ಕಾರದ ಯೋಜನೆ ಕಾಮಗಾರಿ, ಕೆಲಸ ಮಾಡುವ ಸ್ಥಳ : ನೆಲಮಂಗಲ, ದೇವನಹಳ್ಳಿ ಮತ್ತು ಹೊಸಕೋಟೆ
ಮಹಾತ್ಮ ಗಾಂಧಿ ಟ್ರಸ್ಟ್ (ರಿ.)
0821-2420374
93438 28203
www.mahatmagandhitrust.com

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080-25300714

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ, ವಸತಿಯೊಂದಿಗೆ ಉತ್ತಮ ಸಂಬಳ, ಸಂಪರ್ಕಿಸಿ: 9663497356/ 8884811114

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 13,000-17,000. 8951315839, 9141634619

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

ಪ್ರವಾಸ

Travel

04.12.2024 ರಿಂದ ಅಷ್ಟ ಜ್ಯೋತಿರ್ಲಿಂಗಗಳ ಪ್ರವಾಸ. 20.12.2024 ರಿಂದ ಕಾಶಿ,ಗಯಾ,ಅಯೋಧ್ಯ ಚಿತ್ರಕೂಟ ಬೈಧ್ಯನಾಥ ನೈಮಿಷಾರಣ್ಯ 18.01.2024 ಆಗ್ರಾ ಮಥುರಾ ಜೈಪುರ್ ಪುಷ್ಕರ್ ಜೈಸೆಲ್‌ಮೇರ್ ಬಿಕಾನೇರ್ ಕಾರಣಿಮಾತ ಜೋದ್‌ಪುರ್ ನಾಥದ್ವಾರ್ ಉದಯಪುರ್ ಮೌಂಟ್‌ಅಬು 12 ದಿನಗಳ ಪ್ರವಾಸ. 10.02.2025 ಕೊನಾರ್ಕ್ ಭುವನೇಶ್ವರ್ ಪುರಿಜಗನ್ನಾಥ್ ಕಾಶಿ,ನೇಪಾಳ ಮುಕ್ತಿನಾಥ ಪ್ರವಾಸ 17 ದಿನಗಳು ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು70. 9342287551 8050629305

ಸುಸಜ್ಜಿತ ವ್ಯವಸ್ಥೆಯೊಂದಿಗೆ 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ 23.12.2024, 19.01.2025 ರಿಂದ 7 ದಿನಗಳ ಹೈದರಾಬಾದ್ ಮಂತ್ರಾಲಯ ಶ್ರೀಶೈಲಂ 4-12-2024 28-01-2025 ರಿಂದ 17/11/8 ದಿನಗಳ ರಾಜಸ್ಥಾನ್ ಗುಜರಾತ್ ಪ್ರವಾಸಳು. 12.12.2024, 04.02.2025, ರಿಂದ 7/11 ದಿನಗಳ ಸಿಂಗಾಪುರ್. ಮಲೇಶಿಯಾ. 19.12.2024 ರಿಂದ5 ದಿನಗಳ ಥೈಲ್ಯಾಂಡ್. 16.01.2025 ರಿಂದ 10ದಿನಗಳ ವಿಯೆಟ್ನಾಮ್, ಕಾಂಬೋಡಿಯ 23.1.2025, 07.02.2025 ರಿಂದ 6ದಿನಗಳ ದುಬೈ, ಅಬುಧಾಬಿ ಪ್ರವಾಸಗಳು ಮಾರ್ಚ್ ತಿಂಗಳಲ್ಲಿ ಕಾಶಿ,ಗಯಾ ಚಾರ್ ದಾಮ್ ಪ್ರವಾಸಗಳಿಗೆ ಆನಂದ್ ವಿಹಾರಿ ಬೆಂಗಳೂರು 23. 080- 23385837, 8088887677

21.01.2025 ಕುಂಭಮೇಳ ಪ್ರಯುಕ್ತ ರಿಯಾಯಿತಿ ದರದಲ್ಲಿ 6ದಿನ ವಿಮಾನದಲ್ಲಿ ಅಲಹಾಬಾದ್ ಕಾಶಿ ಗಯಾ ಅಯೋಧ್ಯಾ. ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Royal Package ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಭಾರತಪರಂಪರ ದರ್ಶನ: 23.12.2024 5ದಿನ ಅಹೋಬಿಲಂ ಶ್ರೀಶೈಲಂ, ಮಂತ್ರಾಲಯ. 18.1.2025 11ದಿನ 4 ಜ್ಯೋತಿರ್ಲಿಂಗ ಗುಜರಾತ್,ಮಧ್ಯಪ್ರದೇಶ. ಪ್ರಕಾಶ್ ಹೆಬ್ಬಾರ್ 9448792891.

ಭವಿಷ್ಯ

Astrology

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚಕ ಪ್ರಕಟಣೆ ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸೋತಾಗ ತಿರುಚಲಾಗಿದೆ ಎನ್ನುತ್ತೀರಿ, ಗೆದ್ದಾಗ ಹೇಳಲ್ಲ– ಸುಪ್ರೀಂ ಕೋರ್ಟ್

ಇವಿಎಂ: ಪಿಐಎಲ್ ವಜಾ

ನವದೆಹಲಿ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಬದಲು ಮತ ಪತ್ರದ (ಬ್ಯಾಲೆಟ್ ಪೇಪರ್) ಮತದಾನ ವ್ಯವಸ್ಥೆಯನ್ನು ಪುನಃ ಜಾರಿಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

‘ಚುನಾವಣೆಯಲ್ಲಿ ನೀವು ಸೋತಾಗ ಇವಿಎಂ ತಿರುಚಲಾಗಿದೆ ಎನ್ನುತ್ತೀರಿ. ಗೆದ್ದಾಗ ಮಾತ್ರ ಆ ರೀತಿ ಹೇಳುವುದಿಲ್ಲ’ ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಪಿ.ಬಿ. ವರಾಳೆ ಅವರಿದ್ದ ವಿಭಾಗೀಯ ಪೀಠ ತೀಕ್ಷ್ಣ ಮಾತುಗಳಲ್ಲಿ ಚಾಟಿ ಬೀಸಿದೆ.

ಬ್ಯಾಲೆಟ್ ಪೇಪರ್ ಬದಲು ಇವಿಎಂ ಜಾರಿಗೊಳಿಸಿದ ಕ್ರಮ ಪ್ರಶ್ನಿಸಿ ಡಾ. ಕೆ.ಎ. ಪೌಲ್ ಅವರು ಸಲ್ಲಿಸಿದ್ದ ಪಿಐಎಲ್ ಅನ್ನು ವಿಭಾಗೀಯ ಪೀಠವು ವಜಾಗೊಳಿಸಿರುವುದರಿಂದ, ಚುನಾವಣೆಗಳಲ್ಲಿ ಇವಿಎಂಗಳ ಬಳಕೆಯ ಹಾದಿ ಮತ್ತಷ್ಟು ಸುಗಮವಾದಂತಾಗಿದೆ.

ಅರ್ಜಿದಾರರು, ಇವಿಎಂ ಬದಲು ಬ್ಯಾಲೆಟ್ ಪೇಪರ್ ಮತದಾನ ವ್ಯವಸ್ಥೆಯನ್ನು ಪುನಃ ಸ್ಥಾಪಿಸಬೇಕು ಎಂಬ ಕೋರಿಕೆಯೊಂದಿಗೆ, ಚುನಾವಣೆಯ ಸಮಯದಲ್ಲಿ ಹಣ, ಮದ್ಯ ಸೇರಿದಂತೆ ಆಮಿಷಗಳನ್ನು ಒಡ್ಡುವುದು ಸಾಬೀತಾದಲ್ಲಿ ಅಭ್ಯರ್ಥಿಗಳನ್ನು ಕನಿಷ್ಠ 5 ವರ್ಷ ಚುನಾವಣಾ ಸ್ಪರ್ಧೆಯಿಂದ ನಿಷೇಧಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು. ಚುನಾವಣೆಯಲ್ಲಿ ಪಾಲ್ಗೊಳ್ಳುವಂತೆ ಮತದಾರರಿಗೆ ಶಿಕ್ಷಣ ಕಾರ್ಯಕ್ರಮ ಆಯೋಜಿಸಬೇಕು. ರಾಜಕೀಯ ಪಕ್ಷಗಳ ನಿಧಿಯನ್ನು ಪರಿಶೀಲಿಸಲು ತನಿಖಾ ವ್ಯವಸ್ಥೆ ರೂಪಿಸಬೇಕು. ಚುನಾವಣಾ ಸಂಬಂಧಿ ಹಿಂಸಾಚಾರಗಳನ್ನು ತಡೆಗಟ್ಟಲು ನೀತಿ ರೂಪಿಸಬೇಕು ಎಂದು ಮನವಿ ಮಾಡಿದ್ದರು.

‘ಇಂದು ಶೇ 32 ರಷ್ಟು ವಿದ್ಯಾವಂತರು ಮತದಾನ ಮಾಡುತ್ತಿಲ್ಲ. ಎಂತಹ ದುರಂತ. ಪ್ರಜಾಪ್ರಭುತ್ವವು ಈ ರೀತಿ ಸಾಯುತ್ತಿದ್ದರೆ ಮತ್ತು ಇದನ್ನು ತಡೆಯಲು ನಾವು ಏನನ್ನಾದರೂ ಮಾಡದಿದ್ದರೆ ಮುಂದಿನ ವರ್ಷಗಳಲ್ಲಿ ಪರಿಸ್ಥಿತಿ ಏನಾಗಬಹುದು’ ಎಂದು ಅರ್ಜಿದಾರರು ಕಳವಳ ವ್ಯಕ್ತಪಡಿಸಿದರು.

ಈ ಎಲ್ಲಾ ಕೋರಿಕೆಗಳನ್ನು ತಳ್ಳಿಹಾಕಿದ ವಿಭಾಗೀಯ ಪೀಠ, ‘ರಾಜಕೀಯ ಪಕ್ಷಗಳಿಗೆ ಇವಿಎಂ ವ್ಯವಸ್ಥೆಯಿಂದ ಯಾವುದೇ ತೊಂದರೆ ಇಲ್ಲ, ನಿಮಗೆ ಸಮಸ್ಯೆ ಇದೆ. ನಾವು ನಿಮ್ಮ ಕೋರಿಕೆ ತಳ್ಳಿಹಾಕುತ್ತಿದ್ದೇವೆ. ನೀವು ಇದನ್ನೆಲ್ಲ ವಾದಿಸುವ ಸ್ಥಳ ಇದು ಅಲ್ಲ’ ಎಂದು ತರಾಟೆಗೆ ತೆಗೆದುಕೊಂಡು, ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿತು.

ಮತಪತ್ರ ವ್ಯವಸ್ಥೆ ಪುನಃ ಜಾರಿಗೊಳಿಸಿ: ಖರ್ಗೆ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ದೇಶದಲ್ಲಿ ಮತಪತ್ರ ವ್ಯವಸ್ಥೆಯನ್ನು ಪುನಃ ಜಾರಿಗೆ ತರಬೇಕು ಎಂದು ಒತ್ತಾಯಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಇದಕ್ಕಾಗಿ ಜಾಗೃತಿ ಮೂಡಿಸಲು ಭಾರತ್ ಜೋಡೊ ಯಾತ್ರೆಯಂಥ ಆಂದೋಲನಕ್ಕೆ ಕರೆ ನೀಡಿದ್ದಾರೆ.

ಇಲ್ಲಿನ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ‘ಸಂವಿಧಾನ ರಕ್ಷಕ ಅಭಿಯಾನ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಮಗೆ ಇವಿಎಂ ಬೇಡ, ಅವರು ತಮ್ಮ ಬಳಿ ಇವಿಎಂ ಇಟ್ಟುಕೊಳ್ಳಲಿ. ಬ್ಯಾಲೆಟ್ ಪೇಪರ್‌ನಲ್ಲಿ ಮತದಾನ ನಡೆಯಬೇಕು. ಆಗ ಅವರ ನಿಲುವೇನು ಮತ್ತು ಅವರ ಸ್ಥಾನ ಏನೆಂಬುದು ಗೊತ್ತಾಗುತ್ತದೆ’ ಎಂದರು.

‘ಎಲ್ಲ ಬಡ ಮತ್ತು ತುಳಿತಕ್ಕೆ ಒಳಗಾದ ಸಮುದಾಯಗಳ ಮತಗಳು ವ್ಯರ್ಥವಾಗುವುದನ್ನು ತಡೆಯಲು ಎಲ್ಲರೂ ಬ್ಯಾಲೆಟ್ ಪೇಪರ್ ಮೂಲಕ ಮತದಾನಕ್ಕೆ ಒತ್ತಾಯಿಸಬೇಕು. ಈ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಲು, ಮತಪತ್ರ ವ್ಯವಸ್ಥೆಯನ್ನು ಮರಳಿ ತರಲು ನಾವು ಭಾರತ್ ಜೋಡೊ ಯಾತ್ರೆಯಂತಹ ಆಂದೋಲನ ಪ್ರಾರಂಭಿಸಬೇಕು’ ಎಂದು ಖರ್ಗೆ ಅವರು ರಾಹುಲ್ ಗಾಂಧಿಗೆ ಒತ್ತಾಯಿಸಿದರು.

‘ಪ್ರಧಾನಿ ನರೇಂದ್ರ ಮೋದಿಗೆ ಜಾತಿ ಗಣತಿ ಭಯವಿದೆ. ಜಾತಿ ಗಣತಿಗೆ ಅವಕಾಶ ನೀಡಿದರೆ ಸಮಾಜದ ಎಲ್ಲ ವರ್ಗದವರೂ ತಮ್ಮ ಪಾಲು ಕೇಳುತ್ತಾರೆ. ಆಗ ತಾವು ಅಹಮದಾಬಾದ್‌ಗೆ ಓಡಿ‑ಹೋಗಬೇಕಾಗುತ್ತದೆ ಎಂಬ ಭಯ ಮೋದಿ ಅವರಿಗೆ ಇದೆ’ ಎಂದು ಲೇವಡಿ ಮಾಡಿದರು.

ಕರ್ನಾಟಕದ ವಿಘ್ನೇಶ್‌ರಿಂದ ಅರ್ಜಿ • ಅಲಹಾಬಾದ್ ಹೈಕೋರ್ಟ್ ಆದೇಶ

ರಾಹುಲ್ ಪೌರತ್ವ: ಮಾಹಿತಿ ಸಲ್ಲಿಸಲು ಕೇಂದ್ರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಲಖನೌ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಪೌರತ್ವಕ್ಕೆ ಸಂಬಂಧಿಸಿ ಗೃಹ ಸಚಿವಾಲಯಕ್ಕೆ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿ ಕೈಗೊಂಡ ಕ್ರಮ ಕುರಿತು ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎ.ಆರ್. ಮಸೂದಿ ಹಾಗೂ ಸುಭಾಷ್ ವಿದ್ಯಾರ್ಥಿ ಅವರು ಇದ್ದ ವಿಭಾಗೀಯ ನ್ಯಾಯಪೀಠವು ಈ ಕುರಿತು ಮಂಗಳವಾರ ಆದೇಶಿಸಿದೆ.

ರಾಹುಲ್ ಗಾಂಧಿ ಅವರು ಬ್ರಿಟನ್ ಪೌರತ್ವ ಹೊಂದಿದ್ದಾರೆ. ಈ ಕುರಿತು ಸಿಬಿಐ ತನಿಖೆ ನಡೆಸಬೇಕು ಎಂದು ಕೋರಿ ಕರ್ನಾಟಕದ ಎಸ್.ವಿಘ್ನೇಶ್ ಶಿಶಿರ್ ಎಂಬುವವರು ಈ ಅರ್ಜಿ ಸಲ್ಲಿಸಿದ್ದಾರೆ.

‘ಈ ಅರ್ಜಿಗೆ ಸಂಬಂಧಿಸಿದ ಮಾಹಿತಿಯನ್ನು ಮುಂದಿನ ವಿಚಾರಣೆ ದಿನ ಸಲ್ಲಿಸಬೇಕು’ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ಬಿ.ಪಾಂಡೆ ಅವರಿಗೆ ಸೂಚಿಸಿದ ನ್ಯಾಯಪೀಠ, ಅರ್ಜಿಯನ್ನು ಡಿ.16ರ ನಂತರ ವಿಚಾರಣೆ ಪಟ್ಟಿಗೆ ಸೇರಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಿದೆ.

ಕದನ ವಿರಾಮ: ಇಸ್ರೇಲ್ ಭದ್ರತಾ ಸಂಪುಟ ಸಮ್ಮತಿ

ಬೈರೂತ್ (ಎಪಿ/ರಾಯಿಟರ್ಸ್): ಹಿಜ್ಬುಲ್ಲಾ ಬಂಡುಕೋರರು ಸಲ್ಲಿಸಿದ್ದ ಕದನ ವಿರಾಮ ಘೋಷಣೆ ಪ್ರಸ್ತಾಪವನ್ನು ಅನುಮೋದಿಸುವಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಭದ್ರತಾ ಸಂಪುಟಕ್ಕೆ ಶಿಫಾರಸು ಮಾಡಿದ್ದಾರೆ.

ಅದರಂತೆ ಇಸ್ರೇಲ್‌ನ ಭದ್ರತಾ ಸಂಪುಟವು ಕದನವಿರಾಮ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದೆ . ಕದನ ವಿರಾಮವು ಬುಧವಾರದಿಂದ ಜಾರಿಗೆ ಬರುವ ಸಾಧ್ಯತೆಯಿದೆ ಎಂದು ‘ಚಾನೆಲ್ 12’ ವಾಹಿನಿ ವರದಿ ಮಾಡಿದೆ.

14 ತಿಂಗಳಿನಿಂದ ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರ ಜೊತೆಗೆ ನಡೆಯುತ್ತಿರುವ ಯುದ್ಧಕ್ಕೆ ವಿರಾಮ ಘೋಷಿಸುವ ಉದ್ದೇಶದಿಂದ ಸಂಪುಟಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ನೆತನ್ಯಾಹು ಅವರು ತಿಳಿಸಿದ್ದರು.

ರಾಜ್ಯಸಭೆ 6 ಸ್ಥಾನಗಳಿಗೆ ಡಿ.20ಕ್ಕೆ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಂಧ್ರ ಪ್ರದೇಶದ ಮೂರು ಸ್ಥಾನ ಸೇರಿ ಖಾಲಿ ಇರುವ ರಾಜ್ಯಸಭೆಯ 6 ಸ್ಥಾನಗಳಿಗೆ ಡಿಸೆಂಬರ್ 20ರಂದು ಚುನಾವಣೆ ನಡೆಯಲಿದೆ.

ತನ್ನ ಸಂಖ್ಯಾಬಲ ಹೆಚ್ಚಿಸಿಕೊಂಡು, ಆ ಮೂಲಕ ರಾಜ್ಯಸಭೆಯಲ್ಲಿ ಬಹುಮತಕ್ಕೆ ಬೇಕಿರುವ ಸ್ಥಾನಗಳ ಗಡಿ ದಾಟಲು ಆಡಳಿತಾರೂಢ, ಬಿಜೆಪಿ ನೇತೃತ್ವದ ಎನ್‌ಡಿಎಗೆ ಈ ಚುನಾವಣೆ ನೆರವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಜಮ್ಮು‑ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ನಾಲ್ಕು ಸ್ಥಾನಗಳಿಗೆ ಚುನಾವಣೆ ಘೋಷಿಸಿಲ್ಲ. ಈ ಸ್ಥಾನಗಳು ಮೂರು ವರ್ಷಗಳಿಂದ ಖಾಲಿ ಉಳಿದಿವೆ.

ಆಂಧ್ರ ಪ್ರದೇಶದ ಮೂರು, ಒಡಿಶಾ ಹಾಗೂ ಹರಿಯಾಣದ ತಲಾ ಒಂದು ಸೇರಿದಂತೆ ಐದು ಸೀಟುಗಳನ್ನು ಎನ್‌ಡಿಎ ಗೆಲ್ಲಬಹುದು. ಒಡಿಶಾ ಮತ್ತು ಹರಿಯಾಣದಲ್ಲಿ ಬಿಜೆಪಿ ಸರ್ಕಾರ ಇರುವುದು ಹಾಗೂ ಆಂಧ್ರ ಪ್ರದೇಶಲ್ಲಿ ಎನ್‌ಡಿಎ ಸರ್ಕಾರ ಇರುವುದರಿಂದ ಎನ್‌ಡಿಎ ಅಭ್ಯರ್ಥಿಗಳ ಗೆಲುವು ಸುಲಭವಾಗಲಿದೆ.

ಟ್ರಂಪ್ ವಿರುದ್ಧದ ಪ್ರಕರಣಕ್ಕೆ ಕೊಕ್ ?

ರಹಸ್ಯ ದಾಖಲೆಗಳನ್ನು ಮನೆಗೆ ಕೊಂಡೊಯ್ದಿದ್ದ ಆರೋಪ

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ಶ್ವೇತಭವನದ ರಹಸ್ಯ ದಾಖಲೆಗಳನ್ನು ಅಧಿಕಾರ ಅವಧಿ ಮುಗಿದ ನಂತರ ತಮ್ಮ ಖಾಸಗಿ ನಿವಾಸಕ್ಕೆ ಕೊಂಡೊಯ್ದಿದ್ದರು ಎಂಬ ಆರೋಪದಡಿ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ದಾಖಲಾಗಿದ್ದ ಪ್ರಕರಣ ಕೈಬಿಡಲು ಫೆಡರಲ್ ಪ್ರಾಸಿಕ್ಯೂಟರ್‌ಗಳು ಮುಂದಾಗಿದ್ದಾರೆ.

ಅಧಿಕಾರದಲ್ಲಿ ಇರುವಾಗ ಅಧ್ಯಕ್ಷರಿಗೆ ಪ್ರಾಸಿಕ್ಯೂಷನ್‌ನಿಂದ ರಕ್ಷಣೆ ಇದೆ. ಹಾಗಾಗಿ, ಈ ಪ್ರಕರಣವನ್ನು ಕೈಬಿಡುವ ನಿರ್ಧಾರಕ್ಕೆ ಪ್ರಾಸಿಕ್ಯೂಟರ್‌ಗಳು ಬಂದಿದ್ದಾರೆ.

ಚೀನಾದ ವಸ್ತುಗಳಿಗೆ ಶೇ 35 ರಷ್ಟು ಸುಂಕ

ವಾಷಿಂಗ್ಟನ್ (ಪಿಟಿಐ): ‘ಕೆನಡಾ ಹಾಗೂ ಮೆಕ್ಸಿಕೊದಿಂದ ಆಮದಾಗುವ ಎಲ್ಲ ವಸ್ತುಗಳಿಗೆ ಶೇ 25 ಹಾಗೂ ಚೀನಾದ ಸರಕುಗಳಿಗೆ ಶೇ 35ರಷ್ಟು ಸುಂಕ ವಿಧಿಸಲಾಗುವುದು’ ಎಂದು ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಅಕ್ರಮ ವಲಸಿಗರು ಹಾಗೂ ದೇಶದೊಳಗೆ ಬರುತ್ತಿರುವ ಮಾದಕ ವಸ್ತುಗಳ ಕುರಿತು ಗಮನಹರಿಸಲಾಗುವುದು ಎಂದಿದ್ದಾರೆ.

‘ಜ.20ರಂದು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ, ಮೂರು ದೇಶಗಳ ಮೇಲೆ ಸುಂಕ ಹೇರುವ ಆದೇಶಕ್ಕೆ ಸಹಿ ಹಾಕಲಾಗುವುದು’ ಎಂದು ಸಾಮಾಜಿಕ ಜಾಲತಾಣ ‘ಟ್ರೂಥ್’ನಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನ: ಕಂಡಲ್ಲಿ ಗುಂಡಿಕ್ಕಲು ಸೇನೆ ಆದೇಶ

ಹಿಂಸಾಚಾರ; ಆರು ಮಂದಿ ಸಾವು

ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಆಶ್ರುವಾಯು ಶೆಲ್ ಸಿಡಿಸಿದರು — ಎಎಫ್‌ಪಿ ಚಿತ್ರ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬೆಂಬಲಿಗರು ನಡೆಸುತ್ತಿರುವ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದ್ದು, ಪ್ಯಾರಾ ಮಿಲಿಟರಿ ಪಡೆಯ ನಾಲ್ವರು ಯೋಧರು, ಇಬ್ಬರು ಪೊಲೀಸರು ಸೇರಿದಂತೆ ಒಟ್ಟು ಆರು ಮಂದಿ ಮೃತಪಟ್ಟಿದ್ದಾರೆ. ನೂರಕ್ಕೂ ಅಧಿಕ ಯೋಧರು ಗಾಯಗೊಂಡಿದ್ದಾರೆ.

ಉದ್ರಿಕ್ತ ಪರಿಸ್ಥಿತಿಯನ್ನು ನಿಯಂತ್ರಿಸಲು ರಾಜಧಾನಿಗೆ ಸೇನೆಯನ್ನು ನಿಯೋಜಿಸಿದ್ದು ಕಂಡಲ್ಲಿ ಗುಂಡಿಕ್ಕಲು ಆದೇಶಿಸಲಾಗಿದೆ.

ಜೈಲಿನಲ್ಲಿರುವ ಇಮ್ರಾನ್ ಖಾನ್ ಬಿಡುಗಡೆಗೆ ಆಗ್ರಹಿಸಿ ಪಾಕಿಸ್ತಾನ್ ತೆಹ್ರೀಕ್‌‑ಎ‑ಇನ್ಸಾಫ್ (ಪಿಟಿಐ) ಪಕ್ಷದ ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವ ಪರಿಣಾಮ ಹಿಂಸಾಚಾರ ಭುಗಿಲೆದ್ದಿದೆ.

ಇಸ್ಲಾಮಾಬಾದ್‌ನ ಶ್ರೀನಗರ ಹೆದ್ದಾರಿಯಲ್ಲಿ ಸೋಮವಾರ ತಡರಾತ್ರಿ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಪಾಕಿಸ್ತಾನದ ನಾಲ್ವರು ರೇಂಜರ್ಸ್‌ಗಳು ಮೃತಪಟ್ಟಿದ್ದಾರೆ. ಐವರು ರೇಂಜರ್ಸ್‌ಗಳು ಹಾಗೂ ಹಲವು ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದಾರೆ ಎಂದು ರೇಡಿಯೊ ಪಾಕಿಸ್ತಾನ ತಿಳಿಸಿದೆ.

ಈ ಸ್ಥಳದಿಂದ ಸುಮಾರು ಐದು ಕಿ.ಮೀ. ದೂರದಲ್ಲಿ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳನ್ನು ಹೊಂದಿದ್ದ ದುಷ್ಕರ್ಮಿಗಳು ರೇಂಜರ್ಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ.

ಇಮ್ರಾನ್ ಖಾನ್ ವಿರುದ್ಧ ಮತ್ತೊಂದು ಪ್ರಕರಣ: ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಪಾಕಿಸ್ತಾನ್ ತೆಹ್ರೀಕ್ ಇ‑ಇನ್ಸಾಫ್ ಪಕ್ಷದ (ಪಿಟಿಐ) ಇತರ ನಾಯಕರ ವಿರುದ್ಧ ಭಯೋತ್ಪಾದನೆ ನಿಗ್ರಹ ಕಾಯ್ದೆ ಅಡಿಯಲ್ಲಿ ಮಂಗಳವಾರ ಪ್ರಕರಣ ದಾಖಲಿಸಲಾಗಿದೆ.

ಪ್ರತಿಭಟನೆ ವೇಳೆ ಪೊಲೀಸ್ ಅಧಿಕಾರಿಯನ್ನು ಹತ್ಯೆ ಮಾಡಿದ ಆರೋಪಕ್ಕೆ ಸಂಬಂಧಿಸಿ ಪ್ರಕರಣ ದಾಖಲಿಸಲಾಗಿದೆ.

> **ಕೆಟ್ಟ ರಾಜಕೀಯ ಕಾರ್ಯಸೂಚಿಗಾಗಿ ರಕ್ತಪಾತವು ಸ್ವೀಕಾರರ್ಹವಲ್ಲ. ಭದ್ರತಾ ಸಿಬ್ಬಂದಿ ಮೇಲಿನ ದಾಳಿ ಖಂಡನೀಯ**
> **ಶೆಹಬಾಜ್ ಷರೀಫ್**
> ಪಾಕಿಸ್ತಾನದ ಪ್ರಧಾನಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಣೇಬೆನ್ನೂರು

ಕ್ರ.ಸಂ. ಕೃಮಾಇ/ಕೃಉಮಾಸ(ರಾ)/ಸಾ.ನಿ/ಲೀ–ಕಂ–ಸೇ/891/2024–25 ದಿ: 26–11–2024

ವ್ಯಾಪಾರಸ್ಥರಿಗೆ ನಿವೇಶನಗಳ ಲೀಜ್–ಕಂ–ಸೇಲ್ ಹಂಚಿಕೆಯ ಮರು ಪ್ರಕಟಣೆ

ರಾಣೇಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿನ ಹೂಲಿಹಳ್ಳಿ–ಕೂನಬೇವು ಉಪ ಮಾರುಕಟ್ಟೆ (ಮೆಗಾ ಮಾರುಕಟ್ಟೆ) ಪ್ರಾಂಗಣವನ್ನು ಬೆಂಗಳೂರು–ಪೂನಾ 48 ನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ **222.16** ಎಕರೆ ವಿಸ್ತೀರ್ಣದಲ್ಲಿ ಎಲ್ಲಾ ಮೂಲಭೂತ ಸೌಕರ್ಯ–ಸೌಲಭ್ಯಗಳನ್ನೊಳಗೊಂಡಂತೆ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನ ಉದ್ದೇಶಕ್ಕೆ ಅಭಿವೃದ್ಧಿಪಡಿಸಿ **ಒಟ್ಟು 538** ನಿವೇಶನಗಳನ್ನು ರೂಪಿಸಲಾಗಿದ್ದು, ಈ ಪ್ರಾಂಗಣಕ್ಕೆ ರೈಲ್ವೆ ಮಾರ್ಗ ಹಾಗೂ ಹೆಲಿಪ್ಯಾಡ್ ಸಂಪರ್ಕ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಾಂಗಣದ ‘ಎ’, ‘ಬಿ’, ‘ಸಿ’, ‘ಡಿ’ ಮತ್ತು ‘ಇ’ ಬ್ಲಾಕುಗಳಲ್ಲಿ ಖಾಲಿ ಇರುವ ವಿವಿಧ ಅಳತೆಯ ಸಾಮಾನ್ಯ ನಿವೇಶನಗಳಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) 2004 ರ ನಿಯಮ 5 ರನ್ವಯ ಅನುಮೋದಿಸಿದ ನಿವೇಶನ ದರ **ಪ್ರತಿ ಚದರಡಿಗೆ ರೂ. 400/–** ರಂತೆ ರಾಣೇಬೆನ್ನೂರು ಸಮಿತಿಯ ಸ್ಥಳೀಯ ವರ್ತಕರುಗಳಿಗೆ **ಶೇ.60** ರಷ್ಟು ಹಾಗೂ ಲೈಸೆನ್ಸ್ ಪಡೆದು ರಾಜ್ಯದ ಇತರೆ ಸಮಿತಿಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯವಹಾರ ಮಾಡುತ್ತಿರುವ ಪೇಟೆ ಕಾರ್ಯಕರ್ತರುಗಳಿಗೆ **ಶೇ. 40** ರಷ್ಟು ನಿವೇಶನಗಳನ್ನು **10 ವರ್ಷಗಳ ಲೀಸ್–ಕಂ–ಸೇಲ್ ಆಧಾರದ ಮೇಲೆ ಆಸ್ತಿ ಹಂಚಿಕೆ ನಿಯಮಗಳು 2004** ಮತ್ತು ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಗಳಂತೆ ಜೇಷ್ಠತೆಯ ಆಧಾರದ ಮೇಲೆ ಕೆಳಕಂಡ **300** ಸಂಖ್ಯೆ ಸಾಮಾನ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಗ್ರೂಪ್–ಎ (ಸ್ಥಳೀಯ)

ರಾಣೇಬೆನ್ನೂರು ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿನ ಸ್ಥಳೀಯ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಉದ್ದೇಶಿರುವ ನಿವೇಶನಗಳ ವಿವರ

ಕ್ರ.ಸಂ.	ನಿವೇಶನಗಳ ಸಂಖ್ಯೆ	ಒಟ್ಟು ನಿವೇಶನಗಳು	ಪ್ರತಿ ನಿವೇಶನದ ಅಳತೆ ಮತ್ತು ವಿಸ್ತೀರ್ಣ ಅಡಿಗಳಲ್ಲಿ ಹಾಗೂ ಚದುರು ಅಡಿಗಳಲ್ಲಿ	ಮೌಲ್ಯ (ಪ್ರತಿ ಚದರಡಿಗೆ ರೂ. 400/–ರಂತೆ)	ಶೇ.25ರಂತೆ ಇ.ಎಂ.ಡಿ ಮೊತ್ತ
	‘ಎ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 33)				
1	02, 04, 06, 08, 10, 11, 14, 16, 18, 20, 22, 23	12	50 x 97 = 4850	19,40,000/-	4,85,000/-
2	26, 30, 34, 39, 43, 46	06	50 x 147 = 7350	29,40,000/-	7,35,000/-
3	49, 53, 57, 62, 64, 67, 71, 74, 77, 81, 83	11	50 x 176= 8800	35,20,000/-	8,80,000/-
4	88, 92, 96, 98	04	50 x 192= 9600	38,40,000/-	9,60,000/-
	‘ಬಿ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 53)				
1	101, 103, 109, 110, 112, 113, 117, 119, 120	09	50 x 176= 8800	35,20,000/-	8,80,000/-
2	122, 124, 126, 128	04	50 x 115= 5750	23,00,000/-	5,75,000/-
3	130, 131, 133, 134, 136, 137, 139, 140, 142, 151, 153, 155, 157, 159, 161, 163, 164, 167, 169, 171, 173, 175, 177, 179, 180	25	50 x 146= 7300	29,20,000/-	7,30,000/-
4	183, 185, 186, 188, 189, 191, 193	07	50 x 76= 3800	15,20,000/-	3,80,000/-
5	205, 206, 208, 209, 211, 212, 219, 228	08	50 x 150= 7500	30,00,000/-	7,50,000/-
	‘ಸಿ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 30)				
1	233, 238	02	50 x 176= 8800	35,20,000/-	8,80,000/-
2	244, 248, 252, 255, 258, 261, 263, 267, 269	09	50 x 177= 8850	35,40,000/-	8,85,000/-
3	274, 278, 280, 284, 286, 290, 293, 295, 298, 300	10	50 x 146= 7300	29,20,000/-	7,30,000/-
4	309, 311, 312, 314, 315, 317, 318	07	50 x 98= 4900	19,60,000/-	4,90,000/-
5	320, 322	02	50 x 80= 4000	16,00,000/-	4,00,000/-
	‘ಡಿ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 44)				
1	334, 336, 338, 339, 341, 343	06	50 x 80= 4000	16,00,000/-	4,00,000/-
2	345, 346, 348, 350, 352, 354, 356, 358, 360, 362, 364, 366, 368, 369	14	50 x 97= 4850	19,40,000/-	4,85,000/-
3	372, 375, 379, 383, 386, 390, 394, 397	08	50 x 146= 7300	29,20,000/-	7,30,000/-
4	400, 403, 406, 410, 412, 416, 420, 423, 426, 429, 432, 436	12	50 x 180= 9000	36,00,000/-	9,00,000/-
5	438, 442, 446, 449	04	50 x 200= 10000	40,00,000/-	10,00,000
	‘ಇ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 20)				
1	452, 455, 457, 461	04	50 x 197= 9850	39,40,000/-	9,85,000/-
2	466, 469, 472	03	50 x 177= 8850	35,40,000/-	8,85,000/-
3	474, 477, 481, 486, 491, 494, 496, 499, 501, 505, 508, 512, 515	13	50 x 147= 7350	29,40,000/-	7,35,000/-

ಮೇಲಿನ ಎ, ಬಿ, ಸಿ, ಡಿ ಮತ್ತು ಇ ಬ್ಲಾಕಿನಲ್ಲಿ ನಿಯಮ 17 ರಂತೆ ವಿವಿಧ ವರ್ಗಗಳಿಗೆ ಈ ಕೆಳಕಂಡ ನಿವೇಶನಗಳನ್ನು ಮೀಸಲಿಡಲಾಗಿದೆ.

ಕ್ರ.ಸಂ.	ವರ್ಗ	ಮೀಸಲಿಟ್ಟಿರುವ ನಿವೇಶನಗಳು					ಒಟ್ಟು
		ಎ	ಬಿ	ಸಿ	ಡಿ	ಇ	
1	ಪ.ಜಾತಿ	16, 49, 83, 92	110, 131, 139, 153, 173, 191, 208, 219	238, 263, 298, 317	339, 346, 354, 390, 403, 446	457, 481, 501	25
2	ಪ.ಜಾತಿ (ಮಹಿಳೆ)	43	124	286	366	-	04
3	ಪ. ಪಂಗಡ	22, 64	103, 161, 185	269, 314	341, 379, 416	496	11
4	ಎಫ್‌ಪಿಓ	06, 46, 67	101, 126, 140, 193	261, 280, 312	336, 356, 397, 438	466, 512	16
5	ಎಫ್‌ಪಿಓ (ಮಹಿಳೆ)	-	133	-	-	-	01
6	ವಿಕಲಚೇತನರು	-	157	-	386	-	02
7	ಮಾಜಿ ಸೈನಿಕ	-	117	-	400	-	02
8	ಸಾಮಾನ್ಯ ಮಹಿಳೆ	57, 77	113, 134, 169	244, 300	406, 429, 432	477	11
	ಒಟ್ಟು	**12**	**22**	**12**	**19**	**07**	**72**

ಗ್ರೂಪ್–ಬಿ (ಸ್ಥಳೀಯೇತರ)

ರಾಣೇಬೆನ್ನೂರು ಸಮಿತಿ ಹೊರತುಪಡಿಸಿ ರಾಜ್ಯದಲ್ಲಿನ ಇತರೆ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿನ ಅರ್ಹ ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಉದ್ದೇಶಿರುವ ನಿವೇಶನಗಳ ವಿವರ : ‘ಎ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 22)

ಕ್ರ.ಸಂ.	ನಿವೇಶನಗಳ ಸಂಖ್ಯೆ	ಒಟ್ಟು ನಿವೇಶನಗಳು	ಪ್ರತಿ ನಿವೇಶನದ ಅಳತೆ ಮತ್ತು ವಿಸ್ತೀರ್ಣ ಅಡಿಗಳಲ್ಲಿ ಹಾಗೂ ಚದುರು ಅಡಿಗಳಲ್ಲಿ	ಮೌಲ್ಯ (ಪ್ರತಿ ಚದರಡಿಗೆ ರೂ. 400/–ರಂತೆ)	ಶೇ.25ರಂತೆ ಇ.ಎಂ.ಡಿ ಮೊತ್ತ
1	03, 05, 07, 09, 15, 17, 19, 21	08	50 x 97= 4850	19,40,000/-	4,85,000/-
2	27, 32, 37, 41, 45	05	50 x 147= 7350	29,40,000/-	7,35,000/-
3	51, 55, 59, 69, 75, 79, 85	07	50 x 176= 8800	35,20,000/-	8,80,000/-
4	90, 94	02	50 x 192= 9600	38,40,000/-	9,60,000/-
	‘ಬಿ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 35)				
1	100, 102, 111, 116, 118	05	50 x 176= 8800	35,20,000/-	8,80,000/-
2	123, 125, 127	03	50 x 115= 5750	23,00,000/-	5,75,000/-
3	132, 138, 141, 152, 154, 156, 158, 160, 162, 168, 170, 172, 174, 176, 178	15	50 x 146= 7300	29,20,000/-	7,30,000/-
4	184, 187, 190, 192, 194	05	50 x 76= 3800	15,20,000/-	3,80,000/-
5	207, 210, 213, 218, 220, 227, 229	07	50 x 150= 7500	30,00,000/-	7,50,000/-
	‘ಸಿ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 20)				
1	235, 240	02	50 x 176= 8800	35,20,000/-	8,80,000/-
2	242, 246, 250, 254, 259, 265, 271	07	50 x 177= 8850	35,40,000/-	8,85,000/-
3	276, 282, 287, 291, 296, 302	06	50 x 146= 7300	29,20,000/-	7,30,000/-
4	308, 310, 313, 316	04	50 x 98= 4900	19,60,000/-	4,90,000/-
5	321	01	50 x 80= 4000	16,00,000/-	4,00,000/-
	‘ಡಿ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 30)				
1	335, 337, 340, 342	04	50 x 80= 4000	16,00,000/-	4,00,000/-
2	347, 349, 351, 353, 355, 359, 361, 363, 365, 367	10	50 x 97 = 4850	19,40,000/-	4,85,000/-
3	373, 377, 381, 388, 392, 396	06	50 x 146= 7300	29,20,000/-	7,30,000/-
4	401, 408, 414, 418, 422, 427, 434	07	50 x 180= 9000	36,00,000/-	9,00,000/-
5	440, 444, 448	03	50 x 200= 10000	40,00,000/-	10,00,000
	‘ಇ’ ಬ್ಲಾಕಿನ ಸಾಮಾನ್ಯ ನಿವೇಶನಗಳು (ಒಟ್ಟು 13)				
1	453, 459	02	50 x 197= 9850	39,40,000/-	9,85,000/-
2	464, 471	02	50 x 177= 8850	35,40,000/-	8,85,000/-
3	475, 479, 483, 488, 493, 497, 503, 510, 514	09	50 x 147= 7350	29,40,000/-	7,35,000/-

ಮೇಲಿನ ಎ, ಬಿ, ಸಿ, ಡಿ ಮತ್ತು ಇ ಬ್ಲಾಕಿನಲ್ಲಿ ನಿಯಮ 17ರಂತೆ ವಿವಿಧ ವರ್ಗಗಳಿಗೆ ಈ ಕೆಳಕಂಡ ನಿವೇಶನಗಳನ್ನು ಮೀಸಲಿಡಲಾಗಿದೆ.

ಕ್ರ.ಸಂ.	ವರ್ಗ	ಮೀಸಲಿಟ್ಟಿರುವ ನಿವೇಶನಗಳು					ಒಟ್ಟು
		ಎ	ಬಿ	ಸಿ	ಡಿ	ಇ	
1	ಪ.ಜಾತಿ	09, 32, 51, 75	118, 138, 156, 170, 227	250, 276, 310	335, 361, 414, 427	471, 488	**18**
2	ಪ.ಜಾತಿ (ಮಹಿಳೆ)	-	187	-	377	-	**02**
3	ಪ. ಪಂಗಡ	79	178, 229	287	351, 434	475	**07**
4	ಎಫ್‌ಪಿಓ	19, 55	162, 174, 207	259, 296	359, 408, 422	503	**11**
5	ಸಾಮಾನ್ಯ ಮಹಿಳೆ	41, 85	111, 210	265	392, 418	493	**08**
	ಒಟ್ಟು	**09**	**13**	**07**	**12**	**05**	**46**

ವಿ.ಸೂ : ಮೇಲಿನ ಮೀಸಲಾತಿ ಕೋಷ್ಟಕದಲ್ಲಿ ನಮೂದಿಸಿರುವ ನಿವೇಶನಗಳನ್ನು ಹೊರತುಪಡಿಸಿ ಉಳಿದ ನಿವೇಶನಗಳನ್ನು ಸಾಮಾನ್ಯ ವರ್ಗದವರಿಗೆ ಮೀಸಲಿರಿಸಲಾಗಿದೆ.

ನಿವೇಶನ ಕೋರಿ ಅರ್ಜಿ ಸಲ್ಲಿಸಲು ಇಚ್ಛಿಸುವವರು **ದಿನಾಂಕ : 21–12–2024** ರೊಳಗಾಗಿ ನಿಗಧಿತ ನಮೂನೆ–1 ರಲ್ಲಿ **ರೂ.500/–**ಗಳ ಹಿಂತಿರುಗಿಸಲಾಗದ ನೊಂದಣಿ ಶುಲ್ಕ ನಗದಾಗಿ ಪಾವತಿಸಿ ನೊಂದಾಯಿಸಿಕೊಂಡ ನಂತರ **ರೂ. 2360/–ಗಳ** (ಜಿಎಸ್ಟಿ ಸೇರಿ) ಅರ್ಜಿ ಶುಲ್ಕ ಪಾವತಿಸಿ ನಿಗಧಿತ ನಮೂನೆ III ನ್ನು ಪಡೆದುಕೊಳ್ಳತಕ್ಕದ್ದು. ಹೀಗೆ ನೊಂದಾಯಿಸಿಕೊಂಡವರು ಕೋರಿರುವ ನಿವೇಶನ ಮೌಲ್ಯದ **ಶೇ. 25** ರಷ್ಟು ಮುಂಗಡ ಹಣವನ್ನು ಶೆಡ್ಯೂಲ್ಡ್ / ರಾಷ್ಟ್ರೀಕೃತ ಬ್ಯಾಂಕಿನಿಂದ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಣೇಬೆನ್ನೂರು ಇವರ ಹೆಸರಿಗೆ ಪಡೆದ ಬ್ಯಾಂಕಿನ ಡಿ.ಡಿ. /ಪೇ ಆರ್ಡರ್‌ನೊಂದಿಗೆ ನಿಗಧಿತ ನಮೂನೆ– III ರಲ್ಲಿ ಮಾಹಿತಿ ಭರ್ತಿಮಾಡಿ **ದಿನಾಂಕ : 21–12–2024 ರ ಸಂಜೆ 5.00** ಘಂಟೆಯೊಳಗೆ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಣೇಬೆನ್ನೂರು ಇವರಿಗೆ ನೇರವಾಗಿ/ಅಂಚೆ ಮೂಲಕ ಸಲ್ಲಿಸುವುದು.

ಅಂಚೆ ಮೂಲಕ ಅರ್ಜಿ ನಮೂನೆ–III ನ್ನು ಸಲ್ಲಿಸುವವರು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಈ ಸಮಿತಿ ಕಚೇರಿಯಲ್ಲಿ ಸ್ವೀಕೃತವಾಗುವಂತೆ ಮುನ್ನೆಚ್ಚರಿಕೆ ವಹಿಸಿ ಅರ್ಜಿ ಸಲ್ಲಿಸತಕ್ಕದ್ದು.ಅರ್ಜಿ ಜೊತೆಯಲ್ಲಿ ಲಗತ್ತಿಸಬೇಕಾದ ದಾಖಲೆಗಳ ವಿವರಗಳನ್ನೊಳಗೊಂಡ ಮಾಹಿತಿಯನ್ನು ನಮೂನೆ– III ರ ಜೊತೆ ಒದಗಿಸಲಾಗುವುದು.

: ಷರತ್ತು–ವ–ನಿಬಂಧನೆಗಳು :

1. ಸದರಿ ಪ್ರಾಂಗಣದ ನಿವೇಶನಗಳ ಹಂಚಿಕೆ ಕೋರಿ ಈ ಕಛೇರಿಯ **ಪ್ರಕಟಣೆ ಸಂಖ್ಯೆ : ಕೃಮಾಇ / ಕೃಉಮಾಸ (ರಾ) / ಸಾನಿ / ಲೀ–ಕಂ–ಸೇ / 1539 /2023–24 ದಿನಾಂಕ: 10–01–2024** ರ ಪ್ರಕಾರ ಈಗಾಗಲೇ ಅರ್ಜಿ ಸಲ್ಲಿಸಿರುವ ಪೇಟೆ ಕಾರ್ಯಕರ್ತರುಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಅಂತವರ ಎಲ್ಲಾ ಅರ್ಜಿಗಳನ್ನು ನಿಯಮಾನುಸಾರ ಹಂಚಿಕೆಗೆ ಪರಿಗಣಿಸಲಾಗುವುದು. ಆದರೇ 2023–24 ನೇ ಸಾಲಿಗೆ ಮಾರುಕಟ್ಟೆ ಶುಲ್ಕ ಭರಣ ಮಾಡಿದ ಬಗ್ಗೆ ಸ್ಥಳೀಯ ವರ್ತಕರು ಮಾಹಿತಿಯನ್ನು ನೀಡುವುದು ಹಾಗೂ ರಾಜ್ಯದ ಇತರೆ ಸಮಿತಿಗಳ ವರ್ತಕರುಗಳು ಸಂಬಂಧಿಸಿದ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರಿಂದ ಪಡೆದ ದೃಢೀಕರಣ ಪತ್ರವನ್ನು ಮಾತ್ರ ಸಲ್ಲಿಸತಕ್ಕದ್ದು. **2.** ಒಣ ಮೆಣಸಿನಕಾಯಿಯನ್ನು ಸದರಿ ಉಪ ಮಾರುಕಟ್ಟೆ ಪ್ರಾಂಗಣದಿಂದ ಅಪವರ್ಜಿಸಿರುವುದರಿಂದ “ಬಿ” ಬ್ಲಾಕಿನ ನಿವೇಶನವನ್ನು ಒಣ ಮೆಣಸಿನಕಾಯಿ ವಹಿವಾಟಿಗೆ ಮೀಸಲಿಟ್ಟಿರುವುದನ್ನು ಕೈಬಿಟ್ಟು ಇತರೆ ಬ್ಲಾಕಿನ ನಿವೇಶನಗಳಂತೆಯೇ ಅರ್ಹ ವರ್ತಕರುಗಳಿಗೆ ಹಂಚಿಕೆಗೆ ಕ್ರಮವಹಿಸಲಾಗುವುದು. **3.** ಮೀಸಲಾತಿಯಡಿ ಅರ್ಜಿ ಸಲ್ಲಿಸುವವರು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಜಾತಿ ಪ್ರಮಾಣ ಪತ್ರ / ಸಂಬಂಧಿಸಿದ ಇತರೆ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು. ಎಫ್. ಪಿ. ಓ ಮೀಸಲಾತಿಯಡಿ ಅರ್ಜಿ ಸಲ್ಲಿಸುವವರು ಕಂಪನಿ ಆಕ್ಟ್ ಅಡಿಯಲ್ಲಿ ನೊಂದಣಿ ಪಡೆದಿರುವ ದಾಖಲಾತಿಗಳನ್ನು ಸಲ್ಲಿಸುವುದು. ಮಹಿಳಾ ಮೀಸಲಾತಿ ಕೋರುವ ಎಫ್.ಪಿ.ಓ. ಅಥವಾ ಪಾಲುದಾರಿಕೆ ಸಂಸ್ಥೆಗಳು ತಮ್ಮ ಸಂಸ್ಥೆಯು ಹೊಂದಿರುವ ಎಲ್ಲಾ ಸದಸ್ಯರು ಕಡ್ಡಾಯವಾಗಿ ಮಹಿಳೆಯರೇ ಆಗಿರತಕ್ಕದ್ದು. **4. ಪರಿಶಿಷ್ಟ ಜಾತಿ 16.22%, ಪರಿಶಿಷ್ಟ ಪಂಗಡ 6.55% ಮತ್ತು ಎಫ್.ಪಿ.ಓ. ಗಳಿಗೆ 10% ರಷ್ಟು ಲಂಬ** (Vertical) **ಮೀಸಲಾಯಿತಿಯನ್ನು ಹಾಗೂ ವಿಕಲಚೇತನರಿಗೆ 2%, ಮಾಜಿಸೈನಿಕರಿಗೆ 2% ಮತ್ತು ಮಹಿಳೆಯರಿಗೆ 10% ರಷ್ಟು ಸಮತಲ** (Horizontal) ಮೀಸಲಾತಿ ಕಲ್ಪಿಸಲಾಗಿದೆ.ಸದರಿ ಮೀಸಲಾತಿಯನ್ವಯ ಮೀಸಲಿಟ್ಟಿರುವ ನಿವೇಶನಗಳಿಗೆ ಸಾಕಷ್ಟು ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಅಂತಹ ನಿವೇಶನಗಳನ್ನು ಹಾಗೆಯೇ ಕಾಯ್ದಿರಿಸಲಾಗುವುದು. ಅವುಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸಲು ಅವಕಾಶವಿರುವುದಿಲ್ಲ. **5.** ಎಫ್.ಪಿ.ಓ. ಸಂಸ್ಥೆಗಳು ನಿಯಮ 17(2) (ಬಿ) ರನ್ವಯ ನಿವೇಶನ ಮೌಲ್ಯದಲ್ಲಿ ಮತ್ತು ಠೇವಣಿ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ಪಡೆಯಲು ಅರ್ಹರಿರುತ್ತಾರೆ. ಆದರೆ ಅರ್ಜಿ ಸಲ್ಲಿಸುವಾಗ ನಿವೇಶನ ಮೌಲ್ಯದ ಶೇ. 25 ರಷ್ಟು ಮೊತ್ತವನ್ನು ಠೇವಣಿಯಾಗಿ ಸಲ್ಲಿಸುವುದು. ನಿವೇಶನ ನೊಂದಣಿ ಸಂದರ್ಭದಲ್ಲಿ **ಶೇ. 50** ರಷ್ಟು ರಿಯಾಯಿತಿ ದರದ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. **6.** ರಾಣೇಬೆನ್ನೂರು ಸಮಿತಿಯ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಲು ನಿಗದಿಪಡಿಸಿರುವ **ಶೇ.60** ರಷ್ಟು ನಿವೇಶನಗಳ ಸಂಖ್ಯೆಗಳಿಗೆ ಅನುಗುಣವಾಗಿ ಸಾಕಷ್ಟು ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗದಿದ್ದಲ್ಲಿ ಅಂತಹ ನಿವೇಶನಗಳನ್ನು ರಾಜ್ಯದಲ್ಲಿನ ಇತರೇ ಮಾರುಕಟ್ಟೆ ಸಮಿತಿಗಳಲ್ಲಿನ ಪೇಟೆ ಕಾರ್ಯಕರ್ತರುಗಳಿಗೆ ಹಾಗೂ ರಾಜ್ಯದಲ್ಲಿನ ಇತರೇ ಮಾರುಕಟ್ಟೆ ಸಮಿತಿಗಳಲ್ಲಿನ ಪೇಟೆ ಕಾರ್ಯಕರ್ತರುಗಳಿಗೆ ಹಂಚಿಕೆ ಮಾಡಲು ನಿಗದಿಪಡಿಸಿರುವ **ಶೇ. 40** ರಷ್ಟು ನಿವೇಶನಗಳ ಸಂಖ್ಯೆಗಳಿಗೆ ಅನುಗುಣವಾಗಿ ಸಾಕಷ್ಟು ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗದಿದ್ದಲ್ಲಿ ಅಂತಹ ನಿವೇಶನಗಳನ್ನು ರಾಣೇಬೆನ್ನೂರು ಸಮಿತಿಯ ಪೇಟೆ ಕಾರ್ಯಕರ್ತರುಗಳಿಗೂ ಪರಸ್ಪರ ಉಳಿಕೆ ನಿವೇಶನಗಳನ್ನು ವರ್ಗಾಯಿಸಿ ಹಂಚಿಕೆ ಮಾಡಲಾಗುವುದು. **7.** ನಿವೇಶನಗಳನ್ನು ಕೋರಿ ಸಲ್ಲಿಕೆಯಾಗುವ ಅರ್ಜಿಗಳಲ್ಲಿ ರಾಣೇಬೆನ್ನೂರು ಸಮಿತಿಯಲ್ಲಿ ವ್ಯವಹರಿಸುತ್ತಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು–2004 ರ ನಿಯಮ 8 ರಲ್ಲಿ ನಿಗದಿಪಡಿಸಿರುವಂತೆ ಲೈಸೆನ್ಸ್ ಅರ್ಹತೆ ಮತ್ತು ಮಾರುಕಟ್ಟೆ ಶುಲ್ಕ ಪಾವತಿಯ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. **8.** ರಾಣೇಬೆನ್ನೂರು ಹೊರತುಪಡಿಸಿದ ಇತರೆ ಸಮಿತಿಗಳ ಅರ್ಜಿದಾರರಿಗೆ ರಾಜ್ಯದ ಇತರೆ ಎಲ್ಲಾ ಮಾರುಕಟ್ಟೆಗಳಲ್ಲಿ ಕಳೆದ 03 ವರ್ಷಗಳಲ್ಲಿ (2021–2022, 2022–23 ಮತ್ತು 2023–24) ಪಾವತಿಸಿರುವ ಒಟ್ಟು ಮಾರುಕಟ್ಟೆ ಶುಲ್ಕದ ಸರಾಸರಿ ಮಾರುಕಟ್ಟೆ ಶುಲ್ಕವನ್ನು ಹಾಗೂ ಸದರಿಯವರು ಹೊಂದಿರುವ ಲೈಸೆನ್ಸ್ ಅವಧಿ ಪೂರ್ಣಗೊಳಿಸಿರುವ ವರ್ಷವನ್ನು ಜೇಷ್ಠತೆಗೆ ಪರಿಗಣಿಸಲಾಗುವುದು. ಅಂತಹ ಅರ್ಜಿದಾರರು ಸಂಬಂಧಿಸಿದ ಕಾರ್ಯದರ್ಶಿಗಳಿಂದ ಪಡೆದ ಲೈಸೆನ್ಸ್ ಪ್ರತಿ ಹಾಗೂ ಮಾರುಕಟ್ಟೆ ಶುಲ್ಕ ಭರಣಾ ಮಾಡಿದ ಬಗ್ಗೆ ದೃಢೀಕರಣ ಪತ್ರವನ್ನು (ಮಾರುಕಟ್ಟೆ ಶುಲ್ಕ ನಿರ್ಧರಣಾ ಪತ್ರ) ಸಲ್ಲಿಸತಕ್ಕದ್ದು. **9.** ನಿವೇಶನ ಹಂಚಿಕೆಯು ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರ ಅನುಮೋದನೆಗೆ ಒಳಪಟ್ಟಿದ್ದು, ಇಲಾಖಾ ಅಭಿಯಂತರರು ಅಳತೆ ಮಾಡಿ ನೀಡುವ ಅಳತೆಯೇ ಅಂತಿಮವಾಗಿರುತ್ತದೆ. ಹಾಗೂ ಇದಕ್ಕೆ ತಕ್ಕಂತೆ ಮೌಲ್ಯವನ್ನು ಪಾವತಿಸಿಕೊಳ್ಳಲಾಗುವುದು. **10.** ಅರ್ಜಿದಾರರು ಸಮಿತಿಗೆ ಸಲ್ಲಿಸಲಾದ ಎಲ್ಲಾ ಮಾಹಿತಿಯು ಸತ್ಯವೆಂದು ನೋಟರಿ ಸಮ್ಮುಖದಲ್ಲಿ ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. ನೀಡಲಾದ ಮಾಹಿತಿಯು ತಪ್ಪೆಂದು ಸಮಿತಿಗೆ ತಿಳಿದು ಬಂದಲ್ಲಿ ಸದರಿಯವರ ಅರ್ಜಿಯನ್ನು ನಿಯಮಾನುಸಾರ ತಿರಸ್ಕರಿಸಲಾಗುವುದು. **11.** ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದ್ದು ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. **12.** ಈಗಾಗಲೇ ರಾಣೇಬೆನ್ನೂರು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಅಥವಾ ರಾಜ್ಯದ ಯಾವುದೇ ಇತರೆ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ನಿವೇಶನ / ಕಟ್ಟಡ ಹೊಂದಿರುವವರೂ ಕೂಡ ಹಂಚಿಕೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. **13.** ನಿವೇಶನಗಳ ಹಂಚಿಕೆಗೆ ಆದ್ಯತೆ ನೀಡುವವರು ನಮೂನೆ– III ರ ಅರ್ಜಿಯ 12 ನೇ ಸಾಲಿನಲ್ಲಿ (ಕಾಲಂ) ಕನಿಷ್ಠ 05 ಸಂಖ್ಯೆ ನಿವೇಶನಗಳನ್ನು ಆದ್ಯತೆಯಾಗಿ ಕಡ್ಡಾಯವಾಗಿ ನಮೂದಿಸತಕ್ಕದ್ದು, ಸದರಿ ಆದ್ಯತೆಗಳನ್ನು ಪರಿಗಣಿಸಿ ನಿಯಮಾನುಸಾರ ಹಂಚಿಕೆ ಮಾಡಲಾಗುವುದು. ಅರ್ಜಿದಾರರು ಹಂಚಿಕೆಗೆ ಕೋರಿರುವ ನಿವೇಶನ ಸಂಖ್ಯೆಯು ಹಂಚಿಕೆಗೆ ಲಭ್ಯವಾಗದಿದ್ದಲ್ಲಿ ಅನ್ವಯಿಸುವ ಬೇರೆ ನಿವೇಶನವನ್ನು ಸಮಿತಿ ವಿವೇಚನಾನುಸಾರ ಹಂಚಿಕೆಗೆ ಪರಿಗಣಿಸಲಾಗುವುದು. ಈ ಬಗ್ಗೆ ಅರ್ಜಿದಾರರು ಒಪ್ಪಿಗೆ ಸೂಚಿಸಿರುವ ಅಫಿಡವಿಟ್ ಸಲ್ಲಿಸತಕ್ಕದ್ದು. **14.** ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನಿವೇಶನಗಳ ಆದ್ಯತೆ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಿದಲ್ಲಿ ಅತಿ ಹೆಚ್ಚಿನ ವಿಸ್ತೀರ್ಣದ ನಿವೇಶನಕ್ಕೆ ನಿಗಧಿಪಡಿಸಲಾದ ಠೇವಣಿ ಮೊತ್ತವನ್ನು ಪಾವತಿಸತಕ್ಕದ್ದು. **15.** ನಿವೇಶನ ಹಂಚಿಕೆ ಪಡೆದವನು ನಿಯಮ 10 (1) (i) ರಡಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ನಿವೇಶನದ ಬಾಕಿ ಮೊತ್ತವನ್ನು ಪಾವತಿಸಲು ಬದ್ಧರಾಗಿರತಕ್ಕದ್ದು. **16.** ಅರ್ಜಿದಾರರು ಸಲ್ಲಿಸುವ ಯಾವುದೇ ಮಾಹಿತಿಗಳು ತಪ್ಪು ಎಂದು ಕಂಡುಬಂದಲ್ಲಿ ಸದರಿಯವರ ವಿರುದ್ಧ ನಿಯಮ 21 ರನ್ವಯ ನಿಯಮಾನುಸಾರ ಕಾನೂನು ಕ್ರಮ ವಹಿಸಲಾಗುವುದು. **17.** ಸದರಿ ನಿವೇಶನಗಳ ಹಂಚಿಕೆ ಸಂಬಂಧ ಅರ್ಜಿದಾರರು ಸಲ್ಲಿಸಬೇಕಾದ III ನೇ ನಮೂನೆಯ ಅರ್ಜಿಗಾಗಿ ಹಾಗೂ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಖುದ್ದಾಗಿ ಬಂದು ಅಥವಾ ಈ ಸಮಿತಿ ಕಛೇರಿಯ **ದೂರವಾಣಿ ಸಂಖ್ಯೆ 08373–266456** ನ್ನು ಸಂಪರ್ಕಿಸುವುದು ಅಥವಾ ಕೃಷಿ ಮಾರಾಟ ಇಲಾಖೆಯ ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ **“ಕೃಷಿ ಮಾರಾಟ ವಾಹಿನಿ”** ವೆಬ್ ಸೈಟ್ https://www.krishimaratavahini.kar.nic.in ಮುಖಾಂತರ ಮಾಹಿತಿಯನ್ನು ಪಡೆಯುವುದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ರಾಣೇಬೆನ್ನೂರು.

ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ರಾಣೇಬೆನ್ನೂರು.

DIPR/HVR/DIPO351/2024-25

ವಿಶ್ವ ಚಾಂಪಿಯನ್‌ಷಿಪ್ ಫೈನಲ್: 23 ನಡೆ ಕಂಡ ಎರಡನೇ ಪಂದ್ಯ

ಆಟ ಡ್ರಾ: ಗುಕೇಶ್ ಚೇತರಿಕೆ

ಎರಡನೇ ಪಂದ್ಯವನ್ನು 'ಡ್ರಾ' ಮಾಡಿಕೊಂಡ ಗುಕೇಶ್ ಮತ್ತು ಲಿರೆನ್ ಫಿಡೆ ವೆಬ್‌ಸೈಟ್ ಚಿತ್ರ

ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಗುಕೇಶ್ ಮತ್ತು ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಎರಡನೇ ಪಂದ್ಯ ಮಂಗಳವಾರ ಡ್ರಾ ಆಯಿತು. ಪಂದ್ಯದಲ್ಲಿ ಅಂಥ ಏರುಪೇರುಗಳೇನೂ ಕಾಣಲಿಲ್ಲ.

ಪಂದ್ಯದ 23ನೇ ನಡೆಯ ನಂತರ 'ನಡೆಗಳ ಪುನರಾವರ್ತನೆ'ಯಿಂದ (ತ್ರೀ ಫೋಲ್ಡ್ ರಿಪಿಟೇಶನ್) 'ಡ್ರಾ' ಆಯಿತು. ಚೆಸ್ ನಿಯಮಗಳ ಪ್ರಕಾರ ಆಟಗಾರರು ಮೂರು ಬಾರಿ ಒಂದೇ ರೀತಿಯ ನಡೆಗಳನ್ನಿರಿಸಿದರೆ ಅದು ಡ್ರಾ ಆದಂತೆ.

ಸೋಮವಾರ ನಡೆದ ಮೊದಲ ಪಂದ್ಯದಲ್ಲಿ ಜಯಗಳಿಸಿದ್ದ ಚೀನಾದ ಆಟಗಾರ ಈಗ 1.5–0.5 ಅಂಕಗಳಿಂದ ಮುನ್ನಡೆ ಸಾಧಿಸಿದ್ದಾರೆ.

ಸೆಂಟೊಸಾ ದ್ವೀಪದ ಐಷಾರಾಮಿ ರೆಸಾರ್ಟ್‌ನಲ್ಲಿ ಈ ಚಾಂಪಿಯನ್‌ಷಿಪ್ ನಡೆಯುತ್ತಿದ್ದು, ಬುಧವಾರ ಮೂರನೇ ಪಂದ್ಯ ನಿಗದಿಯಾಗಿದೆ. ಇದರಲ್ಲಿ ಬಿಳಿ ಕಾಯಿಗಳಲ್ಲಿ ಆಡುವ ಸರದಿ ಗುಕೇಶ್ ಅವರದ್ದು.

ಮಂಗಳವಾರ ಕಪ್ಪು ಕಾಯಿಗಳಲ್ಲಿ ಆಡಿದ್ದ ಗುಕೇಶ್‌ಗೆ ಎರಡನೇ ಪಂದ್ಯದ 'ಡ್ರಾ' ಮೊದಲ ಸುತ್ತಿನ ಹಿನ್ನಡೆಯಿಂದ ಸ್ವಲ್ಪ ಸುಧಾರಿಸಿಕೊಳ್ಳಲು ನೆರವಾಯಿತು. ಬಿಳಿ ಕಾಯಿಗಳಲ್ಲಿ ಆಡಿದ ಲಿರೆನ್ ಅವರಿಗೆ ಆಟದಲ್ಲಿ ಹೆಚ್ಚಿನದೇನನ್ನೂ ಸಾಧಿಸಲಾಗಲಿಲ್ಲ. ಇಬ್ಬರೂ ರಿಸ್ಕ್ ತೆಗೆದುಕೊಳ್ಳಲು ಹೋಗದೇ, ಸುರಕ್ಷಿತ ಆಟಕ್ಕೆ ಒತ್ತು ನೀಡಿದಂತೆ ಕಂಡಿತು.

'ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಪ್ಪು ಕಾಯಿಗಳಲ್ಲಿ ಆಡಿ ಡ್ರಾ ಮಾಡಿಕೊಳ್ಳುವುದು ಸ್ವಲ್ಪ ಸಮಾಧಾನದ ವಿಷಯ. ನಮ್ಮ ಮುಂದೆ ಕ್ರಮಿಸಲು ದೀರ್ಘ ಹಾದಿಯಿದೆ' ಎಂದು 18 ವರ್ಷ ವಯಸ್ಸಿನ ಗುಕೇಶ್ ಪ್ರತಿಕ್ರಿಯಿಸಿದರು. ಸೋಮವಾರದ ಪಂದ್ಯದಲ್ಲಿ ಯಾವುದೂ ಗುಕೇಶ್ ಯೋಜನೆಯಂತೆ ನಡೆದಿರಲಿಲ್ಲ.

'ನಾನು ಮುಂದಿನ ಒಂದು ಪಂದ್ಯದ ಕಡೆಗಷ್ಟೇ ನನ್ನ ಗಮನ ಕೇಂದ್ರೀಕರಿಸುತ್ತೇನೆ. ಮುಂದಿನ ಸುತ್ತುಗಳು ನಾನು ಅಂದುಕೊಂಡ ಹಾಗೆ ಸಾಗಹುದೆಂಬ ವಿಶ್ವಾಸವಿದೆ' ಎಂದೂ ಚೆನ್ನೈ ಆಟಗಾರ ಹೇಳಿದರು.

'ಎರಡನೇ ಸುತ್ತಿನಲ್ಲಿ ಆಡಿದ ರೀತಿ ಸಂತೃಪ್ತಿ ತಂದಿದೆ. ಮೊದಲ ಸುತ್ತಿನಲ್ಲಿ ನಾನು ಹೊಸದಾದ ತಂತ್ರದೊಂದಿಗೆ ಆಡಿದ್ದೆ. ಆದಕ್ಕೆ ಸಾಕಷ್ಟು ಜ್ಞಾಪಕ ಶಕ್ತಿ ಇರಬೇಕಾಗುತ್ತದೆ. ಇಂದಿನ ಆಟಕ್ಕೂ ಸಾಕಷ್ಟು ತಯಾರಿ ನಡೆಸಿದ್ದೆ. ಸ್ವಲ್ಪ ವಿಭಿನ್ನ ನಡೆಯನ್ನೂ (1. e4) ಇರಿಸಿದ್ದೆ' ಎಂದು 32 ವರ್ಷ ವಯಸ್ಸಿನ ಲಿರೆನ್ ಹೇಳಿದರು.

₹21 ಕೋಟಿ ಬಹುಮಾನ ಮೊತ್ತ ಹೊಂದಿರುವ ಈ ಚಾಂಪಿಯನ್‌ಷಿಪ್ ಫೈನಲ್ ಪಂದ್ಯ 14 ಆಟಗಳನ್ನು ಹೊಂದಿದೆ. ಮೊದಲು 7.5 ಅಂಕ ತಲುಪುವ ಆಟಗಾರ ವಿಶ್ವ ಚಾಂಪಿಯನ್ ಪಟ್ಟಕ್ಕೇರಲಿದ್ದಾರೆ.

ವಿಶ್ವನಾಥನ್ ಆನಂದ್ ನಂತರ ಭಾರತದ ಎರಡನೇ ವಿಶ್ವ ಚಾಂಪಿಯನ್ ಆಗುವ ಯತ್ನದಲ್ಲಿ ಗುಕೇಶ್ ಇದ್ದಾರೆ. ಆನಂದ್ ಐದು ಬಾರಿ (2000– 213 ಅವಧಿಯಲ್ಲಿ) ವಿಶ್ವ ಚಾಂಪಿಯನ್ ಆಗಿದ್ದರು.

ವೆಸ್ಟ್ ಇಂಡೀಸ್‌ಗೆ ಭರ್ಜರಿ ಜಯ

ನಾರ್ತ್ ಸೌಂಡ್ (ಆ್ಯಂಟೀಗಾ), (ಎಎಫ್‌ಪಿ): ಆತಿಥೇಯ ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಅಂತಿಮ ದಿನವಾದ ಮಂಗಳವಾರ ಬಾಂಗ್ಲಾದೇಶ ತಂಡವನ್ನು 201 ರನ್‌ಗಳಿಂದ ಮಣಿಸಿತು.

ಗೆಲುವಿಗೆ 334 ರನ್‌ಗಳ ಗುರಿ ಎದುರಿಸಿದ ಬಾಂಗ್ಲಾದೇಶ (ಸೋಮವಾರ: 7 ವಿಕೆಟ್‌ಗೆ 190) ನಾಲ್ಕನೇ ದಿನವೇ ಸೋಲಿನ ಸುಳಿಯಲ್ಲಿತ್ತು. ಕೊನೆಯ ದಿನದಾಟ ಮುಂದುವರಿಸಿ 138 ರನ್‌ಗಳಿಗೆ ಆಲೌಟ್ ಆಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 9 ವಿಕೆಟ್‌ಗೆ 459 ಡಿ; ಬಾಂಗ್ಲಾದೇಶ: 9 ವಿಕೆಟ್‌ಗೆ 269 ಡಿ; ಎರಡನೇ ಇನಿಂಗ್ಸ್: ವೆಸ್ಟ್ ಇಂಡೀಸ್: 152; ಬಾಂಗ್ಲಾದೇಶ: 38 ಓವರುಗಳಲ್ಲಿ 132 (ಮೆಹಿದಿ ಹಸನ್ ಮಿರಾಜ್ 45, ಜೇಕರ್ ಅಲಿ 31; ಕೇಮಾರ್ ರೋಚ್ 20ಕ್ಕೆ3). ಪಂದ್ಯದ ಆಟಗಾರ: ಜಸ್ಟೀನ್ ಗ್ರೀವ್ಸ್



ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಐಪಿಎಲ್‌ನ ಅತ್ಯಂತ ದುಬಾರಿ ಖರೀದಿಯಾಗಿದ್ದಾರೆ!

ಪಂತ್‌ಗೆ ಜಿಂದಾಲ್ ಭಾವುಕ ಬೀಳ್ಕೊಡುಗೆ

ರಿಷಭ್ ಪಂತ್ ಮತ್ತು ಪಾರ್ಥ್ ಜಿಂದಾಲ್

ನವದೆಹಲಿ (ಪಿಟಿಐ): 'ರಿಷಭ್, ನೀವು ಬೇರೆ ತಂಡಕ್ಕೆ ಹೋಗುವುದನ್ನು ನೋಡಲು ಬಹಳ ದುಃಖವಾಗುತ್ತಿದೆ. ಇದು ನನಗೆ ಬಹಳ ಭಾವನಾತ್ಮಕವಾದ ಸಂಗತಿಯಾಗಿದೆ. ಆದರೆ ನೀವು ಯಾವಾಗಲೂ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಂಗವಾಗಿರುತ್ತೀರಿ. ಮುಂದೊಂದು ದಿನ ನಾವು ಮತ್ತೆ ಒಂದಾಗಬಹುದು' –

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸಹಮಾಲೀಕ ಪಾರ್ಥ್ ಜಿಂದಾಲ್ ಅವರು ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರಿಗೆ ಬರೆದಿರುವ ಭಾವನಾತ್ಮಕವಾದ 'ಬೀಳ್ಕೊಡುಗೆ ಪತ್ರ'ದ ಅಂಶ ಇದು.

ಐಪಿಎಲ್ ಮೆಗಾ ಬಿಡ್‌ನಲ್ಲಿ ರಿಷಭ್ ಅವರು ದಾಖಲೆಯ ₹27 ಕೋಟಿ ಮೌಲ್ಯ ಪಡೆದು ಲಖನೌ ಸೂಪರ್ ಜೈಂಟ್ಸ್ ಸೇರ್ಪಡೆಯಾದರು.

ರಿಷಭ್ ಅವರು ಈ ಮೊದಲಿನ ಆವೃತ್ತಿಗಳಲ್ಲಿ ಡೆಲ್ಲಿ ತಂಡದ ನಾಯಕರಾಗಿದ್ದರು. ಈಚೆಗೆ ಮೆಗಾ ಬಿಡ್‌ಗಾಗಿ ಅವರನ್ನು ಡೆಲ್ಲಿ ತಂಡವು ಬಿಡುಗಡೆ ಮಾಡಿತ್ತು. ಬಿಡ್‌ನಲ್ಲಿ ಅವರನ್ನು ಸೆಳೆದುಕೊಳ್ಳಲು ಬಹಳಷ್ಟು ಪೈಪೋಟಿ ನಡೆಸಿತು.

ಈ ಕುರಿತು ಭಾವುಕರಾಗಿರುವ ಪಾರ್ಥ್, 'ರಿಷಭ್, ನೀವು ಯಾವಾಗಲೂ ನನಗೆ ತಮ್ಮನಿದ್ದಂತೆ. ತಮ್ಮ ಮೇಲೆ ಅಪಾರ ಪ್ರೀತಿಯಿದೆ. ತಮ್ಮನ್ನು ನಮ್ಮ ಕುಟುಂಬದ ಸದಸ್ಯನಂತೆ ಪರಿಗಣಿಸಿದ್ದೇನೆ. ಅದೇ ರೀತಿ ನೋಡಿಕೊಳ್ಳಲು ಎಲ್ಲ ರೀತಿಯಿಂದಲೂ ಪ್ರಯತ್ನ ಮಾಡಿದ್ದೇನೆ. ಅದಕ್ಕಾಗಿ ತಾವು ಸಂತಸಪಟ್ಟಿರುತ್ತೀರಿ ಎಂದು ಭಾವಿಸುತ್ತೇನೆ' ಎಂದು ಹೇಳಿದ್ದಾರೆ.

'ಧನ್ಯವಾದಗಳು ರಿಷಭ್. ನಾವು ನಿಮ್ಮನ್ನು ಯಾವಾಗಲೂ ಪ್ರೀತಿಸುತ್ತೇವೆ ಎಂಬುದನ್ನು ನೆನಪಿಟ್ಟುಕೊಳ್ಳಿ. ಚೆನ್ನಾಗಿ ಆಡಿ. ಇಡೀ ಜಗತ್ತೇ ನಿಮ್ಮ ಪದತಲಕ್ಕೆ ಬಾಗಲಿದೆ. ಡೆಲ್ಲಿ ಕ್ಯಾಪಿಟಲ್ಸ್ ಪರವಾಗಿ ತಮಗೆ ಶುಭಕಾಮನೆಗಳು. ಎಲ್ಲಕ್ಕಿಂತ ಮುಖ್ಯವಾಗಿ ನೀವು ಡಿ.ಸಿ. ಮುಂದೆ ಆಡುವಾಗ ನಾನು ನಿಮ್ಮನ್ನೇ ಹುರಿದುಂಬಿಸುತ್ತೇನೆ ಮತ್ತು ನಿಮಗೆ ಶ್ರೇಯಸ್ಸನ್ನು ಬಯಸುವೆ' ಎಂದು ಜಿಂದಾಲ್ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ರಿಷಭ್, 'ಅಭಿನಂದನೆಗಳು ಅಣ್ಣಾ, ನೀವು ವ್ಯಕ್ತಪಡಿಸಿರುವ ಭಾವನೆಗಳು ನನ್ನವೂ ಆಗಿವೆ. ಇದು ನನಗೆ ಬಹಳ ಮಹತ್ವದ್ದು' ಎಂದಿದ್ದಾರೆ.

ರಿಷಭ್ ತಮ್ಮ ವಿದಾಯ ಪತ್ರದಲ್ಲಿ, 'ಈ ಪಯಣವು ಅರ್ಥಪೂರ್ಣವಾಗಿತ್ತು. ಡೆಲ್ಲಿ ಕ್ಯಾಪಿಟಲ್ಸ್‌ನಲ್ಲಿ ನನ್ನ ಪಯಣವು ಅಮೋಘವಾಗಿತ್ತು. ನಾನು ಊಹೆಯೂ ಮಾಡದಷ್ಟು ಎತ್ತರ ಬೆಳೆಯಲು ಇಲ್ಲಿ ಸಾಧ್ಯವಾಯಿತು. ತಂಡಕ್ಕೆ ಸೇರಿದಾಗ ನಾನಿನ್ನೂ ಚಿಕ್ಕವಯಸ್ಸಿನವನಾಗಿದ್ದೆ. ಕಳೆದ ಒಂಬತ್ತು ವರ್ಷಗಳಲ್ಲಿ ತಂಡ ಮತ್ತು ನಾನು ಜೊತೆಜೊತೆಗೆ ಬೆಳೆದೆವು' ಎಂದು ತಿಳಿಸಿದ್ದಾರೆ.

ಬಿಎಫ್‌ಸಿ–ಮೊಹಮಡನ್ಸ್ ಪಂದ್ಯ ಇಂದು

ಕೋಲ್ಕತ್ತ (ಪಿಟಿಐ): ಮೊಹಮಡನ್ ಸ್ಪೋರ್ಟಿಂಗ್ ಕ್ಲಬ್, ಬುಧವಾರ ನಡೆಯುವ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಪ್ರಬಲ ಬೆಂಗಳೂರು ಎಫ್‌ಸಿ ತಂಡವನ್ನು ಎದುರಿಸಲಿದ್ದು, ತವರಿನಲ್ಲಿ ಈ ಬಾರಿ ಮೊದಲ ಜಯ ದಾಖಲಿಸಲು ಯತ್ನಿಸಲಿದೆ.

ಮೊದಲ ಬಾರಿ ಐಎಸ್‌ಎಲ್‌ನಲ್ಲಿ ಆಡುತ್ತಿರುವ ಮೊಹಮಡನ್ ತಂಡ ಈಗ 13 ತಂಡಗಳ ಲೀಗ್‌ನಲ್ಲಿ 12ನೇ ಸ್ಥಾನದಲ್ಲಿದೆ. ಆಡಿರುವ ಏಳು ಪಂದ್ಯಗಳಲ್ಲಿ ಒಂದನ್ನು ಮಾತ್ರ ಗೆದ್ದು, ನಾಲ್ಕರಲ್ಲಿ ಸೋತಿದ್ದು, ಎರಡನ್ನು ಡ್ರಾ ಮಾಡಿಕೊಂಡಿದೆ. ಅದರ ಖಾತೆಯಲ್ಲಿ ಬರೇ 5 ಪಾಯಿಂಟ್ಸ್ ಇದೆ.

ಇನ್ನೊಂದು ಕಡೆ ಬಿಎಫ್‌ಸಿ ಎಂಟು ಪಂದ್ಯಗಳಿಂದ 17 ಪಾಯಿಂಟ್ಸ್ ಕಲೆಹಾಕಿದ್ದು ಎರಡನೇ ಸ್ಥಾನದಲ್ಲಿದೆ. ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಕೂಡ 8 ಪಂದ್ಯಗಳಿಂದ ಇಷ್ಟೇ ಪಾಯಿಂಟ್ಸ್ ಗಳಿಸಿದರೂ ಗೋಲು ಸರಾಸರಿಯಲ್ಲಿ ಮುಂದಿದೆ. ಹೀಗಾಗಿ ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಲು ಬಿಎಫ್‌ಸಿ ಎಲ್ಲ ಯತ್ನ ನಡೆಸಲಿದೆ.

ಹಿಂದೆ ಸರಿದ ಸಾತ್ವಿಕ್– ಚಿರಾಗ್

ಲಖನೌ (ಪಿಟಿಐ): ಭಾರತದ ಅಗ್ರ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಸೈಯ್ಯದ್ ಮೋದಿ ಇಂಟರ್‌ನ್ಯಾಷನಲ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಿಂದ ಮಂಗಳವಾರ ಹಿಂದೆಸರಿದರು.

ಈ ಜೋಡಿ ಪ್ರಶಸ್ತಿಗೆ ನೆಚ್ಚಿನ ತಂಡವಾಗಿತ್ತು. ಪ್ಯಾರಿಸ್ ಒಲಿಂಪಿಕ್ಸ್ ನಂತರ ಸಾತ್ವಿಕ್‌ಗೆ ಭುಜದ ನೋವು ಕಾಡಿತ್ತು. ಹೀಗಾಗಿ ಅವರು ಸ್ಪರ್ಧಾತ್ಮಕ ಬ್ಯಾಡ್ಮಿಂಟನ್‌ನಿಂದ ದೂರವಿದ್ದರು. ಕಳೆದ ವಾರ ಚೀನಾ ಮಾಸ್ಟರ್ಸ್ ಟೂರ್ನಿ ಮೂಲಕ ಪುನರಾಗಮನ ಮಾಡಿದ್ದು ಸೆಮಿಫೈನಲ್ ತಲುಪಿದ್ದರು.

'ಸಾತ್ವಿಕ್ ಪೂರ್ಣವಾಗಿ ಚೇತರಿಸಿಲ್ಲದ ಕಾರಣ ಈ ಜೋಡಿ ಆಡುತ್ತಿಲ್ಲ' ಎಂದು ಅವರಿಗೆ ತರಬೇತಿ ನೀಡುತ್ತಿದ್ದ ಬಿ.ಸುಮೀತ್ ರೆಡ್ಡಿ 'ಪಿಟಿಐ'ಗೆ ತಿಳಿಸಿದರು.

ವಿಶ್ವದ ಮಾಜಿ ಅಗ್ರ ಕ್ರಮಾಂಕದ ಆಟಗಾರರಾಗಿದ್ದ ಸಾತ್ವಿಕ್–ಚಿರಾಗ್ ಜೋಡಿಗೆ ಇಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿತ್ತು.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ಮಯಂಕ್–ಉನದ್ಕತ್ ಮುಖಾಮುಖಿ

ಕರ್ನಾಟಕ–ಸೌರಾಷ್ಟ್ರ ಹಣಾಹಣಿ ಇಂದು

ಮಯಾಂಕ್ ಅಗರ್ವಾಲ್

ಜಯದೇವ್ ಉನದ್ಕತ್

ಇಂದೋರ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮತ್ತೊಂದು ಸವಾಲಿಗೆ ಸಿದ್ಧವಾಗಿದೆ.

ಬುಧವಾರ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯಲಿರುವ ಬಿ ಗುಂಪಿನ ಮೂರನೇ ಪಂದ್ಯದಲ್ಲಿ ಕರ್ನಾಟಕ ತಂಡವು ಜಯದೇವ್ ಉನದ್ಕತ್ ನಾಯಕತ್ವದ ಸೌರಾಷ್ಟ್ರವನ್ನು ಎದುರಿಸಲಿದೆ. ಈ ಸುತ್ತಿನ ಮೊದಲ ಪಂದ್ಯದಲ್ಲಿ ಉತ್ತರಾಖಂಡದ ಎದುರು ಸೋತಿದ್ದ ಮಯಂಕ್ ಬಳಗ, ಎರಡನೇಯದ್ದರಲ್ಲಿ ತ್ರಿಪುರ ವಿರುದ್ಧ ಜಯಿಸಿತ್ತು. ಇದರಿಂದಾಗಿ ಆತ್ಮವಿಶ್ವಾಸದಲ್ಲಿದೆ.

ಆದರೆ ಹಿಂದಿನ ಎರಡು ತಂಡಗಳಿಗಿಂತಲೂ ಸೌರಾಷ್ಟ್ರ ಬಲಿಷ್ಠವಾಗಿದೆ. ಕಠಿಣ ಪೈಪೋಟಿಯೊಡ್ಡುವ ಸಾಮರ್ಥ್ಯ ಆ ತಂಡಕ್ಕಿದೆ. ಕರ್ನಾಟಕ ತಂಡದ ಬ್ಯಾಟಿಂಗ್ ವಿಭಾಗವು ಉತ್ತಮವಾಗಿದೆ. ಮಯಂಕ್, ಆರ್. ಸ್ಮರಣ್, ಎಲ್.ಆರ್. ಚೇತನ್, ಅಭಿನವ್ ಮನೋಹರ್ ಮತ್ತು ಕೆ.ಎಲ್. ಶ್ರೀಜಿತ್ ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಮನೀಷ್ ಪಾಂಡೆ ಅವರಿಗೆ ವಿಶ್ರಾಂತಿ ನೀಡಲಾಗಿತ್ತು.

ಆದರೆ ತಂಡಕ್ಕೆ ಬೌಲಿಂಗ್‌ನದ್ದೇ ಚಿಂತೆ. ಎರಡೂ ಪಂದ್ಯಗಳಲ್ಲಿ ಅನುಭವಿ ವಿ. ಕೌಶಿಕ್, ವೈಶಾಖ ವಿಜಯಕುಮಾರ್ ಮತ್ತು ಶ್ರೇಯಸ್ ಗೋಪಾಲ್ ಅವರೂ ದುಬಾರಿಯಾಗಿದ್ದಾರೆ. ಮನ್ವಂತ್ ಕುಮಾರ್ ಮತ್ತು ಶುಭಾಂಗ್ ಹೆಗಡೆ ಅವರು ಮಾತ್ರ ಭರವಸೆಯ ಆಟವಾಡಿದ್ದಾರೆ. ಈ ಪಂದ್ಯದಲ್ಲಿ ಸುಧಾರಿತವಾದ ಆಟವಾಡಬೇಕಾದ ಒತ್ತಡ ಬೌಲಿಂಗ್ ಪಡೆಗೆ ಇದೆ. ಸೌರಾಷ್ಟ್ರ ತಂಡದಲ್ಲಿ ಹರ್ವಿಕ್ ದೇಸಾಯಿ, ತರಂಗ್ ಗೊಹೆಲ್, ವಿಶ್ವರಾಜ್ ಜಡೇಜ, ಸಮರ್ ಗಜ್ಜರ್, ಪ್ರೇರಕ್ ಮಂಕಡ್, ಜೈ ಗೋಹಿಲ್, ಚಿರಾಗ್ ಜಾನಿ ಅವರು ಬೌಲರ್‌ಗಳಿಗೆ ಸವಾಲೊಡ್ಡಬಲ್ಲವರು.

ನಾಯಕ ಉನದ್ಕತ್ ಹಾಗೂ ಎಡಗೈ ಸ್ಪಿನ್ನರ್ ಧರ್ಮೇಂದ್ರಸಿಂಹಜಿ ಜಡೇಜ ಅವರು ಪ್ರಮುಖ ಬೌಲರ್‌ಗಳಾಗಿದ್ದಾರೆ. ಸೌರಾಷ್ಟ್ರ ತಂಡವೂ ಎರಡು ಪಂದ್ಯಗಳನ್ನು ಆಡಿದೆ. ಮೊದಲ ಪಂದ್ಯದಲ್ಲಿ ಸಿಕ್ಕಿಂ ವಿರುದ್ಧ ಗೆದ್ದಿತ್ತು. ನಂತರ ಗುಜರಾತ್ ಎದುರಿನ ಪಂದ್ಯದಲ್ಲಿ ಸೋತಿತ್ತು.

ನೆಟ್ ರನ್‌ರೇಟ್‌ನಲ್ಲಿ ಕರ್ನಾಟಕಕ್ಕಿಂತ ಉತ್ತಮವಾಗಿರುವ ಸೌರಾಷ್ಟ್ರ ಮೂರನೇ ಸ್ಥಾನದಲ್ಲಿ, ಮಯಂಕ್ ಬಳಗ ನಾಲ್ಕನೇ ಸ್ಥಾನದಲ್ಲಿದೆ. ಹೀಗಾಗಿ ಉಭಯ ತಂಡ ಗಳಿಗೂ ಗೆಲುವು ಮಹತ್ವದ್ದಾಗಿದ್ದು, ರೋಚಕ ಪೈಪೋಟಿ ನಡೆಯುವ ಸಾಧ್ಯತೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 11

ತವರಿಗೆ ಮರಳಿದ ಗಂಭೀರ್

2ನೇ ಟೆಸ್ಟ್ ಪಂದ್ಯಕ್ಕೂ ಮೊದಲೇ ವಾಪಸು ಆಸ್ಟ್ರೇಲಿಯಾಕ್ಕೆ

ಗಂಭೀರ್

ಪರ್ತ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು 'ವೈಯಕ್ತಿಕ ತುರ್ತು' ಕಾರಣಗಳಿಂದ ತವರಿಗೆ ಮರಳಿದ್ದಾರೆ. ಡಿಸೆಂಬರ್ 6ರಂದು ಅಡಿಲೇಡ್‌ನಲ್ಲಿ ಎರಡನೇ ಟೆಸ್ಟ್ ಆರಂಭವಾಗಲಿದ್ದು, ಅದಕ್ಕೆ ಮೊದಲೇ ಅವರು ತಂಡವನ್ನು ಮರಳಿ ಸೇರಿಕೊಳ್ಳಲಿದ್ದಾರೆ.

'ನವೆಂಬರ್ 30ರಿಂದ ಪ್ರೈಮ್ ಮಿನಿಸ್ಟರ್ಸ್ ಇಲೆವೆನ್ ವಿರುದ್ಧ ಆರಂಭವಾಗುವ ಎರಡು ದಿನಗಳ ಸಿದ್ಧತಾ ಪಂದ್ಯಕ್ಕೆ (ಪಿಂಕ್‌ಬಾಲ್) ಅವರು ತಂಡದ ಜೊತೆ ಇರುವುದಿಲ್ಲ.

ಅವರು ಕುಟುಂಬದ ಜೊತೆ ಮಂಗಳವಾರ ಬೆಳಗಿನ ಜಾವ ನವದೆಹಲಿಗೆ ತೆರಳಿದ್ದಾರೆ. ಅನಿವಾರ್ಯವಾಗಿರುವ ಕಾರಣ ತುರ್ತಾಗಿ ಹೋಗಿದ್ದು, ಎರಡನೇ ಟೆಸ್ಟ್ ಮೊದಲೇ ವಾಪಸು ಬರಲಿದ್ದಾರೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಭಾರತ ಮತ್ತು ಪ್ರೈಮ್ ಮಿನಿಸ್ಟರ್ ಇಲೆವೆನ್ ನಡುವೆ ಪಿಂಕ್ ಬಾಲ್ ಅಭ್ಯಾಸ ಪಂದ್ಯ ನಡೆಯಲಿದೆ. ಎರಡನೇ ಟೆಸ್ಟ್ ಹಗಲು ರಾತ್ರಿ ಪಂದ್ಯವಾಗಿರುವ ಕಾರಣ ಈ ಸಿದ್ಧತಾ ಪಂದ್ಯ ಮಹತ್ವದ್ದಾಗಿದೆ.

ಪ್ರೈಮ್ ಮಿನಿಸ್ಟರ್ಸ್ ಇಲೆವೆನ್ ತಡವನ್ನು ಆಲ್‌ರೌಂಡರ್ ಜಾಕ್ ಎಡ್ವರ್ಡ್ಸ್ ಮುನ್ನಡೆಸಲಿದ್ದು, ತಂಡ ಬಹುತೇಕ ಯುವಮುಖಗಳನ್ನು ಒಳಗೊಂಡಿದೆ. ಸ್ಕಾಟ್ ಬೋಲ್ಯಾಂಡ್, ಮ್ಯಾಥ್ಯೂ ರೆನ್ಷಾ ಸೇರಿದ ಟೆಸ್ಟ್ ಆಡಿದ ಕೆಲವರಷ್ಟೇ ಆ ತಂಡದಲ್ಲಿದ್ದಾರೆ.

ಪಂದ್ಯದ ನಿಯಮಗಳನ್ನು ಎರಡು ತಂಡಗಳು ನಿರ್ಧರಿಸಲಿವೆ. ಎಲ್ಲ ಆಟಗಾರರಿಗೆ ಬೌಲಿಂಗ್ ಮತ್ತು ಬ್ಯಾಟಿಂಗ್ ಅವಕಾಶ ದೊರೆಯಲಿದೆ.

ಆಸ್ಟ್ರೇಲಿಯಾ ತಂಡದಲ್ಲಿ ಬದಲಾವಣೆ ಇಲ್ಲ

ಪರ್ತ್ (ಪಿಟಿಐ): ಬಾರ್ಡರ್ ಗಾವಸ್ಕರ್ ಟ್ರೋಫಿ ಸರಣಿಯ ಮೊದಲ ಟೆಸ್ಟ್‌ನಲ್ಲಿ ಭಾರಿ ಸೋಲು ಕಂಡ ತಂಡವನ್ನೇ ಎರಡನೇ ಟೆಸ್ಟ್‌ಗೆ ಉಳಿಸಿಕೊಳ್ಳಲು ಆಸ್ಟ್ರೇಲಿಯಾ ನಿರ್ಧರಿಸಿದೆ. ಆಲ್‌ರೌಂಡರ್ ಮಿಚೆಲ್ ಮಾರ್ಷ್ ಅವರ ಬೌಲಿಂಗ್ ಫಿಟ್ನೆಸ್ ಬಗ್ಗೆ ಮಾತ್ರ ಸ್ವಲ್ಪ ಕಳವಳವಿದೆ ಎಂದು ತಂಡದ ಕೋಚ್ ಹಾಗೂ ಆಯ್ಕೆಗಾರ ಆ್ಯಂಡ್ರೂ ಮೆಕ್‌ಡೊನಾಲ್ಡ್ ತಿಳಿಸಿದ್ದಾರೆ.

ಭಾರಿ ಸೋಲು ಕಂಡರೂ, ತಂಡದ ಮನೋಬಲ ಗಟ್ಟಿಯಾಗಿಯೇ ಇದೆ ಎಂದು ಮೆಕ್‌ಡೊನಾಲ್ಡ್ ಹೇಳಿದ್ದಾರೆ.

ಆಸ್ಟ್ರೇಲಿಯಾ ತಂಡ ಹೆಚ್ಚುವರಿ ತಾಲೀಮು ಪಡೆಯಲು ನಿಗದಿಗಿಂತ ಒಂದು ದಿನ ಮೊದಲೇ ಅಡಿಲೇಡ್‌ಗೆ ಹೊರಟಿತು. ಅಡಿಲೇಡ್ ಟೆಸ್ಟ್ ಪಿಂಕ್‌ಬಾಲ್ (ಹಗಲು–ರಾತ್ರಿ) ಪಂದ್ಯವಾಗಿದ್ದು ಡಿಸೆಂಬರ್ 6ರಂದು ಶುರುವಾಗಲಿದೆ.

ಪರಿಕ್ರಮ ಚಾಂಪಿಯನ್ಸ್ ಲೀಗ್ ನಾಳೆಯಿಂದ

ಬೆಂಗಳೂರು: ಪರಿಕ್ರಮ ಹ್ಯೂಮಾನಿಟಿ ಫೌಂಡೇಷನ್ ಆಶ್ರಯದಲ್ಲಿ 12ನೇ ವರ್ಷದ ಪರಿಕ್ರಮ ಚಾಂಪಿಯನ್ಸ್ ಲೀಗ್ ಅಂತರ ಶಾಲಾ (16 ವರ್ಷದೊಳಗಿನವರ) ಫುಟ್‌ಬಾಲ್ ಟೂರ್ನಿ ಇದೇ 28 ರಿಂದ 30ರರೆಗೆ ಅಶೋಕನಗರದ ರಾಜ್ಯ ಫುಟ್‌ಬಾಲ್ ಸಂಸ್ಥೆ ನಡೆಯಲಿದೆ. ಈ ಬಾರಿ ಹೊರರಾಜ್ಯಗಳ ಮೂರು ತಂಡಗಳು ಕಣದಲ್ಲಿವೆ.

ಈ ಸಲ ನಾಕೌಟ್ ಮಾದರಿಯಲ್ಲಿ ನಡೆಯಲಿರುವ ಟೂರ್ನಿಯಲ್ಲಿ 16 ತಂಡಗಳು ಭಾಗವಹಿಸಲಿದ್ದು, ನೇರವಾಗಿ ಪ್ರಿಕ್ವಾರ್ಟರ್‌ಫೈನಲ್ಸ್ ನಡೆಯಲಿವೆ. ಅಸ್ಸಾಮಿನ ಹೈಟೆ ಮೆಮೋರಿಯಲ್ ಸ್ಕೂಲ್, ಗೋವಾದ ಸೇಂಟ್ ಆ್ಯನ್ಸ್, ರಾಜಸ್ಥಾನ ಉದಯಪುರದ ಸ್ಟೆಪ್ ಬೈ ಸ್ಟೆಪ್ ತಂಡಗಳು ಜೊತೆ ರಾಜ್ಯದ 13 ತಂಡಗಳು ಭಾಗವಹಿಸುತ್ತಿವೆ ಎಂದು ಶುಕ್ಲಾ ಬೋಸ್ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಇದೇ ವೇಳೆ ಟ್ರೋಫಿ ಮತ್ತು ಜರ್ಸಿ ಅನಾವರಣಗೊಳಿಸಲಾಯಿತು.

ರಾಜ್ಯ ಫುಟ್‌ಬಾಲ್ ಸಂಸ್ಥೆ ಉಪ ಮಹಾ ಕಾರ್ಯದರ್ಶಿ ಅಸ್ಲಂ ಖಾನ್ ಮಾತನಾಡಿ, 'ಮುಂದಿನ ವರ್ಷ ಸ್ಯಾಫ್ ರಾಷ್ಟ್ರಗಳ ಯಾವುದಾದರೊಂದು ತಂಡವನ್ನು ಈ ಟೂರ್ನಿಯಲ್ಲಿ ಆಡಿಸುವ ವ್ಯವಸ್ಥೆ ಮಾಡಿಸುತ್ತೇನೆ ಎಂದರು.

ಆರ್‌ಸಿಬಿ ಹಿಂದಿ ಖಾತೆ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳು

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಹಿಂದಿ ಭಾಷೆಯಲ್ಲಿ ಪೇಜ್ ಆರಂಭಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದೆ.

'ಈ ಪುಟವನ್ನು ಅಳಿಸಿ ಹಾಕಿ, ಇಲ್ಲದಿದ್ದರೆ ನಾವು ನಿಮ್ಮನ್ನು ಬೆಂಬಲಿಸುವುದಿಲ್ಲ' ಎಂದು ಅಭಿಮಾನಿಗಳು ಎಚ್ಚರಿಕೆ ನೀಡಿದ್ದಾರೆ.

ಖಾತೆಯನ್ನು ಗಮನಿಸಿದಾಗ, ಕಳೆದ ಅಕ್ಟೋಬರ್ ತಿಂಗಳಲ್ಲಿ 'ಎಕ್ಸ್'ನಲ್ಲಿ ಈಗಾಗಲೇ ಇರುವ ಆರ್‌ಸಿಬಿಯ ಅಧಿಕೃತ ಖಾತೆಯೊಂದಿಗೆ ಕನ್ನಡ ಹಾಗೂ ಹಿಂದಿಯಲ್ಲಿ ನೂತನ ಖಾತೆ ತೆರೆದಿರುವುದು ಗಮನಕ್ಕೆ ಬರುತ್ತದೆ. ಆದರೆ ಹಿಂದಿಯಲ್ಲಿ ಖಾತೆ ತೆರೆದಿರುವುದು ಹಾಗೂ ಹಿಂದಿಯಲ್ಲಿ ಪೋಸ್ಟ್ ಮಾಡಿರುವುದು ಅಭಿಮಾನಿಗಳ ಕೋಪಕ್ಕೆ ಕಾರಣವಾಗಿದೆ.

ಐಪಿಎಲ್ ಹರಾಜಿನಲ್ಲಿ ಆರ್‌ಸಿಬಿ ತಂಡಕ್ಕೆ ಸಂಬಂಧಪಟ್ಟಂತೆ ಹೊಸದಾಗಿ ಹಿಂದಿಯಲ್ಲಿ ಪೋಸ್ಟ್ ಮಾಡಲಾಗಿತ್ತು.

'ಹಿಂದಿಗೂ ಬೆಂಗಳೂರಿಗೂ ಯಾವುದೇ ಸಂಬಂಧವಿಲ್ಲ. ಹಿಂದಿ ಹೇರಿಕೆಯನ್ನು ನಿಲ್ಲಿಸಿ' ಎಂದು ಅಭಿಮಾನಿಯೊಬ್ಬರು ಒತ್ತಾಯಿಸಿದ್ದಾರೆ.

'ಹಿಂದಿ ಬಳಸೋಕೆ ಒಂದು ನೆಪ ಬೇಕಿತ್ತು. ಅದಕ್ಕೆ ಕನ್ನಡಕ್ಕಾಗಿ ಒಂದು ಖಾತೆ ತೆರೆದು ಜೊತೆಗೆ ಹಿಂದಿ ಅಂತ ಇನ್ನೊಂದು ತೆರೆಯಲಾಗಿದೆ. ಈ ಶೋಕಿ ಎಲ್ಲ ಬೇಡ. ಮೊದಲು ಮೊದಲು ಈ ಖಾತೆ ಅಳಿಸಿ. ಅಧಿಕೃತ ಖಾತೆಯಲ್ಲೇ ಕನ್ನಡ ಬಳಸಿ' ಎಂದು ಮತ್ತೊಬ್ಬ ಅಭಿಮಾನಿ ಆಗ್ರಹಿಸಿದ್ದಾರೆ.

'ಹಿಂದಿ ಭಾಷಿಕರಿಗೆ ಯಾಕೆ ಬಕೆಟ್ ಹಿಡಿತೀರಾ' ಎಂದು ಮತ್ತೊಬ್ಬರು ಅಸಮಾಧಾನ ಹೊರಹಾಕಿದ್ದಾರೆ.

ಸೌದಿ ಅರೇಬಿಯಾದಲ್ಲಿ ಎರಡು ದಿನ ನಡೆದ ಐಪಿಎಲ್ ಮೆಗಾ ಹರಾಜಿನಲ್ಲಿ ಕರ್ನಾಟಕದ ಪ್ರಮುಖ ಆಟಗಾರರನ್ನು ಬಿಡ್ ಮಾಡುವಲ್ಲಿ ಆರ್‌ಸಿಬಿ ಹಿಂದೇಟು ಹಾಕಿತ್ತು. ಆಗಲೂ ಅಭಿಮಾನಿಗಳು ಅಸಮಾಧಾನ ವ್ಯಕ್ತಪಡಿಸಿದ್ದರು. ಬಿಡ್ ಪ್ರಕ್ರಿಯೆಯ ಕೊನೆಯ ದಿನವಾಗಿದ್ದ ಭಾನುವಾರ ಕರ್ನಾಟಕದ ದೇವದತ್ತ ಪಡಿಕ್ಕಲ್ ಮತ್ತು ಮನೋಜ್ ಬಾಂಢಗೆ ಅವರನ್ನು ಆರ್‌ಸಿಬಿ ಖರೀದಿಸಿತ್ತು.

ಚಾಂಪಿಯನ್ಸ್ ಟ್ರೋಫಿ: ಇದೇ 29ರಂದು ಐಸಿಸಿ ಮಂಡಳಿ ಸಭೆ

ದುಬೈ (ಪಿಟಿಐ): ಮುಂದಿನ ವರ್ಷ ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ವೇಳಾಪಟ್ಟಿಯನ್ನು ರೂಪಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮಂಡಳಿಯು ಇದೇ 29ರಂದು ಸಭೆ ಸೇರಲಿದೆ.

ಫೆಬ್ರುವರಿ–ಮಾರ್ಚ್ ಅವಧಿಯಲ್ಲಿ ಟೂರ್ನಿ ನಡೆಸಲಾಗುವುದು ಎಂದು ಈ ಮೊದಲು ಹೇಳಲಾಗಿತ್ತು. ಆದರೆ ಇದೀಗ ಭಾರತ ತಂಡವು ಪಾಕಿಸ್ತಾನಕ್ಕೆ ತೆರಳುವುದಿಲ್ಲವೆಂದು ಹೇಳಿರುವುದರಿಂದ ಟೂರ್ನಿಯ ದಿನಾಂಕಗಳು ಬದಲಾಗುವ ಸಾಧ್ಯತೆ ಇದೆ. ಅಲ್ಲದೇ ಹೈಬ್ರಿಡ್ ಮಾದರಿಯಲ್ಲಿ ಟೂರ್ನಿ ನಡೆಯುವ ನಿರೀಕ್ಷೆ ಇದೆ. ಯುಎಇಗೆ (ಯುನೈಟೆಡ್ ಅರಬ್ ಎಮಿರೇಟ್ಸ್) ಸ್ಥಳಾಂತರಗೊಳ್ಳುವ ಸಾಧ್ಯತೆ ಇದೆ.

2008ರಲ್ಲಿ ಮುಂಬೈ ಮೇಲೆ ಉಗ್ರರ ದಾಳಿಯಾದ ನಂತರ ಭಾರತ ತಂಡವು ಪಾಕಿಸ್ತಾನ ಪ್ರವಾಸ ಮಾಡಿಲ್ಲ. ಭಾರತವು ಹೈಬ್ರಿಡ್ ಮಾದರಿಗೆ ಒತ್ತು ನೀಡುತ್ತಿದೆ.

'ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ ನಿಗದಿ ಕುರಿತು ಚರ್ಚಿಸಲು ಇದೇ 29ರಂದು ಐಸಿಸಿ ಮಂಡಳಿಯು ಸಭೆ ಸೇರಲಿದೆ' ಎಂದು ವಕ್ತಾರರು ತಿಳಿಸಿದ್ದಾರೆ.

ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಇದೇ ಡಿಸೆಂಬರ್ 1ರಂದು ಐಸಿಸಿ ಚೇರ್ಮನ್ ಆಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಬೆಂಗಳೂರಿನಲ್ಲಿ ಮಂಗಳವಾರ ಮುಗಿದ ಸಾಫ್ಟ್‌ಬಾಲ್ ಕ್ರಿಕೆಟ್ ಲೀಗ್‌ನಲ್ಲಿ ಗೆದ್ದ ಬೆಸ್ಟ್ ಆಫ್ ಕರ್ನಾಟಕ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಸಾಫ್ಟ್‌ಬಾಲ್ ಕ್ರಿಕೆಟ್: ಬೆಸ್ಟ್ ಆಫ್ ಕರ್ನಾಟಕ ಜಯ

ಬೆಂಗಳೂರು: ಬೆಸ್ಟ್ ಆಫ್ ಕರ್ನಾಟಕ ತಂಡವು ಕರ್ನಾಟಕ ರಾಜ್ಯ ಸಾಫ್ಟಬಾಲ್ ಕ್ರಿಕೆಟ್ ಸಂಸ್ಥೆ ಆಶ್ರಯದಲ್ಲಿ ಮಂಗಳವಾರ ನಡೆದ ಕರ್ನಾಟಕ ಸಾಫ್ಟ್‌ಬಾಲ್ ಪ್ರೀಮಿಯರ್ ಲೀಗ್ ಪ್ರದರ್ಶನ ಕ್ರಿಕೆಟ್ ಪಂದ್ಯದಲ್ಲಿ ಜಯಿಸಿತು.

ಆಚಾರ್ಯ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಬೆಸ್ಟ್ ಆಫ್ ಕರ್ನಾಟಕ ತಂಡವು 28 ರನ್‌ಗಳಿಂದ ರೆಸ್ಟ್ ಆಫ್ ಇಂಡಿಯಾ ವಿರುದ್ಧ ಗೆದ್ದಿತು.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು 9 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 75 ರನ್ ಗಳಿಸಿತು. ಅದಕ್ಕುತ್ತರವಾಗಿ ಇಂಡಿಯಾ ತಂಡವು 8.5 ಓವರ್‌ಗಳಲ್ಲಿ 47 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಕರ್ನಾಟಕ ತಂಡದ ಸ್ಯಾಂಡಿ ಮೂರು ವಿಕೆಟ್ ಗಳಿಸಿದರು.

ಪಂದ್ಯ ಉದ್ಘಾಟಿಸಿದ ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಶ್ರೇಯಾಂಕಾ ಪಾಟೀಲ, 'ರಾಷ್ಟ್ರಮಟ್ಟದಲ್ಲಿ ಸಾಫ್ಟ್ ಬಾಲ್ ಕ್ರಿಕೆಟ್ ಮಾದರಿಗೆ ಒಂದು ಉತ್ತಮ ಅವಕಾಶವನ್ನು ಇಲ್ಲಿ ಸೃಷ್ಟಿಸಲಾಗಿದೆ. ಇದು ಸ್ವಾಗತಾರ್ಹ' ಎಂದರು.

ಸಂಕ್ಷಿಪ್ತ ಸ್ಕೋರು: ಬೆಸ್ಟ್ ಆಫ್ ಕರ್ನಾಟಕ: 9 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 75 (ಸಲೀಂ 25, ರಾಜಾ ಸಾಲಿಗ್ರಾಮ 13, ಸಾಗರ್ ಭಂಡಾರಿ 11, ಆಶಿಕ್ ಅಲಿ 13ಕ್ಕೆ2) ರೆಸ್ಟ್ ಆಫ್ ಇಂಡಿಯಾ: 8.5 ಓವರ್‌ಗಳಲ್ಲಿ 47 (ಐಶ್ವರ್ಯ ಸುರ್ವೆ 11, ಉಮರ್ ಖಾನ್ 9, ಸ್ಯಾಂಡಿ 1 ರನ್‌ಗೆ 3) ಫಲಿತಾಂಶ: ಬೆಸ್ಟ್ ಆಫ್ ಕರ್ನಾಟಕ ತಂಡಕ್ಕೆ 28 ರನ್‌ಗಳ ಜಯ.

ತಲೈವಾಸ್‌ಗೆ ಶರಣಾದ ಯೋಧಾಸ್

ನೊಯ್ಡಾ: ಸ್ಫೂರ್ತಿದಾಯಕ ಆಟವಾಡಿದ ತಮಿಳ್ ತಲೈವಾಸ್ ತಂಡ ಮಂಗಳವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಯು.ಪಿ. ಯೋಧಾಸ್ ತಂಡವನ್ನು 40–26ರಲ್ಲಿ 14 ಅಂಕಗಳಿಂದ ಸೋಲಿಸಿತು.

ಇದರೊಂದಿಗೆ ತಲೈವಾಸ್ ಗೆಲುವಿನ ಹಳಿಗೆ ಮರಳಿತು. ಮತ್ತೊಂದೆಡೆ ಯೋಧಾಸ್, ಸತತ ನಾಲ್ಕು ಪಂದ್ಯಗಳ ನಂತರ ಮೊದಲ ಸೋಲಿಗೆ ಗುರಿಯಾಯಿತು. ಯೊಧಾಸ್ ತಂಡದ ಪರ ಗಗನ್ ಗೌಡ ಗರಿಷ್ಠ 8 ಅಂಕಗಳನ್ನು ಗಳಿಸಿದರೆ, ಅಶು ಸಿಂಗ್ 5 ಅಂಕಗಳ ಕೊಡುಗೆ ನೀಡಿದರು.

ತಲೈವಾಸ್ ತಂಡದ ಪರ ಮೋಯಿನ್ ಮತ್ತು ನಾಯಕ ನರೇಂದರ್ ಕಂಡೋಲಾ ಕ್ರಮವಾಗಿ 8 ಮತ್ತು 6 ಅಂಕಗಳ ಅಮೂಲ್ಯ ಕಾಣಿಕೆ ನೀಡಿದರು.

ಪಂದ್ಯ ಸಮಬಲ: ಡೆಲ್ಲಿ ದಬಾಂಗ್ ಮತ್ತು ಪಟ್ನಾ ಪೈರೇಟ್ಸ್ ನಡುವಣ ನಡೆದ ದಿನದ ಎರಡನೇ ಪಂದ್ಯ 39–39ರಲ್ಲಿ ಟೈ ಆಯಿತು. ಪೈರೇಟ್ಸ್ ಪರ ದೇವಾಂಕ್ 15 ಅಂಕ ಗಳಿಸಿದರೆ, ದಬಾಂಗ್ ಪರ ಆಶು ಮಲಿಕ್ 11 ಅಂಕ ಸಂಪಾದಿಸಿದರು.

ಬುಧವಾರದ ಪಂದ್ಯಗಳು: ಹರಿಯಾಣ ಸ್ಟೀಲರ್ಸ್– ಪುಣೇರಿ ಪಲ್ಟನ್ (ರಾತ್ರಿ 8.00); ಬೆಂಗಾಲ್ ವಾರಿಯರ್ಸ್ ಮತ್ತು ಗುಜರಾತ್ ಜೈಂಟ್ಸ್ (ರಾತ್ರಿ 9)

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ಗೆ ಬೆಂಗಳೂರಿನಲ್ಲಿ ಚಾಲನೆ

ಪ್ರಥಮ ಹೇ ಬಾಲ್ ಟೂರ್ನಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಮಂಗಳವಾರ ಆರಂಭವಾದ ಪ್ರಥಮ ವಿಶ್ವ ಜೂನಿಯರ್ ಹೇ ಬಾಲ್ ಟೂರ್ನಿಯಲ್ಲಿ ಭಾಗವಹಿಸಿರುವ ಸ್ಪರ್ಧಿಗಳು

ಬೆಂಗಳೂರು: ಬಿಲಿಯರ್ಡ್ಸ್ ಮತ್ತು ಸ್ನೂಕರ್ ಆಟಗಳ ಮಿಶ್ರಣವಾದ ಹೇ ಬಾಲ್ ಕ್ರೀಡೆಯು ಮೊದಲ ಬಾರಿ ಆರಂಭವಾಯಿತು. ಈ ವಿಶೇಷ ಸಂದರ್ಭಕ್ಕೆ ಬೆಂಗಳೂರು ವೇದಿಕೆಯಾಯಿತು.

ಕರ್ನಾಟ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆ (ಕೆಎಸ್‌ಬಿಎ)ಯಲ್ಲಿ ಮಂಗಳವಾರ ಆರಂಭವಾದ 19 ವರ್ಷದೊಳಗಿನವರ ಟೂರ್ನಿಯಲ್ಲಿ 25 ದೇಶಗಳ ಆಟಗಾರರು ಸ್ಪರ್ಧಿಸಿದ್ದಾರೆ. ಅದರಲ್ಲಿ ಕರ್ನಾಟಕದ ನಾಲ್ವರ ತಂಡವೂ ಇದೆ. ಜೂನಿಯರ್ ಬಾಲಕರ ವಿಭಾಗದಲ್ಲಿ ಕರ್ನಾಟಕದ ಮಯಂಕ್ ಕಾರ್ತಿಕ್ ಮತ್ತು ತಮಿಳುನಾಡಿನ ಲಕ್ಷ್ಮೀನಾರಾಯಣ, ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಕರ್ನಾಟಕದ ನತಾಶಾ ಚೇತನ್ ಮತ್ತು ತಮಿಳುನಾಡಿನ ಎಲ್. ಶ್ರುತಿ ಅವರಿದ್ದಾರೆ.

ಭಾರತದಲ್ಲಿ ಈ ಕ್ರೀಡೆಯ ಪ್ರಚಾರ ರಾಯಭಾರಿಯಾಗಿರುವ ಪ್ರಣೀತ್ ರಾಮಚಂದಾನಿ ಅವರು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದರು

'ಸ್ನೂಕರ್ ಮತ್ತು ಬಿಲಿಯರ್ಡ್ಸ್ ಆಟಗಳ ಮಿಶ್ರಣ ಹೇ ಬಾಲ್ ಆಗಿದೆ. ಇದು ಚೀನಾದಲ್ಲಿ 8 ಬಾಲ್ ಆಟದಿಂದ ಪ್ರೇರಿತರಾದ ಜಾಯ್ ಎಂಬುವವರು ಹೇ ಬಾಲ್ ಆಟ ರಚಿಸಿದರು. ಇದೇ ಮೊದಲ ಸಲ ಜಾಗತಿಕ ಮಟ್ಟದ ಟೂರ್ನಿಯನ್ನು ಇಲ್ಲಿ ಆಯೋಜಿಸುತ್ತಿದ್ದೇವೆ. ವಾರ್ಷಿಕ ₹100 ಕೋಟಿ ಮೌಲ್ಯದ ನಗದು ಬಹುಮಾನ ಇರಲಿದೆ. ಈ ಆಟದಲ್ಲಿರುವ ರೋಚಕ ಅಂಶಗಳು ಮತ್ತು ನಗದು ಬಹುಮಾನದ ಆಕರ್ಷಣೆಯಿಂದಾಗಿ ಹೆಚ್ಚೆಚ್ಚು ಆಟಗಾರರು ಒಲವು ತೋರುತ್ತಿದ್ದಾರೆ. ಅಲ್ಲದೇ ಪ್ರದರ್ಶನ ಮೌಲ್ಯವೂ ಹೆಚ್ಚಿದೆ. 2032ರ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಗೊಳ್ಳುವ ಸಾಧ್ಯತೆಯೂ ಇದೆ' ಎಂದು ಹೇಳಿದರು.

'ಪ್ರತಿಯೊಂದು ಪಂದ್ಯವು 100 ನಿಮಿಷಗಳದ್ದಾಗಿರುತ್ತದೆ. ಪ್ರತಿ ಶಾಟ್ 45 ಸೆಕೆಂಡುಗಳಾಗಿರುತ್ತದೆ. ಇಬ್ಬರು ಆಟಗಾರರು (ಪರಸ್ಪರ ಎದುರಾಳಿ) ಒಂದು ಪಂದ್ಯದಲ್ಲಿ ಆಡುತ್ತಾರೆ. 7 ಸಾಲಿಡ್ ಮತ್ತು 7 ಸ್ಟ್ರೈಪ್ ಬಣ್ಣಗಳ ಚೆಂಡುಗಳು ಇರುತ್ತವೆ. ಒಂದು ಕಪ್ಪು ಚೆಂಡು ಇರುತ್ತದೆ. ಎಲ್ಲ ಚೆಂಡುಗಳನ್ನು ಪಾಕೆಟ್ ಮಾಡುವ ಸ್ಪರ್ಧಿಯು ಕೊನೆಯಲ್ಲಿ ಬ್ಯಾಕ್ ಬಾಲ್ ಪಾಕೆಟ್ ಮಾಡಬೇಕು. ಅಗ ಫ್ರೇಮ್ ಸಂಪೂರ್ಣವಾಗುತ್ತದೆ. 50 ನಿಮಿಷಗಳ ನಂತರ 7 ನಿಮಿಷಗಳ ವಿರಾಮ ಇರುತ್ತದೆ. ದ್ವಿತೀಯಾರ್ಧದಲ್ಲಿ 50 ನಿಮಿಷಗಳಿರುತ್ತವೆ' ಎಂದೂ ಪ್ರಣೀತ್ ವಿವರಿಸಿದರು. ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ 17ನೇ ಸ್ಥಾನದಲ್ಲಿದ್ದಾರೆ.

ಈ ಟೂರ್ನಿಯು ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ನಡೆಯಲಿದೆ. ನ.28ರಂದು ಮುಕ್ತಾಯವಾಗಲಿದೆ.

ಬೆಳಿಗ್ಗೆ ನಡೆದ ಉದ್ಘಾಟನೆ ಕಾರ್ಯ ಕ್ರಮದಲ್ಲಿ ವಿಶ್ವ ಪೂಲ್ ಬಿಲಿಯಡ್ಸ್ ಸಂಸ್ಥೆ (ಡಬ್ಲ್ಯುಪಿಎ) ಪ್ರಧಾ ಕಾರ್ಯದರ್ಶಿ ಕರ್ಟ್ ಜೊರ್ಗೆನ ಸ್ಯಾಂಡ್‌ಮನ್, ಕರ್ನಾಟಕದ ಸ್ನೂಕರ ಆಟಗಾರ ಐ.ಎಚ್. ಮನುದೇವ್, ವಿ ಬಿಲಿಯರ್ಡ್ಸ್ ಚಾಂಪಿಯನ್ ಭಾಸ್ಕರ್ ಭಾರತ ಹೇ ಬಾಲ್ ಆಟಗಾರ ಮತ ಲಕ್ಸ್ ಬಿಲಿಯರ್ಡ್ಸ್ ವ್ಯವಸ್ಥಾಪ ಪಾಲುದಾರ ಉಪೇಂದ್ರ ಥಾಪಾ ಸಿಂಗ್ ಕೆಎಸ್‌ಬಿಎ ಸಹ ಸಂಸ್ಥಾಪಕ ಎಂ. ಮ ಮತ್ತು ತಮಿಳುನಾಡು ಬಿಲಿಯರ್ಡ್ಸ್ ಸ್ನೂಕರ್ ಸಂಸ್ಥೆ ಮಾಜಿ ಅಧ್ಯಕ್ಷ ಎಂ. ಮನೋಜ್ ಹಾಜರಿದ್ದರು.